ಹುಬ್ಬಳ್ಳಿ ಶನಿವಾರ, 27 ಜೂನ್ 2026 ಸಂಪುಟ 16, ಸಂಚಿಕೆ 94, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ RNI No.KARKAN/2011/64413
epaper.hosadigantha.com
hosadigantha.com
₹5

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ




ಪಶ್ಚಿಮ ಬಂಗಾಳದಲ್ಲೂ ಏನಾಸಂ ಶೀಘ್ರ

• ಪುಟ ೭

ಚಂಪತ್ ರಾಯ್, ಅನಿಲ್ ಮಿಶ್ರಾ ರಾಜೀನಾಮೆ
ದೇಣಿಗೆ ಪ್ರಕರಣ: 8 ಮಂದಿ ಸೆರೆ

• **ಲಖನೌ:** ಅಯೋಧ್ಯೆಯ ರಾಮ ಮಂದಿರಕ್ಕೆ ಭಕ್ತರು ನೀಡಿದ ನಗದು ಕಾಣಿಕೆಗಳ ದುರುಪಯೋಗದ ಆರೋಪದ ಹಿನ್ನೆಲೆ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಶುಕ್ರವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.




ಜತೆಗೆ ಟ್ರಸ್ಟ್‌ನ ಪ್ರಮುಖ ಸದಸ್ಯರಾದ ಅನಿಲ್ ಮಿಶ್ರಾ ಅವರೂ ರಾಜೀನಾಮೆ ಸಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಾದ ಎಫ್‌ಐಆರ್‌ನಲ್ಲಿ ಹೆಸರಿದ್ದ 8 ಆರೋಪಿಗಳನ್ನು ಪೊಲೀಸರು ಗುರುವಾರ ರಾತ್ರಿ ಬಂಧಿಸಿದ್ದಾರೆ. ಬಂಧಿತರಲ್ಲಿ ರಾಮಶಂಕರ್ ಯಾದವ್ ಅಲಿಯಾಸ್ ಟಿನ್ನು ಯಾದವ್, ಲವಕುಶ್ ಮಿಶ್ರಾ, ಅನುಕಲ್ಪ್ ಮಿಶ್ರಾ, ಮನೀಶ್ ಯಾದವ್, ಅವಿನಾಶ್ ಶುಕ್ಲಾ, ಕರುಣೇಶ್ ಪಾಂಡೆ, ರಾಮಶಂಕರ್ ಮಿಶ್ರಾ ಹಾಗೂ ಸುಭಾಷ್ ಶ್ರೀವಾಸ್ತವ ಸೇರಿದ್ದಾರೆ.

➡ ಪುಟ ೪

ತಪ್ಪಿತಸ್ಥರನ್ನು ಬಿಡಲ್ಲ, ಕಠಿಣ ಕ್ರಮ ಖಚಿತ: ಸಿಎಂ ಯೋಗಿ

ಅಯೋಧ್ಯೆಯ ರಾಮ ಮಂದಿರಕ್ಕೆ ಬಂದ ದೇಣಿಗೆಯ ಹಣ ದುರುಪಯೋಗ ಪ್ರಕರಣದಲ್ಲಿ ವಿಶೇಷ ತನಿಖಾ ತಂಡ(ಎಸ್‌ಐಟಿ) ವರದಿ ಸಲ್ಲಿಸಿದ ಕೂಡಲೇ ಕ್ರಮ ಕೈಗೊಳ್ಳಲಾಗಿದೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ತಿಳಿಸಿದ್ದಾರೆ.



ದೇವರಿಯಾದಲ್ಲಿ ಮಾತನಾಡಿದ ಅವರು, ಪ್ರಕರಣದಲ್ಲಿ ತಪ್ಪಿತಸ್ಥರೆಂದು ಸಾಬೀತಾದ ಯಾರನ್ನೂ ಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದರು. ಎಫ್‌ಐಆರ್‌ನಲ್ಲಿ ಹೆಸರಿದ್ದ ಎಂಟು ಮಂದಿಯನ್ನು ಪೊಲೀಸರು ಈಗಾಗಲೇ ಬಂಧಿಸಿದ್ದಾರೆ.

➡ ಪುಟ ೪

ಕಿರುಸುದ್ದಿ

ಬಂಕಿಮ್ ಚಂದ್ರ ಜಯಂತಿ: ಮೋದಿ ನಮನ • ಪುಟ ೭

ಬಂಡಿಪುರ, ನಾಗರಹೊಳೆ ಸಫಾರಿ ಪುನರಾರಂಭಕ್ಕೆ ಸರ್ಕಾರ ನಿರ್ಧಾರ • ಪುಟ ೪

ಬೀದರ್: 9.41 ಕೋಟಿ ರೂ.ಮೊತ್ತದ ಡ್ರಗ್ಸ್ ನಾಶ • ಪುಟ ೪

ವೆನೆಜುವೆಲಾ ಭೂಕಂಪ ಸಾವಿನ ಸಂಖ್ಯೆ 589ಕ್ಕೆ • ಪುಟ ೭

ದೇಶದಲ್ಲಿ 6 ಕೋಟಿ ಮತದಾರರು ಔಟ್ • ಪುಟ ೭

ನಿರ್ಲಕ್ಷ್ಯ ತೋರದಿರಿ | ಅಧಿಕಾರಿಗಳಿಗೆ ಸಿಎಂ ಖಡಕ್ ಸೂಚನೆ
ತೆರಿಗೆ ಸೋರಿಕೆ ನಿಲ್ಲಿಸಿ

• **ಬೆಂಗಳೂರು:** ಯಾವುದೇ ಸರಕು ಸಾಗಣೆ ವಾಹನವು ಅಗತ್ಯ ದಾಖಲೆಗಳಿಲ್ಲದೆ ಚೆಕ್‌ಪೋಸ್ಟ್ ಅಥವಾ ರಾಜ್ಯದ ಗಡಿಯನ್ನು ದಾಟಬಾರದು. ತೆರಿಗೆ ಸೋರಿಕೆಗೆ ಯಾವುದೇ ಅವಕಾಶ ಇರಬಾರದು. ಇದರಲ್ಲಿ ಯಾವುದೇ ರೀತಿಯ ರಾಜಿ ಅಥವಾ ನಿರ್ಲಕ್ಷ್ಯಕ್ಕೆ ಅವಕಾಶವಿಲ್ಲ



ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ವಿಧಾನಸೌಧದಲ್ಲಿ ಶುಕ್ರವಾರ ನಡೆದ ವಾಣಿಜ್ಯ ಇಲಾಖೆಯ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಹಲವು ಸೂಚನೆಗಳನ್ನು ನೀಡಿದರು. ನಾನು ಎಲ್ಲವನ್ನೂ ಗಮನಿಸುತ್ತಿದ್ದೇನೆ. ರಾಜ್ಯದ ಎಲ್ಲ ವಲಯಗಳಿಂದಲೂ ನನಗೆ ನಿರಂತರ ಮಾಹಿತಿ ಬರುತ್ತದೆ. ಚಿಕ್ಕಪೇಟೆಯಿಂದ ಗಾಂಧಿನಗರದವರೆಗೆ, ಗಡಿ ಜಿಲ್ಲೆಗಳಿಂದ ರಾಜ್ಯದ ಎಲ್ಲ ಭಾಗ ಗಳಲ್ಲೂ ನನ್ನದೇ ಆದ ಸಂಪರ್ಕಗಳಿವೆ. ಅಧಿಕಾರಿಗಳ ಕಾರ್ಯನಿರ್ವಹಣೆಯಲ್ಲಿ ಯಾವುದೇ ಲೋಪ ಅಥವಾ ನಿರ್ಲಕ್ಷ್ಯ ನಡೆದರೂ ಅದು ನನ್ನ ಗಮನಕ್ಕೆ ಬರುತ್ತದೆ.

➡ ಪುಟ ೪



360 ಡಿಗ್ರಿ ದೃಷ್ಟಿಕೋನದಲ್ಲಿ ತೆರಿಗೆದಾರರನ್ನು ವಿಶ್ಲೇಷಿಸಿ

ಪಕ್ಕದ ರಾಜ್ಯಗಳ ವಾಣಿಜ್ಯ ತೆರಿಗೆ ಇಲಾಖೆ ಮತ್ತು ಜಾರಿ ಸಂಸ್ಥೆಗಳೊಂದಿಗೆ ಉತ್ತಮ ಸಮನ್ವಯ ಸಾಧಿಸಿ. ಮಾಹಿತಿ ಹಂಚಿಕೆ ಮತ್ತು ಜಂಟಿ ಕಾರ್ಯಾಚರಣೆಗಳ ಮೂಲಕ ತೆರಿಗೆ ಸೋರಿಕೆಯನ್ನು ಪರಿಣಾಮಕಾರಿಯಾಗಿ ತಡೆಯಬೇಕು. ಇಂದು ನಮ್ಮ ಬಳಿ ಸುಮಾರು 12 ಲಕ್ಷ ತೆರಿಗೆದಾರರ ಮಾಹಿತಿಯಿದೆ. ತಂತ್ರಜ್ಞಾನ, ಡೇಟಾ ಅನಾಲಿಟಿಕ್ಸ್ ಮೂಲಕ ಅವರನ್ನು 360 ಡಿಗ್ರಿ ದೃಷ್ಟಿಕೋನದಲ್ಲಿ ವಿಶ್ಲೇಷಿಸುವ ಸಾಮರ್ಥ್ಯ ನಿಮಗಿದೆ.

➡ ಪುಟ ೪

574 ಸನ್ನದುಗಳ ಇ-ಹರಾಜಿಗೆ ಸೂಚನೆ

ಹೊಸದಾಗಿ 574 ಸನ್ನದುಗಳನ್ನು ಇ-ಹರಾಜು ಹಾಕಲು ಅಧಿಕಾರಿಗಳಿಗೆ ಸೂಚಿಸಿದ್ದು, ಪರವಾನಗಿ ನವೀಕರಣ ಮೊತ್ತವನ್ನು ಎರಡು ಕಂತುಗಳಲ್ಲಿ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಶುಕ್ರವಾರ ಅಬಕಾರಿ ಇಲಾಖೆಯ ಪ್ರಗತಿ ಪರಿಶೀಲನೆ ಸಭೆ ನಡೆಸಿದರು.

➡ ಪುಟ ೪

ಇಂದು, ನಾಳೆ ಬೆಂಗಳೂರಲ್ಲಿ ಡಾ.ಭಾಗವತ್ ಕಾರ್ಯಕ್ರಮ

• **ಬೆಂಗಳೂರು:** ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ




ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರು ಶನಿವಾರ ನಗರಕ್ಕೆ ಆಗಮಿಸಲಿದ್ದು, ಎರಡು ದಿನ ಪ್ರತ್ಯೇಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಜೂ.27ರಂದು ಸಂಜೆ 6 ಗಂಟೆಗೆ ರಾಷ್ಟ್ರೀಯ ಸ್ವಯಂಸೇವಕ ಸಂಘ (ಪುಟ್ಟೇನಹಳ್ಳಿ ನಗರ, ಜಯನಗರ ಭಾಗ) ವತಿಯಿಂದ ಆರ್‌ಬಿಐ ಬಡಾವಣೆ ಆಟದ ಮೈದಾನದಲ್ಲಿ ಆಯೋಜಿಸಿ ರುವ ಹಿಂದು ಸಾಮ್ರಾಜ್ಯ ದಿನೋತ್ಸವ ಕಾರ್ಯಕ್ರಮದಲ್ಲಿ ಡಾ. ಮೋಹನ್ ಭಾಗವತ್ ಅವರು ಬೌದ್ಧಿಕ್ ನೀಡಲಿದ್ದಾರೆ.

➡ ಪುಟ ೪

ಬೆಂಗಳೂರು ನಗರಕ್ಕೆ ಉಪರಾಷ್ಟ್ರಪತಿ • ಪುಟ ೪

ಹೊಂದಾಣಿಕೆ ರಾಜಕೀಯ ಮಾಡಿಲ್ಲ: ವಿಜಯೇಂದ್ರ

• **ಧರ್ಮಸ್ಥಳ:** ವಿಧಾನಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಆದಾಗ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ತನ್ನ ನಡುವಿನ ಆತ್ಮೀಯತೆ ಹಾಗೂ ವ್ಯವಹಾರದ ಬಗ್ಗೆ ಸಾಕಷ್ಟು ಅಪಪ್ರಚಾರವಾಗಿತ್ತು.



ತಮ್ಮ ಮಧ್ಯೆ ಯಾವುದೇ ಅವ್ಯವಹಾರ, ಯಾವುದೇ ರೀತಿಯ ಸಂಬಂಧವಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು. ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸ್ಥಾನದಲ್ಲಿರುವ ಅವರಿಗೆ ಕೊಡಬೇಕಾದ ಗೌರವವನ್ನು ನಾನು ಕೊಟ್ಟಿದ್ದೇನೆ. ಯಾರು ಅಪಪ್ರಚಾರ ಮಾಡಿದ್ದಾರೋ ಅವರಿಗೆ ದೇವರು ಒಳ್ಳೆಯದು ಮಾಡಲಿ ಎಂದು ಪ್ರಾರ್ಥಿಸಿದರು.

➡ ಪುಟ ೪

ಕಿರುಸುದ್ದಿ

ಸಮಾರಂಭ ಇಂದು

ಹುಬ್ಬಳ್ಳಿ: ಅಖಿಲ ಭಾರತ ನಾಣಿಗರ ಸಂಘ ಕೇಂದ್ರ ಘಟಕ ವಾರ್ಷಿಕ ಮಹಾಸಭೆ-2026 ಕೇಂದ್ರ ಸಮಿತಿ ಪದಾಧಿಕಾರಿಗಳ ಆಯ್ಕೆ ಹಾಗೂ ಧಾರವಾಡ ಜಿಲ್ಲಾ ನಾಣಿಗ ಸಂಘದ ಪದಾಧಿಕಾರಿಗಳ ಆಯ್ಕೆ ಸಮಾರಂಭ ಜೂ.27ರಂದು ಬೆಳಗ್ಗೆ 10 ಗಂಟೆಗೆ ದೇಶಪಾಂಡೆ ನಗರದ ಸವಾಯಿ ಗಂಧರ್ವ ಭವನದಲ್ಲಿ ನಡೆಯಲಿದೆ. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಚಾಲನೆ ನೀಡಲಿದ್ದಾರೆ. ಅಧ್ಯಕ್ಷತೆ ಸಂಘದ ಗೌರವಾಧ್ಯಕ್ಷ ಡಾ. ಶೇಖರ ಸಜ್ಜನ, ಅತಿಥಿಯಾಗಿ ಸಂಸದ ಬಸವರಾಜ ಬೊಮ್ಮಾಯಿ, ಶಾಸಕ ಲಕ್ಷ್ಮಣ ಸವದಿ, ಸಂಸದ ಪಿ.ಸಿ. ಗದ್ದಿಗೌಡರ, ಶಾಸಕ ಮಹೇಶ ಟೆಂಗಿನಕಾಯಿ, ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ, ಸಂಘದ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಬೆಣ್ಣಿ, ಮಾಜಿ ಸಚಿವ ಎಸ್.ಕೆ. ಬೆಳ್ಳುಬ್ಬಿ, ಮಾಜಿ ಶಾಸಕ ರಮೇಶ ಭೂಸನೂರ ಸೇರಿದಂತೆ ಅನೇಕರು ಭಾಗವಹಿಸಲಿದ್ದಾರೆ.

ಪದಗ್ರಹಣ ನಾಳೆ

ಧಾರವಾಡ: ಕರ್ನಾಟಕ ರಾಜ್ಯ ಗ್ರಂಥಪಾಲಕರ ಸಂಘದ ನೂತನ ಸಂಘ ಅಸ್ತಿತ್ವಕ್ಕೆ ಬಂದಿದ್ದು, ಧಾರವಾಡ ಜಿಲ್ಲಾ ಘಟಕದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಜೂ.28ರಂದು ಸಂಜೆ 5 ಗಂಟೆಗೆ ರಂಗಾಯಣದ ಸಾಂಸ್ಕೃತಿಕ ಸಮುಚ್ಚಯದಲ್ಲಿ ಹಮ್ಮಿಕೊಂಡಿದೆ ಎಂದು ಜಿಲ್ಲಾಧ್ಯಕ್ಷ ಡಾ.ರಾಜೇಶ್ ತರಮರಿ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಘಟಕಕ್ಕೆ ನೇಮಕವಾದ ನೂತನ ಗೌರವಾಧ್ಯಕ್ಷ ಡಾ.ಮಹೇಶ ಹೊರಕೇರಿ, ಉಪಾಧ್ಯಕ್ಷರಾದ ಈರಪ್ಪ ಪತ್ತಾರ, ಡಾ. ರುದ್ರಮುನಿ ಹಿರೇಮಠ, ಕಾರ್ಯದರ್ಶಿ ಅಶೋಕ ಆಲದಕಟ್ಟಿ, ಉಪಕಾರ್ಯದರ್ಶಿ ಎನ್.ಎನ್. ಹಂಚಿನಾಳಮಠ, ಖಜಾಂಚಿ ನಾಗೇಶ ಕುಸುಗಲ್ ಅವರ ಪದಗ್ರಹಣ ಸಮಾರಂಭ ನಡೆಯಲಿದೆ ಎಂದರು. ಸಂಘದ ಅಧ್ಯಕ್ಷ ಡಾ. ಎಸ್. ಎಲ್.ಕಾಡದೇವರಮಠ ಅಧ್ಯಕ್ಷತೆ ವಹಿಸುವರು. ವಿಧಾನ ಪರಿಷತ್ ಸದಸ್ಯ ಪ್ರೊ. ಎಸ್.ವಿ.ಸಂಕನೂರು, ಎಲ್‌ಐಎಸ್ ಅಕಾಡಮಿ ಅಧ್ಯಕ್ಷ ಪ್ರೊ. ಪಿ.ವಿ. ಕೊಣ್ಣೂರು, ಅತಿಥಿಯಾಗಿ ಜಿಲ್ಲಾ ಘಟಕದ ಸಲಹೆಗಾರ ಸಿ. ಕೃಷ್ಣಮೂರ್ತಿ, ಡಾ.ನಾಗಪ್ಪ ಒಕ್ಕನ್ನವರ ಆಗಮಿಸುವರು ಎಂದರು. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಪದಾಧಿಕಾರಿಗಳನ್ನು ನೇಮಿಸಿ ಸಂಘವನ್ನು ಪ್ರಬಲ ಮಾಡಲಾಗುತ್ತಿದೆ. ಗ್ರಂಥ ಪಾಲಕರ ಕುಂದು-ಕೊರತೆಗಳನ್ನು ಪರಿಶೀಲಿಸಿ ಸರ್ಕಾರದಿಂದ ಸೂಕ್ತ ನ್ಯಾಯ ಒದಗಿಸುವುದು, ಗ್ರಂಥಪಾಲಕರ ವೃತ್ತಿ ಪ್ರೋತ್ಸಾಹಿಸುವುದು, ಹೊಸ ತಂತ್ರಜ್ಞಾನ ಮತ್ತು ಡಿಜಿಟಲೀಕರಣ ವ್ಯವಸ್ಥೆಗಳನ್ನು ಗ್ರಂಥಾಲಯಕ್ಕೆ ಅಳವಡಿಸಿ ಓದುಗರಿಗೆ ಅನುಕೂಲ ಕಲ್ಪಿಸುವ ಗುರಿ ಹೊಂದಿರುವುದಾಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಈರಪ್ಪ ಪತ್ತಾರ, ಡಾ. ರುದ್ರಮುನಿ ಹಿರೇಮಠ, ಅಶೋಕ ಆಲದಕಟ್ಟಿ, ನಾಗೇಶ ಕುಸುಗಲ್ ಇದ್ದರು.

ಮೊರಹಂ ಆಚರಣೆ



ಧಾರವಾಡ: ತ್ಯಾಗ ಮತ್ತು ಬಲಿದಾನದ ಸಂಕೇತ ಆಗಿರುವ ಮೊಹರಂ ಹಬ್ಬವನ್ನು ನಗರದಲ್ಲಿ ಮುಸ್ಲಿಂ ಬಾಂಧವರು ಶುಕ್ರವಾರ ಅತ್ಯಂತ ಶ್ರದ್ಧೆ ಮತ್ತು ಭಕ್ತಿಯಿಂದ ಆಚರಿಸಿದರು. ನಗರದ ಪ್ರಮುಖ ಬೀದಿಗಳಲ್ಲಿ ಪಾಂಜಾಗಳ ಭವ್ಯ ಮೆರವಣಿಗೆ ಜರುಗಿತು. ಹಿಂದೂ-ಮುಸ್ಲಿಂ ಬಾಂಧವರು ಒಟ್ಟಾಗಿ ಹಬ್ಬವನ್ನು ಆಚರಿಸುವ ಮೂಲಕ ಸೌಹಾರ್ದತೆಯನ್ನು ಸಾರಿದರು. ನಗರದ ವಿವಿಧ ಮಸೀದಿಗಳಲ್ಲಿ ಮತ್ತು ದರ್ಗಾಗಳಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದ ಬಳಿಕ ನಗರದ ಪ್ರಮುಖ ರಸ್ತೆಗಳಲ್ಲಿ ಅಲಂಕೃತ ಪಂಜಾಗಳ ಭವ್ಯ ಮೆರವಣಿಗೆ ನಡೆಸಲಾಯಿತು. ಮೊಹರಂ ಕೇವಲ ಮುಸ್ಲಿಮರಿಗೆ ಸೀಮಿತವಾಗಿರದೆ, ಅಪಾರ ಹಿಂದೂ ಬಾಂಧವರು ಕೂಡ ಪಾಲ್ಗೊಂಡರು. ಭಕ್ತರು ಪಂಜಾಗಳಿಗೆ ಪೂಜೆ ಸಲ್ಲಿಸಿ, ಹರಕೆಗಳು ತೀರಿಸುವ ಭಾವೈಕ್ಯತೆ ಸಾರಿದರು. ಪಾನಕ, ಮಂಡಕ್ಕಿ ಹಾಗೂ ಸಿಹಿ ಹಂಚುವ ಮೂಲಕ ಸಾರ್ವಜನಿಕರು ಆಚರಣೆಯಲ್ಲಿ ಪಾಲ್ಗೊಂಡರು.

ಶ್ರದ್ಧಾ ಭಕ್ತಿಯ ಅಲಾಯಿ ಹಬ್ಬ



ನವಲಗುಂದ: ಮೊಹರಂ ಅಲಾಯಿ ಹಬ್ಬವು ಶ್ರದ್ಧಾ ಭಕ್ತಿಯಿಂದ ಅದ್ದೂರಿಯಾಗಿ ಜರುಗಿತು. ಪಟ್ಟಣದಲ್ಲಿ ಅಜಾತ ನಾಗಲಿಂಗಸ್ವಾಮಿ ಮಠದಲ್ಲಿ ಮೊಹರಂ ಹಬ್ಬದ ಅಂಗವಾಗಿ ಪವಿತ್ರ ಪಂಜಾಗಳನ್ನು ಪ್ರತಿಷ್ಠಾಪಿಸಿ, ಹಿಂದೂ ಮತ್ತು ಮುಸ್ಲಿಂ ಬಾಂಧವರು ಪ್ರಾರ್ಥನೆ ಸಲ್ಲಿಸುವುದು ಇಲ್ಲಿನ ಭಾವೈಕ್ಯತೆಗೆ ಸಾಕ್ಷಿಯಾಗಿದೆ. ಐದು ದಿನಗಳಿಂದ ಪ್ರತಿಷ್ಠಾಪಿಸಲಾಗಿದ್ದ ಪಂಜಾಗಳನ್ನು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಸೂರ್ಯಾಸ್ತದ ನಂತರ ಈ ಎಲ್ಲಾ ಪಂಜಾಗಳು ಚವಡಿ ಬಯಲಿಗೆ ಬಂದು ತಲುಪಿದಾಗ ಭಕ್ತ ಸಾಗರವೇ ಹರಿದುಬಂದಿತ್ತು. ಯುವಕರು ಹೆಜ್ಜೆ ಮೇಳವನ್ನು ಹಾಕಿದರು, ಹರಕೆ ಹೊತ್ತ ಭಕ್ತರು ವಿಶಿಷ್ಟವಾಗಿ ಹುಲಿ ವೇಷ ಧರಿಸಿ ಪಂಜಾಗಳ ಮುಂದೆ ಕುಣಿದು ಭಕ್ತಿ ಸಮರ್ಪಿಸಿದರು. ಕರಬಲಾದ ಇಮಾಮ್ ಹಸನ್ ಹಾಗೂ ಇಮಾಮ್ ಹುಸೇನ್ ಅವರ ನೆನಪಿನಲ್ಲಿ ನೂರಾರು ಭಕ್ತರು ಕಠಿಣ ಉಪವಾಸ ವ್ರತ ಆಚರಿಸಿ ಕರಬಲಾದ ಹುತಾತ್ಮರ ತ್ಯಾಗವನ್ನು ಸ್ಮರಿಸಿದರು. ಅಂಜುಮನ್ ಸಂಸ್ಥೆಯ ಮಾಜಿ ಅಧ್ಯಕ್ಷ ಅಬ್ಬಾಸಲಿ ದೇವರಿಡು ಅವರ ಮನೆತನದಿಂದ ಶರಬತ್ ಹಂಚಿದರು.



ಅಣ್ಣಿಗೇರಿ: ಹನುಮಹಾಳ ಗ್ರಾಮದಲ್ಲಿ ಮೊಹರಂ ಹಬ್ಬದ ನಿಮಿತ್ತವಾಗಿ ಹಿಂದೂ- ಮುಸ್ಲಿಂ ಸಮಾಜದವರು ಧಾರ್ಮಿಕ ಶ್ರದ್ಧೆ ಭಕ್ತಿಯಿಂದ ಆಚರಿಸಿದರು. ಗ್ರಾಪಂ ಮಾಜಿ ಸದಸ್ಯ ಸೋಮಲಿಂಗ ಅಂಗಡಿ, ಸಲೀಂ ಭಾಷಾ ತ್ಯಾನವಾಡ, ವಿರುಪಾಕ್ಷಪ್ಪ ಅಂಗಡಿ, ರುದ್ರಪ್ಪ ಅಂಗಡಿ, ರೀಯಾಜ ಶೇತಸನದಿ, ಮಹಾಬೂಬಸಾಬ ಕಲಘಟಗಿ, ಫಕ್ರುಸಾಬ ನದಾಫ, ದೊಡ್ಡಯ್ಯ ಹಿರೇಮಠ ಇತರರಿದ್ದರು.

ಮೊಬೈಲ್ ಡೈಗ್ನೋಸ್ಟಿಕ್ ವಾಹನ ಲೋಕಾರ್ಪಣೆ ನಾಳೆ

ಹುಬ್ಬಳ್ಳಿ: ರೋಟರಿ ಕ್ಲಬ್ ಆಫ್ ಹುಬ್ಬಳ್ಳಿ ವಿದ್ಯಾನಗರ, ರೋಟರಿ ಕ್ಲಬ್ ಆಫ್ ಹುಬ್ಬಳ್ಳಿ ಹಾಗೂ ಎಸ್‌ಎಂಟರ್ ಫೌಂಡೇಶನ್ ವತಿಯಿಂದ ದಿ ರೋಟರಿ ಫೌಂಡೇಶನ್ ಜಾಗತಿಕ ಅನುದಾನದಲ್ಲಿ ಕೊಡಮಾಡಿದ ಮೊಬೈಲ್ ಡೈಗ್ನೋಸ್ಟಿಕ್ ವಾಹನ ಲೋಕಾರ್ಪಣೆ ಕಾರ್ಯಕ್ರಮ ಜೂ.28ರಂದು ಬೆಳಗ್ಗೆ 10ಕ್ಕೆ ಕರ್ನಾಟಕ ಜಿಮಖಾನಾ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ರೋಟೇರಿಯನ್ ಸಿಎ ಎನ್.ಎ. ಚರಂತಿಮಠ ಹೇಳಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹುಬ್ಬಳ್ಳಿ ತಾಲೂಕಿನ 50 ಗ್ರಾಮಗಳಲ್ಲಿ ಸಂಚರಿಸುವ ಮೂಲಕ ಸಮುದಾಯ ಸೇವೆಯನ್ನು ನೀಡುವ ಗುರಿ ಹೊಂದಲಾಗಿದೆ. ಈ ವ್ಯಾನ್ ಎಕ್ಸ್ ರೇ, ಇಸಿಜಿ, ರಕ್ತ ತಪಾಸಣೆ, ಸ್ಕ್ರೀನಿಂಗ್ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಗ್ರಾಮೀಣ ಭಾಗದ ಜನರಿಗೆ ಉಚಿತವಾಗಿ ನೀಡಲಿದೆ. ಇದಕ್ಕಾಗಿ ರೋಟರಿ ಕ್ಲಬ್ ಹಣ ವಿನಿಯೋಗಿಸಿದೆ. ಅಂದು ಡೈಗ್ನೋಸ್ಟಿಕ್ ವಾಹನವನ್ನು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ವಾಹನ ಲೋಕಾರ್ಪಣೆ ಮಾಡಲಿದ್ದಾರೆ ಎಂದರು. ಜಿಲ್ಲಾ ಗವರ್ನರ್ ಅರುಣ ಭಂಡಾರಿ, ಶಾಸಕ ಮಹೇಶ ಟೆಂಗಿನಕಾಯಿ, ರೋಟೇರಿಯನ್ ಗಣೇಶ ಭಟ್, ವಿಧಾನ ಪರಿಷತ್ ಸದಸ್ಯ ಲಿಂಗರಾಜ ಪಾಟೀಲ ಪಾಲ್ಗೊಳ್ಳುವರು ಎಂದರು. ಜುಲೈ 3 ರಂದು ಈ ವಾಹನ ಕಾರ್ಯಾರಂಭ ಮಾಡಲಿದೆ. ಗ್ರಾಮೀಣ ಭಾಗದಲ್ಲಿ ಅವಶ್ಯಕತೆ ಇರುವವರು 0836-4250381, 84312 89071 ಸಂಪರ್ಕಿಸುವ ಮೂಲಕ ವಾಹನದ ಸೌಲಭ್ಯ ಪಡೆದುಕೊಳ್ಳಬಹುದಾಗಿದೆ ಎಂದರು. ಡಾ. ಆರ್.ಆರ್. ಕಲಘಟಗಿ, ಡಾ. ಮಹಿಮಾ ದಂಡ, ಸಂಜೀವ ಶೆಟ್ಟಿ, ಸಂಜಯ ಶೆಟ್ಟಿ, ಡಾ. ಸುಹಾಸ್ ಕಲಘಟಗಿ, ಕಿರಣ ಹೆಬಸೂರ ಇದ್ದರು.



ನವಲಗುಂದ: ಸೌಹಾರ್ದತೆಯನ್ನು ಸಾರುವ, ಧಾರ್ಮಿಕ ಸಾಮರಸ್ಯವನ್ನು ತಿಳಿಸುವ ಮೊಹರಂ ಹಬ್ಬದ ಪ್ರಯುಕ್ತ ಶಾಸಕ ಎನ್. ಎಚ್. ಕೋನರಡ್ಡಿ ಅವರು ಸ್ವಗ್ರಾಮ ಚಿಲಕವಾಡಕ್ಕೆ ಭೇಟಿ ನೀಡಿ ಸರ್ವ ಧರ್ಮದವರು ಸೇರಿ ಆಚರಣೆ ಮಾಡುತ್ತಿರುವ ಮೊಹರಂ ಆಚರಣೆಯಲ್ಲಿ ಗ್ರಾಮದ ಮುಖಂಡರು ಹಾಗೂ ಸಾರ್ವಜನಿಕರೊಂದಿಗೆ ಭಾಗವಹಿಸಿದರು. ಹೆಜ್ಜೆಮೇಳದ ಯುವಕರೊಂದಿಗೆ ತಾವೂ ಹೆಜ್ಜೆ ಹಾಕಿದರು.

ಒಣ ತ್ಯಾಜ್ಯ ಸಂಸ್ಕರಿಸಿ ಇದ್ದಿಲು ಉತ್ಪಾದನೆ

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಅವಳಿನಗರವನ್ನು ಕಸಮುಕ್ತ ನಗರವಾಗಿಸಲು ಗಬ್ಬೂರಿನ ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮದ (ಎನ್‌ಟಿಪಿಸಿ) ಅಂಗ ಸಂಸ್ಥೆ, ವಿದ್ಯುತ್ ವ್ಯಾಪಾರ ನಿಗಮ ಲಿ. (ಎನ್‌ವಿವಿಎನ್) ಮಹಾನಗರ ಪಾಲಿಕೆಯ ಒಣ ತ್ಯಾಜ್ಯ ಸಂಸ್ಕರಿಸಿ ಇದ್ದಿಲು ಉತ್ಪಾದಿಸುವ ಘಟಕ ಸ್ಥಾಪಿಸಲಾಗುತ್ತಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ತಿಳಿಸಿದರು.

ಶುಕ್ರವಾರ ಇಲ್ಲಿಯ ಹಳೇ ಗಬ್ಬೂರಿನಲ್ಲಿ ಸ್ಥಾಪಿಸಲಾಗುತ್ತಿರುವ ಒಣ ತ್ಯಾಜ್ಯ ಸಂಸ್ಕರಿಸಿ ಇದ್ದಿಲು ಉತ್ಪಾದಿಸುವ ಘಟಕಕ್ಕೆ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿ ಮಾತನಾಡಿದರು. ಅವಳಿನಗರದಲ್ಲಿ ಕಸ ಸಮಸ್ಯೆ ಹೆಚ್ಚಾಗುತ್ತಿದ್ದು, ಇದಕ್ಕೆ ಪರಿಹಾರ ಕಂಡುಕೊಳ್ಳಲು 157 ಕೋಟಿ ವೆಚ್ಚದಲ್ಲಿ ಇದ್ದಿಲು ಘಟಕ ಸ್ಥಾಪಿಸಲಾಗುತ್ತಿದ್ದು, ಇದರಿಂದ ಇದ್ದಿಲು ಉತ್ಪಾದಿಸಬಹುದಾಗಿದೆ ಎಂದರು. ಅವಳಿ ನಗರದಲ್ಲಿ ಸಂಗ್ರಹಿಸಿದ ಒಣ ತ್ಯಾಜ್ಯವನ್ನು ಪಾಲಿಕೆ ಈ ಘಟಕಕ್ಕೆ ಉಚಿತವಾಗಿ ನೀಡುತ್ತಿದೆ. ಒಣ ತ್ಯಾಜ್ಯದಿಂದ ಉತ್ಪಾದನೆ ಆಗುವ ಇದ್ದಿಲನ್ನು ಕಲ್ಲಿದ್ದಲು ಉತ್ಪಾದಿಸುವ ಕೈಗಾರಿಕೆಗಳಿಗೆ ರವಾನಿಸಲಾಗುತ್ತದೆ. ಸುಮಾರು 8 ಎಕರೆ ಪ್ರದೇಶದಲ್ಲಿ ಎರಡು ಘಟಕಗಳು ಕಾರ್ಯ ನಿರ್ವಹಿಸುತ್ತವೆ. ಒಂದು ಘಟಕ ಹಾಳಾದರೂ ಮತ್ತೊಂದು ಘಟಕ ಪೂರಕವಾಗಿ ಕಾರ್ಯನಿರ್ವಹಿಸುತ್ತದೆ ಎಂದು ತಿಳಿಸಿದರು.

ಹು-ಧಾ ಮಹಾನಗರ ಪಾಲಿಕೆ ಮೇಯರ್ ಜ್ಯೋತಿ ಪಾಟೀಲ, ಉಪ ಮೇಯರ್ ಸಂತೋಷ ಚವ್ಹಾಣ, ಹು-ಧಾ ಮಹಾನಗರ ಪಾಲಿಕೆ ಆಯುಕ್ತ ರುದ್ರೇಶ ಘಾಳಿ, ಉಪ ಆಯುಕ್ತ ವಿಜಯಕುಮಾರ್ ಇದ್ದರು.

> **ಇದ್ದಿಲು ಉತ್ಪಾದನೆಗೆ ಶೇ.20ರಷ್ಟು ವಿದ್ಯುತ್ ಬಳಸಲಾಗುತ್ತದೆ. ಉಳಿದ ಶಕ್ತಿ ತ್ಯಾಜ್ಯ ಸಂಸ್ಕರಿಸುವ ಪ್ರಕ್ರಿಯೆಯಲ್ಲಿ ಉಂಟಾಗುವ ಗ್ಯಾಸ್‌ನಿಂದ ಕಾರ್ಯ ನಡೆಯಲಿದೆ. ವಿದ್ಯುತ್ ವ್ಯಾಪಾರ ನಿಗಮವು ಪ್ರತಿ ವರ್ಷ 11 ಕೋಟಿ ವೆಚ್ಚವನ್ನು ನಿರ್ವಹಣೆಗೆ ಬಳಸಲಿದೆ. ಈ ಘಟಕಗಳಿಂದ ಸುಮಾರು 200ಕ್ಕೂ ಹೆಚ್ಚು ಉದ್ಯೋಗಾವಕಾಶ ಸೃಷ್ಟಿ.**
> ■ **ಪ್ರಹ್ಲಾದ ಜೋಶಿ, ಕೇಂದ್ರ ಸಚಿವ**



250 ಟನ್ ಒಣ ತ್ಯಾಜ್ಯದಿಂದ ಇದ್ದಿಲು

ವಾರಾಣಸಿಯಲ್ಲಿ ಮೊಟ್ಟ ಮೊದಲ ಬಾರಿಗೆ ಈ ಯೋಜನೆ ಜಾರಿಗೆ ತಂದಿದ್ದು, ಯಶಸ್ವಿಯಾಗಿದ್ದರಿಂದ ಹುಬ್ಬಳ್ಳಿಯಲ್ಲಿ ಆರಂಭಿಸಲಾಗಿದೆ. 2027 ಜನವರಿಗೆ ಘಟಕ ಸಂಪೂರ್ಣ ಆರಂಭವಾಗಿದೆ. ಘಟಕದಲ್ಲಿ ಪ್ರತಿ ದಿನ 200 ಟನ್ ಒಣ ತ್ಯಾಜ್ಯದಿಂದ 120 ಟನ್ ಇದ್ದಿಲು ಆಗಿ ಪರಿವರ್ತಿಸುವ ಸಾಮರ್ಥ್ಯ ಹೊಂದಿದೆ. ಕಳೆದ 72 ಗಂಟೆಗಳಲ್ಲಿ ಸುಮಾರು 250 ಟನ್ ಒಣ ತ್ಯಾಜ್ಯದಿಂದ ಇದ್ದಿಲು ಉತ್ಪಾದಿಸಲಾಗಿದೆ ಎಂದು ಸಚಿವ ಪ್ರಹ್ಲಾದ ಜೋಶಿ ಹೇಳಿದರು.

ರಾಷ್ಟ್ರೀಯ ಭಾವೈಕ್ಯತೆ ಬೆಳೆಸುವ ಸೇವಾದಳ

ಕಲಘಟಗಿ: ಭಾರತ ಸೇವಾದಳ ಶಿಸ್ತು, ದೇಶಪ್ರೇಮ, ರಾಷ್ಟ್ರೀಯ ಭಾವೈಕ್ಯತೆಯನ್ನು ಬೆಳೆಸುವ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವ ಸಂಸ್ಥೆಯಾಗಿದ್ದು ಇದರ ಚಟುವಟಿಕೆಗಳನ್ನು ಶಾಲಾ ಮಕ್ಕಳಿಗೆ ತಿಳಿಸಿ ಎಂದು ಭಾರತ್ ಸೇವಾದಳ ಜಿಲ್ಲಾ ಸಮಿತಿ ಅಧ್ಯಕ್ಷ ಗೀತಾ ಎಸ್ ಮರಲಿಂಗಣ್ಣವರ ಹೇಳಿದರು.

ಸೇವಾದಳ ಜಿಲ್ಲಾ ಸಮಿತಿ, ತಾಲೂಕು ಸಮಿತಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ವತಿಯಿಂದ ಶುಕ್ರವಾರ ಜೆಜೆಎಚ್‌ಎಸ್ ಶಾಲೆಯಲ್ಲಿ ಹಮ್ಮಿಕೊಂಡ ಪುನಃಶ್ಚೇತನ ಶಿಬಿರದ ಧ್ವಜಾರೋಹಣವನ್ನು ನೆರವೇರಿಸಿ ಮಾತನಾಡಿದ ಅವರು, ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಎಲ್ಲಾ ಮಕ್ಕಳಿಗೂ ಸೇವಾದಳ ಶಿಕ್ಷಣ ಮುಟ್ಟುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕ್ರಮ ವಹಿಸಬೇಕು ಎಂದರು.

ಜಗದೀಶ್ ಕಮ್ಮಾರ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯೋಪಾಧ್ಯಾಯ ಅಕ್ಕಮಹಾದೇವಿ ಗಾಣಿಗೇರ, ಅಶೋಕ ಆಡಿನ, ಪ್ರಕಾಶ್ ಗೋಣಿ, ಈಶ್ವರ ಜವಳಿ, ಎಸ್.ಎ. ಚಿಕ್ಕನರ್ತಿ, ಆರ್.ಎಂ. ಹೊಲ್ತಿಕೋಟಿ, ಬಸವರಾಜ ಹುಗ್ಗಿ, ಎಫ್.ಎಸ್. ಹಿರೇಮಠ, ಕಿರಣ ಮಿರ್ಜ, ಕೆ.ಕೆ. ಗಂಜಿಗಟ್ಟಿ, ಹಾಗೂ ಜಿ.ವಿ. ಶಿರಟ್ಟಿ ಇದ್ದರು.

ಸಹಕಾರ ಅವಶ್ಯ

ಬಿಇಒ ಗಾಯತ್ರಿ ದೇವಿ ಸಜ್ಜನ ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿ, ಪ್ರತಿಯೊಂದು ಶಾಲೆಯಲ್ಲಿ ಕಡ್ಡಾಯವಾಗಿ ಸೇವಾದಳ ಘಟಕ ತೆರೆದು ಮಕ್ಕಳಿಗೆ ತಿಳಿಸಿರಿ. ಭಾರತ ಸೇವಾದಳ ಕಾರ್ಯಕ್ರಮಗಳಾದ ವಿದ್ಯಾರ್ಥಿ ನಾಯಕತ್ವ ಶಿಬಿರ ಮತ್ತು ಮಕ್ಕಳ ಮೇಳ ಮತ್ತು ರಾಷ್ಟ್ರಧ್ವಜ ಶಿಬಿರಗಳನ್ನು ಹಮ್ಮಿಕೊಳ್ಳಲು ಎಲ್ಲರ ಸಹಕಾರವಿರಲಿ ಎಂದರು.



ಬಸವಣ್ಣನವರ 97ನೇ ಜನ್ಮದಿನೋತ್ಸವ

ಕುಂದಗೋಳ: ತ್ರಿವಿಧ ದಾಸೋಹಿ,ಕಲ್ಯಾಣಪೂರ ಮಠದ ಲಿಂಗೈಕ್ಯ ಬಸವಣ್ಣನವರ 97ನೇ ಜನ್ಮದಿನೋತ್ಸವವನ್ನು ಮಠದಲ್ಲಿ ಶುಕ್ರವಾರ ಮಠದ ಭಕ್ತವೃಂದದೊಂದಿಗೆ ಭಕ್ತಿಭಾವದಿಂದ ಹಾಗೂ ಸೇವಾ ಮನೋಭಾವದೊಂದಿಗೆ ಆಚರಿಸಲಾಯಿತು.

ಜನ್ಮದಿನೋತ್ಸವದ ಅಂಗವಾಗಿ ಮುಂಜಾನೆ ಬ್ರಾಹ್ಮಿ ಮುಹೂರ್ತದಲ್ಲಿ ಉಭಯ ಗದ್ದುಗೆಗಳಿಗೆ ರುದ್ರಾಭಿಷೇಕ, ನಾಮಾವಳಿ ಪಾರಾಯಣ ಹಾಗೂ ಮಹಾಪೂಜೆ ನೆರವೇರಿಸಲಾಯಿತು. ವಿಶೇಷ ಪೂಜೆಯಲ್ಲಿ ಮಠದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಶ್ರೀಗಳ ಆಶೀರ್ವಾದ ಪಡೆದರು. ಪಟ್ಟಣದ ಸರ್ಕಾರಿ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು-ಹಂಪಲು ಹಾಗೂ ಫಲಹಾರ ವಿತರಿಸಲಾಯಿತು. ಸಂಜೆ ಗೊಬ್ಬೂರಿನ ಅಂಗವಿಕಲರ ಶಾಲೆಗೆ ಭೇಟಿ ನೀಡಿದ ಮಠದ ವತಿಯಿಂದ ವಿದ್ಯಾರ್ಥಿಗಳಿಗೆ ಮಹಾಪ್ರಸಾದ ವಿತರಿಸಿ ಅವರ ಯೋಗಕ್ಷೇಮವನ್ನು ವಿಚಾರಿಸಲಾಯಿತು. ದುಮ್ಮವಾಡದ ಸರ್ಪಭೂಷಣ ದೇವರು,ಪಟ್ಟಣದ ಕಲ್ಯಾಣಪೂರ ಮಠದ ಬಸವಣ್ಣಜ್ಜನವರು, ಮುಖಂಡರಾದ ಅರವಿಂದ ಕಟಗಿ,ರಾಜು ಶಿವಳ್ಳಿ, ನಾಗರಾಜ ದೇಶಪಾಂಡೆ, ಸಿದ್ದಪ್ಪ ಇಂಗಳ್ಳಿ, ಮಲ್ಲಣ್ಣ ಮಾರಡಗಿ, ಲಕ್ಷ್ಮಣ ಚುಳಕಿ, ರಾಮಣ್ಣ ಮುದೆನ್ನವರ, ಬಾಬಾಜಾನ್ ಮಿಶ್ರಿಕೋಟಿ, ಕಲ್ಲಪ್ಪ ಉಗುರಗೊಳ,ಅಜ್ಜಪ್ಪ ಬಂಡಿವಾಡ, ಶಂಕ್ರಣ್ಣ ಗೌರಿ, ಈಶ್ವರ ಹಿರೇಮಠ, ವೈ.ಎಂ. ತಹಶೀಲ್ದಾರ್ ಸೇರಿದಂತೆ ಮಠದ ಭಕ್ತರು ಇದ್ದರು.



ಶಿಷ್ಯರ ಮೆಚ್ಚಿನ ಶಿಕ್ಷಕ | ಸಕಲ ರಂಗದಲ್ಲೂ ಯಶಸ್ವಿ ರಾಚಣ್ಣವರ ಸರ್‌ಗೆ ಗೌರವ ಸಮರ್ಪಣೆ ನಾಳೆ

ಹುಬ್ಬಳ್ಳಿ: ಶೈಕ್ಷಣಿಕ, ಕಲಾರಂಗಕ್ಕೆ ತಮ್ಮದೆಯಾದ ಕೊಡುಗೆ ನೀಡಿರುವ ನಿವೃತ್ತ ಉಪನ್ಯಾಸಕ ಎಸ್.ಆರ್.ರಾಚಣ್ಣವರ ಅವರ ನಿವೃತ್ತಿ ಹಿನ್ನೆಲೆಯಲ್ಲಿ ಧಾರವಾಡದ ರಪಾಟಿ ಕಲ್ಯಾಣ ಮಂಟಪದಲ್ಲಿ ಜೂ.28ರಂದು ಸಂಜೆ 4 ಗಂಟೆಗೆ ಸ್ನೇಹ- ಬಂಧು ಬಳಗ ಮತ್ತು ಶಿಷ್ಯರು ಸೇವಾನಿವೃತ್ತಿ ಗೌರವ ಸಮರ್ಪಣೆ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ.



ರಾಜ್ಯದ ಏಕೈಕ ಸಂಸ್ಥೆಯಾದ ರಾಜ್ಯ ಶಾಲಾ ನಾಯಕತ್ವ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ ಧಾರವಾಡದಲ್ಲಿ ಉಪನ್ಯಾಸಕರು, ಜಿಲ್ಲಾ ಪಂಚಾಯತ್ ವಯಸ್ಕರ ಶಿಕ್ಷಣ ಇಲಾಖೆಯಲ್ಲಿ ಜಿಲ್ಲಾ ಕಾರ್ಯಕ್ರಮ ಸಹಾಯಕರು, ಉತ್ತರ ಕನ್ನಡ ಜಿಜಿಲ್ಲೆ ಜೋಯಿಡಾ ತಾಲೂಕಿನ ಕ್ಯಾಸಲರಾಕ್ ಪ್ರೌಢ ಶಾಲೆಯಲ್ಲಿ ಮುಖ್ಯೋಪಾಧ್ಯಪಕರು, ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಲಖನಗಾಂವ ಹಾಗೂ ಧಾರವಾಡ ಜಿಲ್ಲೆ ಕಲಘಟಗಿ ತಾಲೂಕಿನ ಬಮ್ಮಿಗಟ್ಟಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಶಿಕ್ಷಕರಾಗಿ ತಮ್ಮ ಸೇವೆ ಸಲ್ಲಿಸಿದ್ದಾರೆ. ಇದಲ್ಲದೇ ಬೆಂಗಳೂರ ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲೂಕಿನ ತಾವರೆಕೇರೆ ಮತ್ತು ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕಿನ ಕಮತಗಿ ಶ್ರೀ ಹುಚ್ಚೇಶ್ವರ ಪ್ರೌಢಶಾಲೆಯಲ್ಲಿಯೂ ಶಿಕ್ಷಕರಾಗಿ ತಮ್ಮ ವೃತ್ತಿ ನಿರ್ವಹಿಸಿದ್ದಾರೆ. ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಮಧುರಖಂಡಿ ಗ್ರಾಮದಲ್ಲಿ ಕೃಷಿ ಕುಟುಂಬದ ರಾಮಪ್ಪ ಪಾರ್ವತಿಯವರ ಪುತ್ರರಾಗಿ ಜನಿಸಿದ ರಾಚಣ್ಣವರ ಗುರುಗಳು ಗ್ರಾಮದಲ್ಲಿಯೇ ಪ್ರಾಥಮಿಕ ಶಿಕ್ಷಣ ಪೂರೈಸಿದ್ದಾರೆ. ಕಡಪಟ್ಟಿ ಹಾಗೂ ಹುನಗುಂದ ತಾಲೂಕಿನ ಕಮತಗಿ ಮತ್ತು ಗೋಕಾಕ ತಾಲೂಕಿನ ಅರಭಾವಿಯಲ್ಲಿ ಕ್ರಮವಾಗಿ 8,9,10ನೇ ತರಗತಿ ಪೂರ್ಣಗೊಸಿದ್ದಾರೆ. ಬಾಗಲಕೋಟ ಸಕ್ರಿ ಕಾಲೇಜಿನಲ್ಲಿ ಪಿಯುಸಿ, ಮುಧೋಳ ಬಸವೇಶ್ವರ ಹಾಗೂ ಬಾಗಲಕೋಟೆಯ ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಬಿಎ ವ್ಯಾಸಂಗ ಮಾಡಿದ್ದಾರೆ. ಜಮಖಂಡಿ ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯ ಬಿ.ಎಡ್. ವ್ಯಾಸಂಗ ಪೂರ್ಣಗೊಳಿಸಿದ್ದಾರೆ.

- ರಾಜ್ಯದ ವಿವಿಧ ಸರ್ಕಾರಿ ಇಲಾಖೆಗಳಲ್ಲಿ 30 ವರ್ಷ ಸೇವೆ
- ಹವ್ಯಾಸಿ ಕಲಾವಿದರಾಗಿಯೂ 35 ನಾಟಕಗಳಲ್ಲಿ ಅಭಿಯನಯ
- 2006ರ ಪ್ರತಿಭಾ ಕಾರಂಜಿಯಲ್ಲಿ ಇವರ ನಿರ್ದೇಶನದ ಕಿತ್ತೂರು ರಾಣಿ ಚನ್ನಮ್ಮ ನಾಟಕ ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ
- ದಾಂಡೇಲಿ ಕಾಗದ ಕಾರ್ಖಾನೆ ಸಿಎಸ್ ಆರ್‌ನ 25 ಲಕ್ಷ ಅನುದಾನದಲ್ಲಿ ಕ್ಯಾಸಲ್‌ರಾಕ್ ಪ್ರೌಢ ಶಾಲೆ ಅಭಿವೃದ್ಧಿ
- ಕಬಡ್ಡಿ ಆಟದಿಂದ ಪ್ರೇರಣೆಗೊಂಡ 50ಕ್ಕೂ ಹೆಚ್ಚು ವಿದ್ಯಾಥಿಗಳು ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಶಿತಿಕಂಠೇಶ್ವರ ಶ್ರೀಗಳಿಗೆ ಭಕ್ತರಿಂದ ಸನ್ಮಾನ



ಕುಂದಗೋಳ: ರೈತರ ಬದುಕು ಹಸನಾಗಲಿ, ವರುಣ ಕೃಪೆಯಿಂದ ಸಮರ್ಪಕ ಮಳೆಯಾಗಿ ಕೃಷಿ ಚಟುವಟಿಕೆ ಚೇತರಿಕೆ ಕಾಣಲಿ ಎಂಬ ಸಂಕಲ್ಪದೊಂದಿಗೆ 21 ದಿನಗಳ ಮೌನಾನುಷ್ಠಾನದಲ್ಲಿ ತೊಡಗಿರುವ ಪಂಚಗ್ರಹ ಹಿರೇಮಠದ ಪೀಠಾಧೀಶ ಶಿತಿಕಂಠೇಶ್ವರ ಶಿವಾಚಾರ್ಯ ಸ್ವಾಮೀಜಿಗೆ ಮಠದ ಭಕ್ತರು ಸನ್ಮಾನಿಸಿ ಗೌರವ ಅರ್ಪಿಸಿದರು.

ಈ ಸಂದರ್ಭದಲ್ಲಿ ದುಮ್ಮವಾಡದ ಸರ್ಪಭೂಷಣ ದೇವರು ,ಪಟ್ಟಣದ ಕಲ್ಯಾಣಪೂರ ಮಠದ ಬಸವಣ್ಣಜ್ಜನವರು, ಮುಖಂಡರಾದ ಅರವಿಂದ ಕಟಗಿ, ರಾಜು ಶಿವಳ್ಳಿ, ನಾಗರಾಜ ದೇಶಪಾಂಡೆ, ಪಪಂ ಮಾಜಿ ಅಧ್ಯಕ್ಷ ವಾಗೀಶ ಗಂಗಾಯಿ, ಉಪಾಧ್ಯಕ್ಷ ಮಂಜುನಾಥ ಹಿರೇಮಠ, ಸಿದ್ದು ಧಾರವಾಡ ಶೆಟ್ಟರ್ ,ಬಾಬಾಜಾನ್ ಮಿಶ್ರಿಕೋಟಿ, ಶಂಕ್ರಣ್ಣ ಗೌರಿ, ಸಂಭಾಜಿ ತಡಸದ, ಈಶ್ವರ ಹಿರೇಮಠ, ಮಹೇಶ ನಾವಳ್ಳಿ ಸೇರಿದಂತೆ ಮಠದ ಭಕ್ತರು ಇದ್ದರು.



ಹುಬ್ಬಳ್ಳಿ: ನಗರದ ಚಿನ್ಮಯ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನ ಆಚರಿಸಲಾಯಿತು.

ಪಾಕ್ಷಿಕ ಜಿಲ್ಲಾ ಸಮ್ಮೇಳನ: ಪೂರ್ವಭಾವಿ ಸಭೆ

ಹುಬ್ಬಳ್ಳಿ: ಇಲ್ಲಿಯ ಕಾರವಾರ ರಸ್ತೆ ಅರವಿಂದ ನಗರದಲ್ಲಿರುವ ಬಿಜೆಪಿ ಕಚೇರಿಯಲ್ಲಿ ಧಾರವಾಡ ಗ್ರಾಮಾಂತರ ಜಿಲ್ಲಾ ವತಿಯಿಂದ ಡಾ. ಶ್ಯಾಮಪ್ರಸಾದ ಮುಖರ್ಜಿ ಅವರ ಸ್ಮರಣ ಪಾಕ್ಷಿಕ ಜಿಲ್ಲಾಸಮ್ಮೇಳನ ಹಾಗೂ ಪಶ್ಚಿಮ ಪದವೀಧರರ ಚುನಾವಣೆ ಪೂರ್ವಭಾವಿ ಸಭೆ ನಡೆಯಿತು. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಉದ್ಘಾಟಿಸಿದರು. ಜಿಲ್ಲಾಧ್ಯಕ್ಷ ನಿಂಗಪ್ಪ ಸುತಗಟ್ಟಿ, ನೂತನ ರಾಜ್ಯಸಭಾ ಸದಸ್ಯ ಮಾ. ನಾಗರಾಜ, ಶಾಸಕರಾದ ಎಂ.ಆರ್ .ಪಾಟೀಲ, ಮಹೇಶ್ ಟೆಂಗಿನಕಾಯಿ, ವಿಧಾನ ಪರಿಷತ್ ಸದಸ್ಯರಾದ ಲಿಂಗರಾಜ ಪಾಟೀಲ, ಎಸ್.ವಿ. ಸಂಕನೂರ, ಮಾಜಿ ಶಾಸಕ ಅಮೃತ ದೇಸಾಯಿ, ನಾಗರಾಜ ಛಬ್ಬಿ, ರಾಜ್ಯ ರೈತ ಮೋರ್ಚಾದ ಉಪಾಧ್ಯಕ್ಷ ಬಸವರಾಜ ಕುಂದಗೋಳಮಠ, ರಾಜ್ಯ ಯುವ ಮೋರ್ಚಾ ಉಪಾಧ್ಯಕ್ಷ ಮಲ್ಲಿಕಾರ್ಜುನ ಬಾಳಿಕಾಯಿ, ವಿಭಾಗ ಪ್ರಭಾರಿಗಳಾದ ಜಯತೀರ್ಥ ಕಟ್ಟಿ, ಈರಣ್ಣಾ ಜಡಿ, ಗುರು ಪಾಟೀಲ ಇದ್ದರು.



ಶ್ಯಾಮಪ್ರಸಾದ ಮುಖರ್ಜಿ ಬಲಿದಾನ ದಿನ

ಅಳ್ನಾವರ: ಭಾರತೀಯ ಸಂಘದ (ಬಿಜೆಪಿ) ಸಂಸ್ಥಾಪಕ ಶ್ಯಾಮಪ್ರಸಾದ ಮುಖರ್ಜಿ ಅವರ ಬಲಿದಾನ ದಿನವನ್ನು ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಇತ್ತೀಚೆಗೆ ಹಮ್ಮಿಕೊಳ್ಳಲಾಗಿತ್ತು. ಪಟ್ಟಣದ ಪಕ್ಷದ ಮುಖಂಡರು ಮುಖರ್ಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿರು. ನಗರ ಘಟಕದ ಅಧ್ಯಕ್ಷ ಲಖನ ಬರಗುಂಡಿ ಹಾಗೂ ಪ್ರವೀಣ ಪವಾರ ಮಾತನಾಡಿದರು. ಮಂಡಲ ಪ್ರಧಾನ ಕಾರ್ಯದರ್ಶಿ ಪರಶುರಾಮ ರೇಡೇಕರ, ಕಾರ್ಯದರ್ಶಿ ಪರಶುರಾಮ ಪಾಲಕರ, ನಗರ ಯುವ ಮೋರ್ಚಾ ಅಧ್ಯಕ್ಷ ಸಚಿನ ಲಿಂಗನಮಠ, ಮಂಡಳ ಉಪಾಧ್ಯಕ್ಷ ಲಿಂಗರಾಜ ಮೂಲಿಮನಿ, ಶ್ರೀನಿವಾಸ ಕಟನಳ್ಳಿ,ರಘು ರವಳಪ್ಪನವರ, ಶ್ರೀಕಾಂತ ಕಡ್ಲಿ, ನಾರಾಯಣ ಕಾಕತಕರ, ಸಂದೀಪ ಪಾಟೀಲ, ಸಮೀರ ಗಾವಡೆ ಇದ್ದರು.



ನಗರ ಸ್ವಚ್ಛತೆಗೆ ಪೌರ ಕಾರ್ಮಿಕರೊಂದಿಗೆ ಕೈಜೋಡಿಸಿ: ಜೋಶಿ

ಹುಬ್ಬಳ್ಳಿ: ನಗರ ಸ್ವಚ್ಛತೆಗೆ ಪೌರ ಕಾರ್ಮಿಕರ ಶ್ರಮ ಬಹಳವಿದೆ. ಒಂದು ದಿನ ಅವರು ಕೆಲಸ ಬಿಟ್ಟರೆ ಪರಿಸ್ಥಿತಿ ಹಾಳಾಗಲಿದೆ. ಆದ್ದರಿಂದ ಸಾರ್ವಜನಿಕರು ಪೌರಕಾರ್ಮಿಕರಿಗೆ ಸಹಕಾರ ನೀಡುವ ಮೂಲಕ ನಗರ ಸ್ವಚ್ಛವಾಗಿ ಇಡಬೇಕು ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿದರು.

ಇಲ್ಲಿಯ ವಿದ್ಯಾನಗರ ರಂಭಾಪುರಿ ಕಲ್ಯಾಣ ಮಂಟಪದಲ್ಲಿ ಶಾಸಕ ಮಹೇಶ ಟೆಂಗಿನಕಾಯಿ ಜನ್ಮದಿನದ ಪ್ರಯುಕ್ತ ಅವರ ಅಭಿಮಾನಿ ಬಳಗ ಹಾಗೂ ರಾಜೇಶ್ವರಿ ಪ್ರಾಪರ್ಟಿಸ್ ಸಹಯೋಗದಲ್ಲಿ ನಗರದ ಶುಕ್ರವಾರ ನಡೆದ ಪೌರಕಾರ್ಮಿಕರು ಹಾಗೂ ಹೆಸ್ಕಾಂ ಲೈನ್‌ಮನ್‌ಗಳ ಸನ್ಮಾನ ಹಾಗೂ ಪಾದಪೂಜೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಪೌರ ಕಾರ್ಮಿಕರಿಗೆ ಹೆಚ್ಚಿನ ಸಹಾಯ ಬೇಕಾದರೇ ನಾನು ಮಾಡುವೆ. ಟಾಸ್ಕ್‌ಫೋರ್ಸ್ ಮಾಡುವ ಮೂಲಕ ಎರಡು ತಿಂಗಳಲ್ಲಿ ಎಲ್ಲಿಯೂ ಕಸ ಬಿದ್ದಿಲ್ಲ ಎನ್ನುವ ಹಾಗೇ ಕಾರ್ಯ ಮಾಡಿ. ಲೈನ್‌ಮನ್‌ಗಳು ರಿಸ್ಕ್ ಇದ್ದರೂ ಜೀವದ ಹಂಗು ತೊರೆದು ನಮಗೆ ಬೆಳಕು ನೀಡುವ ಕಾರ್ಯ ಮಾಡುತ್ತಾರೆ, ಇದು ಸ್ತುತ್ಯರ್ಹ ಕಾರ್ಯಕ್ರಮ ಎಂದರು. ಸಾನಿಧ್ಯ ವಹಿಸಿದ್ದ ಮೂರು ಸಾವಿರ ಮಠದ ಗುರುಸಿದ್ಧರಾಜಯೋಗೀಂದ್ರ ಸ್ವಾಮೀಜಿ ಮಾತನಾಡಿ, ಪೌರಕಾರ್ಮಿಕರಿಗೆ ಹಾಗೂ ಲೈನ್‌ಮನ್‌ಗಳಿಗೆ ಪಾದಪೂಜೆ ಮಾಡುವುದು ನೋಡಿದರೆ ಯಾರೂ ಶ್ರೇಷ್ಠ, ಕನಿಷ್ಠರಲ್ಲ ಎನ್ನುವುದನ್ನು ಈ ಸಮಾರಂಭ ಸಾರುತ್ತದೆ. ದಿನವೂ ಪಾದಪೂಜೆ ಮಾಡಿಸಿಕೊಳ್ಳುವ ನಮಗೆ ಪೌರಕಾರ್ಮಿಕರು, ಲೈನ್ ಮನ್‌ಗಳ ಪಾದಪೂಜೆ ನೋಡುವ ಅವಕಾಶ ಸಿಕ್ಕಿದೆ ಎಂದರು.



ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿ, ಶಾಸಕನಾದಾಗಿಂದಲೂ ನಗರದ ಸ್ವಚ್ಛತೆ ಬಗ್ಗೆ ಗಮನ ಹರಿಸುತ್ತಿದ್ದೆ. ಪ್ರತಿ ತಿಂಗಳ ಒಂದು ಮತ್ತು ಮೂರನೇ ಭಾನುವಾರ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು 18 ವಾರಗಳಿಂದ ಸ್ವಚ್ಛತೆ ಮಾಡುತ್ತಿದ್ದೇವೆ. ಇದರಲ್ಲಿ ಜನರೂ ಸೇರಬೇಕು ಎಂದರು.

ಗೋಕುಲ ರಸ್ತೆಯಲ್ಲಿ 8-10 ವರ್ಷಗಳ ಹಿಂದೆ ನನ್ನ ಕಣ್ಣೆದುರೇ ದುರಸ್ತಿ ವೇಳೆ ಕಂಬದ ಮೇಲೆ ಲೈನ್ ಮನ್ ಒಬ್ಬರು ಮೃತಪಟ್ಟರು. ಆಗ ಯಾರೂ ಏನೂ ಮಾಡಲೂ ಆಗುತ್ತಿರಲಿಲ್ಲ. ಹೀಗಾಗಿ ಪೌರಕಾರ್ಮಿಕರು, ಲೈನ್‌ಮನ್ ಗಳನ್ನು ಗೌರವಿಸುವ ನಿರ್ಧಾರ ಮಾಡಲಾಗಿದೆ ಎಂದರು. ವಿಧಾನ ಪರಿಷತ್‌ನ ನೂತನ ಸದಸ್ಯ ಲಿಂಗಾರಾಜ ಪಾಟೀಲ ಮಾತನಾಡಿ, ನಿಮ್ಮ ಮನೆಯಂತೆ ವಾರ್ಡ್, ನಗರವನ್ನೂ ಸ್ವಚ್ಛವಾಗಿ ಇಟ್ಟುಕೊಳ್ಳಬೇಕು ಎಂದರು. ಹು-ಧಾ ಮಹಾನಗರ ಪಾಲಿಕೆ ಮೇಯರ್ ಜ್ಯೋತಿ ಪಾಟೀಲ ಪ್ರಾಸ್ತಾವಿಸಿದರು. ಪುರುಷರಿಗೆ ಪ್ಯಾಂಟ್ ಹಾಗೂ ಶರ್ಟ್ ಪೀಸ್, ಮಹಿಳೆಯರಿಗೆ ಸೀರೆ ವಿತರಿಸಲಾಯಿತು. ಹು-ಧಾ ಮಹಾನಗರ ಪಾಲಿಕೆ ಉಪ ಮೇಯರ್ ಸಂತೋಷ ಚವ್ಹಾಣ್ ಸೇರಿದಂತೆ ಪಾಲಿಕೆಯ ಬಿಜೆಪಿ ಸದಸ್ಯರು, ವಿವಿಧ ಮೋರ್ಚಾಗಳ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಶ್ರದ್ಧಾ ಭಕ್ತಿಯ ಪಂಜಾಗಳ ಮೆರವಣಿಗೆ



ಹುಬ್ಬಳ್ಳಿ: ಹಿಂದೂ- ಮುಸ್ಲಿಮರು ಒಗ್ಗೂಡಿ ಆಚರಿಸುವ ಮೊಹರಂ ಹಬ್ಬವನ್ನು ಕೊನೆಯ ದಿನವನ್ನು ನಗರ ಹಾಗೂ ತಾಲೂಕಿನಾದ್ಯಂತ ಶುಕ್ರವಾರ ಪ್ರತಿಷ್ಠಾಪಿಸಿದ ಪಂಜಾಗಳ ಮೆರವಣಿಗೆಯೊಂದಿಗೆ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ನಗರದ ಉಣಕಲ್, ವೀರಾಪುರ ಓಣಿ, ದುರ್ಗದಬೈಲ್ ಬಳಿಯ ಪಿಂಡರ್ ಗಲ್ಲಿ, ದಿಡ್ಡಿ ಓಣಿ, ಇಂಡಿಪಂಪ್ ಬಳಿಯ ದರ್ಗಾ, ಅಮರಗೋಳ, ಬೆಂಗೇರಿ, ಗಾಮನಗಟ್ಟಿ, ಗಣೇಶ ಪೇಟೆ ಸೇರಿದಂತೆ ಹಳೇ ಹುಬ್ಬಳ್ಳಿಯ ವಿವಿಧೆಡೆ ಪ್ರತಿಷ್ಠಾಪಿಸಿದ ಪಂಜಾಗಳಿಗೆ ಪೂಜೆ ಸಲ್ಲಿಸಲಾಯಿತು. ತಾಲೂಕಿನ ಕುಸುಗಲ್, ಬ್ಯಾಹಟ್ಟಿ, ಕಿರೇಸೂರ, ಹೆಬಸೂರ, ಅದರಗುಂಚಿ, ಅಂಚಟಗೇರಿ, ನೂಲ್ವಿ ಸೇರಿದಂತೆ ಎಲ್ಲ ಗ್ರಾಮದಲ್ಲಿ ಹಬ್ಬ ಆಚರಿಸಲಾಯಿತು. ಗುರುವಾರ ಕತ್ತರ ರಾತ್ರಿ ದಿನ ಹಿಂದೂ-ಮುಸ್ಲಿಂ ಸಮುದಾಯದವರು ಪಂಜಾಗಳಿಗೆ ಒಣಕೊಬ್ಬರಿ, ಸಕ್ಕರೆ, ಬೆಲ್ಲ ಸೇರಿದಂತೆ ವಿವಿಧ ಪೂಜಾ ಸಾಮಗ್ರಿಗಳನ್ನು ಅರ್ಪಿಸಿ, ಇಷ್ಟಾರ್ಥ ಸಿದ್ದಿಗಾಗಿ ಪ್ರಾರ್ಥಿಸಿದರು. ಹುಲಿ ಬಣ್ಣವನ್ನು ಮೈಮೇಲೆ ಚಿತ್ರಿಸಿಕೊಂಡಿದ್ದ ಕೆಲ ಭಕ್ತರು ನಗರದ ಕೆಲವೆಡೆ ನಡೆದ ಪಂಜಾ ಮೆರವಣಿಗೆ ವೇಳೆ ಕುಣಿದರು. ಬೆಂಕಿಯಲ್ಲಿ ಹಾಯುವ ಕಾರ್ಯಕ್ರಮ ವಿವಿಧೆಡೆ ನಡೆದವು. ಗಾಮನಗಟ್ಟಿ, ಅಮರಗೋಳದಲ್ಲಿ ಮೊಹರಂ ಆಚರಿಸಲಾಯಿತು. ಅಮರಗೋಳದಲ್ಲಿ ನಡೆದ ಮೆರವಣಿಗೆಯಲ್ಲಿ ಹಿಂದೂ ಸಮುದಾಯದ ಯುವಕರು ಪಂಜಾಗಳನ್ನು ಹೊತ್ತಿದ್ದು ವಿಶೇಷವಾಗಿತ್ತು.

ಪರಿವರ್ತನೆಗೆ ಶಾಹು ಮಹಾರಾಜ ಬುನಾದಿ

ಧಾರವಾಡ: ನಗರದ ಮರಾಠಾ ವಿದ್ಯಾಪ್ರಸಾರಕ ಮಂಡಳದ ಐದು ಅಂಗ ಸಂಸ್ಥೆಗಳ ಸಹಯೋಗದಲ್ಲಿ ಶುಕ್ರವಾರ ಸಂಸ್ಥೆಯ ಭವನದಲ್ಲಿ ರಾಜರ್ಷಿ ಶಾಹು ಮಹಾರಾಜರ 152ನೇ ಜಯಂತಿ ಕಾರ್ಯಕ್ರಮವನ್ನು ಅತ್ಯಂತ ಶ್ರದ್ಧೆ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಸ್ನಾತಕೋತ್ತರ ಅಧ್ಯಯನ ಕೇಂದ್ರದ ಇತಿಹಾಸ ವಿಭಾಗದ ಪ್ರಾಧ್ಯಾಪಕ ಡಾ.ರಮೇಶ ಮೊರಬ ಮಾತನಾಡಿ, ಶಾಹು ಮಹಾರಾಜ ವಿಧವಾ ಪುನರ್ ವಿವಾಹ ಜಾರಿಗೆ, ಜೀತ ಪದ್ಧತಿ ನಿಷೇಧ, ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ, ಅಸ್ಪೃಶ್ಯತೆ ವಿರೋಧಿ ಕಾನೂನು, ದೇವದಾಸಿ ಪದ್ಧತಿ ನಿರ್ಮೂಲನೆ ಹೀಗೆ ಕಲ್ಯಾಣ ಯೋಜನೆ ಮೂಲಕ ಸಾಮಾಜಿಕ ಪರಿವರ್ತನೆಗೆ ಭದ್ರ ಬುನಾದಿ ಹಾಕಿದರು ಎಂದರು.

ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಜಾರಿಗೆ ತಂದು ಹಿಂದುಳಿದ ವರ್ಗಗಳ, ದೀನದಲಿತರ ಸಬಲೀಕರಣಕ್ಕೆ ನಾಂದಿ ಹಾಡಿದ ಕೀರ್ತಿ ಶಾಹು ಮಹಾರಾಜ ಅವರಿಗೆ ಸಲ್ಲುತ್ತದೆ. ಶಾಹು ಅವರು ಕೇವಲ ರಾಜರಾಗಿರದೆ, ಸಾಮಾಜಿಕ ನ್ಯಾಯದ ಹರಿಕಾರರು ಎಂದರು. ಇದಕ್ಕೂ ಮೊದಲು ಶಾಹು ಮಹಾರಾಜರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಗೌರವ ಸಮರ್ಪಿಸಿದರು. ಸಂಸ್ಥೆಗಳಾದ ಮುಖ್ಯಸ್ಥರಾದ ಅಶೋಕ ಬಾಬರ, ಮಿನಾಕ್ಷಿ ಘಾಟಗೆ, ಎಸ್.ಎಸ್. ಸಂಕೋಜಿ, ಎಂ.ಎಸ್.ಗಾಣಿಗೇರ, ಆರತಿ ಕುಂಬಾರಕೊಪ್ಪ, ಸಿಬ್ಬಂದಿ ಇದ್ದರು.



ಶ್ರೀಶಾರದಾ ಪೀಠಕ್ಕೆ ಭೇಟಿ ನೀಡಿದ ಸಚಿವೆ ಕರಂದ್ಲಾಜೆ

• **ಶೃಂಗೇರಿ:** ಕೇಂದ್ರ ಕಾರ್ಮಿಕ ಸಚಿವೆ ಶೋಭಾ ಕರಂದ್ಲಾಜೆ ಶ್ರೀಶಾರದಾ ಪೀಠಕ್ಕೆ ಶುಕ್ರವಾರ ಭೇಟಿ ನೀಡಿ ದೇವಿಗೆ ಪೂಜೆ ಸಲ್ಲಿಸಿ, ಉಭಯ ಜಗದ್ಗುರುಗಳಾದ ಶ್ರೀ ಭಾರತೀತೀರ್ಥ ಸ್ವಾಮೀಜಿ ಹಾಗೂ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಗಳ ಆಶೀರ್ವಾದ ಪಡೆದರು. ಬೆಳಗ್ಗೆ ಶ್ರೀ ತೋರಣ ಗಣಪತಿ, ಶ್ರೀಶಂಕರಚಾರ್ಯ, ಶ್ರೀ ಶಕ್ತಿಗಣಪತಿ, ಶ್ರೀ ಶಾರದಾಂಬೆಗೆ ವಿಶೇಷ ಪೂಜೆ ಸಲ್ಲಿಸಿದರು. ನಂತರ ಗುರುಭವನಕ್ಕೆ ತೆರಳಿದ ಸಚಿವರು ಜಗದ್ಗುರುಗಳಿಗೆ ಫಲ, ಪುಷ್ಪ ಸಮರ್ಪಿಸಿದರು. ಜಗದ್ಗುರುಗಳಿಗೆ ಪ್ರಧಾನಿ ಮೋದಿಯವರ 12 ವರ್ಷದ ಸಾಧನೆಯ ಪುಸ್ತಕ ನೀಡಿದರು.



ಸಚಿವರು ಮಾತನಾಡಿ, ಶ್ರೀ ಶಾರದಾ ಪೀಠದ ಉಭಯ ಜಗದ್ಗುರುಗಳ ದರ್ಶನ ಭಾಗ್ಯ ಆಶೀರ್ವಾದ ಪಡೆದಿರುವುದು ನಿಜಕ್ಕೂ ಪುಣ್ಯ. ಸಾಕ್ಷಾತ್ ಆದಿ ಶಂಕರಚಾರ್ಯರ ಪರಂಪರೆಯ ಗುರುಗಳ ಆಶೀರ್ವಾದ ದೊರಕುವುದು ಸುಲಭದ ವಿಷಯವಲ್ಲ. 12 ವರ್ಷದ ಪ್ರಧಾನಿ ಸೇವೆ ಸುಶಾಸನದ ವರದಿ ಜಗದ್ಗುರುಗಳಿಗೆ ಸಮರ್ಪಿಸುವುದು ಹೆಮ್ಮೆಯಾಗುತ್ತಿದೆ. ಜಗದ್ಗುರುಗಳು ಹೇಳಿದ ನಿಸ್ವಾರ್ಥ ಸೇವೆ, ಕರುಣೆ, ಸಮಾಜ ಕಲ್ಯಾಣದ ಮಾತುಗಳು ಇಂದಿನ ಕಾಲಕ್ಕೆ ತುಂಬಾ ಪ್ರಸ್ತುತವಾಗಿದೆ ಎಂದರು.ಈ ಸಂದರ್ಭದಲ್ಲಿ ಶ್ರೀಮಠದ ಆಡಳಿತಾಧಿಕಾರಿ ಪಿ.ಎ. ಮುರುಳಿ, ಜಗದ್ಗುರುಗಳ ಆಪ್ತ ಸಹಾಯಕ ಶಮಂತಶರ್ಮ, ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ಟಿ.ಕೆ.ಪರಾಶರ ಇದ್ದರು.

ಕುಶಲೋಪರಿ ವಿಚಾರಣೆ



ಶುಕ್ರವಾರ ಧರ್ಮಸ್ಥಳಕ್ಕೆ ಆಗಮಿಸಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರ ಆಶೀರ್ವಾದ ಪಡೆದು, ಕುಶಲೋಪರಿ ವಿಚಾರಿಸಿದರು.

ವಿದ್ಯುತ್ ಸುರಕ್ಷತಾ ಸಪ್ತಾಹಕ್ಕೆ 1 ಲಕ್ಷ

• **ಬೆಂಗಳೂರು:** ವಿದ್ಯುತ್ ಪರಿವೀಕ್ಷಣಾಲಯ ದಿಂದ ಹಮ್ಮಿಕೊಂಡಿರುವ ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಸಪ್ತಾಹಕ್ಕೆ ಎಲ್ಲಾ ಎಸ್ಕಾಂಗಳಿಂದ ವಿಭಾಗಾವಾರು 1 ಲಕ್ಷ ರೂ. ನೀಡುವುದಾಗಿ ಇಂಧನ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಹೇಳಿದರು.

ಸರ್ಕಾರಿ ನೌಕರರ ಸಂಘದ ಸಭಾಂಗಣದಲ್ಲಿ ಶುಕ್ರವಾರ ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಸಪ್ತಾಹವನ್ನು ಉದ್ಘಾಟಿಸಿ ಮಾತನಾಡಿ, ವಿದ್ಯುತ್ ಅವಘಡಗಳನ್ನು ತಪ್ಪಿಸಲು ಜಾಗೃತಿ ಜತೆಗೆ ಮುಂಜಾಗ್ರತಾ ಕ್ರಮಗಳನ್ನೂ ಕೈಗೊಳ್ಳಬೇಕಾ ಗುತ್ತದೆ. ಇಂಧನ ಸಚಿವ ಕೆ.ಜೆ ಜಾರ್ಜ್ ಅವರ ಮಾರ್ಗದರ್ಶನದಲ್ಲಿ ಅಗತ್ಯ ಕಾರ್ಯ ಯೋಜನೆ ರೂಪಿಸಲಾಗುವುದು ಎಂದರು.

ರಾಜ್ಯದಲ್ಲಿ ಸರ್ಕಾರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿರುವ ಸಮಸ್ಯೆಗಳನ್ನು ಇತ್ಯರ್ಥಗೊಳಿಸಿ ಪ್ರಕ್ರಿಯೆಯನ್ನು ವ್ಯವಸ್ಥಿತಗೊಳಿಸುವ ಮೂಲಕ ಹೊಸ ನೇಮಕಾತಿಗೆ ಸರ್ಕಾರ ಒತ್ತು ನೀಡಿದೆ. ಸರ್ಕಾರಿ ಇಲಾಖೆಗಳು ಮಾತ್ರವಲ್ಲದೆ, ನಿಗಮ ಮಂಡಳಿಗಳಲ್ಲಿ ಖಾಲಿ ಇರುವ ಅಗತ್ಯ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ ಎಂದರು. ವಿದ್ಯುತ್ ಸುರಕ್ಷತೆ ಕುರಿತಂತೆ ಪ್ರಮಾಣ ಬೋಧಿಸಲಾಯಿತು. ಜತೆಗೆ ವಿದ್ಯುತ್ ಸುರಕ್ಷತಾ ಸಪ್ತಾಹದ ವೇಳೆ ಸಾರ್ವಜನಿಕರಿಗೆ ಜಾಗೃತಿ ಸಂದೇಶ ಸಾರಲಿರುವ ಎಲ್‌ಇಡಿ ಪರದೆ ಇರುವ ವಾಹನಗಳಿಗೆ ಚಾಲನೆ ನೀಡಲಾಯಿತು. ವಿದ್ಯುತ್ ಪರಿವೀಕ್ಷಣಾಲಯದ ಮುಖ್ಯ ವಿದ್ಯುತ್ ಪರಿವೀಕ್ಷಣಾಧಿಕಾರಿ ಡಾ. ತೀತಿರ ಅಪ್ಪಚ್ಚು, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್ ಷಡಾಕ್ಷರಿ, ಕೆಪಿಟಿಸಿಎಲ್ ನಿರ್ದೇಶಕ (ಕಾರ್ಯಾಚರಣೆ) ವಿಶ್ವನಾಥ್ ನಾಯಕ್, ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ಸಿ.ರಮೇಶ್, ಬಿ.ಎನ್. ಬಸವೇಗೌಡ ಇದ್ದರು.

> ವಿದ್ಯುತ್ ಸುರಕ್ಷತೆ ಕುರಿತಂತೆ ಸಾರ್ವಜನಿಕರು, ಇಂಧನ ಇಲಾಖೆ ಸಿಬ್ಬಂದಿ ಮತ್ತು ಗುತ್ತಿಗೆದಾರರಲ್ಲಿ ಮೊದಲು ಜಾಗೃತಿ ಮೂಡಿಸಬೇಕಿದೆ. ಈ ನಿಟ್ಟಿನಲ್ಲಿ ವಿದ್ಯುತ್ ಪರಿವೀಕ್ಷಣಾವಯದ ಅಧಿಕಾರಿಗಳು ಜಿಲ್ಲಾಡಳಿತದ ಜತೆಗೆ ನಿಕಟ ಸಂಪರ್ಕದಲ್ಲಿದ್ದು ಕೆಲಸ ಮಾಡಬೇಕು.
> ■ **ಡಾ.ಎನ್.ಶಿವಶಂಕರ,** ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ

ಕಿರುಸುದ್ದಿ

ಶಂಕಿತ ಉಗ್ರನ ವಿಚಾರಣೆ

• **ದಾವಣಗೆರೆ:** ಜಿಲ್ಲೆಯ ಹರಿಹರ ತಾಲೂಕು ಬನ್ನಿಕೊಡು ಗ್ರಾಮದಲ್ಲಿ ಶಂಕಿತ ಉಗ್ರನ ಬಂಧನ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆ ಅಧಿಕಾರಿಗಳು ಶುಕ್ರವಾರ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಗೆ ಆಗಮಿಸಿ ವಿಚಾರಣೆ ನಡೆಸಿದರು.

ಶಂಕಿತ ಉಗ್ರ ಸುಹೇಲ್ ಮತ್ತವನ ಸಹೋದರ ಶೋಯೆಬ್ ಅವರುಗಳನ್ನು ಬೆಳಗ್ಗೆ 11 ಗಂಟೆಯಿಂದಲೇ ವಿಚಾರಣೆಗೊಳಪಡಿಸಿದ ಅಧಿಕಾರಿಗಳು, ಸುಹೇಲ್‌ನ ಮೊಬೈಲ್ ಫೋನ್ ಪರಿಶೀಲಿಸಿದ್ದಾರೆ. ಆತ ಯಾವ್ಯಾವ ಗ್ರೂಪ್ ಗಳಲ್ಲಿ ಸಕ್ರಿಯನಾಗಿದ್ದ, ಯಾರೊಂದಿಗೆಲ್ಲಾ ಸಂಪರ್ಕ ಹೊಂದಿದ್ದ ಎಂಬ ಕುರಿತು ಮಾಹಿತಿ ಕಲೆ ಹಾಕಿದ್ದಾರೆ. ಮೊಬೈಲ್‌ನಲ್ಲಿದ್ದ ಕೆಲವು ಸಂದೇಶಗಳನ್ನು ಅಳಿಸಿರುವ ಶಂಕೆಯೂ ವ್ಯಕ್ತವಾಗಿದ್ದು, ಹೆಚ್ಚಿನ ತಾಂತ್ರಿಕ ಪರಿಶೀಲನೆಗಾಗಿ ಮೊಬೈಲ್‌ನ್ನು ಬೆಂಗಳೂರಿನ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ(ಎಫ್‌ಎಸ್‌ಎಲ್) ಕಳುಹಿಸಲು ಅಧಿಕಾರಿಗಳು ನಿರ್ಧರಿಸಿದ್ದಾರೆ ಎನ್ನಲಾಗಿದೆ. ಇಬ್ಬರು ಎನ್‌ಐಎ ಅಧಿಕಾರಿಗಳು ಹಾಗೂ ಇಬ್ಬರು ಡಿವೈಎಸ್ಪಿಗಳ ನೇತೃತ್ವದಲ್ಲಿ ವಿಚಾರಣೆ ನಡೆಯುತ್ತಿದ್ದು, ನಿನ್ನೆಯಷ್ಟೇ 10 ದಿನಗಳ ಕಸ್ಟಡಿಗೆ ಪಡೆದಿದ್ದ ಹರಿಹರ ಗ್ರಾಮಾಂತರ ಪೊಲೀಸರು ಕೂಡ ತನಿಖೆ ಚುರುಕುಗೊಳಿಸಿದ್ದಾರೆ.

ಸೌಹಾರ್ದ ಸಹಕಾರಿ ನಿರ್ದೇಶಕರಿಗೆ ತರಬೇತಿ

ಬೆಂಗಳೂರು: ಬೆಂಗಳೂರಿನ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸಂಘದ ವತಿಯಿಂದ ಜೂ.23 ಮತ್ತು 24ರಂದು ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಆಡಳಿತ ಪರಿಣಿತಿ ಹಾಗೂ ವ್ಯವಹಾರ ಅಭಿವೃದ್ಧಿ ತರಬೇತಿ ಕಾರ್ಯಕ್ರಮನ್ನು ಬೆಂಗಳೂರಿನ ಮಲ್ಲೇಶ್ವರದಲ್ಲಿನ ಸೌಹಾರ್ದ ಸಹಕಾರಿ ಸೌಧದಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರಿ ನಿಬಂಧಕರಾದ ಡಾ.ವೆಂಕಟೇಶ್ ಎಂ.ವಿ.ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಜಿ.ನಂಜನಗೌಡ ಸಿ.ಎ. ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಬಿ.ಎಚ್. ಕೃಷ್ಣಾರೆಡ್ಡಿ ಹಾಗೂ ಬಿ.ಎಸ್. ಗುಂಡೂರಾವ್ ಹಾಗೂ ಸಹಕಾರ ಸಂಘಗಳ ನಿಬಂಧಕರುಗಳಾದ ಡಾ.ಜಗದೀಶ್, ವೆಂಕಟೇಶ್, ಕವಿತಾ, ಶಶಿಧರ್ ಪಾಲ್ಗೊಂಡಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಬೆಂಗಳೂರಿನ ಸಹಕಾರ ಸಂಘಗಳ ಅಪರ ನಿಬಂಧಕರಾದ ಎಚ್.ಎಸ್.ನಾಗರಾಜಯ್ಯ ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ. ಪಾಟೀಲ ಪ್ರಾಸ್ತಾವಿಕ ನುಡಿಗಳನ್ನಾಡಿದರು.ಸಂಯುಕ್ತ ಸಹಕಾರಿಯ ಸಹ ಪ್ರಧಾನ ವ್ಯವಸ್ಥಾಪಕ ರಾಜಶೇಖರ ಎಚ್. ಹೂಗಾರ್ ಸ್ವಾಗತಿಸಿದರು. ಹರ್ಷಪ್ರಭಾ ಪ್ರಾರ್ಥಿಸಿದರು . ತರಬೇತಿ ವಿಭಾಗದ ಅಧಿಕಾರಿ ಕವಿತಾ ಆರ್. ನಿರೂಪಿಸಿದರು. ವಿ.ಜೆ. ಕಾರ್ಕುನ್ ವಂದಿಸಿದರು. ಕಾರ್ಯಕ್ರಮದಲ್ಲಿ ರಾಜ್ಯದ 96 ಸೌಹಾರ್ದಗಳಿಂದ 146 ಪ್ರತಿನಿಧಿಗಳು ಭಾಗವಹಿಸಿದ್ದರು.

ಡಾ.ಚಂದ್ರಕಲಾ ಬಿದರಿ ನಿಧನ

• **ಬೆಂಗಳೂರು:** ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ಸಕ್ರಿಯರಾಗಿದ್ದ ಡಾ.ಚಂದ್ರಕಲಾ ಬಿದರಿ ಅವರು ಅನಾರೋಗ್ಯದ ಕಾರಣದಿಂದ ನಿಧಾನರಾಗಿದ್ದಾರೆ. ಡಾ. ಚಂದ್ರಕಲಾ ಬಿದರಿ ಅವರು ಕಲಬುರಗಿ ಜಿಲ್ಲೆಯ ಸೇಡಂನಲ್ಲಿರುವ ಗಂಗೋತ್ರಿಯ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದ ಅವರು, ಪ್ರಮುಖವಾಗಿ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಸಕ್ರಿಯರಾಗಿದ್ದು, ಮಹಿಳಾ ಬದುಕು ಸೇರಿದಂತೆ ಹಲವು ಪುಸ್ತಕಗಳನ್ನು ಬರೆದಿದ್ದಾರೆ. ಇವರು ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.



ತೆರಿಗೆ ಮರು ಪಾವತಿಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಿ: ಡಿ.ಕೆ.ಶಿವಕುಮಾರ್

ಸಕಾಲಕ್ಕೆ ತೆರಿಗೆ ಪಾವತಿಸಿ

• **ಬೆಂಗಳೂರು:** ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು ಆಯಾ ವಿಭಾಗಗಳಿಗೆ ಹಂಚಿಕೆ ಮಾಡಲಾದ ತೆರಿಗೆ ಸಂಗ್ರಹಣಾ ಗುರಿ ಸಾಧಿಸಿ ತೋರಿಸಿ. ತೆರಿಗೆ ಮರು ಪಾವತಿ ಸಮಯಕ್ಕೆ ಸರಿಯಾಗಿ ಸಲ್ಲಿಸುವುದು ಹಾಗೂ ತೆರಿಗೆ ಮರು ಪಾವತಿಸಿರುವವರನ್ನು ಗುರುತಿಸಿ ನಿಗದಿತ ಅವಧಿಯ ಒಳಗೆ ಮರು ಪಾವತಿ ಮಾಡುವಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚಿಸಿದ್ದಾರೆ.



ವಿಧಾನಸೌಧದಲ್ಲಿ ಶುಕ್ರವಾರ ನಡೆದ ವಾಣಿಜ್ಯ ಇಲಾಖೆಯ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಹಲವು ಸೂಚನೆಗಳನ್ನು ನೀಡಿದರು, ನಿಮ್ಮ ಗುರಿ ಮುಟ್ಟಿ. ನಿಮಗೆ ಈಗ ಬರುತ್ತಿರುವ ತೆರಿಗೆಯ ಎರಡರಷ್ಟು ಸಂಗ್ರಹ ಮಾಡುವ ಸಾಮರ್ಥ್ಯ ಇದೆ. ಆದರೆ ಕಾನೂನು ಮೀರಿ, ಶೋಷಣೆ ಮಾಡಿ ಅಂತ ಹೇಳಲ್ಲ ಎಂದರು.

ಪ್ರಾಮಾಣಿಕ ತೆರಿಗೆದಾರರಿಗೆ ಯಾವುದೇ ರೀತಿಯ ತೊಂದರೆ ಆಗಬಾರದು. ಅವರನ್ನು ಸುಲಿಗೆ ಮಾಡಬಾರದು. ನಿಮ್ಮ ತೊಂದರೆಗಳು ಇದ್ದರೆ ಹೇಳಿ, ಅವು ನೈಜ ಇದ್ದರೆ ನಿವಾರಿಸೋಣ. ಪ್ರಾಮಾಣಿಕತೆ, ನಿಷ್ಠೆ ಶ್ರಮಕ್ಕೆ ನನ್ನ ಬಳಿ ಗೌರವ, ಬೆಲೆ. ಪ್ರಾಮಾಣಿಕತೆ ಇಲ್ಲದಿದ್ದರೆ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳುವೆ. ಎಲ್ಲಾ ಹಂತಗಳ ಅಧಿಕಾರಿಗಳು ತೆರಿಗೆದಾರರ ನೈಜ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಬೇಕು ಎಂದು ಸಿಎಂ ಸೂಚಿಸಿದರು.

ಕೇಳುವುದಕ್ಕೂ-ಕಲಿಯುವುದಕ್ಕೂ ನಾನು ಸಿದ್ಧ: ನನ್ನ ಸಾರ್ವಜನಿಕ ಜೀವನಕ್ಕೆ ಸುಮಾರು ಮೂವತ್ತೆಂಟು ವರ್ಷಗಳ ಅನುಭವವಿದೆ. ಈ ಅವಧಿಯಲ್ಲಿ ಹಲವು ಪ್ರಮುಖ ಖಾತೆಗಳನ್ನು ನಿರ್ವಹಿಸಿದ್ದೇನೆ. ಈಗ ಹಣಕಾಸು ಮತ್ತು ವಾಣಿಜ್ಯ ತೆರಿಗೆ ಇಲಾಖೆಯ ಕಾರ್ಯವೈಖರಿಯನ್ನು ಇನ್ನಷ್ಟು ಆಳವಾಗಿ ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇನೆ. ಕೇಳುವುದಕ್ಕೂ, ಕಲಿಯುವುದಕ್ಕೂ ನಾನು ಸದಾ ಸಿದ್ಧನಿದ್ದೇನೆ. ನಿರಂತರ ಕಲಿಕೆಯೇ ಉತ್ತಮ ಆಡಳಿತದ ಮೂಲ ಎಂದು ನಾನು ನಂಬುತ್ತೇನೆ.

> ವಾಣಿಜ್ಯ ತೆರಿಗೆ ಅಧಿಕಾರಿಗಳು ಸರ್ಕಾರದ ಶಕ್ತಿ. ನೀವು ಶಕ್ತಿ ಕೊಡದಿದ್ದರೆ ಸರ್ಕಾರ ನಡೆಸುವುದು ಕಷ್ಟ. ವಾಣಿಜ್ಯ ತೆರಿಗೆ ಇಲಾಖೆಗೆ ಪ್ರಸ್ತುತ ಹಣಕಾಸು ವರ್ಷಕ್ಕೆ ನೀಡಿರುವ ತೆರಿಗೆ ಸಂಗ್ರಹದ ಗುರಿಯನ್ನು ಮೀರಿ ಸಾಧನೆ ತೋರಿಸುತ್ತೀರೆಂಬ ವಿಶ್ವಾಸ ನನಗಿದೆ.
> ■ **ಡಿ.ಕೆ.ಶಿವಕುಮಾರ್,** ಮುಖ್ಯಮಂತ್ರಿ

ಆದ್ದರಿಂದ ಮುಂದಿನ ಸಭೆಯ ವೇಳೆಗೆ ಈಗಿನ ವರದಿಗಿಂತ ಉತ್ತಮವಾದ ಕಾರ್ಯಕ್ಷಮತೆಯ ವರದಿಯನ್ನು ನಿಮ್ಮಿಂದ ನಿರೀಕ್ಷಿಸುತ್ತೇನೆ. ಜಿಎಸ್ಟಿ ಸಂಗ್ರಹದಲ್ಲಿ ರಾಜ್ಯ ಉತ್ತಮ ಪ್ರಗತಿ ಸಾಧಿಸಿದ್ದು, ಶೇ.9ರಷ್ಟು ಪ್ರಗತಿ ಆಗಿದೆ. ಈ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ ಉತ್ತಮ ಸಾಧನೆಯಾಗಿದೆ. ಗುಜರಾತ್, ತಮಿಳುನಾಡು, ಹರಿಯಾಣ ರಾಜ್ಯಗಳಿಗಿಂತ ಹೆಚ್ಚು ಪ್ರಗತಿ ರಾಜ್ಯದಲ್ಲಿ ಆಗಿರುವುದು ಸಮಾಧಾನದ ಸಂಗತಿ ಎಂದರು.

ನಕಲಿ ರಶೀದಿ ಮತ್ತು ನಕಲಿ ಐಟಿಸಿಗಳು ದೊಡ್ಡ ಸವಾಲಾಗಿದೆ. ಈ ಸವಾಲನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದೇವೆ. ಬೋಗಸ್ ಕಂಪನಿಗಳನ್ನು ಪತ್ತೆ ಹಚ್ಚಿ 166 ಕೋಟಿ ರೂ. ಸಂಗ್ರಹಿಸಿದ್ದೇವೆ. ಬೋಗಸ್ ಕಂಪನಿ ಸ್ಥಾಪಿಸಿದವರ ವಿರುದ್ಧ ಕಾನೂನು ಕ್ರಮ ಜರುಗಿಸುವ ಪ್ರಮಾಣ ಹೆಚ್ಚಲಿ. ಇಲ್ಲಿಯವರೆಗೆ ಬೋಗಸ್ ಮಾಡುವವರನ್ನು ಬಂಧಿಸುವ ಪ್ರಮಾಣ ಕಡಿಮೆ ಇತ್ತು. ಈಗ ಬಂಧನವನ್ನು ಹೆಚ್ಚಿಸಿದ್ದೇವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜತೆಗೆ ಸಿಬ್ಬಂದಿಯಿಂದ ಲೋಪ ಕಂಡು ಬಂದಾಗಲೂ ಕಠಿಣ ಕ್ರಮಗಳ ಮೂಲಕ ಎಚ್ಚರಿಕೆ ನೀಡಲಾಗಿದೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಮೈಸೂರು ವಿಭಾಗದಲ್ಲಿ ಕಾರ್ಯಕ್ಷಮತೆ ಕುಸಿತ ಆಗಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಕಾರ್ಯಕ್ಷಮತೆ ಕುಸಿದಿರುವುದಕ್ಕೆ ನೆಪಗಳು, ಕಾರಣಗಳನ್ನು ಕೊಡುವುದು ಸರಿಯಲ್ಲ. ಫಲಿತಾಂಶ ಮುಖ್ಯ. ಏನೇ ತಾಂತ್ರಿಕ ತೊಂದರೆಗಳಿದ್ದರೂ ಬಗೆಹರಿಸಿಕೊಂಡು ಉತ್ತಮ ಕಾರ್ಯಕ್ಷಮತೆ ನಿರೀಕ್ಷಿಸುತ್ತೇನೆ.

ಹರಿಪ್ರಸಾದ್‌ಗೆ ಸಾಮಾನ್ಯ ಜ್ಞಾನವಿಲ್ಲ: ಜೋಶಿ ಕಿಡಿ

• **ಹುಬ್ಬಳ್ಳಿ:** ರಾಮನ ಅಸ್ತಿತ್ವ ಬಗ್ಗೆ ಪ್ರಶ್ನೆ ಮಾಡಿದವರು, ರಾಮ ಕಾಲ್ಪನಿಕ ವ್ಯಕ್ತಿ ಎಂದವರು, ನೂರಾರು ಕೋಟಿ ರೂಪಾಯಿ ಭ್ರಷ್ಟಾಚಾರ ಮಾಡಿದರವರು ಈಗ ರಾಮ ಮಂದಿರದ ಬಗ್ಗೆ ಮಾತನಾಡುತ್ತಿರುವುದು ಹಾಸ್ಯಾಸ್ಪದ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಕಿಡಿಕಾರಿದರು.

ನಗರದಲ್ಲಿ ಮಾಧ್ಯದವರೊಂದಿಗೆ ಮಾತನಾಡಿದ ಅವರು, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ ಅವರಿಗೆ ಸಾಮಾನ್ಯ ಜ್ಞಾನವಿಲ್ಲ, ಮಹಮ್ಮದ್ ಘಜನಿ ಹಾಗೂ ಬಾಬರ್ ಅನ್ನು ಪೂಜೆ ಮಾಡಿದವರು ರಾಮನ ಮಂದಿರದ ಬಗ್ಗೆ ಮಾತನಾಡುತ್ತಿದ್ದಾರೆ? ಪ್ರಧಾನಿ ಮೋದಿ ಹಾಗೂ ಅಮಿತ್ ಶಾ ಅವರಿಗೆ ಘಜನಿ ಹಾಗೂ ಬಾಬರ್ ಹೋಲಿಸುತ್ತಿದ್ದು, ಒಂದು ಸಮಯದಲ್ಲಿ ಅವರನ್ನು ಹೊಗಳಿದ್ದರು. ಕಾಂಗ್ರೆಸ್ ತಮ್ಮ ಅಸ್ತಿತ್ವದ ಬಗ್ಗೆ ಯೋಚಿಸಬೇಕು. ರಾಹುಲ್ ಗಾಂಧಿ ನೇತೃತ್ವದಲ್ಲಿ ದೇಶದಲ್ಲಿ ಕೇರಳ ರಾಜ್ಯದಲ್ಲಿ ಬಿಟ್ಟರೆ ಉಳಿದ ಕಡೆ ಕಾಂಗ್ರೆಸ್ ಸೋಲು ಅನುಭವಿಸಿದ್ದಾರೆ ಎಂದು ಹರಿಹಾಯ್ದರು.

ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರು ಈ ಹಿಂದೆ ಮಂತ್ರಿ ಸ್ಥಾನಕ್ಕಾಗಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಚಡ್ಡಿ ಬಗ್ಗೆ ಮಾತನಾಡಿದ್ದರು. ಮೂರು ಅವಧಿಯ ಗಡಿ ದಾಟದ ಅವರು ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ ಎಂದು ಟೀಕಿಸಿದರು. ರಾಷ್ಟ್ರೀಯ ಮಾಧ್ಯಮಗಳ ಗಮನ ಸೆಳೆಯಲು ಕಾಂಗ್ರೆಸ್ಸಿಗರು ಸಂಘದ ಕುರಿತು ಹೇಳಿಕೆ ನೀಡುತ್ತಿದ್ದಾರೆ ಎಂದು ಟೀಕಿಸಿದರು.

ರಾಜ್ಯದಲ್ಲಿ ತಮ್ಮದೇ ಆಡಳಿತ, ಅಧಿಕಾರಿಗಳನ್ನು ಇಟ್ಟುಕೊಂಡ ರಾಜ್ಯ ಸರ್ಕಾರ ಎಸ್‌ಐಆರ್ ಬಗ್ಗೆ ವಿರೋಧ ಮಾಡುತ್ತಿದೆ. ಕಾಂಗ್ರೆಸ್ ಬೆಂಬಲ ನೀಡಿದ ಕೇರಳ ಹಾಗೂ ಜಮ್ಮು ಕಾಶ್ಮೀರದಲ್ಲಿ ಎಸ್‌ಐಆರ್ ಸ್ವಾಗತಿಸಲಾಗಿದೆ.

ತಮಗೆ ಅನುಕೂಲವಾದಲ್ಲಿ ಸ್ವಾಗತ. ಆಗದ ಕಡೆ ಎಸ್‌ಐಆರ್ ವಿರೋಧ ಮಾಡುವುದೇ ಕಾಂಗ್ರೆಸ್ ಕೆಲಸ ಎಂದು ವ್ಯಂಗ್ಯವಾಡಿದರು.

> ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಸಂಪೂರ್ಣ ಹಾಳಾಗಿದೆ. ಈ ವಿಚಾರ ವಿಷಯಾಂತರ ಮಾಡಲು ಕಾಂಗ್ರೆಸ್ ನಾಯಕರು ಆರ್‌ಎಸ್‌ಎಸ್ ನಿಷೇಧದ ಬಗ್ಗೆ ಮಾತನಾಡುತ್ತಿದ್ದಾರೆ. ಈಗಾಗಲೇ ಸಂಘ ಪರಿವಾರದವರು ಈ ಬಗ್ಗೆ ಉತ್ತರಿಸಿದ್ದಾರೆ. ಹಿಂದೆ ನಾಲ್ಕೈದು ಬಾರಿ ನಿಷೇಧ ಮಾಡಿದಾಗ ನ್ಯಾಯಾಲಯವು ಛೀಮಾರಿ ಹಾಕಿದೆ.
> ■ **ಪ್ರಲ್ಹಾದ್ ಜೋಶಿ,** ಕೇಂದ್ರ ಸಚಿವ



» ಕಾಂಗ್ರೆಸ್ ತಮ್ಮ ಅಸ್ತಿತ್ವದ ಬಗ್ಗೆ ಯೋಚಿಸಲಿ

» ಎಸ್‌ಐಆರ್ ವಿರೋಧ ಮಾಡುವುದೇ ಕಾಂಗ್ರೆಸ್ ಕೆಲಸ

ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಯ 2ನೇ ಪತ್ನಿಗೂ ಪರಿಹಾರ: ಹೈ ಆದೇಶ

• **ಬೆಂಗಳೂರು:** ರಸ್ತೆ ಅಪಘಾತಗಳಲ್ಲಿ ಮೃತಪಟ್ಟ ವ್ಯಕ್ತಿಯ ಅವಲಂಬಿತರಿಗೆ ಪರಿಹಾರ ನಿಗದಿಪಡಿಸುವಾಗ ಕೇವಲ ಕಾನೂನುಬದ್ಧ ಸಂಬಂಧವನ್ನು ಮಾತ್ರವಲ್ಲ, ಮೃತರ ಮೇಲೆ ಅವಲಂಬಿತರಾಗಿದ್ದ ಎಲ್ಲರ ಹಿತಾಸಕ್ತಿಯನ್ನು ಪರಿಗಣಿಸಬೇಕು ಎಂದು ಕರ್ನಾಟಕ ಹೈಕೋರ್ಟ್ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ.



ಇದೇ ವೇಳೆ, ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಯ ಎರಡನೇ ಪತ್ನಿ ಮತ್ತು ಆಕೆಯ ಮಕ್ಕಳಿಗೂ ಪರಿಹಾರದಲ್ಲಿ ಸಮಾನ ಹಕ್ಕು ಇದೆ ಎಂದು ಸ್ಪಷ್ಟಪಡಿಸಿ, ಪ್ರಕರಣವೊಂದರಲ್ಲಿ ಪರಿಹಾರ ಮೊತ್ತವನ್ನು 15 ಲಕ್ಷ ರೂ.ನಿಂದ 30 ಲಕ್ಷ ರೂ.ಗೆ ಹೆಚ್ಚಿಸಿ ಆದೇಶಿಸಿದೆ.

ದಾವಣಗೆರೆಯ ಮೋಟಾರು ವಾಹನ ಅಪಘಾತಗಳ ಪರಿಹಾರ ನ್ಯಾಯ ಮಂಡಳಿಯ ಆದೇಶವನ್ನು ಪ್ರಶ್ನಿಸಿ ಮೃತರ ಮೊದಲ ಪತ್ನಿ ಹಾಗೂ ಇತರರು ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿಗಳಾದ ಜಯಂತ್ ಬ್ಯಾನರ್ಜಿ ಮತ್ತು ತಾರಾ ವಿತಾಸ್ತಾ ಗಂಜು ಅವರಿದ್ದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ಪ್ರಕರಣದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ ನ್ಯಾಯಪೀಠ, ಮೃತರ 2ನೇ ಪತ್ನಿ ಹಾಗೂ ಮಕ್ಕಳೂ ಮೃತರ ಮೇಲೆ ಅವಲಂಬಿತರಾಗಿದ್ದ ಹಿನ್ನೆಲೆಯಲ್ಲಿ ಅವರಿಗೆ ಪರಿಹಾರದಿಂದ ವಂಚಿಸುವಂತಿಲ್ಲ ಎಂದು ಅಭಿಪ್ರಾಯ ಪಟ್ಟಿತು. ಹೀಗಾಗಿ ನ್ಯಾಯಮಂಡಳಿ ಈ ಹಿಂದೆ ನೀಡಿದ್ದ 15 ಲಕ್ಷ ರೂ. ಪರಿಹಾರದ ಜತೆಗೆ ಹೆಚ್ಚುವರಿಯಾಗಿ ಇನ್ನೂ 15 ಲಕ್ಷ ರೂ. ನೀಡುವಂತೆ ವಿಮಾ ಕಂಪನಿಗೆ ನಿರ್ದೇಶಿಸಿ, ಒಟ್ಟು ಪರಿಹಾರ ಮೊತ್ತವನ್ನು 30 ಲಕ್ಷ ರೂ.ಗೆ ಹೆಚ್ಚಿಸಿತು.

ನ್ಯಾಯಪೀಠ, ಪರಿಹಾರ ಮೊತ್ತವನ್ನು ದ್ವಿಗುಣಗೊಳಿಸಿ ಒಟ್ಟು 30 ಲಕ್ಷ ರೂ. ಪಾವತಿಸುವಂತೆ ವಿಮಾ ಕಂಪನಿಗೆ ಆದೇಶ ನೀಡಿತು.

ನಾಳೆ ಆರ್‌ಜಿಯುಎಚ್‌ಎಸ್‌ನಿಂದ ಮಾದಕವಸ್ತು ವಿರೋಧಿ ದಿನಾಚರಣೆ

ನಶಾಮುಕ್ತ ಭಾರತ ಸಂಕಲ್ಪ ಘೋಷಣೆ

• **ಬೆಂಗಳೂರು:** ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ಆರ್‌ಜಿಯುಎಚ್‌ಎಸ್)ದ 31ನೇ ಸಂಸ್ಥಾಪನಾ ದಿನಾಚರಣೆ ಹಾಗೂ ಅಂತಾರಾಷ್ಟ್ರೀಯ ಮಾದಕವಸ್ತು ದುರುಪಯೋಗ ಮತ್ತು ಅಕ್ರಮ ಸಾಗಣೆ ವಿರೋಧಿ ದಿನಾಚರಣೆಯನ್ನು ಜೂ.28ರಂದು ನಗರದ ಕಂಠೀರವ ಕ್ರೀಡಾಂಗಣದಲ್ಲಿ ನಶಾಮುಕ್ತ ಭಾರತ ಸಂಕಲ್ಪ ಘೋಷಣೆಯೊಂದಿಗೆ ಆಚರಿಸಲಾಗುತ್ತಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರ್‌ಜಿಯುಎಚ್‌ಎಸ್ ಕುಲಪತಿ ಡಾ. ಭಗವಾನ್ ಬಿ.ಸಿ. ಮಾತನಾಡಿ, ಸಮಾರಂಭಕ್ಕೆ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಮುಖ್ಯ ಅತಿಥಿಯಾಗಿ ಆಗಮಿಸಲಿದ್ದು, ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ ಹಾಗೂ ಆರೋಗ್ಯ ಸಚಿವ ಯು.ಟಿ. ಖಾದರ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದರು. ಆಂಧ್ರಪ್ರದೇಶದ ರಾಜ್ಯಪಾಲ ಎಸ್.ಅಬ್ದುಲ್ ನಜೀರ್ ಅವರು ವೈದ್ಯಕೀಯ ವಿದ್ಯಾರ್ಥಿಗಳ ಪಾತ್ರ ಕುರಿತು ದತ್ತಿ ಉಪನ್ಯಾಸ ನೀಡಲಿದ್ದಾರೆ. ಈ ದತ್ತಿಯನ್ನು ಆರ್‌ಜಿಯುಎಚ್‌ಎಸ್‌ನ ಪ್ರಥಮ ಕುಲಪತಿ ಡಾ. ಎಸ್. ಕಾಂತಾ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ನಿವೃತ್ತ ನಿರ್ದೇಶಕಿ ದಿವಂಗತ ಡಾ. ಶಿವರತ್ನ ಸಿ. ಸಾವಡಿ ಅವರ ಹೆಸರಿನಲ್ಲಿ ಸ್ಥಾಪಿಸಲಾಗಿದೆ ಎಂದು ಭಗವಾನ್ ವಿವರಿಸಿದರು.



ರಾಜ್ಯದ ವಿವಿಧ ವೈದ್ಯಕೀಯ ಕಾಲೇಜುಗಳಿಂದ 25 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಸಂಸ್ಥಾಪನಾ ದಿನದ ಅಂಗವಾಗಿ ರಾಜ್ಯಾದ್ಯಂತ ಸುಮಾರು 1.25 ಲಕ್ಷ ರೂ. ವೈದ್ಯ ಕೀಯ ವಿದ್ಯಾರ್ಥಿಗಳು ನಶಾಮುಕ್ತ ಭಾರತ ಸಂಕಲ್ಪ ಸ್ವೀಕರಿಸಲಿದ್ದಾರೆ ಎಂದರು. ಕಳೆದ ವರ್ಷದಲ್ಲಿ ರಾಜ್ಯದ 15 ಜಿಲ್ಲೆಗಳ 550ಕ್ಕೂ ಹೆಚ್ಚು ಸಂಯೋಜಿತ ಕಾಲೇಜುಗಳ 98 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಹಾಗೂ 10 ಸಾವಿರ ಸಿಬ್ಬಂದಿ ಜಾಗೃತಿ ಗಳಲ್ಲಿ ಭಾಗವಹಿ ಸಿದ್ದು, ದೇಶದಲ್ಲೇ ಇಂತಹ ಅಭಿಯಾನ ಆರಂಭಿಸಿದ ಮೊದಲ ಆರೋಗ್ಯ ವಿಜ್ಞಾನ ವಿವಿ ಎಂಬ ಹೆಗ್ಗಳಿಕೆ ಆರ್‌ಜಿಯುಎಚ್‌ಎಸ್‌ಗೆ ಸಲ್ಲುತ್ತದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಹಣಕಾಸು ಅಧಿಕಾರಿ ಬಿ.ಕೆ. ಗಂಗಾಧರ್, ಕುಲಸಚಿವ ಡಾ. ರಿಯಾಜ್ ಬಾಷಾ ಎಸ್. ಹಾಗೂ ಅರ್ಜುನ್ ಒಡೆಯರ್ ಇದ್ದರು.

ಅಕ್ಟೋಬರ್ ತಿಂಗಳಿಗೆ ರಾಮನಗರ ಕ್ಯಾಂಪಸ್

ಮುಂಬರುವ ಅಕ್ಟೋಬರ್ ಅಥವಾ ನವೆಂಬರ್ ತಿಂಗಳಿಗೆ ವಿಶ್ವವಿದ್ಯಾಲಯದ ರಾಮನಗರ ಕ್ಯಾಂಪಸ್ ಅನ್ನು ಉದ್ಘಾಟಿಸುವ ಗುರಿ ಹೊಂದಲಾಗಿದೆ. ಈ ಮೊದಲಿನ ದಿನಾಂಕದಂತೆ ಕಳೆದ ಡಿಸೆಂಬರ್‌ನಲ್ಲಿಯೇ ರಾಮನಗರದಲ್ಲಿರುವ ಹೊಸ ಆರ್‌ಜಿಯುಎಚ್‌ಎಸ್ ಕ್ಯಾಂಪಸ್ ಉದ್ಘಾಟನೆಯಾಗಬೇಕಿತ್ತು. ಅಲ್ಲದೇ, ಮಾರ್ಚ್ ನಲ್ಲಿ ಉದ್ಘಾಟಿಸುವ ಗಡುವು ಇಟ್ಟುಕೊಂಡಿದ್ದೇವು. ಆದರೆ, ವಿಳಂಬವಾಗುತ್ತಿದೆ ಎಂದು ಭಗವಾನ್ ಬಿ.ಸಿ. ಹೇಳಿದರು.

ಮಳೆ ಕೊರತೆ ಹಿನ್ನೆಲೆ 7ನೇ ಜನರೇಟರ್ ಬಂದ್ | ಪೆನ್‌ಸ್ಟಾಕ್ ಪೈಪ್ ಸೋರಿ ಅನಾಹುತ ಸೃಷ್ಟಿ

ಶರಾವತಿ ವಿದ್ಯುತ್ ಉತ್ಪಾದನಾ ಘಟಕಕ್ಕೆ ನುಗ್ಗಿದ ನೀರು

▸ **ಜಿ. ನಾಗೇಶ್ ಸಾಗರ**

• **ಸಾಗರ:** ಶರಾವತಿ ವಿದ್ಯುತ್ ಉತ್ಪಾದನಾ ಘಟಕದಲ್ಲಿ ಗುರುವಾರ ಪೆನ್‌ಸ್ಟಾಕ್ ಪೈಪ್ ಲೀಕ್ ಆಗಿ ನೀರು ನುಗ್ಗಿದ ಪರಿಣಾಮ ಕ್ಷಣಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ಶರಾವತಿ ಹಿನ್ನೀರನ್ನು ಆಶ್ರಯಿಸಿ ಲಿಂಗನಮಕ್ಕಿ ಜಲಾಶಯದ ಶರಾವತಿ ವಿದ್ಯುದಾಗಾರದಲ್ಲಿ 1,035 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಇಲ್ಲಿ 10 ಘಟಕಗಳಿದ್ದು ತಲಾ 103.5 ಮೆಗಾವ್ಯಾಟ್ ವಿದ್ಯುತ್ತನ್ನು ಪ್ರತಿ ಘಟಕದಿಂದ ಉತ್ಪಾದನೆ ಮಾಡಲಾಗುತ್ತಿತ್ತು. ಈ ಘಟಕಗಳಿಗೆ ಸುಮಾರು 400 ಮೀ. ಎತ್ತರದಿಂದ ಬೃಹತ್ ಪೈಪ್‌ಗಳ ಮೂಲಕ ಟರ್ಬೈನ್‌ಗಳಿಗೆ ನೀರು ಹರಿಸಲಾಗುತ್ತದೆ.

ಮಳೆ ಕೊರತೆ ಹಿನ್ನೆಲೆಯಲ್ಲಿ ಲಿಂಗನಮಕ್ಕಿ ಜಲಾಶಯದಲ್ಲಿನ ನೀರಿನ ಪ್ರಮಾಣ ತೀವ್ರ ಕುಸಿತ ಕಂಡಿದೆ. ಈ ಹಿನ್ನೆಲೆಯಲ್ಲಿ ಕೇವಲ ಮೂರು ಯೂನಿಟ್‌ಗಳ ಮೂಲಕ 310.5 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಉಳಿದ ಏಳು ಯೂನಿಟ್‌ಗಳನ್ನು ನೀರಿನ ಕೊರತೆ ಹಿನ್ನೆಲೆಯಲ್ಲಿ ನಿಲ್ಲಿಸಿ ವಾರ್ಷಿಕ ನಿರ್ವಹಣೆಯನ್ನು ಅಧಿಕಾರಿಗಳು ಮಾಡುತ್ತಿದ್ದರು. ಏಳನೇ ಜನರೇಟರ್ ನಿಲ್ಲಿಸಿ ನಾಲ್ಕು ದಿನಗಳಾಗಿತ್ತು. ಆದರಲ್ಲಿ ನೀರು ಪೆನ್‌ಸ್ಟಾಕ್ ಪೈಪ್‌ನಲ್ಲಿ ನೀರು ಸಂಗ್ರಹ ಹಾಗೆಯೆ ಇತ್ತು. ಹಂತಹಂತವಾಗಿ ಸಿಬ್ಬಂದಿ ಖಾಲಿ ಮಾಡುತ್ತಿರುವ ಸಂದರ್ಭದಲ್ಲಿ ಪೈಪ್ ಪಂಕ್ಚರ್ ಆಗಿ ನೀರು ಹೊರ ಬಂದಿದೆ. ಅಪಾಯದ ಸಾಧ್ಯತೆಯನ್ನು ಮನಗಂಡು ಮೂರು ಘಟಕಗಳನ್ನು ಬಂದ್ ಮಾಡಲಾಯಿತು.






ಒಟ್ಟಾರೆ ಲಿಂಗನಮಕ್ಕಿ ಜಲಾಶಯದ ನೀರಿನ ಪ್ರಮಾಣ ಕುಸಿತ ಆಗುತ್ತಿರುವುದು, ಶರಾವತಿ ವಿದ್ಯುದಾಗಾರದ 7ನೇ ಘಟಕದ ಪೈಪ್‌ನಲ್ಲಿ ಸಂಗ್ರಹವಾಗಿರುವ ನೀರು ಪೋಲಾಗಿರುವುದು ಎಲ್ಲವೂ ಮುಂದಿನ ದಿನಗಳಲ್ಲಿ ವಿದ್ಯುತ್ ಉತ್ಪಾದನೆಗೆ ತೊಂದರೆ ಉಂಟು ಮಾಡುವ ಜತೆಗೆ ಸಾಗರಕ್ಕೆ, ಜೋಗ ಕಾರ್ಗಲ್ ಜನರಿಗೆ ಕೊಡುತ್ತಿರುವ ಕುಡಿಯುವ ನೀರಿಗೂ ಸಮಸ್ಯೆ ಉಂಟಾಗಬಹುದು. ಮಳೆ ಪ್ರಮಾಣ ದಿಢೀರ್ ಕುಸಿತದಿಂದಾಗಿ ಲಿಂಗನಮಕ್ಕಿ ಜಲಾಶಯದ ನೀರಿನ ಮಟ್ಟ ತೀವ್ರ ಕುಸಿತ ಕಂಡಿದ್ದು, ಇನ್ನು ಮೂರ್ನಾಲ್ಕು ದಿನ ಮಳೆ ಬಾರದೆ ಹೋದಲ್ಲಿ ಜಲಾಶಯ ಬೆಡ್‌ಲೆವೆಲ್ ತಲುಪಿ ವಿದ್ಯುತ್ ಉತ್ಪಾದನೆ ನಿಲ್ಲಿಸುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

ಕಳೆದ ವರ್ಷಕ್ಕಿಂತ 35 ಅಡಿ ಕಡಿಮೆ

ಲಿಂಗನಮಕ್ಕಿ ಜಲಾಶಯದ ನೀರಿನ ಮಟ್ಟ 1819 ಆಗಿದ್ದು, 1740 ಅಡಿ ತಲುಪವವರೆಗೂ ವಿದ್ಯುತ್ ಉತ್ಪಾದನೆ ಮಾಡಬಹುದು. ಮೇ ಎರಡನೇ ವಾರ, ಜೂನ್‌ನಿಂದ ಮುಂಗಾರು ಪ್ರಾರಂಭವಾಗಿ ಇಷ್ಟು ಹೊತ್ತಿಗೆ ಜಲಾಶಯ ಸುಮಾರು 1775 ಅಡಿಗೂ ಹೆಚ್ಚಿನ ನೀರನ್ನು ತುಂಬಿಕೊಂಡಿರುತಿತ್ತು. ಆದರೆ ಜೂನ್ ಮುಗಿಯುತ್ತ ಬಂದರೂ ಮಳೆ ಬಿದ್ದಿಲ್ಲ. ಈತನಕ ಸುಮಾರು 550 ಮಿ.ಮೀ. ಒಳಗೆ ಮಳೆ ಬಿದ್ದಿದೆ. 151.64 ಅಡಿ ಸಾಮರ್ಥ್ಯದ ಲಿಂಗನಮಕ್ಕಿ ಜಲಾಶಯದಲ್ಲಿ ಶುಕ್ರವಾರ 14.86 ಟಿಎಂಸಿ ನೀರು ಮಾತ್ರ ಇದ್ದು, 1819 ಅಡಿ ಜಾಗದಲ್ಲಿ 1745.75 ಅಡಿ ನೀರು ಸಂಗ್ರವಾಗಿದೆ. ಕಳೆದ ವರ್ಷ ಈ ವೇಳೆಗೆ 1781.55 ಅಡಿ ನೀರಿದ್ದು, ಡ್ಯಾಂನಲ್ಲಿ 57.29 ಟಿಎಂಸಿ ನೀರು ಸಂಗ್ರಹವಾಗಿತ್ತು. ಮಳೆಯೆ ಇಲ್ಲದೆ ಇರುವುದರಿಂದ ಜಲಾಶಯಕ್ಕೆ ಯಾವುದೇ ಒಳಹರಿವು ಇಲ್ಲ. ಡ್ಯಾಂ ಲೆವೆಲ್ 1740 ತಲುಪಿದಾಗ ವಿದ್ಯುತ್ ಉತ್ಪಾದನೆ ಮಾಡಿದರೆ ಜಲಾಶಯದಲ್ಲಿ ಕಂಪನ ಉಂಟಾಗುತ್ತದೆ ಎನ್ನುತ್ತಾರೆ ಅಧಿಕಾರಿಗಳು.

ಅಯೋಧ್ಯೆ ದೇಣಿಗೆ ಲೂಟಿ ಆಘಾತಕಾರಿ: ಕೆ.ಎಸ್.ಈಶ್ವರಪ್ಪ

• **ಶಿವಮೊಗ್ಗ:** ಅಯೋಧ್ಯೆ ರಾಮಮಂದಿರದ ದೇಣಿಗೆ ಲೂಟಿಯಾಗಿರುವುದು ಆಘಾತತಂದಿದೆ. ಈ ಲೂಟಿಕೋರರ ಬಗ್ಗೆ ತನಿಖೆ ಮಾಡಿ, ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಆಗ್ರಹಿಸಿದ್ದಾರೆ.



ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಯಾರೋ ಒಬ್ಬರು ಮಾಡಿದ್ದರೆ ಇಡೀ ಕುಟುಂಬವನ್ನೇ ದೂಷಿಸುವುದು ಸರಿಯಲ್ಲ. ತಾಯಿ ಸೀತಾಮಾತೆಯ ಬಗ್ಗೆಯೂ ಹಿಂದೆ ಅನುಮಾನ ಪಟ್ಟಿದ್ದರು. ರಾಮಮಂದಿರ ನಿರ್ಮಾಣ ಈ ದೇಶದ ಇತಿಹಾಸ. ಕೇಂದ್ರ ಸರ್ಕಾರ ಕೂಡಲೇ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಇದನ್ನು ಕೇಂದ್ರ ಸರ್ಕಾರ ಹಗುರವಾಗಿ ತೆಗೆದುಕೊಂಡಿಲ್ಲ ಎಂದು ನಂಬಿದ್ದೇನೆ.

ಲೂಟಿಕೋರರು 6 ತಿಂಗಳ ಮುಂಚೆಯೇ ವ್ಯವಸ್ಥಿತವಾಗಿ ಸಂಚು ರೂಪಿಸಿ ಅಲ್ಲಿಯ ಸಿಸಿ ಕ್ಯಾಮೆರಾಗಳನ್ನು ಹಾಳು ಮಾಡಿದ್ದರು ಎನ್ನಲಾಗಿದೆ. ಈ ಲೂಟಿ ಕೂಡ ಸರ್ಕಾರಕ್ಕೆ ಮತ್ತು ರಾಮಭಕ್ತರಿಗೆ ಎಚ್ಚರಿಕೆಯ ಘಂಟೆಯಾಗಿದೆ. ಮಂದಿರ ಟ್ರಸ್ಟ್‌ನ ಆಡಳಿತ ವೈಫಲ್ಯ ಎದ್ದು ಕಾಣುತ್ತಿದೆ. ಬಿಜೆಪಿ, ಆರ್‌ಎಸ್‌ಎಸ್ ಕೂಡ ಭಾಗಿಯಾಗಿದೆ ಎಂಬ ಆರೋಪವನ್ನು ರಾಮಮಂದಿರ ಮಾಡುವುದೇ ಬೇಡ ಎಂದವರು ಮಾಡುತ್ತಿದ್ದಾರೆ. ಲೂಟಿ ಬಗ್ಗೆ ಅವರು ಈಗ ಗಮನ ಹರಿಸುತ್ತಿದ್ದಾರೆ. ಪುಣ್ಯಕ್ಷೇತ್ರದ ಗೌರವ ಹಾಳಾಗುತ್ತಿದೆ. ಯಾರೇ ಇದ್ದರೂ ತಕ್ಕ ಶಿಕ್ಷೆಯಾಗಬೇಕು ಎಂದರು.

ನನ್ನ ಭ್ರಷ್ಟಾಚಾರದ ಬಗ್ಗೆ ಕೆಲವರು ಮಾತನಾಡುತ್ತಿದ್ದಾರೆ. ನಾನು ಮಂತ್ರಿಯಾದಾಗ ಮೇಲೆ ಆರೋಪ ಬಂದಾಗ ಕೂಡಲೇ ರಾಜೀನಾಮೆ ನೀಡಿದ್ದೇನೆ. ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಬೇಡ ಎಂದಿದ್ದರೂ ನಾನು ರಾಜೀನಾಮೆ ನೀಡಿ, ಹೊರಗೆ ಬಂದು ತನಿಖೆಗೆ ಸಹಕರಿಸಿದ್ದೆ. ತನಿಖೆಯಲ್ಲಿ ನಿರಪರಾಧಿಯೆಂದು ತೀರ್ಮಾನ ವಾಗಿದೆ ಎಂದರು.

ಉಗ್ರರಿಗೆ ಮರ್ಯಾದೆ ನೀಡಿದ ಗೃಹ ಸಚಿವ ವಿರುದ್ಧ ಬೆಲ್ಲದ ಟೀಕೆ



• **ಹುಬ್ಬಳ್ಳಿ:** ದೇಶದ ಭದ್ರತೆಗೆ ಕಂಟಕಪ್ರಾಯರಾಗಿರುವ ಮತ್ತು ಅಮಾಯಕರ ರಕ್ತ ಹರಿಸಲು ಸಂಚು ರೂಪಿಸುವ ಶಂಕಿತ ಉಗ್ರರನ್ನು ಗೃಹಸಚಿವ ಪ್ರಿಯಾಂಕ್ ಖರ್ಗೆ ಅವರು ಬಹುವಚನದಲ್ಲಿ ಸಂಬೋಧಿಸಿ ಗೌರವ ನೀಡಿರುವುದು ತೀವ್ರ ಖಂಡನೀಯ. ಇದು ಕಾಂಗ್ರೆಸ್ ಪಕ್ಷದ ವಿಕೃತ ಮನಸ್ಥಿತಿ ಮತ್ತು ದೇಶವಿರೋಧಿ ನೀತಿಗೆ ಹಿಡಿದ ಕೈಗನ್ನಡಿಯಾಗಿದೆ ಎಂದು ವಿಧಾನಸಭೆ ವಿಪಕ್ಷ ಉಪನಾಯಕ ಹಾಗೂ ಶಾಸಕ ಅರವಿಂದ ಬೆಲ್ಲದ ಟೀಕಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ದೇಶದ ಭದ್ರತೆಗಾಗಿ ಪ್ರಾಣವನ್ನು ಪಣಕ್ಕಿಟ್ಟು ಗಡಿಯಲ್ಲಿ ಹೋರಾಡುವ ಸೈನಿಕರನ್ನು ಹಾಗೂ ದೇಶದ ಹಿತ ಕಾಯುವ ದೇಶ ಭಕ್ತರನ್ನು ಏಕವಚನದಲ್ಲಿ ನಿಂದಿಸುವ ಕಾಂಗ್ರೆಸ್ ನಾಯಕರಿಗೆ, ದೇಶದ ಒಳಗೆ ಬಾಂಬ್ ಇಡಲು ಸಂಚು ರೂಪಿಸುವ ಶಂಕಿತ ಉಗ್ರರು ಕಂಡರೆ ಎಲ್ಲಿಲ್ಲದ ಗೌರವ ಮತ್ತು ಆದರ ಮೂಡುತ್ತಿರುವುದು ದುರದೃಷ್ಟಕರ ಎಂದು ಹರಿಹಾಯ್ದಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಇಂತಹ ದೇಶವಿರೋಧಿ ಶಕ್ತಿಗಳಿಗೆ ಪರೋಕ್ಷ ಬೆಂಬಲ ಸಿಗುತ್ತಿದೆ ಎಂಬುದಕ್ಕೆ ಸಚಿವರ ಈ ಬೇಜವಾಬ್ದಾರಿಯುತ ಹೇಳಿಕೆಯೇ ಪ್ರತ್ಯಕ್ಷ ಸಾಕ್ಷಿ. ಒಬ್ಬ ಜವಾಬ್ದಾರಿಯುತ ಸಚಿವರಾಗಿ ಕಾನೂನು ಮತ್ತು ರಾಜ್ಯದ ಭದ್ರತೆಯ ಪರವಾಗಿ ನಿಲ್ಲಬೇಕಾದ ಪ್ರಿಯಾಂಕ್ ಖರ್ಗೆ ಅವರು, ಉಗ್ರರ ಪರವಾಗಿ ಮೃದು ಧೋರಣೆ ಹೊಂದಿರುವುದು ಅಕ್ಷಮ್ಯ ಅಪರಾಧವಾಗಿದೆ. ರಾಜ್ಯದ ಭದ್ರತೆ ಮತ್ತು ಸಾರ್ವಜನಿಕರ ಶಾಂತಿಯನ್ನು ಪಣಕ್ಕಿಟ್ಟು ರಾಜಕೀಯ ಲಾಭ ಪಡೆಯಲು ಯತ್ನಿಸುತ್ತಿರುವ ಕಾಂಗ್ರೆಸ್ ಸರ್ಕಾರದ ಈ ಧೋರಣೆಯನ್ನು ದೇಶದ ಜನರು ಎಂದಿಗೂ ಕ್ಷಮಿಸುವುದಿಲ್ಲ. ಸಚಿವರು ತಕ್ಷಣವೇ ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು ಎಂದರು.

ರಾಮ ಬಾಣ



ಆಪರೇಷನ್ ಸಿಂದೂರ್: ಹುತಾತ್ಮ ಆರು ಯೋಧರ ಹೆಸರು ಬಹಿರಂಗ

• **ಹೊಸದಿಲ್ಲಿ:** ಪಹಲ್ಗಾಮ್ ಉಗ್ರ ದಾಳಿಗೆ ಪ್ರತಿಯಾಗಿ ಭಾರತ ಕೈಗೊಂಡಿದ್ದ 'ಆಪರೇಷನ್ ಸಿಂದೂರ್' ವೇಳೆ ಹುತಾತ್ಮರಾದ 6 ಸಶಸ್ತ್ರ ಪಡೆಗಳ ಯೋಧರ ಹೆಸರುಗಳನ್ನು ಕೇಂದ್ರ ಸರ್ಕಾರ ಮೊದಲ ಬಾರಿಗೆ ಅಧಿಕೃತವಾಗಿ ಬಹಿರಂಗಪಡಿಸಿದೆ. ದೇಶದ ರಕ್ಷಣೆಗೆ ತಮ್ಮ ಪ್ರಾಣವನ್ನೇ ಅರ್ಪಿಸಿದ ಈ ಯೋಧರ ಹೆಸರುಗಳನ್ನು ರಾಷ್ಟ್ರೀಯ ಯುದ್ಧ ಸ್ಮಾರಕದ 'ರೋಲ್ ಆಫ್ ಹಾನರ್' ಪಟ್ಟಿಯಲ್ಲಿ ಸೇರಿಸಲಾಗಿದೆ.

ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಸೈನಿಕರಲ್ಲಿ ಭಾರತೀಯ ಸೇನೆಯ ಐವರು, ವಾಯುಪಡೆಯ ಓರ್ವ ಸಾರ್ಜಂಟ್ ಸೇರಿದ್ದಾರೆ. ಈ ಪೈಕಿ ರೈಫಲ್‌ಮನ್ ಸುನಿಲ್ ಕುಮಾರ್‌ಗೆ ಮರಣೋತ್ತರವಾಗಿ ವೀರಚಕ್ರ ಮತ್ತು ಸಾರ್ಜಂಟ್ ಸುರೇಂದ್ರ ಕುಮಾರ್‌ಗೆ ಮರಣೋತ್ತರ ವಾಯುಸೇನಾ ಪದಕ ನೀಡಿ ಗೌರವಿಸಲಾಗಿದೆ. ಈ ಯೋಧರ ಹೆಸರುಗಳನ್ನು ಹೊಸದಿಲ್ಲಿಯ ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿರುವ 'ವಾಲ್ 3ಡಿ' ಸ್ಮಾರಕದಲ್ಲೂ 2025ರ ವಿಭಾಗದಲ್ಲಿ ಕೆತ್ತಲಾಗಿದೆ.

ಇದು ಆಪರೇಷನ್ ಸಿಂದೂರ್ ವೇಳೆ ಮೃತಪಟ್ಟ ಸೈನಿಕರ ಗುರುತನ್ನು ಸರ್ಕಾರದಿಂದ ಸಾರ್ವಜನಿಕವಾಗಿ ಮೊದಲ ಬಾರಿಗೆ ಅಧಿಕೃತವಾಗಿಪ್ರಕಟಿಸಿದ ಘಟನೆಯಾಗಿದೆ. ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿರುವ ತ್ಯಾಗ ಚಕ್ರವನ್ನು(ತ್ಯಾಗ ವೃತ್ತ) ರಾಷ್ಟ್ರದ ಹುತಾತ್ಮರಿಗೆ ಸಮರ್ಪಿಸಲಾಗಿದೆ. ಇದು 16 ವೃತ್ತಾಕಾರದ ಗ್ರಾನೈಟ್ ಶಿಲಾಫಲಕಗಳನ್ನು ಒಳಗೊಂಡಿದೆ. ಸ್ವಾತಂತ್ರ್ಯಾನಂತರ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಪ್ರತಿ ಸೈನಿಕನ ಹೆಸರು, ಶ್ರೇಣಿ ಮತ್ತು ಘಟಕಗಳನ್ನು ಈ ಶಿಲಾಫಲಕದ ಮೇಲೆ ಕೆತ್ತಲಾಗಿದೆ.

ಹುತಾತ್ಮ ಯೋಧರಿವರು

- ಸುಬೇದಾರ್ ಮೇಜರ್ ಪವನ್ ಕುಮಾರ್
- ರೈಫಲ್‌ಮನ್ ಸುನೀಲ್ ಕುಮಾರ್, ವೀರ ಚಕ್ರ
- ಲಾನ್ಸ್ ನಾಯಕ್ ದಿನೇಶ್ ಕುಮಾರ್
- ವಾಯುಯಾನ ತಂತ್ರಜ್ಞ ಮುರಳಿನಾಯಕ್
- ಹವಿಲ್ದಾರ್ ಸುನೀಲ್ ಕುಮಾರ್ ಸಿಂಗ್
- ಸಾರ್ಜೆಂಟ್ ಸುರೇಂದ್ರ ಕುಮಾರ್, ವಾಯು ಪದಕ

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಅನುರಾಧೆ

ದಿನದ ಮಾತು

ಅಪಾಯದ ಪರಿಸ್ಥಿತಿಯಲ್ಲಿ ತೋರಿಸುವ ಧೈರ್ಯವೇ ಅರ್ಧ ಗೆಲುವನ್ನು ತಂದು ಕೊಡುತ್ತದೆ.

▲ ನಾಣ್ನುಡಿ

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಸರಕಾರದ ತಪ್ಪುಗಳನ್ನು ಪ್ರಶ್ನಿಸುವವರಿಗೆ ದೇಶ ದ್ರೋಹಿ ಪಟ್ಟಕಟ್ಟಲಾಗುತ್ತಿದೆ
- ರಾಹುಲ್ ಗಾಂಧಿ

- ತಪ್ಪುಗಳನ್ನು ಪ್ರಶ್ನಿಸುವುದು ತಪ್ಪಲ್ಲ, ಆದರೆ ಸರಕಾರ ದೇಶದ ಹಿತಕ್ಕಾಗಿ ಸರಿಯಾದ ಕೆಲಸಗಳನ್ನು ಮಾಡಿದಾಗಲೂ ತಪ್ಪು ಅಂತ ಹೇಳುವುದು ತಪ್ಪು!

ದಿನ ಭವಿಷ್ಯ

ಮೇಷ ಪ್ರಮುಖ ಕಾರ್ಯ ಯೋಜಿಸಿದ್ದರೆ ಇಂದು ಪೂರ್ಣ ಯಶ ಸಿಗದು. ಕೌಟುಂಬಿಕ ಪರಿಸರ ಶಾಂತ. ಮಕ್ಕಳ ಸಾಧನೆಯಿಂದ ತೃಪ್ತಿ.

ವೃಷಭ ನಿಶ್ಚಿತ ಸಮಯದಲ್ಲಿ ಕೆಲಸ ಪೂರೈಸಲು ವಿಫಲ. ಇದರಿಂದ ಒತ್ತಡ ಹೆಚ್ಚಳ. ವಿದ್ಯಾರ್ಥಿಗಳಿಗೆ ಈ ದಿನ ಕಠಿಣವಾದೀತು. ಹೆಚ್ಚು ಪರಿಶ್ರಮ ಅಗತ್ಯ.

ಮಿಥುನ ಕಾಲಮಿತಿಯಲ್ಲಿ ನಿಮ್ಮ ಗುರಿ ಸಾಧಿಸುವಿರಿ. ಯಾವುದೇ ವಿಘ್ನ ಬಾಧಿಸದು. ಕೌಟುಂಬಿಕ ಸಂತೃಪ್ತಿ. ವಿದ್ಯಾರ್ಥಿಗಳ ಆಶಯ ಪೂರೈಸಲಿದೆ.

ಕಟಕ ಮನೆಯವರ ಜತೆ ಉತ್ತಮ ಹೊಂದಾಣಿಕೆ. ಭಿನ್ನಮತ ನಿವಾರಣೆ. ವದಂತಿಗಳಿಗೆ ಹೆಚ್ಚು ಕಿವಿಗೊಡಬೇಡಿ. ನಿಮ್ಮ ಕೆಲಸ ಮಾಡುತ್ತಿರಿ.

ಸಿಂಹ ಕುಟುಂಬ ಸದಸ್ಯರ ಜತೆ ಹೆಚ್ಚು ಕಾಲ ಕಳೆಯಿರಿ. ಆರೋಗ್ಯದ ಕುರಿತು ಕಾಳಜಿ ವಹಿಸಿರಿ. ವೃತ್ತಿಯಲ್ಲಿ ಸಾಧನೆಯ ತೃಪ್ತಿ. ಕಾರ್ಯ ಸಿದ್ಧಿ.

ಕನ್ಯಾ ಹೆಚ್ಚುವರಿ ಹೊಣೆಗಾರಿಕೆ ಒತ್ತಡ ಸೃಷ್ಟಿಸಲಿದೆ. ದುಡುಕಿನ ನಿರ್ಧಾರ ತಾಳದಿರಿ. ಖರೀದಿಯ ಉತ್ಸಾಹಕ್ಕೆ ಕಡಿವಾಣ ಹಾಕಿ.

ತುಲಾ ಅಧ್ಯಾತ್ಮದ ಆಸಕ್ತಿ ಉಂಟಾದೀತು. ಸಮಸ್ಯೆ ಮುಗಿಯುತ್ತಿಲ್ಲ ಎಂಬ ಭಾವವೇ ಅದಕ್ಕೆ ಕಾರಣ. ಸ್ನೇಹದಲ್ಲಿ ಬಿರುಕು. ಆರ್ಥಿಕ ಒತ್ತಡ ಹೆಚ್ಚು.

ವೃಶ್ಚಿಕ ಅಡ್ಡಿ ನಿವಾರಣೆ. ವಿಳಂಬವಿಲ್ಲದೆ ಕಾರ್ಯ ಎಸಗುವಿರಿ. ಆರ್ಥಿಕ ಸ್ಥಿರತೆ. ವೃತ್ತಿ ಒತ್ತಡ ನಿವಾರಣೆಯಾಗಲಿದೆ. ಬಂಧುತ್ವ ವೃದ್ಧಿ.

ಧನು ನಿಮ್ಮ ಭಾವನೆ, ಮನಸ್ಥಿತಿ ಆಪ್ತರ ಜತೆ ಹಂಚಿಕೊಳ್ಳಿ. ಇದರಿಂದ ಮನಸ್ಸು ಹಗುರ. ಸುಮ್ಮನೇ ಕೊರಗುತ್ತಾ ಕೂರಬೇಡಿ.

ಮಕರ ಸಾಧನೆಯ ದಿನ. ವ್ಯವಹಾರದಲ್ಲಿ ಸಫಲತೆ. ಕೆಲಕಾಲದಿಂದ ಕಾಡುತ್ತಿದ್ದ ಚಿಂತೆ ಪರಿಹಾರ. ವಿವಾಹಾಕಾಂಕ್ಷಿಗಳಿಗೆ ಶುಭ ಬೆಳವಣಿಗೆ.

ಕುಂಭ ಹೊಸ ಪಾಲುದಾರಿಕೆ ಲಾಭ ತಂದೀತು. ಆದರೆ ನಂಬಿಗಸ್ಥರ ಜತೆ ವ್ಯವಹಾರ ನಡೆಸಿ. ಸಂಬಂಧದಲ್ಲಿ ಉದ್ವಿಗ್ನತೆ. ಹೊಂದಾಣಿಕೆ ಮುಖ್ಯ.

ಮೀನ ಸಂಗಾತಿ ಜತೆ ಸಂಘರ್ಷ ನಡೆದೀತು. ಅವರ ದೃಷ್ಟಿಕೋನ ಕೂಡಾ ಪರಾಮರ್ಶಿಸಿ. ಸ್ನೇಹಿತರ ಜತೆ ಆತ್ಮೀಯ ಕಾಲಕ್ಷೇಪ. ಆರ್ಥಿಕ ಒತ್ತಡ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 2,8,3,6

ನಗರಕ್ಕೆ ಉಪರಾಷ್ಟ್ರಪತಿ

ಬೆಂಗಳೂರು: ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಜೂ.27 ಮತ್ತು 28 ರಂದು ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಳ್ಳಲಿದ್ದಾರೆ. ಜೂ.27ರಂದು ಸಂಜೆ 6.30ಕ್ಕೆ ನಗರದ ಸೆಂಟ್ರಲ್ ಕಾಲೇಜು ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿರುವ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಜೂ.28ರಂದು ಬೆಳಗ್ಗೆ 11 ಗಂಟೆಗೆ ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ಆರ್‌ಜಿಯುಎಚ್‌ಎಸ್) ಸಂಸ್ಥಾಪನಾ ದಿನಾಚರಣೆ ಹಾಗೂ ಅಂತಾರಾಷ್ಟ್ರೀಯ ಮಾದಕವಸ್ತು ದುರುಪಯೋಗ ಮತ್ತು ಅಕ್ರಮ ಸಾಗಣೆ ವಿರೋಧಿ ದಿನ ಅಂಗವಾಗಿ ಆಯೋಜಿಸಿರುವ ನಶಾ ಮುಕ್ತ ಭಾರತ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ.

ನಕ್ಸಲ್ ಟೆರರ್ ವ್ಯಾಂಕ್ವಿಶ್ಡ್ ಪುಸ್ತಕ ಬಿಡುಗಡೆಯಲ್ಲಿ ಡಾ.ಅಮರ್‌ಕುಮಾರ್ ಪಾಂಡೆ

ಭಾರತ ಈಗ ನಕ್ಸಲ್ ಮುಕ್ತ


• **ಬೆಂಗಳೂರು:** ದೇಶವನ್ನು ಐದು ದಶಕಗಳ ಕಾಲ ಕಾಡಿದ ನಕ್ಸಲ್ ಪಿಡುಗು ಭಾರತೀಯ ನಾಗರಿಕತೆಯನ್ನು ವಿನಾಶದ ಅಂಚಿಗೆ ತಳ್ಳಿತ್ತು. ನಕ್ಸಲಿಸಂ ಭಾರತದ ನಾಗರಿಕತೆಗೆ ಎದುರಾಗಿದ್ದ ಬಹುದೊಡ್ಡ ಪಿಡುಗಾಗಿತ್ತು. ಆದರೆ ಈ ಅತ್ಯಂತ ಕಠಿಣ ಸವಾಲನ್ನು ಮೆಟ್ಟಿನಿಂತು ದೇಶವನ್ನು ರಕ್ಷಿಸುವಲ್ಲಿ ಕಳೆದ ಒಂದೂವರೆ ದಶಕದಲ್ಲಿ ರೂಪಿಸಲಾದ ಭದ್ರತಾ ಮತ್ತು ಆಡಳಿತಾತ್ಮಕ ಕಾರ್ಯತಂತ್ರಗಳು ಯಶಸ್ವಿಯಾಗಿವೆ ಎಂದು ರಾಜ್ಯ ನಿವೃತ್ತ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಡಾ.ಅಮರ್‌ಕುಮಾರ್ ಪಾಂಡೆ ಹೇಳಿದರು.

ಥಿಂಕರ್ಸ್ ಫೋರಂ ಕರ್ನಾಟಕ ವತಿಯಿಂದ ಮಿಥಿಕ್ ಸೊಸೈಟಿ ಸಭಾಂಗಣದಲ್ಲಿ ನಡೆದ ಲೇಖಕ ತುಹಿನ್ ಸಿನ್ಹಾ ಬರೆದಿರುವ ನಕ್ಸಲ್ ಟೆರರ್ ವ್ಯಾಂಕ್ವಿಶ್ಡ್ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಕೇವಲ ಕೃಷಿ ದಂಗೆಯಾಗಿ ಆರಂಭವಾದ ನಕ್ಸಲ್ ಚಳುವಳಿ, ನಂತರದ ದಿನಗಳಲ್ಲಿ ದೇಶದ ಇತರ ಭಾಗಗಳಿಗೆ ಹರಡಿ ರೆಡ್ ಕಾರಿಡಾರ್ ಆಗಿ ಮಾರ್ಪಟ್ಟಿದ್ದನ್ನು ಲೇಖಕರು ಪುಸ್ತಕದಲ್ಲಿ ಅತ್ಯಂತ ಸೂಕ್ಷ್ಮವಾಗಿ ದಾಖಲಿಸಿದ್ದಾರೆ ಎಂದು ತಿಳಿಸಿದರು.

ಕೇರಳದಲ್ಲಿ ಗಣನೀಯ ಪ್ರಮಾಣದ ಜನರು ಮತ್ತು ಮಧ್ಯಮ ಕ್ರಮಾಂಕದ ನಾಯಕರು ಈ ಚಳುವಳಿಯ ಭಾಗವಾಗಿದ್ದರು. ಕರ್ನಾಟಕವೂ ಇದರಿಂದ ಮುಕ್ತವಾಗಿರಲಿಲ್ಲ ಎಂದು ಹೇಳಿದರು.

ಭಾರತದ ಮಣ್ಣಿನಿಂದ ಹುಟ್ಟಿದ, ಹೊರಗಿನಿಂದ ಆಮದು ಮಾಡಿಕೊಂಡ ಸಿದ್ಧಾಂತಗಳನ್ನು ಇಲ್ಲಿನ ವ್ಯವಸ್ಥೆಗೆ ಪರ್ಯಾಯವಾಗಿ ಹೇರಲು ನಕ್ಸಲರು ಯತ್ನಿಸಿದರು. ಮೊದಲು ರಷ್ಯಾದಿಂದ ಸಿದ್ಧಾಂತ ಆಮದಾಯಿತು, ಅದು ವಿಫಲವಾದಾಗ ಚೀನಾದ ಮಾವೋವಾದವನ್ನು ಅಳವಡಿಸಿಕೊಂಡು ಮಾವೋವಾದಿ ಎಂದು ಕರೆದುಕೊಂಡರು. ಬಂದೂಕಿನ ನಳಿಕೆಯಿಂದ ಅಧಿಕಾರ ಹಿಡಿಯಬೇಕು ಎಂಬುದು ಅವರ ಸಿದ್ಧಾಂತವಾಗಿತ್ತು. ಭಾರತ ಸಾವಿರಾರು ವರ್ಷಗಳಿಂದ ಪೋಷಿಸಿಕೊಂಡು ಬಂದ ಆಧ್ಯಾತ್ಮಿಕ, ಸಾಂಸ್ಕೃತಿಕ ಮತ್ತು ಸೌಹಾರ್ದತೆಯ ಮೌಲ್ಯಗಳನ್ನು ಅವರು ನಂಬಲಿಲ್ಲ ಎಂದು ತಿಳಿಸಿದರು.

ದೇಶ ವಿರೋಧಿ ಶಕ್ತಿಗಳೊಂದಿಗೆ ಕೈಜೋಡಿಸಿದ್ದ ನಕ್ಸಲರು: ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲು ಮಾಡಲು ಯತ್ನಿಸಿದ ನಕ್ಸಲರು, ತಮ್ಮ ಸಿದ್ಧಾಂತಕ್ಕೆ ಭಾರತದ ಮಣ್ಣಿನಲ್ಲಿ ಬೆಂಬಲ ಸಿಗದಿದ್ದಾಗ ದೇಶವಿರೋಧಿ ಸಂಘಟನೆಗಳೊಂದಿಗೆ ಕೈಜೋಡಿಸಿದರು. ಶ್ರೀಲಂಕಾದ ಎಲ್‌ಟಿಟಿಇ, ಇಸ್ಲಾಮಿಕ್ ಭಯೋತ್ಪಾದಕ ಸಂಘಟನೆಗಳು ಹಾಗೂ ಈಶಾನ್ಯ ಭಾರತದ ಉಗ್ರಗಾಮಿ ಸಂಘಟನೆಗಳೊಂದಿಗೆ ಮೈತ್ರಿ ಮಾಡಿಕೊಂಡು ಭಾರತದ ಅಸ್ತಿತ್ವಕ್ಕೆ ಧಕ್ಕೆ ತರಲು ಯತ್ನಿಸಿದರು. ಒಂದು ಹಂತದಲ್ಲಿ ದೇಶದ 14 ರಾಜ್ಯಗಳ 200ಕ್ಕೂ ಹೆಚ್ಚು ಜಿಲ್ಲೆಗಳ ಭೌಗೋಳಿಕ ವ್ಯಾಪ್ತಿ ಇವರ ಕೆಂಪು ವಲಯದ ಪ್ರಭಾವಕ್ಕೆ ಒಳಗಾಗಿತ್ತು ಎಂದು ಮಾಹಿತಿ ನೀಡಿದರು.



> ಅಂದಿನ ಸರ್ಕಾರದ ಮೃದು ಧೋರಣೆಯೇ ನಕ್ಸಲಿಸಂ ಮಿತಿಮೀರಲು ಕಾರಣವಾಗಿತ್ತು. ಪ್ರಧಾನಿ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರ ದೃಢ ನಿರ್ಧಾರಗಳಿಂದ ಭಾರತವು ನಕ್ಸಲ್ ಮುಕ್ತವಾಗಿದೆ. ಆದರೆ, ದೇಶದ ಪ್ರಗತಿ ಹಾಗೂ ಜಿಯೋ-ಸ್ಟ್ರಾಟಜಿಕ್ ಯೋಜನೆಗಳಿಗೆ ಅಡ್ಡಿಪಡಿಸುತ್ತಿರುವ ಅರ್ಬನ್ ನಕ್ಸಲ್ ಮಾನಸಿಕತೆಯ ವಿರುದ್ಧ ಯುವ ಪೀಳಿಗೆ ಜಾಗೃತರಾಗಬೇಕಿದೆ.
> ■ ತುಹಿನ್ ಸಿನ್ಹಾ, ಲೇಖಕ

ನಕ್ಸಲ್ ಮುಕ್ತ ಭಾರತದತ್ತ ಯಶಸ್ವಿ ಹೆಜ್ಜೆ

ಹಿಂದಿನ ಸರ್ಕಾರಗಳಲ್ಲಿದ್ದ ದೃಢ ನಿರ್ಧಾರದ ಕೊರತೆ, ಸ್ಪಷ್ಟತೆಯಿಲ್ಲದಿರುವುದು ಮತ್ತು ಗುಪ್ತಚರ ಮಾಹಿತಿಯ ಕೊರತೆಯಿಂದಾಗಿ ಈ ಸಮಸ್ಯೆ ಇಷ್ಟು ದೊಡ್ಡದಾಗಿ ಬೆಳೆಯಿತು. ಆದರೆ, ಪ್ರಸ್ತುತ ದೇಶದ ನಾಯಕತ್ವವು ಕೈಗೊಂಡ ಕಠಿಣ, ನಿರ್ಣಾಯಕ ಮತ್ತು ಕಾರ್ಯತಂತ್ರದ ಪರಿಣಾಮ ನಕ್ಸಲಿಸಂ ಅನ್ನು ಸಂಪೂರ್ಣವಾಗಿ ಹತ್ತಿಕ್ಕುವಲ್ಲಿ ಯಶಸ್ವಿಯಾಗಿದೆ. ಈ ಕರಾಳ ಅಧ್ಯಾಯಕ್ಕೆ ಈಗ ದೇಶದಲ್ಲಿ ಅಧಿಕೃತವಾಗಿ ಮುಕ್ತಾಯ ಹಾಡಲಾಗಿದೆ ಮತ್ತು ಭಾರತ ಇಂದು ನಕ್ಸಲ್ ಮುಕ್ತವಾಗಿದೆ ಎಂದು ಘೋಷಿಸಲಾಗಿದೆ ಎಂದು ಡಾ. ಅಮರ್ ಕುಮಾರ್ ಪಾಂಡೆ ಹೆಮ್ಮೆ ವ್ಯಕ್ತಪಡಿಸಿದರು.

ದೇಣಿಗೆ ಪ್ರಕರಣ: 8 ಮಂದಿ ಸೆರೆ

ಪುಟ 1 ➡ ಇತ್ತೀಚೆಗೆ ನಡೆದ ದಾಳಿಯಲ್ಲಿ ಲವಕುಶ್ ಮಿಶ್ರಾ ಮತ್ತು ರಾಮಶಂಕರ್ ಯಾದವ್ ಮನೆಗಳಿಂದ ದೊಡ್ಡ ಪ್ರಮಾಣದ ನಗದು ಹಣ ವಶಪಡಿಸಿಕೊಳ್ಳಲಾಗಿತ್ತು. ತನಿಖೆ ಮುಂದುವರಿದಿರುವುದರಿಂದ ಇನ್ನಷ್ಟು ಮಂದಿ ಬಂಧನಕ್ಕೊಳಗಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಜೂ.29ರವರೆಗೆ ನ್ಯಾಯಾಂಗ ಬಂಧನ: ಬಂಧಿತ 8 ಆರೋಪಿಗಳನ್ನು ಅಯೋಧ್ಯೆಯ ನ್ಯಾಯಾಲಯವು ಜೂ.29ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಶುಕ್ರವಾರ ಆರೋಪಿಗಳನ್ನು ಮುಖ್ಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ವಿಚಾರಣೆ ನಡೆಸಿದ ನ್ಯಾಯಾಲಯವುಅವರನ್ನುನ್ಯಾಯಾಂಗ ಬಂಧನಕ್ಕೆ ಕಳುಹಿಸಿತು. ಆರೋಪಿಗಳನ್ನು ಮತ್ತೆ ಜೂ.29ರಂದು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುವುದು ಎಂದು ಅಭಿಯೋಜನಾ ಅಧಿಕಾರಿ ಕೆ.ಸಿ. ವರ್ಮಾ ತಿಳಿಸಿದ್ದಾರೆ.

ಗಂಭೀರ ಆರೋಪ ಪ್ರಕರಣ

ಬಂಧಿತರಿಗೆ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ವಿವಿಧ ಕಲಂಗಳಲ್ಲಿ ಪ್ರಕರಣ ದಾಖಲಿಸಲಾಗಿದೆ. ಕಳ್ಳತನ, ನಂಬಿಕೆ ದ್ರೋಹ, ಕಳುವಾದ ಆಸ್ತಿ ಸ್ವೀಕರಿಸುವುದು, ಅಪರಾಧ ಸಂಚು ರೂಪಿಸಿದ ಆರೋಪಗಳನ್ನು ಹೊರಿಸಲಾಗಿದೆ.

ತಪ್ಪಿತಸ್ಥರನ್ನು ಬಿಡಲ್ಲ, ಕಠಿಣ ಕ್ರಮ ಖಚಿತ: ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್

ಪುಟ 1 ➡ ಸನಾತನ ಧರ್ಮದ ಭಕ್ತರ ಭಾವನೆಗಳೊಂದಿಗೆ ಆಟವಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಸಿದರು.



ಕೆಲವು ರಾಜಕೀಯ ಪಕ್ಷಗಳು ನಿರಾಶೆಯಿಂದ ಅಯೋಧ್ಯೆ ಮತ್ತು ರಾಮಭಕ್ತರ ವಿರುದ್ಧ ಅಪಪ್ರಚಾರ ನಡೆಸುತ್ತಿವೆ ಎಂದು ಯೋಗಿ ಆರೋಪಿಸಿದರು. ಅಯೋಧ್ಯೆ ನಮ್ಮೆಲ್ಲರ ನಂಬಿಕೆಯ ಪ್ರತೀಕ. ಸಾಕ್ಷ್ಯವಿದ್ದರೆ ಎಸ್‌ಐಟಿ ಮುಂದೆ ಸಲ್ಲಿಸಿ, ಇಲ್ಲದಿದ್ದರೆ ಸುಳ್ಳು ಪ್ರಚಾರ ನಿಲ್ಲಿಸಿ ಎಂದು ಹೇಳಿದರು. ಪ್ರಕರಣದ ಎಫ್‌ಐಆರ್‌ನ್ನು ನಾಟಕ ಎಂದು ಕರೆದ ಅರವಿಂದ ಕೇಜ್ರಿವಾಲ್ ವಿರುದ್ಧವೂ ಯೋಗಿ ವಾಗ್ದಾಳಿ ನಡೆಸಿದರು. ದಿಲ್ಲಿಯಲ್ಲಿ ಉತ್ತಮ ಆಡಳಿತ ನೀಡಿದ್ದರೆ, ದಿಲ್ಲಿಯೂ ಇಂದು ಅಯೋಧ್ಯೆಯಂತೆ ಅಭಿವೃದ್ಧಿಯಾಗುತ್ತಿತ್ತು ಎಂದು ಟೀಕಿಸಿದರು.

ತೆರಿಗೆ ಸೋರಿಕೆ ನಿಲ್ಲಿಸಿ

ಪುಟ 1 ➡ ಆದ್ದರಿಂದ ನನಗೆ ಬರುತ್ತಿರುವ ಮಾಹಿತಿಯೂ ನಿಮ್ಮ ಕಾರ್ಯಕ್ಷಮತೆಯ ವರದಿಯೂ ಒಂದಕ್ಕೊಂದು ಹೊಂದಿಕೆಯಾಗಬೇಕು ಎಂದರು. ಆರ್ಥಿಕ ಸಲಹೆಗಾರ ಎಲ್.ಕೆ. ಅತೀಕ್ ಹಾಗೂ ಆರ್ಥಿಕ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಅವರು ಇಲಾಖೆಯ ಕಾರ್ಯಕ್ಷಮತೆ ಹೆಚ್ಚಿಸಲು ಹಲವು ಸಲಹೆಗಳನ್ನು ನೀಡಿದ್ದಾರೆ. ಅವುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಜವಾಬ್ದಾರಿ ನಿಮ್ಮೆಲ್ಲರ ಮೇಲಿದೆ. ಅಧಿಕಾರಿಗಳ ಮೇಲೆ ನನಗೆ ಪೂರ್ತಿ ಭರವಸೆ ಇದೆ. ನೀವೆಲ್ಲಾ ನನ್ನ ನಿರೀಕ್ಷೆ ಈಡೇರಿಸಲು ಶ್ರಮಿಸುತ್ತೀರಿ ಎನ್ನುವ ವಿಶ್ವಾಸವೂ ಇದೆ ಎಂದರು.

360 ಡಿಗ್ರಿ ದೃಷ್ಟಿಕೋನದಲ್ಲಿ ತೆರಿಗೆದಾರರನ್ನು ವಿಶ್ಲೇಷಿಸಿ

ಪುಟ 1 ➡ ಈ ಅವಕಾಶವನ್ನು ಸಮರ್ಪಕವಾಗಿ ಬಳಸಿಕೊಂಡರೆ ನಿಮಗೆ ನೀಡಿರುವ ಗುರಿ ಸಾಧಿಸುವುದಷ್ಟೇ ಅಲ್ಲ, ಅದನ್ನು ಮೀರಿಸುವ ಸಾಮರ್ಥ್ಯವೂ ನಿಮ್ಮಿಂದ ಸಾಧ್ಯವಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

574 ಸನ್ನದುಗಳ ಇ-ಹರಾಜಿಗೆ ಸೂಚನೆ

ಪುಟ 1 ➡ ನೀವು ಘನತೆ ಉಳಿಸಿಕೊಂಡರೆ ಸರ್ಕಾರದ ಘನತೆ ಹೆಚ್ಚುತ್ತದೆ. ನೀವು ಸರ್ಕಾರದ ಘನತೆಗೆ ಧಕ್ಕೆ ತರುವ ಕೆಲಸ ಮಾಡಿದರೆ ನಾವು ನೋಡುತ್ತಾ ಕೂರುವುದಿಲ್ಲ. ಅಬಕಾರಿ ಇಲಾಖೆಯ ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ಬೇರೆ ಇಲಾಖೆಗೆ ವರ್ಗಾವಣೆ ಮಾಡೋದಕ್ಕೆ ಆಗುವುದಿಲ್ಲ ಎಂದುಕೊಳ್ಳಬೇಡಿ. ಅಗತ್ಯಬಿದ್ದರೆ ವರ್ಗಾವಣೆ ಮಾಡಲು ಅಗತ್ಯವಾದ ಕಾನೂನು ಬದಲಾವಣೆಯನ್ನೂ ತರಲು ಅವಕಾಶಗಳಿವೆ. ಬಹಳ ಎಚ್ಚರಿಕೆಯಿಂದ ಕೆಲಸ ಮಾಡಿ ಎಂದು ಸೂಚಿಸಿದರು. ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಯಾರನ್ನೂ, ಯಾವ ಪ್ರಯತ್ನವನ್ನೂ ನಾನು ಸಹಿಸುವುದಿಲ್ಲ. ಇಲಾಖೆಯಲ್ಲಿ ಹೊಸದಾಗಿ ಆಬಆ ಪದ್ಧತಿ ಜಾರಿಯಾದ ಬಳಿಕ ನಿರೀಕ್ಷಿತ ಪ್ರಮಾಣದಲ್ಲಿ ಬೆಳವಣಿಗೆ ಆಗಿದೆ. ಅಕ್ಕಪಕ್ಕದ ರಾಜ್ಯಗಳಲ್ಲಿ ಇಲಾಖೆ ಹೇಗೆ ಕೆಲಸ ಮಾಡುತ್ತಿದೆ ಎನ್ನುವ ವರದಿ ನೋಡಿದ್ದೇನೆ. ಇಲಾಖೆಗೆ ಕೊಟ್ಟಿರುವ ಗುರಿ ತಲುಪಲು ಶ್ರಮಿಸಬೇಕು ಎಂದರು.

ಬುದ್ಧಿವಂತಿಕೆಯಿಂದ ಕಾರ್ಯನಿರ್ವಹಿಸಿ

ನಮ್ಮ ಉದ್ದೇಶ ಯಾರಿಗೂ ಅನಗತ್ಯ ತೊಂದರೆ ನೀಡುವುದಲ್ಲ. ಪ್ರಾಮಾಣಿಕ ತೆರಿಗೆದಾರರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ತೆರಿಗೆ ಪಾವತಿಸುವ ಪ್ರತಿ ನಾಗರಿಕನನ್ನೂ ಘನತೆ ಮತ್ತು ಗೌರವದಿಂದ ನಡೆಸಿಕೊಳ್ಳಬೇಕು. ಜತೆಗೆ ಇಲಾಖೆ ಸಿಬ್ಬಂದಿಯನ್ನೂ ವಿಶ್ವಾಸಕ್ಕೆ ತೆಗೆದು ಕೊಂಡು ಬುದ್ಧಿವಂತಿಕೆಯಿಂದ ಕಾರ್ಯನಿರ್ವಹಿಸಿದರೆ ಗುರಿ ಮೀರಿದ ಸಾಧನೆ ಸಾಧ್ಯ. ಆದರೆ ತೆರಿಗೆ ವಂಚನೆಗೆ ಮಾತ್ರ ಯಾವುದೇ ಅವಕಾಶ ಇರಬಾರದು. ತೆರಿಗೆ ಸೋರಿಕೆ ಸಂಪೂರ್ಣವಾಗಿ ತಡೆಯುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಮುಂದಿನ ಪರಿಶೀಲನಾ ಸಭೆ ನಡೆಯುವ ವೇಳೆಗೆ ಇಂದು ನಾನು ನೀಡಿರುವ ಪ್ರತಿ ಸೂಚನೆಯೂ ಜಾರಿ ಯಾಗಿರಬೇಕು. ಮುಂದಿನ ಸಭೆಯಲ್ಲಿ ನಾನು ಸ್ವತಃ ಅನೇಕ ನೈಜ ಉದಾಹರಣೆಗಳೊಂದಿಗೆ ನಿಮ್ಮ ಕಾರ್ಯಕ್ಷಮತೆಯನ್ನು ಪರಿಶೀಲಿಸುತ್ತೇನೆ ಎಂದರು.

> ಒಂದೇ ಒಂದು ಸರಕು ಸಾಗಣೆ ವಾಹನ ಕೂಡ ಸೂಕ್ತ ಲೆಕ್ಕಪತ್ರ, ದಾಖಲೆ ಮತ್ತು ಸಂಪೂರ್ಣ ಅಕೌಂಟಬಿಲಿಟಿ ಇಲ್ಲದೆ ಚೆಕ್‌ಪೋಸ್ಟ್ ಅಥವಾ ರಾಜ್ಯದ ಗಡಿ ದಾಟಬಾರದು. ಇದು ನಮ್ಮ ಇಲಾಖೆಯ ಕಾರ್ಯವೈಖರಿಯ ಮೂಲ ತತ್ವವಾಗಬೇಕು.
> ■ ಡಿ.ಕೆ.ಶಿವಕುಮಾರ್, ಸಿಎಂ

ಹೊಂದಾಣಿಕೆ ರಾಜಕೀಯ ಮಾಡಿಲ್ಲ: ವಿಜಯೇಂದ್ರ

ಪುಟ 1 ➡ ರಾಜ್ಯದಲ್ಲಿ ಜನರ ಅನೇಕ ಸಮಸ್ಯೆಗಳು ತಾಂಡವವಾಡುತ್ತಿವೆ. ಭ್ರಷ್ಟ ಕಾಂಗ್ರೆಸ್ ಸರ್ಕಾರದಲ್ಲಿ ಅನ್ಯಾಯ, ಅವ್ಯವಹಾರಗಳು ಅತಿಯಾಗುತ್ತಿವೆ. ಬಿಜೆಪಿ ಬಗ್ಗೆ ತನಗೆ ಭರವಸೆ ಇದ್ದು ಜನರು ಹಾಗೂ ಬಡವರ ವಿರೋಧಿ ಕಾಂಗ್ರೆಸ್ ಸರ್ಕಾರವನ್ನು ಬುಡಸಮೇತ ಕಿತ್ತು ಹಾಕಿ, ಬಿಜೆಪಿ ಸರ್ಕಾರ ಮತ್ತೆ ಆಡಳಿತಕ್ಕೆ ಬರಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಈಶ್ವರಪ್ಪ ಹೇಳಿಕೆಗೆ ಪ್ರತಿಕ್ರಿಯೆ ಇಲ್ಲ: ಹಿಂದೆ 17 ಶಾಸಕರು ಯಡಿಯೂರಪ್ಪ ನಾಯಕತ್ವದಲ್ಲಿ ವಿಶ್ವಾಸವಿಟ್ಟು ಪಕ್ಷತೊರೆದು ಬಂದಿದ್ದರು. ಆಗ ಒಳ್ಳೆಯ ಸರ್ಕಾರ ಇತ್ತು. ಈಶ್ವರಪ್ಪ ಮರೆತಿರಬಹುದು. ಅನೇಕ ಕಾರ್ಯಕರ್ತರ ಹತ್ಯೆಯಾಗಿತ್ತು. ಅನೇಕರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿ ಬೆದರಿಕೆ ಹಾಕಲಾಗಿತ್ತು. ಅವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ ಒಳ್ಳೆಯ ಕೆಲಸ ಮಾಡಿದ್ದರು. ಆಗ ಗುತ್ತಿಗೆದಾರನ ಹತ್ಯೆಯಾಗಿತ್ತು ಎಂದು ನೆನಪಿಸಿದರು. ಈಶ್ವರಪ್ಪ ಶಾಸಕರೂ ಅಲ್ಲ, ಪಕ್ಷದಲ್ಲಿಯೂ ಇಲ್ಲ. ಹಾಗಾಗಿ ಅವರ ಹೇಳಿಕೆಗೆ ಮಹತ್ವ ನೀಡುತ್ತಿಲ್ಲ ಎಂದರು.

ಅನಗತ್ಯ ಚರ್ಚೆ ನಿಲ್ಲಿಸಿ ಪಕ್ಷ ಬಲಪಡಿಸಲು ಹೋರಾಟ

ಅನಗತ್ಯ ಚರ್ಚೆ ನಿಲ್ಲಿಸಿ ಮುಂದೆ ರಾಜ್ಯಾದ್ಯಂತ ಪ್ರವಾಸ ಮಾಡಿ ತಾನು ಪಕ್ಷದ ಸಂಘಟನೆ ಮತ್ತು ಬಲವರ್ಧನೆ ಮಾಡುವುದಾಗಿ ತಿಳಿಸಿದರು. ಎಸ್.ಟಿ. ಸೋಮಶೇಖರ್ ಗೊಂದಲದ



ಹೇಳಿಕೆಗಳನ್ನು ನೀಡುವ ಮೂಲಕ ಸ್ವ-ರಕ್ಷಣೆಯ ಪ್ರಯತ್ನ ಮಾಡುತ್ತಿದ್ದಾರೆ ಎಂದರು. ತನ್ನ ಬಗ್ಗೆ ಏನೇ ಅಪಪ್ರಚಾರ ಮಾಡಿದರೂ ನನಗೆ ಬೇಸರವಿಲ್ಲ. ಹಿರಿಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಸಂಘಟನೆ ಮಾಡುತ್ತೇನೆ ಎಂದು ಹೇಳಿದರು. ರಾಷ್ಟ್ರ ನಾಯಕರಲ್ಲಿ ಎಲ್ಲಾ ವಿಚಾರಗಳನ್ನು ತಿಳಿಸಿದ್ದೇನೆ. ಪಕ್ಷ ಕಟ್ಟಲು ಅಧಿಕಾರ ನೀಡಿದ್ದಾರೆ. ಮುಖ್ಯಮಂತ್ರಿ ಆಗಲು ಅಲ್ಲ. ಏನಿದ್ದರೂ ಸತ್ಯ ಸದ್ಯದಲ್ಲಿಯೆ ಪ್ರಕಟವಾಗಲಿದೆ. ಬಿಡದಿ ವಿಚಾರದಲ್ಲಿಯೂ ದಿಲ್ಲಿಯಲ್ಲಿ ಚರ್ಚೆ ನಡೆಸಲಾಗಿದೆ. ರೈತರನ್ನು ಒಕ್ಕಲೆಬ್ಬಿಸಲು ಬಿಡುವುದಿಲ್ಲ. ಅವರ ಪರ ಹೋರಾಟಕ್ಕಾಗಿ ಪಕ್ಷ ಸಿದ್ಧವಿದೆ ಎಂದರು.

ಇಡಿ ದಾಳಿ ರಾಜಕೀಯಪ್ರೇರಿತ ಅಲ್ಲ: ಜಾರಕಿಹೊಳಿ

• **ಬೆಳಗಾವಿ:** ರಾಜ್ಯ ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ಡಾ.ವೈ.ಮಂಜುನಾಥ ಮೇಲಿನ ಇಡಿ ದಾಳಿ ಸದ್ಯದ ಪರಿಸ್ಥಿತಿಯಲ್ಲಿ ರಾಜಕೀಯ ಪ್ರೇರಿತ ಎಂದು ಹೇಳಲು ಸಾಧ್ಯವಿಲ್ಲ. ಇದರ ನಿಜವಾದ ಸತ್ಯಾಂಶ ಆರು ತಿಂಗಳ ಬಳಿಕ ಹೊರ ಬರಲಿದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು. ನಗರದ ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಇಡಿ ದಾಳಿ ನಮಗೂ ಆತಂಕ ಮೂಡಿಸಿದೆ. ಬೆಳಗಾವಿ ಜಿಲ್ಲಾ ಅಬಕಾರಿ ಉಪ ಆಯುಕ್ತರಾಗಿದ್ದ, ಸದ್ಯ ಹೆಚ್ಚುವರಿ ಆಯುಕ್ತರಾಗಿರುವ ಡಾ.ವೈ.ಮಂಜುನಾಥ ನಿವಾಸದ ಮೇಲೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದಾಳಿ ನಡೆಸಿರುವುದು ನಿಜ. ಅವರು ನಮ್ಮ ಸಂಬಂಧಿಯೇ ಆಗಿದ್ದಾರೆ. ಭ್ರಷ್ಟಾಚಾರದ ಪ್ರಕರಣದಲ್ಲಿ ಅಬಕಾರಿ ಇಲಾಖೆಯ ಅಧಿಕಾರಿಯ ಮೇಲೆ ಇಡಿ ದಾಳಿ ನಡೆಸಿರುವುದು ಇದೇ ಮೊದಲು ಎಂದರು.

ಇಂದು, ನಾಳೆ ಬೆಂಗಳೂರಲ್ಲಿ ಡಾ.ಭಾಗವತ್ ಕಾರ್ಯಕ್ರಮ

ಪುಟ 1 ➡ ಜೂ.28ರಂದು ಮಧ್ಯಾಹ್ನ 3 ಗಂಟೆಗೆ ಕನಕಪುರ ರಸ್ತೆಯ ಆರ್ಟ್ ಆಫ್ ಲಿವಿಂಗ್ ಅಂತಾರಾಷ್ಟ್ರೀಯ ಕೇಂದ್ರದಲ್ಲಿ ಭಾರತೀಯ ಶಿಕ್ಷಣ ಮಂಡಲ ಆಯೋಜಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಕಾರ್ಯನಿರ್ವಹಣೆ ಹಾಗೂ ಭಾರತೀಯ ಜ್ಞಾನ ಪದ್ಧತಿಯ ಸಂಯೋಜನೆ ಕುರಿತ ರಾಷ್ಟ್ರೀಯ ಸಮ್ಮೇಳನದ ಸಮಾರೋಪದಲ್ಲಿ ಮುಖ್ಯ ಭಾಷಣ ಮಾಡಲಿದ್ದಾರೆ.

ಬಂಡಿಪುರ, ನಾಗರಹೊಳೆ ಸಫಾರಿ ಪುನರಾರಂಭಕ್ಕೆ ಸರ್ಕಾರ ನಿರ್ಧಾರ

• **ಬೆಂಗಳೂರು:** ತಜ್ಞರು ಮತ್ತು ಅಧಿಕಾರಿಗಳ ತಾಂತ್ರಿಕ ಸಮಿತಿಯ ವರದಿ ಶಿಫಾರಸಿನ ಅನ್ವಯ ಬಂಡಿಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಪೂರ್ಣ ಪ್ರಮಾಣದ ಜಂಗಲ್ ಸಫಾರಿ ಪುನರಾರಂಭಿಸಲು ಸರ್ಕಾರ ನಿರ್ಧರಿಸಿದೆ. ಈ ಬಗ್ಗೆ ತಾಂತ್ರಿಕ ಸಮಿತಿಯ ವರದಿ ಅಂಗೀಕರಿಸಲಾಗಿದ್ದು, ವೈಜ್ಞಾನಿಕ ಮೌಲ್ಯಮಾಪನದ ನಂತರ ಪರಿಣಾಮಕಾರಿ ಸಾಗಣೆ ಸಾಮರ್ಥ್ಯದ ಆಧಾರದ ಮೇಲೆ ಜಂಗಲ್ ಸಫಾರಿಗೆ ಹಸಿರು ನಿಶಾನೆ ನೀಡಲಾಗಿದೆ.

15 ಲಕ್ಷ ಸಸಿ ನೆಡುವ ಕಾರ್ಯ ಇಂದು

• **ಬೆಂಗಳೂರು:** ನಗರದ ಕಾಂಕ್ರೀಟ್ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡುತ್ತಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಬೆಂಗಳೂರಿನ ಹಸಿರು ಹೊದಿಕೆ ಪ್ರಮಾಣ ಏರಿಸಿ ಹಸಿರು ವಲಯದ ಪುನಶ್ಚೇತನಕ್ಕೆ ಮಹತ್ವದ ಹೆಜ್ಜೆ ಇಟ್ಟಿದೆ. ಅದರ ಭಾಗವಾಗಿ ಶನಿವಾರ (ಜೂ.27) 15 ಲಕ್ಷ ಸಸಿ ನೆಡುವ ಮೂಲಕ ದಾಖಲೆ ನಿರ್ಮಿಸಲು ಬಿಡಿಎ ಜತೆಗೂಡಿ ಬೆಂಗಳೂರು ನಗರದ ಜನ ಸಜ್ಜಾಗಿದ್ದಾರೆ.



ನಗರದಲ್ಲಿ ಕಳೆದುಹೋಗುತ್ತಿರುವ ಹಸಿರು ಹೊದಿಕೆಯನ್ನು ಮರುಸ್ಥಾಪಿಸಲು, ನೂರಾರು ಎನ್‌ಜಿಒ ಹಾಗೂ 50 ಸಾವಿರ ಜನರ ಸಹಭಾಗಿತ್ವ ದೊಂದಿಗೆ ನಾಡಪ್ರಭು ಕೆಂಪೇಗೌಡರ ದಿನಾಚರಣೆಯ ಪ್ರಯುಕ್ತ ಬಿಡಿಎಯ ಬನಶಂಕರಿ, ನಾಡಪ್ರಭು ಕೆಂಪೇಗೌಡ ಬಡಾವಣೆ ಮತ್ತು ಡಾ. ಶಿವರಾಮಕಾರಂತ ಬಡಾವಣೆ ಸೇರಿದಂತೆ ನಗರದ ಕೆರೆ ದಂಡೆಗಳು, ರಾಜಕಾಲುವೆಗಳ ಇಕ್ಕೆಲಗಳು, ಉದ್ಯಾನವನಗಳು ಹಾಗೂ ವಿವಿಧ ಪರಿಸರ ವಲಯಗಳಲ್ಲಿ ಸ್ಥಳೀಯ ಜಾತಿಯ 15 ಲಕ್ಷ ಸಸಿ ನೆಡಲಾಗುತ್ತಿದೆ.

ಜಿಯೋ-ಟ್ಯಾಗಿಂಗ್- ನಿರಂತರ ಉಸ್ತುವಾರಿ: ದಾಖಲೆ ಮಟ್ಟದಲ್ಲಿ ನೆಡಲಾಗುತ್ತಿರುವ 15 ಲಕ್ಷ ಸಸಿಗಳ ಬೆಳವಣಿಗೆಯನ್ನು ಜಿಯೋ-ಮ್ಯಾಪಿಂಗ್, ಡ್ರೋನ್ ಸಮೀಕ್ಷೆಗಳು ಹಾಗೂ 3 ವರ್ಷಗಳ ಸಮರ್ಪಿತ ನಿರ್ವಹಣಾ ಯೋಜನೆಯ ಮೂಲಕ ಮೇಲ್ವಿಚಾರಣೆ ಮಾಡಲಾಗುತ್ತದೆ. ಇದರಿಂದ ಸಸಿಗಳ ದೀರ್ಘಕಾಲೀನ ಬೆಳವಣಿಗೆ ಮತ್ತು ಸುಸ್ಥಿರತೆಯನ್ನು ಖಚಿತಪಡಿಸಲಾಗುತ್ತದೆ.

ಸಕಲ ವ್ಯವಸ್ಥೆ: ಒಟ್ಟು 243 ಎಕರೆ ಪ್ರದೇಶವನ್ನು 49 ವಲಯಗಳಾಗಿ ಹಾಗೂ 314 ಸಸಿ ನೆಡುವ ಸ್ಥಳಗಳಾಗಿ ವಿಭಾಗಿಸಲಾಗಿದೆ. ಪ್ರತಿ ವಲಯಕ್ಕೂ ಒಬ್ಬ ವಲಯ ಕಮಾಂಡರ್ ಉಪಸ್ಥಿತರಿರಲಿದ್ದಾರೆ. ಸುಗಮ ಸಂಚಾರಕ್ಕಾಗಿ ಮೆಟ್ರೊ ರೈಲುಗಳ ಸಂಚಾರ ಆವೃತ್ತಿಯನ್ನು ಹೆಚ್ಚಿಸಲಾಗಿದೆ. ಜತೆಗೆ ಮೆಟ್ರೊ ನಿಲ್ದಾಣಗಳಿಂದ ಸಸಿ ನೆಡುವ ಸ್ಥಳಗಳವರೆಗೆ ಉಚಿತ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರಿಗೆ ಆಹಾರ, ಪೋರ್ಟೆಬಲ್ ಶೌಚಾಲಯಗಳು ಸೇರಿದಂತೆ ಎಲ್ಲಾ ಮೂಲಸೌಕರ್ಯಗಳನ್ನು ಒದಗಿಸಲಾಗಿದೆ.

ಮೆಟ್ರೊ ಸಹಕಾರ: ಸಸಿ ನೆಡುವ ಕಾರ್ಯಕ್ರಮ ಹಾಗೂ ವಾಕಥಾನ್‌ನಲ್ಲಿ ಭಾಗವಹಿಸುವ ಸಾರ್ವಜನಿಕರ ಅನುಕೂಲಕ್ಕಾಗಿ ಶನಿವಾರ ಮುಂಜಾನೆ ವಿಶೇಷ ಮೆಟ್ರೋ ಸೇವೆ ಒದಗಿಸಲಾಗುತ್ತಿದೆ. ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರು ಸುಲಭವಾಗಿ ತಮ್ಮ ಗಮ್ಯಸ್ಥಾನ ತಲುಪುವ ಉದ್ದೇಶದಿಂದ, ನಮ್ಮ ಮೆಟ್ರೋ ಎಲ್ಲಾ ಮಾರ್ಗಗಳ ಎಲ್ಲಾ ಟರ್ಮಿನಲ್ ನಿಲ್ದಾಣಗಳಿಂದ 5 ಗಂಟೆ ಬದಲಾಗಿ ಬೆಳಗ್ಗೆ 4 ಗಂಟೆಗೆ ರೈಲು ಸಂಚಾರ ಆರಂಭಿಸಲಿದೆ.

ಹಸಿರು ಬೆಂಗಳೂರು ರೂವಾರಿ ಗೌರವ: ಕಾರ್ಯಕ್ರಮದಲ್ಲಿ ಭಾಗವಹಿಸುವ ಪ್ರತಿಯೊಬ್ಬರಿಗೂ ಅಧಿಕೃತ ಡಿಜಿಟಲ್ ಪ್ರಮಾಣಪತ್ರ ನೀಡಲಾಗುವುದು. ಜತೆಗೆ ಹಸಿರು ಬೆಂಗಳೂರು ರೂವಾರಿಗಳು ಎಂಬ ಗೌರವ ಸಿಗಲಿದೆ. ಅತ್ಯುತ್ತಮ ಕೊಡುಗೆ ನೀಡುವವರಿಗೆ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕಗಳಿಂದ ಗೌರವಿಸಲಾಗುತ್ತದೆ.

ಬೀದರ್: 9.41 ಕೋಟಿ ರೂ.ಮೊತ್ತದ ಡ್ರಗ್ಸ್ ನಾಶ

• **ಬೀದರ್:** ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಎನ್‌ಡಿಪಿಎಸ್ ಕಾಯ್ದೆಯಲ್ಲಿ ದಾಖಲಾಗಿದ್ದ ಪ್ರಕರಣಗಳಲ್ಲಿ ವಶಪಡಿಸಿಕೊಂಡ ಸುಮಾರು 9.41 ಕೋಟಿ ರೂ. ಮೌಲ್ಯದ ಅಕ್ರಮ ಗಾಂಜಾ, ಮಾದಕ ಗುಳಿಗೆಗಳು ಹಾಗೂ ಸಿರಪ್ ಬಾಟಲ್‌ಗಳನ್ನು ಶುಕ್ರವಾರ ಜಿಲ್ಲಾ ಡ್ರಗ್ಸ್ ಡಿಸ್ಪೋಸಲ್ ಕಮಿಟಿ ವತಿಯಿಂದ ನಾಶ ಮಾಡಲಾಯಿತು.

ಭಾಲ್ಕಿ ತಾಲೂಕಿನ ಧನ್ನೂರ್ ಗ್ರಾಮದಲ್ಲಿರುವ ಮೇ ಇನ್ವೈರೋ ಬಯೋಟಿಕ್ ಜೈವಿಕ ತ್ಯಾಜ್ಯ ವಿಲೇವಾರಿ ಘಟಕದ ಕುಲುಮೆಯಲ್ಲಿ ವಶಪಡಿಸಿಕೊಂಡಿದ್ದ ಮಾದಕವಸ್ತುಗಳನ್ನು ವಿಲೇವಾರಿ ಮಾಡಲಾಯಿತು. ಜಿಲ್ಲಾ ವ್ಯಾಪ್ತಿಯಲ್ಲಿ ಅಕ್ರಮವಾಗಿ ಗಾಂಜಾ ಬೆಳೆಯುವುದು, ಸಾಗಾಟ ಹಾಗೂ ಮಾರಾಟ ಮಾಡುತ್ತಿದ್ದವರ ವಿರುದ್ಧ ನಡೆಸಿದ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಒಟ್ಟು 22 ಪ್ರಕರಣಗಳು ದಾಖಲಾಗಿದ್ದವು. ಈ ಪ್ರಕರಣಗಳಲ್ಲಿ ವಶಪಡಿಸಿಕೊಂಡಿದ್ದ 997 ಕೆಜಿ 764 ಗ್ರಾಂ ಗಾಂಜಾ, 51,638 ಮಾದಕ ಗುಳಿಗೆಗಳು ಹಾಗೂ 743 ಸಿರಪ್ ಬಾಟಲ್‌ಗಳನ್ನು ನಾಶಪಡಿಸಲಾಯಿತು.

ಸಚಿವ ಸಂಪುಟ ವಿಸ್ತರಣೆ ವಿಳಂಬ: ಜಾರಕಿಹೊಳಿ

ಬೆಳಗಾವಿ: ರಾಜ್ಯದಲ್ಲಿ ಇನ್ನು ಅಧಿಕೃತವಾಗಿ ಜಿಲ್ಲಾ ಉಸ್ತುವಾರಿ ಸಚಿವರನ್ನು ನೇಮಕ ಮಾಡಿಲ್ಲ. ಸಚಿವ ಸಂಪುಟ ವಿಸ್ತರಣೆ ವಿಳಂಬ ಆಗಿದ್ದರಿಂದಲೇ ಸದ್ಯಕ್ಕೆ ನಮಗೆ ತಾತ್ಕಾಲಿಕವಾಗಿ ಉಸ್ತುವಾರಿ ಜವಾಬ್ದಾರಿ ನೀಡಿ ಕೆಲಸ ನಿರ್ವಹಿಸಲು ಸೂಚಿಸಲಾಗಿದೆ ಎಂದು ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು. ಶುಕ್ರವಾರ ನಗರದ ಕಾಂಗ್ರೆಸ್ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಪಿಸಿಸಿ ಅಧ್ಯಕ್ಷಸ್ಥಾನಕ್ಕೆ ತಪ್ಪಲು ಸಿದ್ದರಾಮಯ್ಯನವರು ಕಾರಣವೆಂದು ವದಂತಿ ಹರದಾಡುತ್ತಿದೆ ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿ, ನನಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಕೈ ತಪ್ಪಲು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಾರಣವಲ್ಲ. ಈಗಾಗಲೇ ಸಾಕಷ್ಟು ಬಾರಿ ಸ್ಪಷ್ಟಪಡಿಸಿದ್ದೇನೆ. ಹೈಕಮಾಂಡ್ ಒಬ್ಬರಿಗೆ ಒಂದೇ ಹುದ್ದೆ ಎಂಬ ಕಟ್ಟುನಿಟ್ಟಿನ ನಿಯಮದ ಅನ್ವಯವೇ ಈ ತೀರ್ಮಾನವಾಗಿದೆ ಎಂದು ಸಚಿವರು ವಿವರಿಸಿದರು. ಕಳೆದ ಎರಡು ತಿಂಗಳ ಹಿಂದೆ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬದಲಾವಣೆ ಕುರಿತು ಹೈಕಮಾಂಡ್ ಮಟ್ಟದಲ್ಲಿ ದೊಡ್ಡ ಮಟ್ಟದ ಚರ್ಚೆ ನಡೆದಿತ್ತು. ಸಚಿವ ಸ್ಥಾನದ ಜತೆಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನೂ ನಮಗೆ ನೀಡಬೇಕು ಎಂಬುದು ನಮ್ಮ ಪ್ರಮುಖ ಬೇಡಿಕೆಯಾಗಿತ್ತು. ಆದರೆ, ಪಕ್ಷದ ನಿಯಮದ ಪ್ರಕಾರ ಒಂದೇ ಹುದ್ದೆ ನಿಭಾಯಿಸಬೇಕಿದ್ದರಿಂದ, ನಾನು ಅಂತಿಮವಾಗಿ ಸಚಿವ ಸ್ಥಾನದಲ್ಲೇ ಮುಂದುವರಿಯಲು ನಿರ್ಧರಿಸಿ ಅಧ್ಯಕ್ಷ ಸ್ಥಾನದ ರೇಸ್ನಿಂದ ಹಿಂದೆ ಸರಿದೆ ಎಂದು ಸ್ಪಷ್ಟಪಡಿಸಿದರು.

ಜಾನುವಾರು ಸಾಗಾಟ: ದೂರು ದಾಖಲು

ಹಾವೇರಿ: ಬೆಲೆ ಬಾಳುವ ಜಾನುವಾರುಗಳನ್ನು ಅಕ್ರಮ ಕಸಾಯಿಖಾನೆಗೆ ಸಾಗಾಟ ಮಾಡುತ್ತಿರುವ ಆರೋಪದ ಮೇಲೆ ಮೂರು ಜನರ ವಿರುದ್ಧ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಬ್ಯಾಡಗಿಯ ಶಿವಪುರ ಬಡಾವಣೆಯ ಮಕ್ಬುಲಅಲಿ ಬೆಳಗಾಂವ (33), ಮೆಹಬೂಬಸಾಬ ಬೆಳಗಾಂವ (45) ಹಾಗೂ ಸವಣೂರಿನ ಆರೀಫ ಬೇಪಾರಿ ಎಂಬುವವರ ವಿರುದ್ಧ ದೂರು ದಾಖಲಿಸಲಾಗಿದೆ. ಆರೋಪಿತರು 40 ಸಾವಿರ ರೂ.ಬೆಲೆ ಬಾಳುವ ಆಕಳು ಹಾಗೂ ಆಕಳು ಕರುಗಳನ್ನು ಗೂಡ್ಸ್ ವಾಹನದಲ್ಲಿ ತುಂಬಿಕೊಂಡು ಸಾಗಾಟ ಮಾಡುತ್ತಿದ್ದಾಗ ಪೊಲೀಸರು ನಡೆಸಿದ್ದು, ದಾಳಿ ವೇಳೆ ಸಿಕ್ಕಿಬಿದ್ದಿದ್ದಾರೆ. ಆರೋಪಿತರಿಂದ ಐದು ಜಾನುವಾರುಗಳು ಹಾಗೂ 1ಲಕ್ಷ ಮೌಲ್ಯದ ಗೂಡ್ಸ್ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ದೂರಿನಲ್ಲಿ ತಿಳಿಸಿದೆ. ಸವಣೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಂಆರ್‌ಎನ್ ಜ್ಞಾನ ಸಂಕೀರ್ಣ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ

ಆಯುರ್ವೇದ ವಿಶ್ವಮಟ್ಟಕ್ಕೆ ಕೊಂಡೊಯ್ಯಲು ಬದ್ಧ: ನಿರಾಣಿ

ಬಾಗಲಕೋಟೆ: ಮುಂದಿನ ವರ್ಷಗಳಲ್ಲಿ ಎಂಆರ್‌ಎನ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯನ್ನು ವಿಶ್ವದರ್ಜೆಯ ಮೂಲಸೌಕರ್ಯ, ಅತ್ಯಾಧುನಿಕ ಪ್ರಯೋಗಾಲಯಗಳು ಹಾಗೂ ಆಧುನಿಕ ಬೋಧನಾ ಸೌಲಭ್ಯಗಳನ್ನು ಒಳಗೊಂಡ ಭವ್ಯವಾದ ಹೊಸ ಕ್ಯಾಂಪಸ್‌ಗೆ ಸ್ಥಳಾಂತರಿಸಲಾಗುವುದು. ಇದು 200 ಹಾಸಿಗೆಗಳ ಸಂಪೂರ್ಣ ಸುಸಜ್ಜಿತ ಮಲ್ಟಿಸ್ಪೆಷಾಲಿಟಿ ಆಯುರ್ವೇದ ಆಸ್ಪತ್ರೆಯಾಗಿ ಕಾರ್ಯನಿರ್ವಹಿಸಲಿದ್ದು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಎಂಆರ್‌ಎನ್ ಸಂಸ್ಥೆಯನ್ನು ಶ್ರೇಷ್ಠತೆಯ ಕೇಂದ್ರವಾಗಿ ಸ್ಥಾಪಿಸುವ ದೃಷ್ಟಿಕೋನವನ್ನು ಹೊಂದಿದೆ ಎಂದು ತೇಜಸ್ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು, ಬಿಜೆಪಿ ರಾಜ್ಯ ಉಪಾಧ್ಯಕ್ಷ ಮುರಗೇಶ ನಿರಾಣಿ ಹೇಳಿದರು.



ತೇಜಸ್ ಇಂಟರ್ ನ್ಯಾಷನಲ್ ಎಜುಕೇಷನಲ್ ಇನ್ಸ್ಟಿಟ್ಯೂಷನ್‌ನ ಎಂಆರ್‌ಎನ್ ಆಯುರ್ವೇದ ವೈದ್ಯಕೀಯ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ನವದೆಹಲಿಯ ಎನ್.ಸಿ.ಐ.ಎಸ್.ಎಂ ಹಾಗೂ ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಆಯೋಜಿಸಿದ್ದ ಅಂತಾರಾಷ್ಟ್ರೀಯ ಸಮ್ಮೇಳನ ಮತ್ತು ಕಾರ್ಯಾಗಾರವಾದ ಎಂಆರ್ ಎನ್ ಜ್ಞಾನ ಸಂಕೀರ್ಣ-2026ದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಶಿಕ್ಷಣ ಮತ್ತು ಆರೋಗ್ಯ ಸೇವೆಗಳು ಜೊತೆಯಾಗಿಯೇ ಸಾಗಬೇಕು ಎಂಬ ಧ್ಯೇಯದೊಂದಿಗೆ ಶೈಕ್ಷಣಿಕ ಜ್ಞಾನವನ್ನು ವೃದ್ಧಿಸಲು ಮತ್ತು ಪುರಾವೆ ಆಧಾರಿತ ಆಯುರ್ವೇದ ಅಭ್ಯಾಸವನ್ನು ಉತ್ತೇಜಿಸಲು ಪ್ರತಿವರ್ಷ ಸಮ್ಮೇಳನಗಳನ್ನು ಆಯೋಜಿಸಲಾಗುತ್ತಿದೆ ಎಂದರು.

ಕಳೆದ ಕೆಲವು ವರ್ಷಗಳಲ್ಲಿ ರಾಷ್ಟ್ರೀಯ ಮಟ್ಟದ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಲಾಗಿದ್ದು, ಈ ವರ್ಷ ಜಾಗತಿಕ ತಜ್ಞರನ್ನು ಒಗ್ಗೂಡಿಸಿ ಅಂತಾರಾಷ್ಟ್ರೀಯ ಮಟ್ಟಕ್ಕೆ ನಮ್ಮ ವ್ಯಾಪ್ತಿಯನ್ನು ವಿಸ್ತರಿಸಿರುವುದು ಆಯುರ್ವೇದವನ್ನು ಜಾಗತಿಕ ಶೈಕ್ಷಣಿಕ ಭೂಪಟದಲ್ಲಿ ನೆಲೆಗೊಳಿಸುವ ನಮ್ಮ ದೃಢಸಂಕಲ್ಪವನ್ನು ಪ್ರತಿಬಿಂಬಿಸುತ್ತದೆ ಎಂದು ಹೆಮ್ಮೆಯಿಂದ ತಿಳಿಸಿದರು.


ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಧುರಿ ವಹಿಸಿದ್ದರು. ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಬಿ.ಸಿ.ಭಗವಾನ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಆರ್.ಜಿ.ಯು.ಎಚ್.ಎಸ್.ನ ಸ್ನಾತಕೋತ್ತರ ಅಧ್ಯಯನಗಳ ಬಿ.ಒ.ಎಸ್ ಅಧ್ಯಕ್ಷ ಡಾ. ಸಿದ್ದನಗೌಡ ಪಾಟೀಲ್ ಹಾಗೂ ಪುಣೆಯ ಆರೋಗ್ಯವರ್ಧಿನಿ ಚಿಕಿತ್ಸಾಲಯ ಮತ್ತು ಪಂಚಕರ್ಮ ಕೇಂದ್ರದ ಖ್ಯಾತ ವೈದ್ಯ ಹಾಗೂ ಸಂಶೋಧಕ ಡಾ.ಹರೀಶ್ ಪಟಂಕರ್ ಪ್ರಾಂಶುಪಾಲರು ಹಾಗೂ ಸಂಘಟನಾ ಸಮಿತಿಯ ಅಧ್ಯಕ್ಷ ಡಾ.ಶಿವಕುಮಾರ್ ಗಂಗಲ್, ಡಾ. ಮಹಾಂತೇಶ್ ಹಿರೇಮಠ್, ಡಾ.ಎ.ಹಬೀಬ್ ಬಾಳಿಕಾಯಿ, ಡಾ.ಸೌಮ್ಯ ಮಂಗಳೂರೆ ಮುಧೋಳ್ ಉಪಸ್ಥಿತರಿದ್ದರು.

ಎಫ್‌ಸಿಐ ಕಾರ್ಯಕ್ಕೆ ಈರಣ್ಣ ಕಡಾಡಿ ಮೆಚ್ಚುಗೆ

53 ಲಕ್ಷ ಟನ್‌ಗೂ ಅಧಿಕ ಆಹಾರ ಧಾನ್ಯಗಳ ಸಮರ್ಪಕ ನಿರ್ವಹಣೆ

ಬೆಳಗಾವಿ: ವಿವಿಧ ರಾಜ್ಯಗಳಿಂದ ಕರ್ನಾಟಕಕ್ಕೆ ತರಲಾದ 54.54 ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯಗಳ ಸುರಕ್ಷಿತ ಸಾಗಣೆ, ಶೂನ್ಯ ಹಾನಿ ಸಾಧನೆ ಹಾಗೂ ಅತ್ಯಂತ ಕಡಿಮೆ ಸಂಗ್ರಹಣಾ ಮತ್ತು ಸಾಗಾಣಿಕೆ ನಷ್ಟ ದಾಖಲಿಸಿರುವ ಹಿನ್ನೆಲೆಯಲ್ಲಿ ಭಾರತೀಯ ಆಹಾರ ನಿಗಮದ (ಎಫ್‌ಸಿಐ) ಕರ್ನಾಟಕ ಪ್ರದೇಶದ ಕಾರ್ಯನಿರ್ವಹಣೆಗೆ ರಾಜ್ಯ ಮಟ್ಟದ ಸಲಹಾ ಸಮಿತಿ ಅಧ್ಯಕ್ಷ ಹಾಗೂ ಮಾಜಿ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಮೆಚ್ಚುಗೆ ವ್ಯಕ್ತಪಡಿಸಿದರು.



ಶುಕ್ರವಾರ ನಗರದ ಸರ್ಕಿಟ್ ಹೌಸ್‌ನಲ್ಲಿ ಪತ್ರಿಕಾಗೋಷ್ಠಿ ಮಾತನಾಡಿದ ಅವರು, ರಾಜ್ಯ ಮಟ್ಟದ ಸಲಹಾ ಸಮಿತಿ ಸಭೆಯಲ್ಲಿ ಎಫ್‌ಸಿಐ ಕರ್ನಾಟಕ ಪ್ರದೇಶದ 2025-26ನೇ ಸಾಲಿನ ಕಾರ್ಯಚಟುವಟಿಕೆಗಳ ಪರಿಶೀಲನೆ ನಡೆಸಲಾಗಿದೆ. ಆಹಾರ ಧಾನ್ಯಗಳ ಸಂಗ್ರಹಣೆ, ಸಾಗಣೆ ಹಾಗೂ ಗುಣಮಟ್ಟ ನಿರ್ವಹಣೆಯಲ್ಲಿ ಕರ್ನಾಟಕ ಪ್ರದೇಶವು ಕೇಂದ್ರ ಕಚೇರಿ ಹಾಗೂ ಆಹಾರ ಮತ್ತು ಸಾರ್ವಜನಿಕ ವಿತರಣೆ ಇಲಾಖೆಯ ನಿಗದಿತ ಮಾನದಂಡಗಳನ್ನು ಸಮರ್ಪಕವಾಗಿ ಪಾಲಿಸಿದೆ ಎಂದು ಹೇಳಿದರು.

ರಾಜ್ಯದಲ್ಲಿ ಎಫ್‌ಸಿಐ 61 ಗೋದಾಮುಗಳ ಮೂಲಕ 10.68 ಲಕ್ಷ ಮೆಟ್ರಿಕ್ ಟನ್ ಸಂಗ್ರಹಣಾ ಸಾಮರ್ಥ್ಯ ಹೊಂದಿದ್ದು, ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ 2.45 ಲಕ್ಷ ಮೆಟ್ರಿಕ್ ಟನ್ ಸಾಮರ್ಥ್ಯದ ಹೆಚ್ಚುವರಿ ಗೋದಾಮುಗಳ ನಿರ್ಮಾಣ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಸಚಿವ ಪ್ರಿಯಾಂಕ್ ಖರ್ಗೆ ಅವರ ಮೇಲೆ ಈಡಿ ದಾಳಿಯಾಗಬಹುದು ಎನ್ನುವ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಕುಂಬಳಕಾಯಿ ಕಳ್ಳ ಅಂದರೆ ಅವರ ಏಕೆ ಹೆಗಲು ಮುಟ್ಟಿಕೊಂಡು ನೋಡಿಕೊಳ್ಳುತ್ತಿದ್ದಾರೆ. ಆರ್‌ಎಸ್‌ಎಸ್ ನನ್ನ ಮೇಲೆ ದಾಳಿ ಮಾಡಿಸುತ್ತದೆ ಎಂದು ಹೇಳಿಕೊಳ್ಳುತ್ತಿರುವ ಅವರಿಗೆ ಭ್ರಮೆಯಾಗಿದೆ ಹಾಗೂ ರಾಜ್ಯ ಹಾಗೂ ದೇಶದಿಂದ ಕಾಂಗ್ರೆಸ್ ಸಂಪೂರ್ಣವಾಗಿ ತೊಲಗುತ್ತದೆ ಎನ್ನುವ ಭಯ ಅವರನ್ನ ಕಾಡುತ್ತಿದೆ ಅದಕ್ಕೆ ಹುಚ್ಚರಂತೆ ಮಾಡನಾಡುತ್ತಿದ್ದಾರೆ ಎಂದು ತಿರುಗೇಟು ನೀಡಿದರು.

ರಾಜ್ಯಾಧ್ಯಕ್ಷ ಸ್ಥಾನ ಕೊಟ್ಟರೆ ನಿಭಾಯಿಸುವೆ: ನಿರಾಣಿ

ಬಾಗಲಕೋಟೆ: ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ಸದ್ಯಕ್ಕೆ ಖಾಲಿ ಇರುವುದಿಲ್ಲ, ಬಿ.ವೈ.ವಿಜಯೇಂದ್ರ ಅವರು ಈಗಾಗಲೇ ಎರಡೂವರೆ ವರ್ಷ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದು, ಇನ್ನೂ ಅವರ ಅವಧಿ 2ರಿಂದ ಮೂರು ತಿಂಗಳು ಇದ್ದು ಒಂದು ವೇಳೆ ಬಿಜೆಪಿ ರಾಷ್ಟ್ರೀಯ ನಾಯಕರು ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆಗೆ ಮುಂದಾಗಿ ನನಗೆ ಅವಕಾಶ ಕೊಟ್ಟರೆ ಜವಾಬ್ದಾರಿ ನಿರ್ವಹಿಸಲು ಸಿದ್ಧ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಮುರಗೇಶ ನಿರಾಣಿ ಸ್ಪಷ್ಟಪಡಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ ಹೈಕಮಾಂಡ್ ಬದಲಾವಣೆಗೆ ಮುಂದಾದರೆ ನೋಡೋಣ. ನನಗೆ ಜವಾಬ್ದಾರಿ ಕೊಟ್ಟರೆ ಹಗಲು-ರಾತ್ರಿ ರಾಜ್ಯವನ್ನು ಸುತ್ತಾಡಿ ಪಕ್ಷವನ್ನು ಕಟ್ಟಲು ಕೆಲಸ ಮಾಡುವೆ. ಈಗ ಆ ಪೋಸ್ಟ್ ಖಾಲಿ ಇಲ್ಲವೆಂದು ಹೇಳಿದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಮತ್ತು ನಮ್ಮ ಮಧ್ಯೆ ಯಾವುದೇ ವೈಯಕ್ತಿಕ ವ್ಯವಹಾರ ಸಂಬಂಧ ಇಲ್ಲವೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಪವಿತ್ರ ಧಾರ್ಮಿಕ ಕ್ಷೇತ್ರವಾಗಿರುವ ಧರ್ಮಸ್ಥಳದಲ್ಲಿ ಸ್ಪಷ್ಟಪಡಿಸಿದ್ದಾರೆ. ವೈಯಕ್ತಿಕ ವಿಷಯ ಹೊರಗಿರಲಿ, ವೈಯಕ್ತಿಕ ಜೀವನ, ವ್ಯವಹಾರ, ಸಂಬಂಧಗಳು ಪಕ್ಷದ ಚೌಕಟ್ಟಿನ ಒಳಗೆ ಬರಬಾರದು. ವೈಯಕ್ತಿಕ ವಿಷಯಗಳಿಂದ ರಾಜಕಾರಣಕ್ಕೆ ಯಾವುದೇ ರೀತಿಯ ತೊಂದರೆ ಆಗಬಾರದು. ವಿಜಯೇಂದ್ರ ಅವರು ಯಾವುದೇ ವ್ಯವಹಾರಿಕ ಸಂಬಂಧ ಕೂಡ ಇಲ್ಲ ಎಂದು ಧರ್ಮಸ್ಥಳದಲ್ಲಿ ನಿಂತು ಸ್ಪಷ್ಟನೆ ಕೊಟ್ಟಿದ್ದು ಒಳ್ಳೆಯದಾಯಿತು. ಇದರಿಂದ ಸಂಶಯಗಳಿಗೆ ತೆರೆ ಬಿದ್ದಿದೆ ಎಂದರು.

ಯುವತಿ ಚುಡಾಯಿಸಿದ ಯುವಕ: ಪ್ರಕರಣ ದಾಖಲು

ಹುಬ್ಬಳ್ಳಿ: ಯುವತಿಯೊಬ್ಬಳನ್ನು ಪ್ರೀತಿ ಮಾಡುವಂತೆ ಬಲವಂತ ಮಾಡಿದಲ್ಲದೇ ಮಾನಭಂಗ ಮಾಡುವ ಉದ್ದೇಶದಿಂದ ಕೈ ಹಿಡಿದು ಎಳೆದಾಡಿದ ಘಟನೆ ಹುಬ್ಬಳ್ಳಿ ಬಸವನ ಹತ್ತಿರದ ಆಸ್ಪತ್ರೆಯೊಂದರಲ್ಲಿ ನಡೆದಿದೆ.

ಮಂಟೂರ ರಸ್ತೆ ಪ್ರಕಾಶ ಲಿಂಗಂ ಎಂಬಾತ ಯುವತಿಯನ್ನು ಚುಡಾಯಿಸಿದ ಯುವಕ. ಯುವತಿ ಪ್ರೌಢ ಶಾಲೆಯಲ್ಲಿ ಓದುವಾಗ ಪ್ರಕಾಶ ಪರಿಚಯವಾಗಿದ್ದ. 2-3 ದಿನಗಳಿಂದ ಯುವತಿಯನ್ನು ಹಿಂಬಾಲಿಸಿದ್ದ. ಇದಕ್ಕೆ ಯುವತಿ ಮನೆ ಅವರಿಗೆ ಹೇಳುವುದಾಗಿ ಯುವಕನಿಗೆ ಹೇಳಿದ್ದಳು. ಇಷ್ಟಕ್ಕೆ ಸಿಟ್ಟಾದ ಆತ ಯುವತಿ ಕೆಲಸ ಮಾಡುವ ಸ್ಥಳಕ್ಕೆ ಹೋಗಿ ಅಲ್ಲಿದ್ದ ಗ್ಲಾಸ್ ಒಡೆದು, ಕೈ ಹಿಡಿದು ಎಳೆದಾಡಿ ಮಾನಭಂಗ ಯತ್ನಿಸಿದ್ದಾನೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಉಪನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಜಿಗಜಿಣಗಿ ಕಚೇರಿ ಮುತ್ತಿಗೆಗೆ ಯತ್ನ: ಬಂಧನ, ಬಿಡುಗಡೆ

ವಿಜಯಪುರ: ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ಕುರಿತು ವಿಜಯಪುರ ಸಂಸದ ರಮೇಶ ಜಿಗಜಿಣಗಿ ನೀಡಿರುವ ಹೇಳಿಕೆಯನ್ನು ಖಂಡಿಸಿ ದಲಿತ ವಿದ್ಯಾರ್ಥಿ ಪರಿಷತ್ ನೇತೃತ್ವದಲ್ಲಿ ಗುರುವಾರ ಸಂಸದರ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಹೋರಾಟಗಾರರನ್ನು ಪೊಲೀಸರು ವಶಕ್ಕೆ ಪಡೆದು ಬಳಿಕ ಬಿಡುಗಡೆಗೊಳಿಸಿದರು.

ಇತ್ತೀಚೆಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್ ನೋಂದಣಿ ಕುರಿತು ಪ್ರಶ್ನೆಯೊಂದನ್ನು ಎತ್ತಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಸಂಸದ ರಮೇಶ ಜಿಗಜಿಣಗಿ ಅವರು, 'ಪ್ರಿಯಾಂಕ್ ಖರ್ಗೆ ಒಬ್ಬ ದಲಿತ ಮನುಷ್ಯ, ಅವನಿಗೇಕೆ ಬೇಕು ಆರ್‌ಎಸ್‌ಎಸ್ ವಿಚಾರ ಎಂಬ ಅರ್ಥದಲ್ಲಿ ಹೇಳಿಕೆ ನೀಡಿದ್ದರು. ಸಂಸದರ ಈ ಹೇಳಿಕೆ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದ್ದು, ದಲಿತ ಸಂಘಟನೆಗಳು ತೀವ್ರ ವಿರೋಧ ವ್ಯಕ್ತಪಡಿಸಿ ಅದರ ಭಾಗವಾಗಿ ಹಳೆಯ ಪ್ರವಾಸಿ ಮಂದಿರದ ಆವರಣದಲ್ಲಿರುವ ಸಂಸದರ ಜನಸಂಪರ್ಕ ಕಾರ್ಯಾಲಯಕ್ಕೆ ಮುತ್ತಿಗೆ ಹಾಕಲು ಅಣಿಯಾದರು.

ಪ್ರತಿಭಟನೆಯಲ್ಲಿ ಭಾಗವಹಿಸಲು ಆಗಮಿಸುತ್ತಿದ್ದ ನೂರಾರು ವಿದ್ಯಾರ್ಥಿಗಳನ್ನು ಪೊಲೀಸರು ಮಾರ್ಗಮಧ್ಯದಲ್ಲೇ ತಡೆದು ವಾಪಸ್ ಕಳುಹಿಸಿದರೂ, ದಲಿತ ವಿದ್ಯಾರ್ಥಿ ಪರಿಷತ್ ಹಾಗೂ ವಿವಿಧ ಸಂಘಟನೆಗಳ ಮುಖಂಡರು ಸಂಸದರ ಕಚೇರಿಯತ್ತ ತೆರಳಿ ಪ್ರತಿಭಟನೆ ನಡೆಸಿದರು.



ಪ್ರತಿಭಟನಾಕಾರರು ಕಚೇರಿಯೊಳಗೆ ಪ್ರವೇಶಿಸಲು ಯತ್ನಿಸುತ್ತಿದ್ದಂತೆ ಗಾಂಧಿ ಚೌಕ್ ಪೊಲೀಸ್ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಹಳೆ ಪ್ರವಾಸಿ ಮಂದಿರದ ಮುಖ್ಯ ದ್ವಾರದಲ್ಲೇ ಅವರನ್ನು ತಡೆದರು. ಪೊಲೀಸರು ಮುಂಜಾಗ್ರತಾ ಕ್ರಮವಾಗಿ ಶ್ರೀನಾಥ್ ಪೂಜಾರಿ ಸೇರಿದಂತೆ ಹಲವು ಹೋರಾಟಗಾರರನ್ನು ವಶಕ್ಕೆ ಪಡೆದು ಪೊಲೀಸ್ ವಾಹನದಲ್ಲಿ ಕರೆದೊಯ್ದು ಬಳಿಕ ಬಿಡುಗಡೆಗೊಳಿಸಿದರು.

ದಲಿತ ವಿದ್ಯಾರ್ಥಿ ಪರಿಷತ್ ಸಂಸ್ಥಾಪಕ ಅಧ್ಯಕ್ಷ ಹಾಗೂ ನ್ಯಾಯವಾದಿ ಶ್ರೀನಾಥ್ ಪೂಜಾರಿ, ಎಂಎಂಡಿಸಿ ಮುಖಂಡರಾದ ಹಾಫಿಜ್ ಸಿದ್ದಖಿ, ಶಬ್ಬೀರ್ ಕಾಗಜಕೋಟಿ, ರಮೇಶ್ ರಾಠೋಡ್, ರಾಕೇಶ್ ಚವ್ಹಾಣ, ಇಲಿಯಾಸ್, ಸಂತೋಷ, ಯಮನೂರಿ ಸಿಂಧಗೇರಿ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

ಸಂಪಾದಕೀಯ

ದುರುದ್ದೇಶಿತ ವಿದೇಶಿ ದೇಣಿಗೆಗೆ ಅಂಕುಶ

ವಿದೇಶಗಳಿಂದ ದೇಣಿಗೆ ಪಡೆದು ನಿಯಮಬಾಹಿರವಾಗಿ ಕಾರ್ಯಾಚರಿಸುವ ಸರಕಾರೇತರ ಸಂಸ್ಥೆಗಳ (ಎನ್‌ಜಿಒ) ಕಾರ್ಯಚಟುವಟಿಕೆಗಳನ್ನು ನಿಯಂತ್ರಿಸಲು ಕೇಂದ್ರ ಸರಕಾರವು ಹೆಜ್ಜೆಯಿಟ್ಟಿದ್ದು ಈ ಸಂಬಂಧ ವಿದೇಶಿ ದೇಣಿಗೆ ನಿಯಂತ್ರಣ ನಿಯಮಾವಳಿ (ಎಫ್‌ಸಿಆರ್‌ಎ)ಗಳಿಗೆ ಸೂಕ್ತ ತಿದ್ದುಪಡಿಗಳನ್ನು ಮಾಡುವುದು ಅತ್ಯಂತ ಸೂಕ್ತವಾದ ಹಾಗೂ ಸಮಯೋಚಿತವಾದ ಉಪಕ್ರಮವಾಗಿದೆ. ಬಹಳಷ್ಟು ಸರಕಾರೇತರ ಸಂಸ್ಥೆಗಳು ವಿದೇಶಗಳಿಂದ ದೊಡ್ಡ ಮಟ್ಟದ ಹಣವನ್ನು ಪಡೆಯುತ್ತಿದ್ದು, ಈ ಹಣವನ್ನು ಮತಾಂತರ ಕಾರ್ಯಗಳಿಗೆ ಹಾಗೂ ದೇಶವಿರೋಧಿ ಚಟುವಟಿಕೆಗಳಿಗೆ ಬಳಸುತ್ತಿರುವುದರ ಹಿನ್ನೆಲೆಯಲ್ಲಿ ಇದನ್ನು ತಡೆಯಲು ಕಠಿಣ ನಿರ್ಬಂಧಗಳನ್ನು ಸರಕಾರವು ಜಾರಿಗೆ ತಂದಿದೆ. ಆ ಮೂಲಕ ಎನ್‌ಜಿಒಗಳ ಚಟುವಟಿಕೆಗೆ ಲಕ್ಷ್ಮಣ ರೇಖೆ ಹಾಕಲು ಹೊರಟಿದೆ.



ಹೊಸ ನಿಯಮಗಳನ್ವಯ ಎನ್‌ಜಿಒಗಳು ತಾವು ಯಾವ ಉದ್ದೇಶಕ್ಕಾಗಿ ವಿದೇಶಿ ದೇಣಿಗೆ ಪಡೆಯುತ್ತಿದ್ದೇವೆ ಎಂಬುದನ್ನು ಖಚಿತಪಡಿಸಬೇಕು ಹಾಗೂ ತಮ್ಮ ಕಾರ್ಯಾಚರಣೆಯ ಕಾರ್ಯವ್ಯಾಪ್ತಿ ಯಾವ ರಾಜ್ಯದಲ್ಲಿ ಎಂಬುದನ್ನು ಸ್ಪಷ್ಟಪಡಿಸಬೇಕಾಗಿದೆ. ಕೆಲವು ಎನ್‌ಜಿಒಗಳು ಆದಿವಾಸಿ ಪಂಗಡಗಳಿರುವಂತಹ ಪ್ರದೇಶಗಳಲ್ಲಿ ಮತಾಂತರ ಕಾರ್ಯಗಳನ್ನು ನಡೆಸುತ್ತಿರುವುದರಿಂದ ಎನ್‌ಜಿಒಗಳು ತಮ್ಮ ಕಾರ್ಯವ್ಯಾಪ್ತಿಯ ಪ್ರದೇಶವನ್ನು ಸೂಚಿಸುವಂತೆ ಕಡ್ಡಾಯ ಮಾಡಿರುವುದು ವಿಶೇಷವಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಹೊಸ ನಿಯಮದಡಿಯಲ್ಲಿ ಎನ್‌ಜಿಒಗಳು ಮತಾಂತರ ಕಾರ್ಯ ನಡೆಸುವಂತಿಲ್ಲ ಎಂದು ಸ್ಪಷ್ಟವಾಗಿ ಸೂಚಿಸಲಾಗಿದೆ. ಹಿಂದಿನ ಕಾನೂನಿನಲ್ಲಿ ಇಂತಹ ಸ್ಪಷ್ಟ ನಿರ್ದೇಶ ಇಲ್ಲದಿರುವ ಕಾರಣದಿಂದಾಗಿ ಧಾರ್ಮಿಕ ಸಂಸ್ಥೆ ಎಂಬ ಹೆಸರಿನಲ್ಲಿ ವಿದೇಶಿ ಹಣ ಪಡೆಯುವ ಕೆಲವು ಸಂಸ್ಥೆಗಳು ಮತಾಂತರ ಕಾರ್ಯಗಳನ್ನು ಎಗ್ಗಿಲ್ಲದೆ ನಡೆಸುತ್ತಿದ್ದುವು.

ವಿದೇಶಿಹಣವನ್ನು ಉದ್ದೇಶಿತ ಕಾರ್ಯವಲ್ಲದೆ ಅನ್ಯ ಉದ್ದೇಶಗಳಿಗೆ ಬಳಸುವುದನ್ನು ತಡೆಯುವುದು ಕೂಡಾ ಪ್ರಸಕ್ತ ನಿಯಮ ಬದಲಾವಣೆಯ ಗುರಿಯಾಗಿದೆ. ಇನ್ನಷ್ಟು ಹಣ ಗಳಿಸುವ ಉದ್ದೇಶಕ್ಕೆ ವಿದೇಶಿ ದೇಣಿಗೆ ಬಳಕೆಯಾಗುವುದನ್ನು ತಪ್ಪಿಸುವುದಕ್ಕೂ ನಿಯಮ ತಂದಿರುವ ಸರಕಾರವು ಎನ್‌ಜಿಒಗಳು ಶೇರು ಮಾರುಕಟ್ಟೆಯಂತಹ ಊಹಾತ್ಮಕ ಕ್ಷೇತ್ರದಲ್ಲಿ ಹಣ ಹೂಡುವುದನ್ನು ನಿರ್ಬಂಧಿಸಿದೆ. ಅನುಚಿತ ಕಾರ್ಯದಲ್ಲಿ ತೊಡಗಿರುವ ಕೆಲವು ಎನ್‌ಜಿಒಗಳು ಹಾಗೂ ಕೆಲವು ವಿರೋಧ ಪಕ್ಷಗಳು ಸರಕಾರದ ಈ ಹೊಸ ನಿಯಮಗಳನ್ನು ವಿರೋಧಿಸಿವೆಯಾದರೂ ರಾಷ್ಟ್ರಹಿತ ದೃಷ್ಟಿಯಿಂದ ಹಿನ್ನೆಲೆಯಲ್ಲಿ ಇವು ಸ್ವಾಗತಾರ್ಹ ಕ್ರಮಗಳೆಂಬುದು ನಿರ್ವಿವಾದ.

ಇವುಗಳತ್ತ ಮನಸ್ಸು ಮಾಡಬಾರದು

ಆತ್ಮಕ್ಲೇಶೇನ ಯೇಽರ್ಥಾಃ ಸ್ಯುಃ ಧರ್ಮಸ್ಯಾತಿಕ್ರಮೇಣ ಚ ।
ಅರಿರ್ವಾ ಪ್ರಣಿಪಾತೇನ ಮಾ ಸ್ಮ ತೇಷು ಮನಃ ಕೃಥಾಃ ॥ - ಮಹಾಭಾರತ

ಯಾವ ಸಂಪತ್ತು ಆತ್ಮಕ್ಲೇಶದಿಂದ ಬರುತ್ತದೆಯೋ, ಧರ್ಮದ ಹಾದಿಯನ್ನು ಬಿಟ್ಟು ಬರುತ್ತದೆಯೋ, ಶತ್ರುವಿಗೆ ಶರಣಾಗಿ ಬರುತ್ತದೆಯೋ ಅಂಥವುಗಳಲ್ಲಿ ಮನಸ್ಸು ಮಾಡಬಾರದು - ಎಂಬುದು ಶ್ಲೋಕಾರ್ಥ.

ಸಂಪತ್ತಿಗಾಗಿ ಹಂಬಲಿಸದವರಿಲ್ಲ, ಕಾಂಚಣದಲ್ಲಿ ಎಲ್ಲ ಗುಣಗಳು ಇರುವುದರಿಂದ, ಕಾಸಿರುವವರನ್ನೇ ಜನರು ಆಮಂತ್ರಿಸಿ ಆದರಿಸುವುದರಿಂದ ತಾನೂ ಹಣ ಗಳಿಸಬೇಕು, ಶ್ರೀಮಂತನಾಗಿ ಗೌರವಾದರಗಳನ್ನು ಪಡೆಯಬೇಕು ಎಂದು ಬಯಸುವುದು ಸಹಜವೇನಿಸುತ್ತದೆ. ಹೇಗಾದರೂ ಸರಿ, ಏನೇ ಮಾಡಿಯಾದರೂ ಸರಿ ಶ್ರೀಮಂತನಾಗಬೇಕು ಎಂಬ ಆಸೆ ಹೆಚ್ಚಿನವರಲ್ಲಿ ಇರುವುದಾದರೂ ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಪ್ರಾಮಾಣಿಕವಾಗಿ ಪರಿಶ್ರಮದಿಂದ ದುಡಿದರೆ ಒಂದು ಹಂತಕ್ಕೆ ಏರಬಹುದು. ಹಣದ ಹಾಸಿಗೆಯ ಮೇಲೆ ಮಲಗಲು ಸಾಧ್ಯವಿಲ್ಲ. ನೀರಿನ ಪೈಪಿನಲ್ಲೋ, ನೀರಿನ ಟಾಂಕಿಯಲ್ಲೋ ಹಣ ತುಂಬಿಡಲು ಸಾಧ್ಯವಿಲ್ಲ. ಚೀಲದಲ್ಲಿ ತುಂಬಿಸಿ ನೆಲದಡಿಯಲ್ಲಿ ಹುಗಿದಿಡಲೂ ಆಗುವುದಿಲ್ಲ. ಇವೆಲ್ಲವೂ ಆಗಬೇಕಾದರೆ ವಾಮಮಾರ್ಗ ತುಳಿಯಬೇಕು. ಕೊಲೆ, ಸುಲಿಗೆ ಮಾಡಬೇಕು. ಅಧಿಕಾರದಲ್ಲಿದ್ದು ಲಂಚ ಪಡೆಯಬೇಕು. ಇಂಥವರ ಬಗ್ಗೆ ಮಾಧ್ಯಮಗಳಲ್ಲಿ ನೋಡಿದ್ದೇವೆ. ಪತ್ರಿಕೆಗಳಲ್ಲಿ ಓದಿದ್ದೇವೆ. ಈ ಎಲ್ಲ ಮಾರ್ಗಗಳಿಂದ ಹಣ ಶ್ರೀಮಂತಿಕೆಯನ್ನು ತಂದುಕೊಡಬಹುದು. ಆದರೆ ಶಾಶ್ವತ ನೆಮ್ಮದಿಯನ್ನಲ್ಲ.



ದುರ್ಮಾರ್ಗದಲ್ಲಿ ಗಳಿಸಿದ ಸಂಪತ್ತು ಆಪತ್ತಿಗೆ ಕಾರಣವಾಗುವುದರಿಂದ ಅವುಗಳ ಬಗ್ಗೆ ಮನಸ್ಸು ಮಾಡಬಾರದು. ಕ್ಲೇಶಕ್ಕೆ ಮೂಲವಾಗುವುದರಿಂದ ಸರ್ವಥಾ ಮನಸ್ಸು ಮಾಡಬಾರದು. ಪ್ರಸ್ತುತ ಶ್ಲೋಕದಲ್ಲಿ ಯಾವ ಬಗೆಯ ಸಂಪತ್ತನ್ನು ಕುರಿತು ಆಸೆ ಪಡಬಾರದು, ಮನಸ್ಸು ಮಾಡಬಾರದು ಎಂಬುದನ್ನು ಕುರಿತು ಕವಿಯು ಸೂಚಿಸುತ್ತಾನೆ. ಮೊದಲನೆಯದಾಗಿ ಆತ್ಮಕ್ಲೇಶದಿಂದ ಬರುವ ಸಂಪತ್ತಿನತ್ತ ಮನಸ್ಸು ಮಾಡಬಾರದು. ಅತಿಯಾದ ಕ್ಲೇಶದಿಂದ ಸಂಪತ್ತನ್ನು ಅಳಿಸಲು ಮುಂದಾದಾಗ ಸಾಕಷ್ಟು ಸವಾಲುಗಳಿರುತ್ತವೆ. ಅವನ್ನು ಅಷ್ಟೇ ಬಲವಾಗಿಸುತ್ತದೆ. ಸ್ವಲ್ಪ ಎಚ್ಚರ ತಪ್ಪಿದರೂ ಆಗುವ ನಷ್ಟ ತುಂಬಲಾರದ್ದಾಗುತ್ತದೆ. ಬೀಳುವ ಪೆಟ್ಟು ವಿಶುವವುದಕ್ಕೂ ಸಾಧ್ಯವಾಗದಂತಿರುತ್ತದೆ. ಜೀವಕ್ಕೆ ಅಪಾಯತರುವ ಆತ್ಮಕ್ಲೇಶಕರವಾದ ಸಂಪತ್ತನ್ನು ಗಳಿಸಿ ಶ್ರೀಮಂತನೆನಿಸಿಕೊಳ್ಳುವ ಹಂಬಲ ಸರ್ವಥಾ ಒಳ್ಳೆಯದಲ್ಲ. ಇಂತಹ ಕೆಲಸಗಳತ್ತ ಮನಸ್ಸು ಮಾಡಬಾರದು. ಎರಡನೆಯದಾಗಿ ಧರ್ಮದ ಮಾರ್ಗದಿಂದ ಸಂಪತ್ತು ಗಳಿಸಬೇಕೇ ವಿನಾ ಅಧರ್ಮ ಮಾರ್ಗದಿಂದ ಸಂಪತ್ತನ್ನು ಗಳಿಸಲು ಮನಸ್ಸು ಮಾಡಬಾರದು. ಅಧರ್ಮದ ಗಳಿಕೆ ಪಾಪಕರ. ಎಷ್ಟೋ ಜನರ ಮನಸ್ಸಿಗೆ ನೋವನ್ನುಂಟು ಮಾಡುತ್ತದೆ. ಜೀವನವನ್ನೇ ಘಾಸಿಗೊಳಿಸುತ್ತದೆ. ಇಂಥವರನ್ನು ಭಗವಂತನೂ ಮೆಚ್ಚಲಾರ. ಅವರತ್ತ ಸಂಪತ್ತನ್ನು ಮುಟ್ಟಲಾರ. ಪಾಪಿಯಾಗ್ನಾಗಿಸುವ ಅಧರ್ಮದ ಗಳಿಕೆ ಬದುಕನ್ನೇ ನರಕವನ್ನಾಗಿಸುತ್ತದೆ. ಹಣ ಗಳಿಕೆಗಾಗಿ ಇಂತಹ ಮಾರ್ಗದ ಆಯ್ಕೆ ಸಾಧುವಲ್ಲ. ಮೂರನೆಯದಾಗಿ ಶತ್ರುವಿಗೆ ಶರಣಾಗಿ ಬರುವ ಸಂಪತ್ತಿನತ್ತ ಮನಸ್ಸು ಮಾಡಬಾರದು. ಶತ್ರುವಿಗೆ ಶರಣಾದಾಗ ಆತನು ಸಂಪತ್ತನ್ನು ಕೊಡಬಹುದು. ಆದರೆ ಸ್ವಾಭಿಮಾನದ ಹರಣವಾಗುತ್ತದೆ. ಶತ್ರುವಿಗೆ ಶರಣಾಗುವುದು ಅಪಮಾನ. ಗೌರವಕ್ಕೆ ಧಕ್ಕೆ. ಬೆಲೆಯಿಲ್ಲದ ಅಸ್ತಿತ್ವವಾಗುತ್ತದೆ. ಶತ್ರುವು ಶರಣಾಗುವಂತೆ ಮಾಡಬೇಕೇ ವಿನಾ ಶತ್ರುವಿಗೆಂದೂ ಶರಣಾಗಬಾರದು. ಇಂತಹ ದೊಡ್ಡ ನಿರಭಿಮಾನ ಇನ್ನೊಂದಿಲ್ಲ. ಎಷ್ಟೇ ಸಂಪತ್ತು ಹರಿದು ಬರುವಂತಿದ್ದರೂ ಈ ಮೂರರತ್ತ ಮನಸ್ಸು ಮಾಡಬಾರದು.

ವಿಶುದ್ಧ ಚಕ್ರ ಮತ್ತು ನಾಯಕತ್ವ

ವಿಶುದ್ಧ ಚಕ್ರವು ಜಾಗೃತವಾಗಿ ಅದರ ಶಕ್ತಿಯೂ ಸೇರಿದರೆ ವ್ಯಕ್ತಿಯು ಜಗತ್ತಿಗೇ ಮಹಾನ್ ನಾಯಕನಾಗುತ್ತಾನೆ.

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ನಾಯಕತ್ವವು ನಿಮ್ಮ ಸಂವಹನದ ರೀತಿ, ಆಲೋಚನೆಗಳನ್ನು ನೀವು ಹೇಗೆ ಕಾರ್ಯರೂಪಕ್ಕೆ ತರುತ್ತೀರಿ ಎನ್ನುವ ವಿಶೇಷತೆ, ಇತರರ ಮೇಲೆ ನೀವು ಹೇಗೆ ಪ್ರಭಾವ ಬೀರಬಲ್ಲಿರಿ ಎನ್ನುವ ಕೌಶಲ್ಯ, ಜೊತೆಗೆ ನೀವು ತಂಡವನ್ನು ನಿಮ್ಮ ಮಾತಿನ ಶಕ್ತಿಯಿಂದ ಹೇಗೆ ಮುನ್ನಡೆಸಬಲ್ಲಿರಿ ಎನ್ನುವ ತಾಕತ್ತಿನ ಮೇಲೆ ಅವಲಂಬಿಸಿರುತ್ತದೆ. ಇವೆಲ್ಲವೂ ವಿಶುದ್ಧ ಚಕ್ರಕ್ಕೆ ಸಂಬಂಧಿಸಿದ ಸಂಗತಿಗಳು. ನೀವು ಕೇವಲ ಮುಖ್ಯಸ್ಥನಾಗಿ ಉಳಿಯದೇ ನಾಯಕರಾಗುತ್ತೀರಿ. ಸರ್ವ ಜನರು ರಾಗಿಯಾಗುತ್ತೀರಿ. ಅಧಿಕಾರಿಯಾಗಿರದೇ, ಕೇವಲ ರಾಜಕಾರಣಿಯಾಗಿರದೇ ಮುನ್ನಡೆಸುವ ಅಣ್ಣನಾಗುತ್ತೀರಿ.

ತಳಹದಿ; ಸ್ಪಷ್ಟತೆ ಮತ್ತು ಆತ್ಮವಿಶ್ವಾಸ

ನಾಯಕನಾದವರಿಗೆ ತಮ್ಮ ತಂಡವನ್ನು ಯಾವ ರೀತಿಯ ಮಾತುಗಳಿಂದ ಮುನ್ನಡೆಸಬೇಕು ಎನ್ನುವುದು ತಿಳಿದಿರಬೇಕು. ಯಾವಾಗ ಯಾವ ಧ್ವನಿ ಅವರಿಂದ ಬರಬೇಕು, ಅದು ಎಷ್ಟು ಪ್ರಮಾಣದಲ್ಲಿ ಇರಬೇಕು, ಯಾವಾಗ ತಾನೇ ಮುನ್ನುಗ್ಗಬೇಕು, ಯಾವಾಗ ತನ್ನ ತಂಡವನ್ನು ಮುಂದೆ ಹೋಗಲು ಬಿಡಬೇಕು ಹೀಗೆ ಎಲ್ಲವೂ ಸ್ಪಷ್ಟವಾಗಿರುವುದು ಮುಖ್ಯ. ಮಾತು ನಡೆ ಎರಡೂ ಸಮತೋಲನದಲ್ಲಿ ಇರಲು ವಿಶುದ್ಧ ಚಕ್ರವು ಉತ್ತೇಜನಗೊಂಡಾಗ ಮಾತ್ರ ಸಾಧ್ಯ. ಅಂತಹವರಿಗೆ ಮಾತು ಎಂತಹಾ ಸಂದಿಗ್ಧ ಪರಿಸ್ಥಿತಿಯಲ್ಲೂ ಹಿತಕರ ತಪ್ಪುವುದಿಲ್ಲ. ಸಾಯುವ ಕೊನೆಯ ಹಂತದಲ್ಲೂ ಕಮಾಂಡಿಂಗ್ ಇರುತ್ತದೆ. ಯಾವುದೇ ಗೊಂದಲಕ್ಕೆ ಅಸ್ಪದವೇ ಇರುವುದಿಲ್ಲ. ಅತ್ಯಂತ ಸ್ಪಷ್ಟವಾಗಿ, ಸ್ವಲ್ಪವೂ ತೊದಲದೇ ಗಟ್ಟಿಯಾದ ಧ್ವನಿಯಲ್ಲಿ ಆದೇಶ ಹೊಮ್ಮುತ್ತಿರುತ್ತದೆ. ಗಾಂಭೀರ್ಯ, ದೃಢತೆ ಎದುರಿನವರನ್ನು ಬೆಚ್ಚಿ ಬೀಳಿಸುವಂತೆ ಇರುತ್ತದೆ. ಅವರಲ್ಲಿ ತಾನಾಗಿಯೇ ಗೌರವ ಮತ್ತು ವಿಶ್ವಾಸ ಮೂಡುವಂತೆ ಆಗುತ್ತದೆ. ಎಷ್ಟೆಂದರೆ, ನಿಮಗೆ ಈಜು ಬರುತ್ತದೆಯೋ ಇಲ್ಲವೋ ಎಂದೂ ಸಹಾ ಆಲೋಚಿಸದೇ, ಅವರು ಆದೇಶ ನೀಡಿದರೆ ನೀವು ಭೋರ್ಗರೆಯುವ ನದಿಗೆ ಧುಮುಕಿ ಅಪತ್ತಿನಲ್ಲಿರುವವರನ್ನು ರಕ್ಷಣೆ ಮಾಡಬಲ್ಲಿರಿ.

ಮೂಲ ತತ್ತ್ವ: ಸತ್ಯ ಮತ್ತು ಪ್ರಾಮಾಣಿಕತೆ

ನೀವು ಸುಳ್ಳನ್ನೇ ಹೇಳುತ್ತಿದ್ದರೆ ಯಾರು ನಂಬುತ್ತಾರೆ? ನೀವು ನಿಮ್ಮ ತಂಡದವರಿಗೇ ತಪ್ಪು ದಾರಿ ಹೇಳಿದರೆ ಯಾರು ನಿಮ್ಮನ್ನು ಹೆಚ್ಚು ದಿನ ಉಳಿಯಿಸುತ್ತಾರೆ? ಮೋಸ ಮಾಡುತ್ತಿದ್ದರಂತೂ ನಿಮ್ಮನ್ನೇ ಹೊರಗೆ ಹಾಕುತ್ತಾರೆ. ನಿಮ್ಮ ವಿಶುದ್ಧ ಚಕ್ರ ಜಾಗೃತವಾಗಿದ್ದರೆ ನೀವು ಸತ್ಯವನ್ನು ಮಾತ್ರ ಹೇಳುತ್ತೀರಿ. ನಿಮ್ಮ ಬಳಿ ಎಂದಿಗೂ ಸುಳ್ಳು ಸುಳಿಯುವುದೇ ಇಲ್ಲ ಎಂದರೆ ನೀವು ಬಯಸಿದರೂ ಸುಳ್ಳನ್ನು ಹೇಳಲು ಆಗದು. ಅಷ್ಟೇ ಅಲ್ಲ ಇನ್ನೊಬ್ಬರು ಸುಳ್ಳನ್ನು ಹೇಳುತ್ತಿದ್ದರೆ ನಿಮಗೆ ತಕ್ಷಣ ಗೊತ್ತಾಗುತ್ತದೆ. ನೀವು ಅದನ್ನು ಅವರಿಗೆ ನೇರವಾಗಿಯಂತೆ ನಿಭಾಯಿಸಬಲ್ಲಿರಿ. ಅಥವಾ ಅವರ ಸ್ವಭಾವವನ್ನು ನೀವು ನಿರ್ಧರಿಸಬಲ್ಲಿರಿ.

ನೈತಿಕತೆ ಎನ್ನುವುದು ನಿಮ್ಮ ಗ್ರೇಡ್ ಆಗಿರುತ್ತದೆ. ಎಂತಹಾ ಸಮಯದಲ್ಲೂ ನೀವು ನೈತಿಕತೆಯನ್ನು ಬಿಟ್ಟುಕೊಡುವುದಿಲ್ಲ. ನೀತಿ ಎನ್ನುವುದು ನಿಮಗೂ ಹಾಗೂ ನಿಮ್ಮ ಶತ್ರುಗಳಿಗೂ ಒಂದೇ ಎನ್ನುವ ನಂಬಿಕೆ ನಿಮ್ಮದು. ನಿಮ್ಮ ಮಗನಿಗೂ, ನಿಮ್ಮ ತಂಡದ ಇನ್ನೊಬ್ಬ ಸದಸ್ಯನಿಗೂ ಒಂದೇ ಎನ್ನುವ ಸಮಾನತೆ ನಿಮ್ಮದು. ಸಾವನ್ನು ಎದುರಿಸುವ ಸಮಯ ಬಂದಾಗ ನೀವು ನಿಮ್ಮ ಮಗನನ್ನು ಮೊದಲಿಗೆ ಆಯ್ಕೆ ಮಾಡುತ್ತೀರೇ ವಿನಾ ಸಾಧಾರಣ ಸದಸ್ಯರನ್ನಲ್ಲ.

ಅಸ್ತ್ರ: ಪಾರದರ್ಶಕತೆ

ವ್ಯವಹಾರವು ತುಂಬಾ ಪಾರದರ್ಶಕವಾಗಿರಲು ವಿಶುದ್ಧ ಚಕ್ರವೇ ಕಾರಣ. ನಿಮಗೆ ಅದೊಂದು ಅಸ್ತ್ರವೂ ಹೌದು. ನಿಮ್ಮನ್ನು ಯಾರೂ ಪ್ರಶ್ನಿಸಲು ಅವಕಾಶವಿಲ್ಲದಂತೆ ನೀವು ಎಲ್ಲವನ್ನೂ ತೆರೆದಿಡುತ್ತೀರಿ. ತಂಡದೊಂದಿಗೆ ಹಂಚಿಕೊಳ್ಳುತ್ತೀರಿ. ಚರ್ಚಿಸುತ್ತೀರಿ. ಅವರ ಅಭಿಪ್ರಾಯಗಳಿಗೆ ಬೆಲೆ ಕೊಡುತ್ತೀರಿ. ಅವರ ಅಭಿಪ್ರಾಯಗಳನ್ನು ಪುನರ್ ವಿಮರ್ಶೆ ಮಾಡುತ್ತೀರಿ. ಸೂಕ್ತ ಎನಿಸಿದರೆ ಪರಿಗಣಿಸುತ್ತೀರಿ. ನೀವು ನಿಮ್ಮ ಕೌಶಲ್ಯದಿಂದ ಅದನ್ನು ಇನ್ನಷ್ಟು ಪಾಲಿಶ್ ಮಾಡುತ್ತೀರಿ. ಮತ್ತು ಕೊನೆಯಲ್ಲಿ ಅದರ ಎಲ್ಲಾ ಹಕ್ಕು ಮತ್ತು ಯಶಸ್ಸಿನ ಪಾಲನ್ನು ಅಭಿಪ್ರಾಯ ಕೊಟ್ಟವರಿಗೆ ನೀಡುತ್ತೀರಿ. ಕೆಲವೊಮ್ಮೆ ಎಲ್ಲಾ ಪ್ಲಾನ್ ನಿಮ್ಮದೊಬ್ಬರದೇ ಆಗಿದ್ದರೂ, ನೀವು ಅದನ್ನು ತಂಡದವರೊಂದಿಗೆ ಹಂಚಿಕೊಳ್ಳುತ್ತೀರಿ ಮತ್ತು ಅದನ್ನು ತಂಡದ ಯಶಸ್ಸು ಎಂದೇ ಹೇಳುತ್ತೀರಿ. ಕಾರಣ ನೀವೊಬ್ಬ ವಿಶುದ್ಧ ಚಕ್ರ ಜಾಗೃತರಾದ ನಾಯಕ. ನಾಯಕರು ಬರೀ ದರ್ಪದ ಆದೇಶವನ್ನು ನೀಡುತ್ತಿದ್ದರೆ ಅವರ ಮೇಲಿನ ವಿಶ್ವಾಸ ಕ್ರಮೇಣ ಕಡಿಮೆಯಾಗುತ್ತಾ ಬರುತ್ತದೆ. ಅದರಿಂದ ರಾಜನಾಗುವ ಅರ್ಹತೆಯನ್ನು ಕಳೆದುಕೊಳ್ಳುತ್ತಾರೆ. ನೀವು ಇತರರ ಅಳಲನ್ನು, ನೋವನ್ನು ಸಮಸ್ಯೆಗಳನ್ನು ಕೇಳುವವರಾಗಿರಬೇಕು. ಅವರು ಬಾಯಿಬಿಟ್ಟು ಹೇಳಬಹುದು ಅಥವಾ ಹೇಳದೇ ಮೌನವಾಗಿ ನುಂಗಿಕೊಂಡಿರಬಹುದು. ಅದನ್ನು ಆಲಿಸುವ ಸಾಮರ್ಥ್ಯ ನಿಮ್ಮದಾಗಿರಬೇಕು. ನಿಮ್ಮ ತಂಡದ ಪ್ರತಿಯೊಬ್ಬರ ಬದುಕಿನ ಕಥೆಗಳನ್ನು ನೀವು ತಿಳಿದುಕೊಂಡಿರಬೇಕು. ಅವರ ವ್ಯಕ್ತಿತ್ವ, ನಡೆ ಮತ್ತು ವರ್ತನೆಗಳನ್ನು ಅಭ್ಯಾಸ ಮಾಡಿರಬೇಕು. ವಿಶುದ್ಧ ಚಕ್ರವು ಕಿವಿಯವರೆಗೂ ವ್ಯಾಪಿಸಿದೆ. ಹಾಗಂತಾ ನೀವು ಹಿತ್ತಾಳೆ ಕಿವಿಯವರಾದರೆ, ನಿಮ್ಮ ವಿಶುದ್ಧ ಚಕ್ರ ಸಂವಹನ ಹಳಿ ತಪ್ಪಿದೆ ಎಂದರ್ಥ.

ನಿಮ್ಮ ಸಹೋದ್ಯೋಗಿಗಳ ಮತ್ತು ಸಾರ್ವಜನಿಕರ ಸಮಸ್ಯೆಗಳನ್ನು ತಾಳ್ಮೆಯಿಂದ ಕೇಳುವುದು ಬಹು ಮುಖ್ಯ. ನಿಮ್ಮ ಬಳಿ ಅದಕ್ಕೆ ಪರಿಹಾರ ಇಲ್ಲದೇ ಇರಬಹುದು ಅಥವಾ ನಿಮಗೆ ಪರಿಹಾರ ನೀಡಲು ಸಮಯದ ಅಭಾವ, ಹಣದ ಅಭಾವ ಅಥವಾ ಯಾವುದೇ ತರಹದ ಕೊರತೆಗಳು ಇರಬಹುದು. ಆದರೂ ನೀವು ಅವರ ಮಾತುಗಳನ್ನು ಕೇಳಿಸಿಕೊಳ್ಳುವುದು ಮತ್ತು ಅದಕ್ಕೆ ತಕ್ಷಣದ ಯಾವುದೋ ಒಂದು ಉತ್ತರ ನೀಡುವುದು ಮುಖ್ಯ. ನಿಮ್ಮ ಉತ್ತರದಿಂದ ಅವರಿಗೆ ಎಳ್ಳಷ್ಟಾದರೂ ಸಮಾಧಾನವಾಗುವುದು ಮುಖ್ಯ. ಎಲ್ಲರ ಆಲೋಚನೆಗಳನ್ನು ಸಮನಾಗಿ ಆಲಿಸುವುದು ಮತ್ತು ಕೊನೆಯಲ್ಲಿ ಸೂಕ್ತವಾದ ನಿರ್ಧಾರವನ್ನು ತೆಗೆದುಕೊಳ್ಳುವುದು ನಾಯಕನಾದವನಿಗೆ ಮಾತ್ರ ಸಾಧ್ಯ. ನಿಮ್ಮ ನಿರ್ಧಾರ ಮತ್ತು ಅತ್ಯಂತ ಸೂಕ್ತ ವಾಗಿರಬೇಕು. ಒಂದು ವ್ಯವಸ್ಥಿತ ನಿರ್ಧಾರ ಮಾತ್ರ ನಿಮ್ಮ ನಾಯಕತ್ವವನ್ನು ಸದಾ ಉಳಿಸುತ್ತದೆ. ಅದರಲ್ಲಿ ಮುಂದಾಲೋಚನೆ ಹಾಗೂ ಸಾರ್ವಜನಿಕ ಹಿತಾಸಕ್ತಿ ಇರುವುದು ಅಗತ್ಯ. ಅದು ತಕ್ಷಣದಲ್ಲಿ ಜನಸಾಮಾನ್ಯರಿಗೆ ಅರ್ಥವಾಗದಿದ್ದರೂ, ಮುಂದೆ ಅವರೇ ನಿಮ್ಮನ್ನು ನಿಮ್ಮ ನಿರ್ಧಾರಕ್ಕಾಗಿ ಬೆಂಬಲಿಸುತ್ತಾರೆ.

ಪ್ರೇರಣೆ ಮತ್ತು ಪ್ರೋತ್ಸಾಹ

ನಾಯಕರು ಸದಾ ಉತ್ಸಾಹದಿಂದ ಇರಬೇಕೆಂಬುದು ಒಂದು ನಿಯಮ. ನಾಯಕರು ಉತ್ಸಾಹದಿಂದ ಇದ್ದರೆ ಅವರ ತಂಡ ಸದಾ ಇನ್ನಷ್ಟು ಉತ್ಸಾಹದಿಂದ ಕೆಲಸ ಮಾಡಲು ಸಾಧ್ಯ. ನಾಯಕರು ತನ್ನ ತಂಡವನ್ನು ಹುರಿದುಂಬಿಸುತ್ತಾ ಇದ್ದರೆ, ತಂಡದ ಸಾಮಾನ್ಯ ವ್ಯಕ್ತಿಯೂ ಸಹಾ ತನ್ನ ಶಕ್ತಿ ಮೀರಿ ಕೆಲಸ ಮಾಡಬಲ್ಲ. ನಾಯಕರು ತನ್ನ ಮಾತಿನ ಮೂಲಕ ತಂಡದ ನಿರಾಶೆಯನ್ನು ಹೋಗಲಾಡಿಸಬಲ್ಲ, ಭರವಸೆಯನ್ನು ಮೂಡಿಸಬಲ್ಲ. ಬುದ್ಧಿಗೆ ತಲುಪುವ ಮಾತುಗಳು ತಾತ್ಕಾಲಿಕವಾದ ಆಲೋಚನೆಗಳನ್ನು ಹುಟ್ಟಿಸಬಹುದು. ಹಾಗೂ ಬುದ್ಧಿಜೀವಿಗಳು ಮಾತ್ರ ಅದನ್ನು ಸ್ವೀಕರಿಸುತ್ತಾರೆ. ಮತ್ತು ಅದರ ವಿಮರ್ಶೆ ಮತ್ತು ವಿಶ್ಲೇಷಣೆಗೆ ತೊಡಗುತ್ತಾರೆ. ಅದೇ ಭಾವನೆಗೆ ತಲುಪುವ ಮಾತುಗಳು ಕ್ರಾಂತಿಯನ್ನೇ ಉಂಟು ಮಾಡುತ್ತವೆ. ಹೊಸ ಚಳುವಳಿಗಳಿಗೆ ಕಾರಣವಾಗುತ್ತವೆ. ಜನಸಾಮಾನ್ಯರು ಅದನ್ನು ಅರ್ಥ ಮಾಡಿಕೊಳ್ಳುತ್ತಾರೆ ಮತ್ತು ಹಿಂದೆ ಮುಂದೆ ನೋಡದೇ ಅನುಸರಿಸುತ್ತಾರೆ. ಜನರ ಕಷ್ಟ ಸುಖಗಳನ್ನು ತನ್ನದೇ ಎನ್ನುವಂತೆ ಭಾವಿಸಿ ಮಾತನಾಡುವ ನಾಯಕರನ್ನು ಎಲ್ಲರೂ ಅನುಸರಿಸುತ್ತಾರೆ. ತಮ್ಮ ಪ್ರಾಣವನ್ನೇ ಕೊಡಲು ಸಿದ್ಧರಾಗುತ್ತಾರೆ. ಮಾತು ಎನ್ನುವುದು ಶಕ್ತಿಯ ಅಲುಗಿನಂತೆ; ಅಹಂಕಾರದಿಂದ ಆಡಿದರೆ ಕತ್ತು ಹಾರುತ್ತದೆ, ವಿನಮ್ರತೆಯಿಂದ ಆಡಿದರೆ ಕತ್ತು ಮೇಲೇರುತ್ತದೆ.

ಧ್ವನಿಮಾ ವ್ಯವಸ್ಥೆ

ಮನುಷ್ಯರು ಹೊರಡಿಸುವ ಧ್ವನಿಮಾಗಳು ಮುಖ್ಯವಾಗಿ ಕಂಠ್ಯಗಳು. ಶ್ವಾಸಕೋಶದಿಂದ ಬರುವ ಗಾಳಿಯ ಕಂಪನದಿಂದಲೇ ಹುಟ್ಟುತ್ತವೆ. ವಿಶುದ್ಧ ಚಕ್ರದ ಜಾಗವೇ ಧ್ವನಿ ಉತ್ಪಾದನಾ ಕೇಂದ್ರ. ಹೀಗಾಗಿ ವಿಶುದ್ಧ ಚಕ್ರವು ಸಮತೋಲನದಲ್ಲಿ ಇದ್ದಾಗ ಮಾತ್ರ ಖಚಿತ ಧ್ವನಿಮಾಗಳು ಅಂದರೆ ಸ್ವರ ವ್ಯಂಜನಗಳು ಸ್ಪಷ್ಟವಾಗಿ ಹೊರಹೊಮ್ಮುತ್ತವೆ. ಗಂಟಲಿನ ಸ್ನಾಯುಗಳು ಮತ್ತು ಧ್ವನಿ ತಂತುಗಳು ಆರೋಗ್ಯವಾಗಿದ್ದಾಗ ಕರಾರುವಾಕ್ಕಾಗಿ ಪದಗಳು ಹೊರಹೊಮ್ಮುತ್ತವೆ. ಹಾಗೂ ಅಖಂಡ ಧ್ವನಿಮಾಗಳಿಂದ ಧ್ವನಿ ತರಂಗಗಳು, ಏರಿಳಿತಗಳು ಲಯ ತಪ್ಪುವುದಿಲ್ಲ. ನಿಮ್ಮ ಮಾತಿನ ಭಾವನೆಗಳು, ಒತ್ತು, ಶೈಲಿ ಎಲ್ಲಾ ತಪ್ಪುವುದಿಲ್ಲ. ವಿಶುದ್ಧ ಚಕ್ರದ ಆಧ್ಯಾತ್ಮಿಕ ಬಲದಿಂದ ನಾಯಕನ ಧ್ವನಿಯಲ್ಲಿನ ಗಾಂಭೀರ್ಯ, ಕರುಣೆ ಮತ್ತು ಆಜ್ಞೆಗಳು ನಿಖರವಾಗಿ ಹೊಮ್ಮುತ್ತವೆ.

ಧ್ವನಿಮಾ ವ್ಯವಸ್ಥೆಯು ಶ್ವಾಸಕೋಶದ ಗಾಳಿಗೆ ಅಕ್ಷರ ರೂಪವನ್ನು ನೀಡುತ್ತದೆ. ಆ ಅಕ್ಷರಗಳಿಗೆ ಜೀವ ಕೊಡುವುದು ವಿಶುದ್ಧ ಚಕ್ರ. ನಿಮ್ಮ ಮನಸ್ಸಿನ ಕಲ್ಪನೆಗಳೆಲ್ಲವೂ ಕಠಿಣ ಹೊರಬರುವ ಧ್ವನಿಮಾಗಳು ಕರುಣೆ, ಸತ್ಯ ಮತ್ತು ಪ್ರೇಮದಿಂದ ತುಂಬಿರುತ್ತವೆ. ಅಂತಹಾ ಧ್ವನಿಯು ಕೇಳುಗರಲ್ಲಿ ಸಕಾರಾತ್ಮಕ ಭಾವಗಳನ್ನು ಉತ್ತೇಜಿಸುತ್ತವೆ. ವ್ಯಕ್ತಿಗೆ ಧ್ವನಿಮಾಗಳ ಜ್ಞಾನ ಮತ್ತು ಅದರ ಮೇಲೆ ಹಿಡಿತವಿದ್ದರೆ ಆತ ಭಾಷಾ ಪಂಡಿತನಾಗುತ್ತಾನೆ. ಅದರೊಂದಿಗೆ ವಿಶುದ್ಧ ಚಕ್ರದ ಶಕ್ತಿಯೂ ಸೇರಿದರೆ ಜಗತ್ತಿಗೇ ಮಹಾನ್ ನಾಯಕನಾಗುತ್ತಾನೆ. ಧ್ವನಿಮಾ ವ್ಯವಸ್ಥೆಯು ಮಾತಿನ ದೇಹವಾದರೆ, ವಿಶುದ್ಧ ಚಕ್ರವು ಅದರ ಆತ್ಮ.

ವೈದ್ಯಕೀಯ ಜಾಗೃತಿ ಅವಶ್ಯ

ಒಳನೋಟ
• ಹೆ.ಬಾ. ಮಲ್ಯ



ನಾವು ಚಿಕ್ಕವರಿದ್ದಾಗ ಅಂದರೆ ಆರೇಳು ದಶಕಗಳ ಹಿಂದೆ ಇಂದಿನಂತೆ ಹೈಟೆಕ್ ಚಿಕಿತ್ಸಾಲಯಗಳಾಗಲಿ, ಎಂ.ಬಿ.ಬಿ.ಎಸ್., ಎಂ.ಡಿ. ಕಲಿತ ವೈದ್ಯರಾಗಲೀ ಹೆಚ್ಚಿನ ಸಂಖ್ಯೆಯಲ್ಲಿರಲಿಲ್ಲ. ನಗರಗಳಲ್ಲಷ್ಟೇ ಕೆಲವು ದೊಡ್ಡ ಆಸ್ಪತ್ರೆಗಳು, ಎಂ.ಬಿ.ಬಿ.ಎಸ್. ವೈದ್ಯರಿದ್ದರು. ನಾವಿದ್ದಂಥ ಚಿಕ್ಕ ಹಳ್ಳಿಗಳಲ್ಲಿ L.I.M. (Licentiate In Medicine) ಪದವಿ ಹೊಂದಿದ ಒಬ್ಬರು ವೈದ್ಯರಿರುತ್ತಿದ್ದರು. ವಿಶೇಷವಾಗಿ ಆಯುರ್ವೇದ ಪಂಡಿತರು ಹಾಗೂ ನಾಟಿ ಔಷಧಿ ಕೊಡುವ ವೈದ್ಯರಿರುತ್ತಿದ್ದರು. ಅಗಲೂ ಖಾಯಿಲೆಗಳು ಬರುತ್ತಿದ್ದುವು. ರೋಗಗಳಿಂದ ಜನ ಸಾಯುತ್ತಲೂ ಇದ್ದರು. ಆಗ ನಂಬಿಕೆಯ ಕಾಲ. ರೋಗಿಗಳಿಗೆ ಪಂಡಿತರು, ವೈದ್ಯರ ಬಗ್ಗೆ ಪೂರ್ಣ ವಿಶ್ವಾಸವಿರುತ್ತಿತ್ತು. ಆ ನಂಬಿಕೆಯೇ ಅನೇಕ ರೋಗಿಗಳ ಖಾಯಿಲೆಯನ್ನು ವಾಸಿ ಮಾಡುತ್ತಿತ್ತು. ಅದನ್ನು ವೈದ್ಯರ 'ಕೈಗುಣ' ಎನ್ನುತ್ತಿದ್ದರು. ಈಗಿನಂತೆ ವೈದ್ಯರು ರೋಗಿಗಳಲ್ಲಿ ಭಯ ಹುಟ್ಟಿಸುತ್ತಿರಲಿಲ್ಲ. ಪ್ರೀತಿಯಿಂದ ಮಾತನಾಡಿ ರೋಗಿಗಳಲ್ಲಿ ಧೈರ್ಯ, ವಿಶ್ವಾಸ ತುಂಬುತ್ತಿದ್ದರು. 'ದೇವರ ದಯೆಯಿಂದ ನಿಮ್ಮ ಖಾಯಿಲೆ ಗುಣವಾಗುತ್ತದೆ' ಎಂದು ವಿಶ್ವಾಸ ತುಂಬುತ್ತಿದ್ದರು. ಹಾಗಾಗಿ ಆಗಲೂ ಜನ ಚಿಕಿತ್ಸೆ ಪಡೆದ ಮೇಲೂ ಸಾಯುತ್ತಿದ್ದರು. ಅಂದಿನ ರೋಗಗಳು, ಅವುಗಳ ಲಕ್ಷಣಗಳೂ ಬೇರೆ. ಇಂದಿನ ರೋಗಗಳ ಲಕ್ಷಣಗಳೇ ಬೇರೆ. ಅಂದು ಆಯುರ್ವೇದ ಪಂಡಿತರು, ನಾಟಿ ಔಷಧಿ ನೀಡುವವರ ಔಷಧಿಗಳು ಪ್ರಕೃತಿ ನಿಯಾದರ್ಶಕವಾಗಿರುವುವು. ಬೇರು, ನಾರು, ವಿವಿಧ ಬಗೆಯ ಸೊಪ್ಪುಗಳು, ವನಸ್ಪತಿಗಳು ಔಷಧಿ ತಯಾರಿಯಲ್ಲಿ ಉಪಯೋಗಿಸಲ್ಪಡುತ್ತಿದ್ದುವು. ಇಂದಿನಂತೆ ಮಾನವ ತಯಾರಿಸಿದ, ರಾಸಾಯನಿಕ, ಸ್ಟಿರಾಯಿಡ್ ಬಳಸಿದ ಔಷಧಿಗಳು ಇರಲಿಲ್ಲ. ಆಯುರ್ವೇದ, ನಾಟಿ ಔಷಧಿಗಳಿಂದ ಪಾರ್ಶ್ವ ಪರಿಣಾಮ (Side effects) ಇರುತ್ತಿರಲಿಲ್ಲ.

ರಾಸಾಯನಿಕ ಮಿಶ್ರಿತ ಔಷಧಿಗಳಿಂದ ಪಾರ್ಶ್ವ ಪರಿಣಾಮಗಳಿವೆ. ಖಾಯಿಲೆಗಳು ತಾತ್ಕಾಲಿಕವಾಗಿ ವಾಸಿಯಾದರೂ ದೀರ್ಘಾವಧಿಯಲ್ಲಿ ರಾಸಾಯನಿಕಗಳು ಹೃದಯ, ಮೂತ್ರಪಿಂಡ, ಪಿತ್ತಕೋಶ, ಕರುಳು ಜಠರಗಳ ಮಂಗಿಸಲಿ ಭಾಗಗಳಲ್ಲಿ ನೆಲೆಯಾಗಿ, ಹೃದಯಾಘಾತ, ಮೂತ್ರಪಿಂಡ ವೈಫಲ್ಯ ತತ್ಪರಿಣಾಮವಾಗಿ ಡಯಾಲಿಸಿಸ್, ಕೀಮೋಥೆರಪಿ, ರೇಡಿಯೇಶನ್ ಚಿಕಿತ್ಸೆಯಿಂದ ಕ್ಯಾನ್ಸರ್ ಇತ್ಯಾದಿಗಳಿಗೆ ಕಾರಣವಾಗುತ್ತವೆ. ಹಿಂದೆ ಸಹಜವಾಗಿ ಹೆರಿಗೆಯಾಗುತ್ತಿದ್ದರೆ ಇಂದು ಮಾತ್ರೆಗಳಿಂದ ಸಿಜೇರಿಯನ್ ಹೆರಿಗೆ ಹೆಚ್ಚಾಗುತ್ತಿದೆ. ಹುಟ್ಟುವ ಘಳಿಗೆ ಈಗ ದೇವರು ನಿರ್ಧರಿಸುವ ಬದಲು ವೈದ್ಯರೇ ನಿರ್ಧರಿಸುತ್ತಾರೆ. ಸಾಯುವ ಕ್ಷಣವನ್ನೂ ಕೂಡ. ಇನ್ನೇನು ಸಾಯುವುದು ನಿಶ್ಚಿತ ಎಂದಾಗ ವೆಂಟಿಲೇಟರ್, ಮಾಸ್ಕ್ ಹಾಕುತ್ತಾರೆ. ವಿದೇಶದಲ್ಲಿರುವ ಮಕ್ಕಳು ಬರುವವರೆಗೆ ಕೃತಕ ಶ್ವಾಸಕ್ರಿಯೆ (ಆಕ್ಸಿಜನ್) ಮಾಸ್ಕ್‌ನಲ್ಲಿರಿಸುತ್ತಾರೆ. ಮಕ್ಕಳು ಬಂದ ನಂತರ ಆಕ್ಸಿಜನ್ ಮಾಸ್ಕ್ ತೆಗೆಯುತ್ತಾರೆ. ಐಸ್‌ಬಾಕ್ಸ್‌ನಲ್ಲಿಡುವುದರಿಂದ ಹಣ ಬೇಗನೇ ಕೊಳೆಯುವುದಿಲ್ಲ. I.C.U. ವೆಚ್ಚ, ಸ್ಪೆಶಲ್ ವಾರ್ಡ್ ಬಾಡಿಗೆ, ತುಟ್ಟಿ ಔಷಧಿಗಳ ವೆಚ್ಚ ಹತ್ತಾರು ಲಕ್ಷಗಳಲ್ಲಿರುತ್ತದೆ. ಶ್ರೀಮಂತ ರೋಗಿಗಳಿಗೆ ಪರವಾಗಿಲ್ಲ. ಬಡರೋಗಿಗಳಿಗೆ ಈ ಅಪಾರ ವೆಚ್ಚವನ್ನು ಭರಿಸುವುದು ಕಷ್ಟ. ಅಂಥವರು ಈ ಕಾರಣಕ್ಕಾಗಿಯೇ ಜ್ಯೋತಿಷಿಗಳು, ಭೂತ, ನಾಗ, ದೈವ, ದೇವರುಗಳ ಮೊರೆ ಹೋಗುತ್ತಾರೆ. ಪೂಜೆ, ಯಾಗ, ಹೋಮಗಳಿಗೆ ಮೊರೆ ಹೋಗುತ್ತಾರೆ.

ಇಂದು ವೈದ್ಯಕೀಯ ಕ್ಷೇತ್ರದ ವ್ಯಾಪಾರೀಕರಣವಾಗಿದೆ. ಹಿಂದೆ ಆಹಾರ, ಆರೋಗ್ಯ (ವೈದ್ಯ), ಅಕ್ಷರ (ವಿದ್ಯೆ) ಈ ಮೂರು ಮಾರಾಟದ ವಸ್ತುಗಳಾಗಿರಲಿಲ್ಲ, ಇವುಗಳ ವಿನಿಮಯಕ್ಕೆ ಹಣ ಅಗತ್ಯವಾಗಿರಲಿಲ್ಲ, ಸೇವೆಯಾಗಿ ನೀಡಲಾಗುತ್ತಿತ್ತು. ರೋಗಿಗಳು ಕೊಟ್ಟಷ್ಟರಲ್ಲೇ ತೃಪ್ತಿಪಟ್ಟುಕೊಳ್ಳುತ್ತಿದ್ದರು. ಹಳ್ಳಿಗಳಲ್ಲಿ ಅತಿಥಿ ಸತ್ಕಾರದ ಶ್ರೇಷ್ಠ ಪರಂಪರೆ ಇದ್ದುದರಿಂದ ಹೋಟೆಲುಗಳ ಸಂಖ್ಯೆ ಕಡಿಮೆ ಇತ್ತು. ಗುರುಕುಲಗಳಲ್ಲಿ ಶುಲ್ಕವಿರುತ್ತಿರಲಿಲ್ಲ. ಗುರುದಕ್ಷಿಣೆ, ಪೋಷಕರು ನೀಡುವ ಅಕ್ಕಿ, ಬೇಳೆ, ತರಕಾರಿಗಳಿಂದ ಗುರುಗಳು ತೃಪ್ತಿ ಪಡುತ್ತಿದ್ದರು. ಇಂದು ಈ ಮೂರು ಕ್ಷೇತ್ರಗಳೂ ವ್ಯಾಪಾರೀಕರಣಗೊಂಡು ಕೋಟ್ಯಂತರ ರೂಪಾಯಿ ಲಾಭ ಗಳಿಸುವ ದಂಧೆಗಳಾಗಿವೆ. ಪಂಚತಾರಾ ಹೊಟೇಲುಗಳು, ಹೈಟೆಕ್ ಆಸ್ಪತ್ರೆಗಳು, ಲಕ್ಷಾಂತರ ರೂಪಾಯಿ ಶುಲ್ಕ ತೆಗೆದುಕೊಳ್ಳುವ ಖಾಸಗಿ ವಿದ್ಯಾಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿವೆ. ಸರ್ಕಾರಿ ಶಾಲೆಗಳ ದುರವಸ್ಥೆ ಬಗ್ಗೆ ಎಲ್ಲರಿಗೂ ತಿಳಿದೇ ಇದೆ.

ಹಿಂದೆ 'ಅತಿಥಿದೇವೋಭವ' ಎಂಬುದು ಕೇವಲ ಘೋಷಣೆಯಾಗಿರಲಿಲ್ಲ. ಅದೇರೀತಿ 'ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರ' ಎಂಬ ಭಾವನೆಯಿತ್ತು. 'ವೈದ್ಯೋ ನಾರಾಯಣೋ ಹರಿಃ' ಎಂಬ ಉಕ್ತಿಯನ್ನು ನಾವೆಲ್ಲ ಕೇಳಿರಬಹುದು. ಈಗ ವೈದ್ಯಲೋಕದ ಬಗ್ಗೆ ಈ ರೀತಿ ವಿಡಂಬನಾತ್ಮಕವಾಗಿ ಹೇಳಲಾಗುತ್ತಿದೆ.

ವೈದ್ಯರಾಜ ನಮಸ್ತುಭ್ಯಂ ಯಮರಾಜ ಸಹೋದರ॥
ಯಮಸ್ತು ಹರತಿ ಪ್ರಾಣಾನ್ ವೈದ್ಯಃ ಪ್ರಾಣಾನ್ ಧನಾನಿಚ॥

''ವೈದ್ಯರಾಜನಿಗೆ ನಮಸ್ಕಾರ, ಆತ ಯಮರಾಜನ ಸಹೋದರ, ಯಮ ಪ್ರಾಣವನ್ನು ಮಾತ್ರ ಕೊಂಡೊಯ್ಯುತ್ತಾನೆ. ವೈದ್ಯ ಪ್ರಾಣದೊಂದಿಗೆ ಧನವನ್ನೂ ಅಪಹರಿಸುತ್ತಾನೆ''

ಇದನ್ನು ಯಾವನೋ ಬಡವ್ಯಕ್ತಿ, ಇಂದಿನ ವೈದ್ಯಕೀಯ ವೆಚ್ಚವನ್ನು ಭರಿಸಲಾಗದೆ ತನ್ನ ಸಂಬಂಧಿಕನ ಪ್ರಾಣ ಉಳಿಸಲಾಗದೇ ಹೋದ ಸಂದರ್ಭದಲ್ಲಿ ರಚಿಸಿದ ವಿಡಂಬನಾತ್ಮಕ ಶ್ಲೋಕವಿರಬಹುದು. ಆದರೆ ಇದೇ ಸತ್ಯವಲ್ಲ. ತುಂಬ ಮಂದಿ ಶ್ರೇಷ್ಠ ಪ್ರಾಮಾಣಿಕ ವೈದ್ಯರು ಇಂದಿಗೂ ಇದ್ದಾರೆ. ಉಚಿತ ಚಿಕಿತ್ಸೆ ನೀಡುವ ವೈದ್ಯರು, ಚಿಕಿತ್ಸಾಲಯಗಳೂ ಬೇಕಾದಷ್ಟು ಇವೆ. ಅದನ್ನು ಕಡೆಗಣಿಸಲಾಗದು.

ಇಲ್ಲಿ ಇನ್ನೊಂದು ವಿಷಯವನ್ನು ಪ್ರಸ್ತಾಪಿಸುವುದು ಸೂಕ್ತವೆನಿಸುತ್ತದೆ. ಈಗ ಔಷಧ ಕ್ಷೇತ್ರದಲ್ಲಿ, ಚಿಕಿತ್ಸಾ ವ್ಯವಸ್ಥೆಯಲ್ಲಿ ಬಹಳ ಉತ್ತಮ ಬೆಳವಣಿಗೆಯಾಗಿರುವುದನ್ನೂ ಕಡೆಗಣಿಸಲಾಗದು. ಹಲವಾರು ಮಾರಕ ಖಾಯಿಲೆಗಳಿಗೆ ಈಗ ಚಿಕಿತ್ಸೆ ಕಂಡುಹಿಡಿಯಲಾಗಿದೆ. ರೋಗ ಪತ್ತೆ ಹಚ್ಚುವ ತಂತ್ರಜ್ಞಾನದಲ್ಲೂ ಬಹಳಷ್ಟು ಅಭಿವೃದ್ಧಿಯಾಗಿದೆ. ಎಕ್ಸ್‌ರೇ, ಎಂ.ಆರ್.ಐ., ಎಂಡೋಸ್ಕೋಪಿ ಮುಂತಾದ ಆಧುನಿಕ ವೈದ್ಯಕೀಯ ಪರಿಕರಗಳು ಲಭ್ಯ ಇವೆ. ಅದೇ ರೀತಿ ಶಸ್ತ್ರಚಿಕಿತ್ಸೆಗಳು ಕೂಡಾ ಈಗ ಹಿಂದಿನಂತೆ ಕಠಿಣವೆನಿಸಿಲ್ಲ. ಕಂಪ್ಯೂಟರ್ ಹಾಗೂ ಇನ್ನಿತರ ಉಪಕರಣಗಳ ಸಹಾಯದಿಂದ ಶಸ್ತ್ರಚಿಕಿತ್ಸೆ ಪರಿಣಾಮಕಾರಿ ಎನ್ನುವಂತಾಗಿದೆ.

ವೈದ್ಯಕೀಯ ಕ್ಷೇತ್ರದ ಕೆಲವು ಋಣಾತ್ಮಕ ಅಂಶಗಳಿಗೆ ಕೆಲವು ಔಷಧಿ ಕಂಪೆನಿಗಳು, ವಿಶೇಷವಾಗಿ ಅಮೆರಿಕಾದಲ್ಲಿನ ಕೆಲವು ಬೃಹತ್ ಕಂಪೆನಿಗಳ ಲಾಬಿಯೂ ಇರುವುದೂ ಸತ್ಯ. ಈಗ ಜಾಹೀರಾತು ಕ್ಷೇತ್ರ ಬಹಳ ಉಚ್ಛ್ರಾಯ ಸ್ಥಿತಿಯಲ್ಲಿದೆ. ಜನ ದೇಶಿ ವೈದ್ಯರ ಹಿರಿಯರ, ಅನುಭವದ ಮಾತನ್ನು ನಂಬುವುದಕ್ಕಿಂತ ಜಾಹೀರಾತಿನ ಅಬ್ಬರದ ಪ್ರಚಾರವನ್ನೇ ಮೂರ್ಖರಂತೆ ಅತಿಯಾಗಿ ನಂಬುತ್ತಾರೆ. ಕರಾವಳಿಯವರಂತ ಸಾವಿರಾರು ವರ್ಷಗಳಿಂದ ಕೊಬ್ಬರಿ ಎಣ್ಣೆ ಗೃಹ ಬಳಕೆ ವಸ್ತುವಾಗಿದೆ. ಆದರೆ ಪಾಮೋಲಿನ್ ಎಣ್ಣೆಯ ಪ್ರಚಾರಕ್ಕಾಗಿ, ಕೊಬ್ಬರಿ ಎಣ್ಣೆಯಿಂದ ಕೊಲೆಸ್ಟ್ರಾಲ್ ಹೆಚ್ಚಾಗಿ ಹೃದಯಾಘಾತ ಕಾರಣವಾಗುತ್ತದೆ ಎಂಬ ಅಪಪ್ರಚಾರ ಮಾಡಲಾಯಿತು. ಆದರೆ ಈಗ ಕರಾವಳಿಯ ಜನರಿಗೆ ಈ ಮೋಸ ಅರಿವಾಗಿದೆ. 2021ರ ಕೊರೋನಾ ಸಂದರ್ಭದಲ್ಲಿ ಭಾರತದ ವಿಜ್ಞಾನಿಗಳು ಉತ್ತಮ ಔಷಧವನ್ನು ಕಂಡು ಹಿಡಿದಿದ್ದರ ಪರಿಣಾಮವಾಗಿ ಕೊರೋನಾ ಸಾವಿನ ಸಂಖ್ಯೆ ಭಾರತದಲ್ಲಿ ಕಡಿಮೆ ಆಯಿತು. ಇತ್ತೀಚಿನ ದಿನಗಳಲ್ಲಿ ಜನರಲ್ಲಿ ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಯೋಗ, ಪ್ರಾಣಾಯಾಮಗಳಿಂದ, ಉತ್ತಮ ದೇಶಿ ಆಹಾರ, ಸೊಪ್ಪು, ತರಕಾರಿ, ವನಸ್ಪತಿ ಔಷಧಿ ಗಿಡಗಳಿಂದ, ಯೋಗ್ಯ ಜೀವನ ಶೈಲಿಯಿಂದ ಆರೋಗ್ಯವನ್ನು ರಕ್ಷಿಸಿಕೊಳ್ಳಲು ಸಾಧ್ಯ ಎಂಬ ಜಾಗೃತಿ ಮೂಡುತ್ತಿದೆ.

ರೋಗ ಬಂದಮೇಲೆ ಔಷಧಿ ನೀಡುವುದಕ್ಕಿಂತ ಮೊದಲೇ ರೋಗ ತಡೆಯುವ ಪದ್ಧತಿ ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಯೋಗ, ಪ್ರಾಣಾಯಾಮಗಳ ವಿಶೇಷತೆ. ಮಾನವ ಶರೀರದಲ್ಲಿ ದೇವರು ರೋಗ ನಿರೋಧಕ ಶಕ್ತಿಯನ್ನೂ ಹಾಕಿದ್ದಾನೆ. ಮಾನವ ಅದನ್ನು ಸಮರ್ಥವಾಗಿ ಬಳಕೆ ಮಾಡಬೇಕು. ವೈದ್ಯಕೀಯ ಜಾಗೃತಿ ಇಂದಿನ ಅಗತ್ಯ.

ಸ್ಟ್ಯಾಂಡಪ್ ಕಾಮಿಡಿಯಲ್ಲಿ ಹಾಸ್ಯದ ಪ್ರಮಾಣವೆಷ್ಟು?

• ದೇವಿತಾ ಸಿ. ಸುಬ್ಬಯ್ಯ



ಮೊದಲೆಲ್ಲ ಕಾಮಿಡಿ ಶೋಗಳೆಂದರೆ ಮನೆಯವರೆಲ್ಲ ಒಟ್ಟಾಗಿ ಕುಳಿತು ಕುಟುಂಬವಾಗಿ ಬರುವವರೇ ನಗುತ್ತಿದ್ದೆವು. ನಗುವ ಸಹಜ ಧರ್ಮ ನಗಿಸುವುದು ಪರಧರ್ಮ ಎನ್ನುವಂತೆ ಹಾಸ್ಯ ಕಲಾವಿದರ ಮಾತುಗಳಲ್ಲಿ ಚುರುಕುತನ ಇರುತ್ತಿತ್ತು, ವ್ಯಂಗ್ಯ ಇರುತ್ತಿತ್ತು. ಅದರೊಂದಿಗೆ ಸಾಮಾಜಿಕ ಸಂದೇಶವೂ ಇರುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಕೆಲವು ಸ್ಟ್ಯಾಂಡಪ್ ಕಾಮಿಡಿ ಶೋಗಳನ್ನು ಗಮನಿಸಿದರೆ, ಹಾಸ್ಯದ ವ್ಯಾಖ್ಯಾನವೇ ಬದಲಾಗುತ್ತಿರುವಂತೆ ಕಾಣುತ್ತಿದೆ. ಇಂದು ಹಲವರಿಗೆ ಹಾಸ್ಯ ಎಂದರೆ ಯಾರನ್ನಾದರೂ ಗೇಲಿ ಮಾಡುವುದು, ಒಂದು ಸಮುದಾಯವನ್ನು ಹೀಯಾಳಿಸುವುದು, ಅಶ್ಲೀಲ ಪದಗಳನ್ನು ಬಳಸುವುದು ಅಥವಾ ವ್ಯಕ್ತಿಗತ ನಿಂದನೆಯನ್ನು ವೇದಿಕೆ ಕರುವುದು ಎಂಬಂತಾಗಿದೆ. ನಿಜಕ್ಕೂ ಇದು ಹಾಸ್ಯವೇ? ಅಥವಾ ನಾವು ಹಾಸ್ಯದ ಹೆಸರಿನಲ್ಲಿ ಅವಹೇಳನವನ್ನು ಸಂಭ್ರಮಿಸುತ್ತಿದ್ದೇವೆಯೇ?

ನಗು ಮನುಷ್ಯನಿಗೆ ಪ್ರಕೃತಿ ಕೊಟ್ಟ ವರ. ಮಗುವಿಗೆ ಭಾಷೆ ಗೊತ್ತಿರದಿದ್ದರೂ ನಗು ಗೊತ್ತಿರುತ್ತದೆ. ನಗುವಿನಲ್ಲಿ ಎಲ್ಲವನ್ನೂ ತಿಳಿದುಕೊಳ್ಳಲು ಪ್ರಯತ್ನಿಸುತ್ತದೆ. ನಗು ಎನ್ನುವುದು ಸಂತೋಷದ ಅಭಿವ್ಯಕ್ತಿ. ಅದು ಮನಸ್ಸಿನಲ್ಲಿರುವ ಒತ್ತಡವನ್ನು ಕಡಿಮೆ ಮಾಡುವ ಜತೆಗೆ ಸಂಬಂಧಗಳನ್ನು ಗಟ್ಟಿಗೊಳಿಸುತ್ತದೆ. ಮನುಷ್ಯನ ಬದುಕಿನಲ್ಲಿ ಅಶಾವಾದವನ್ನು ಬೆಳೆಸುತ್ತದೆ. ಹೀಗೆ ನಾವು ಯಾವ ಸಂದರ್ಭದಲ್ಲಿ ಯಾವುದಕ್ಕೆ ನಗುತ್ತಿದ್ದೇವೆ?

ಹೆಚ್ಚು ನಕ್ಕಷ್ಟು ಹೆಚ್ಚು ಬದುಕುತ್ತೇವೆ ಎಂಬ ಮಾತಿದೆ. ವೈದ್ಯಕೀಯವಾಗಿಯೂ ನಗುವಿನ ಮಹತ್ವ ಅಪಾರ. ಆರೋಗ್ಯವನ್ನು ವೃದ್ಧಿ ಉಳ್ಳದ್ದು. ದೇಹದಲ್ಲಿ ಉತ್ತಮ ಹಾರ್ಮೋನುಗಳ ಉತ್ಪತ್ತಿ. ಒಳ್ಳೆಯ ಹಾಸ್ಯ ಮನುಷ್ಯನ ಚಿಂತನೆಯನ್ನು ವಿಸ್ತರಿಸುತ್ತದೆ. ಸಮಾಜದ ವೈಪರೀತ್ಯಗಳನ್ನು ಕಟುವಾಗದ ರೀತಿಯಲ್ಲಿ ತೋರಿಸುತ್ತದೆ. ಹಾಸ್ಯವು ನೋವುಂಟುಮಾಡದೆ ನಗಿಸುವ ಕಲೆ. ಯಾರನ್ನಾದರೂ ಕೀಳಾಗಿಸದೆ ಸಂತೋಷ ನೀಡುವ ಕೌಶಲ. ಆದರೆ ಈಗ ನಡೆಯುತ್ತಿರುವುದೇನು?

ಆರೋಗ್ಯಕರ ನಗು ಮತ್ತು ಅವಹೇಳನದ ನಗುವಿನಲ್ಲಿ ವ್ಯತ್ಯಾಸವಿದೆ. ಮುಗ್ಧತನ ನೋಡಿ ನಗುವುದು ಬೇರೆ, ಯಾರದೋ ದೈಹಿಕ ಲಕ್ಷಣ, ಜಾತಿ, ಬಣ್ಣ, ಭಾಷೆ ಅಥವಾ ವೈಕಲ್ಯವನ್ನು ಗೇಲಿ ಮಾಡಿ ನಗುವುದು ಬೇರೆ. ಮತ್ತೊಬ್ಬರ ಘನತೆಯನ್ನು ಕತ್ತರಿಸಿ ಹುಟ್ಟುವ ನಗು ಅನಾರೋಗ್ಯಕರ ಸಮಾಜದ ಲಕ್ಷಣವಾಗುವುದಿಲ್ಲ. ಸಮಾಜದಲ್ಲಿ ನಾವು ಯಾವುದಕ್ಕೆ ನಗುತ್ತೇವೆ ಎಂಬುದು ನಮ್ಮ ಸಂಸ್ಕೃತಿಯ ಪ್ರತಿಬಿಂಬ. ಒಬ್ಬ ವ್ಯಕ್ತಿಯನ್ನು ಅವಮಾನಿಸಿದಾಗ, ಒಂದು ಸಮುದಾಯವನ್ನು ಹೀಯಾಳಿಸಿದಾಗ ಅಥವಾ ಮಹಿಳೆಯರನ್ನು ಅಶ್ಲೀಲವಾಗಿ ಚಿತ್ರಿಸಿದಾಗ ಜನರು ಚಪ್ಪಾಳೆ ತಟ್ಟಿ ನಕ್ಕರೆ ಅದು ಸಮಾಜದ ಸಂವೇದನಾಶೀಲತೆಯ ಪ್ರಶ್ನೆ. ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಅಥವಾ ರಿಯಾಲಿಟಿ ಕಾಮಿಡಿ ಶೋಗಳಲ್ಲಿ ಅನೇಕ ಹಾಸ್ಯಗಳನ್ನು ನೋಡಿದರೆ, ಹಾಸ್ಯಕ್ಕಿಂತ ಹೆಚ್ಚಾಗಿ ಅವಮಾನವೇ ಕಾಣಿಸುತ್ತದೆ. ಕೆಲವರು ಅದನ್ನು 'ಬೋಲ್ಡ್' ಎಂದು ಸಮರ್ಥಿಸಿಕೊಳ್ಳುತ್ತಾರೆ. ಆದರೆ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಇರುವಷ್ಟೇ ಸಾಮಾಜಿಕ ಜವಾಬ್ದಾರಿಯೂ ಇದೆ.

ಇಂದಿನ ಸ್ಟ್ಯಾಂಡಪ್ ಕಾಮಿಡಿಯಲ್ಲಿ ನಗುವುದಿದ್ದೇನೇ? ಬಹುಬೇಡಿಕೆಯ ಕಾಮಿಡಿಯನ್ ಮ್ಯಾಕ್ ಅಮಿಸಿ ವೇದಿಕೆಯ ಮೇಲಿಂದಲೇ ಚೀನಿ ಮಾತ್ರ ಅಭಿಷೇಕ್ ಮೂಲದ ಜನರ ರೂಪವನ್ನು ವ್ಯಂಗ್ಯ ಮಾಡುತ್ತಾರೆ. ಭಾರತೀಯ ಕಾಮಿಡಿಯನ್ ಗಳೂ ಇಂದು ಬಹುಬೇಡಿಕೆಯಲ್ಲಿದ್ದಾರೆ. ರಣ್‌ವೀರ್ ಅಲಹಾಬಾದಿಯಾ, ಪ್ರಣೀತ್ ಮೋರೆ ಮುಂತಾದ ಕೀರಿಯರ್‌ಗಳು ಕೆಲವರು ನಿರಾಯಾಸವಾಗಿ ಅಶ್ಲೀಲ ಪದಗಳನ್ನು ಬಳಸುತ್ತಾರೆ. ಪ್ರೇಕ್ಷಕರು ಅದಕ್ಕೂ ನಗುತ್ತಾರೆ. ಆ ನಗುವಿನ ನಡುವೆ ಪ್ರಶ್ನೆ ಕಳೆದುಹೋಗುತ್ತದೆ. ನಿಜಕ್ಕೂ ಅಲ್ಲಿ ಹಾಸ್ಯ ಇದೆಯೇ? ಲೈಂಗಿಕ ಸಂಗತಿಗಳನ್ನು ಹಾಸ್ಯವಾಗಿಸುವುದೇ ಹೆಚ್ಚಾಗಿದೆ. ಯಾವ ಹಾಸ್ಯ ಇದೆ?

ಹ್ಯೂಮರ್ ಎಂದರೆ ಒಬ್ಬರನ್ನು ನೋಯಿಸುವುದಲ್ಲ, ಅದು ಜೀವನದ ವೈರುಧ್ಯಗಳನ್ನು ಸೂಕ್ಷ್ಮವಾಗಿ ಹಿಡಿಯುವುದು. ಒಂದು ಸಾಮಾನ್ಯ ಘಟನೆಯನ್ನು ಹೊಸ ದೃಷ್ಟಿಕೋನದಲ್ಲಿ ತೋರಿಸುವುದು. ನಗುವಿನ ಮೂಲಕ ಸತ್ಯವನ್ನು ಹೇಳುವುದು. ಚಾರ್ಲಿ ಚಾಪ್ಲಿನ್ ಅವರ ಹಾಸ್ಯವನ್ನು ನೆನಪಿಸಿಕೊಳ್ಳಿ. ಅವರು ಬಡತನ, ಅಧಿಕಾರದ ದುರುಪಯೋಗ ಮತ್ತು ಸಾಮಾಜಿಕ ಅಸಮಾನತೆಗಳ ಬಗ್ಗೆ ಹಾಸ್ಯ ಮಾಡಿದರು. ಆದರೆ ಯಾರನ್ನೂ ಅವಮಾನಿಸಲಿಲ್ಲ. ನಮ್ಮ ದೇಶದಲ್ಲಿಯೂ ಅನೇಕ ಶ್ರೇಷ್ಠ ಹಾಸ್ಯ ಕಲಾವಿದರು ಅಶ್ಲೀಲತೆ ಲೇಪವಿಲ್ಲದೆ ಜನರನ್ನು ನಗಿಸಿದ್ದಾರೆ. ಅವರೆಲ್ಲರೂ ಇಂದು ಸಮಾಜದ ನೆನಪಿನಲ್ಲಿದ್ದಾರೆ. ಅದಕ್ಕಾಗಿಯೇ ಹಾಸ್ಯ ಮತ್ತು ಹೀಯಾಳಿಕೆ ಒಂದೇ ಅಲ್ಲ. ವ್ಯಂಗ್ಯ ಮತ್ತು ನಿಂದನೆ ಒಂದೇ ಅಲ್ಲ.

ಇತ್ತೀಚೆಗೆ ಕಾಮಿಡಿಯನ್ ಪ್ರಣೀತ್ ಮೋರೆ ಅವರ ಕಾರ್ಯಕ್ರಮಕ್ಕೆ ಸಂಬಂಧಿಸಿದ ವಿವಾದ ಸಾಮಾಜಿಕ ಜಾಲತಾಣಗಳಲ್ಲಿ ದೊಡ್ಡ ಚರ್ಚೆಗೆ ಕಾರಣವಾಯಿತು. ಒಂದು ಕಡೆ ಕಲಾವಿದರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಇರಬೇಕು ಎನ್ನುವ ವಾದ ಕೇಳಿಬಂದರೆ, ಇನ್ನೊಂದು ಕಡೆ ಹಾಸ್ಯದ ಹೆಸರಿನಲ್ಲಿ ಯಾವುದೇ ವ್ಯಕ್ತಿ, ಸಮುದಾಯ ಅಥವಾ ಒಂದು ಹೆಣ್ಣನ್ನು ಕೀಳು ಮಟ್ಟದಲ್ಲಿ ನೋಡುವುದು, ಸಂಸ್ಕೃತಿಯನ್ನು ಅವಮಾನಿಸುವುದು ಸ್ವಾತಂತ್ರ್ಯದ ವ್ಯಾಪ್ತಿಗೆ ಬರಬಹುದೇ ಎಂಬ ಪ್ರಶ್ನೆಯೂ ಉದ್ಭವಿಸಿತು. ಇದರಿಂದಾಗಿ ಹಾಸ್ಯಕ್ಕೆ ಮಿತಿ ಇರಬೇಕಲ್ಲವೆ ಎನ್ನುವುದು ಪ್ರಶ್ನೆಯಾಗಿ ಉಳಿದಿದೆ.

ಕಾನೂನು ಮಿತಿಗಳನ್ನು ಬದಿಗಿಟ್ಟು ನೋಡಿದರೂ, ನೈತಿಕ ಮಿತಿಗಳು ಇರಬೇಕಲ್ಲವೇ? ಒಬ್ಬ ಕಲಾವಿದ ವೇದಿಕೆಯಲ್ಲಿ ಹೇಳುವ ಮಾತು ಸಾವಿರಾರು ಜನರನ್ನು ಪ್ರಭಾವಿಸಬಹುದು. ಹೀಗಾಗಿ ಜನಪ್ರಿಯತೆಯ ಹೆಸರಿನಲ್ಲಿ ನಾವು ಯಾವುದೇ ಮಾತನ್ನಾದರೂ ಹಾಸ್ಯವೆಂದು ಸಮರ್ಥಿಸಿಕೊಳ್ಳುವುದು ಕೂಡದು.

ಸಮಾಜಕ್ಕೆ ಹಾಸ್ಯ ಬೇಕು. ಇಂದಿನ ಒತ್ತಡದ ಬದುಕಿನಲ್ಲಿ ಅದು ಇನ್ನಷ್ಟು ಅಗತ್ಯ. ಆದರೆ ಯಾವುದಕ್ಕೆ ನಗುತ್ತಿದ್ದೇವೆ ಎಂಬುದನ್ನು ಯೋಚಿಸಬೇಕು. ಯಾರನ್ನೂ ನೋಯಿಸದೆ ನಗಿಸುವುದು ನಿಜವಾದ ಪ್ರತಿಭೆ. ಹಾಸ್ಯದ ವೇದಿಕೆಗಳು ಮತ್ತೆ ಗೌರವವನ್ನು ಪಡೆಯಬೇಕಾದರೆ ನಗುವಿನ ಗುಣಮಟ್ಟದ ಬಗ್ಗೆ ಸಮಾಜವೇ ಪ್ರಶ್ನಿಸಬೇಕು. ಇಲ್ಲದಿದ್ದರೆ ನಗುವಿನ ಹೆಸರಿನಲ್ಲಿ ನಾವು ನಿಧಾನವಾಗಿ ಸಂವೇದನಾಶೀಲತೆಯನ್ನು ಕಳೆದುಕೊಳ್ಳುತ್ತೇವೆ. ಒಳ್ಳೆಯ ಹಾಸ್ಯ ಮನುಷ್ಯನನ್ನು ಉನ್ನತೀಕರಿಸುತ್ತದೆ. ಕೆಟ್ಟ ಹಾಸ್ಯ ಮತ್ತೊಬ್ಬರನ್ನು ತಗ್ಗಿಸಿ ನಮ್ಮನ್ನು ನಗಿಸುತ್ತದೆ. ಈ ಎರಡರ ನಡುವಿನ ವ್ಯತ್ಯಾಸವನ್ನು ಅರಿಯುವ ಸಮಯ ಈಗ ಬಂದಿದೆ.

ಮತದಾರರ ಪಟ್ಟಿ ಶುದ್ಧೀಕರಣಕ್ಕೆ ಒಂದು ವರ್ಷ

ದೇಶದಲ್ಲಿ 6 ಕೋಟಿ ಮತದಾರರು ಔಟ್


•ಹೊಸದಿಲ್ಲಿ: ದೇಶದ ಮತದಾರರ ಪಟ್ಟಿಯನ್ನು ಶುದ್ಧೀಕರಿಸುವ ಉದ್ದೇಶದಿಂದ ಚುನಾವಣಾ ಆಯೋಗ(ಇಸಿ) ಆರಂಭಿಸಿದ್ದ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಅಭಿಯಾನಕ್ಕೆ ಒಂದು ವರ್ಷ ಪೂರ್ಣಗೊಂಡಿದೆ. ಈ ಅವಧಿಯಲ್ಲಿ ದೇಶಾದ್ಯಂತ ಸುಮಾರು 6 ಕೋಟಿ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ.

ಬಿಹಾರ ವಿಧಾನಸಭೆ ಚುನಾವಣೆಗೆ ಮುನ್ನ ಕಳೆದ ವರ್ಷ ಜೂ.24ರಂದು ಪ್ರಾಯೋಗಿಗ ಯೋಜನೆಯಾಗಿ ಎಸ್‌ಐಆರ್ ಆರಂಭಿಸಲಾಗಿತ್ತು. ಇದರ ಪರಿಣಾಮವಾಗಿ ಬಿಹಾರದಲ್ಲಿ ಸುಮಾರು 65 ಲಕ್ಷ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಯಿತು. ಅಗತ್ಯ ದಾಖಲೆಗಳ ಕೊರತೆಯ ನೆಪದಲ್ಲಿ ನಾಗರಿಕರನ್ನು ಮತದಾನದ ಹಕ್ಕಿನಿಂದ ವಂಚಿಸಲಾಗುತ್ತಿದೆ ಎಂದು ವಿಪಕ್ಷಗಳು ಆರೋಪಿಸಿದ್ದವು. ಆದರೆ, ಈ ವರ್ಷದ ಮಾರ್ಚ್‌ನಲ್ಲಿ ಸುಪ್ರೀಂ ಕೋರ್ಟ್ ಚುನಾವಣಾ ಆಯೋಗದ ಕ್ರಮಕ್ಕೆ ಸಾಂವಿಧಾನಿಕ ಮಾನ್ಯತೆ ನೀಡಿತ್ತು.

2ನೇ ಹಂತ: ಕಳೆದ ಅಕ್ಟೋಬರ್‌ನಲ್ಲಿ ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ತಮಿಳುನಾಡು, ರಾಜಸ್ಥಾನ, ಛತ್ತೀಸ್‌ಗಢ, ಕೇರಳ, ಗುಜರಾತ್, ಮಧ್ಯಪ್ರದೇಶ, ಗೋವಾ ಸೇರಿದಂತೆ 12 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್ ಎರಡನೇ ಹಂತ ಜಾರಿಗೊಂಡಿತ್ತು. ಈ ರಾಜ್ಯಗಳಲ್ಲಿ ಪರಿಷ್ಕರಣೆಗೆ ಮುನ್ನ 50.99 ಕೋಟಿ ಮತದಾರರು ಇದ್ದರೆ, ಪರಿಷ್ಕರಣೆ ಬಳಿಕ ಈ ಸಂಖ್ಯೆ 45.81 ಕೋಟಿಗೆ ಇಳಿದಿದೆ. ಅಂದರೆ 5.18 ಕೋಟಿ ಹೆಸರುಗಳು(10.2%) ತೆಗೆಯಲ್ಪಟ್ಟಿವೆ.

ಇವುಗಳಲ್ಲಿ 66.88 ಲಕ್ಷ ಮೃತ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಉತ್ತರ ಪ್ರದೇಶದಲ್ಲಿ 25.47 ಲಕ್ಷ ಹಾಗೂ ಪಶ್ಚಿಮ ಬಂಗಾಳದಲ್ಲಿ 24.16 ಲಕ್ಷ ಮೃತರ ಹೆಸರುಗಳು ಡಿಲೀಟ್ ಮಾಡಲಾಗಿದೆ. ಜತೆಗೆ ಆಕ್ಷೇಪಣೆಗಳು ಮತ್ತು ಪರಿಶೀಲನೆಗಳ ಬಳಿಕ 63.16 ಲಕ್ಷ ಹೆಸರುಗಳನ್ನು ತೆಗೆದುಹಾಕಲಾಗಿದೆ.

ಮೂರನೇ ಹಂತ: ಪ್ರಸ್ತುತ ಕರ್ನಾಟಕ, ಮಹಾರಾಷ್ಟ್ರ, ಆಂಧ್ರ ಪ್ರದೇಶ, ತೆಲಂಗಾಣ, ಪಂಜಾಬ್, ಒಡಿಶಾ ಸೇರಿದಂತೆ 16 ರಾಜ್ಯಗಳು ಹಾಗೂ 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್ ಮೂರನೇ ಹಂತ ನಡೆಯುತ್ತಿದೆ. ಸುಮಾರು 36.73 ಕೋಟಿ ಮತದಾರರನ್ನು ಒಳಗೊಂಡಿರುವ ಈ ಪ್ರಕ್ರಿಯೆ ಈ ವರ್ಷದ ಅಂತ್ಯದೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.



ಎನ್‌ಸಿಇಆರ್‌ಟಿ ಪಠ್ಯಕ್ಕೆ ಎಸ್‌ಐಆರ್ ಸೇರ್ಪಡೆ

•ಹೊಸದಿಲ್ಲಿ: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ಈಗ 9ನೇ ತರಗತಿಯ ಎನ್‌ಸಿಇಆರ್‌ಟಿ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಸೇರಿಸಲಾಗಿದೆ. ಅರ್ಹ ನಾಗರಿಕರು ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ಹಾಗೂ ಅನರ್ಹರು ಪಟ್ಟಿಗೆ ಸೇರ್ಪಡೆಯಾಗದಂತೆ ನೋಡಿಕೊಳ್ಳುವುದೇ ಎಸ್‌ಐಆರ್ ಉದ್ದೇಶ ಎಂದು ಪಠ್ಯಪುಸ್ತಕದಲ್ಲಿ ವಿವರಿಸಲಾಗಿದೆ. ಹೊಸ ಪಠ್ಯಪುಸ್ತಕದಲ್ಲಿ ಚುನಾವಣಾ ಆಯೋಗವು ಮತದಾರರ ಪಟ್ಟಿಯನ್ನು ನವೀಕರಿಸುವುದು, ಪರಿಶೀಲಿಸುವುದು ಹಾಗೂ ದೋಷಗಳನ್ನು ಸರಿಪಡಿಸುವ ಕಾರ್ಯವನ್ನು ನಿರ್ವಹಿಸುತ್ತದೆ ಎಂದು ತಿಳಿಸಲಾಗಿದೆ. 18 ವರ್ಷ ತುಂಬಿದ ಯುವ ಮತದಾರರನ್ನು ಪಟ್ಟಿಗೆ ಸೇರಿಸಲು ಎಸ್‌ಐಆರ್ ಸಹಕಾರಿಯಾಗಿದೆ ಎಂದೂ ಉಲ್ಲೇಖಿಸಲಾಗಿದೆ. ಮೃತಪಟ್ಟವರು, ವಾಸಸ್ಥಳ ಬದಲಿಸಿದವರು, ನಕಲಿ ನೋಂದಣಿಗಳು ಹಾಗೂ ಪತ್ತೆಯಾಗದವರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕುವ ಕಾರ್ಯವೂ ಈ ಪ್ರಕ್ರಿಯೆಯ ಭಾಗವಾಗಿದೆ. ಪರಿಷ್ಕೃತ ಪಟ್ಟಿಯ ಕುರಿತು ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಿದ ಬಳಿಕ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ ಎಂದು ಪುಸ್ತಕದಲ್ಲಿ ಹೇಳಲಾಗಿದೆ.

ಡೆನ್ಮಾರ್ಕ್‌ನಲ್ಲಿ ಆಜಾನ್ ನಿಷೇಧ?

•ಹೊಸದಿಲ್ಲಿ: ಡೆನ್ಮಾರ್ಕ್‌ನಲ್ಲಿ ಹೆಚ್ಚುತ್ತಿರುವ ಮುಸ್ಲಿಮ್ ಜನಸಂಖ್ಯೆಯಿಂದ ದೇಶವು ಇಸ್ಲಾಮೀಕರಣಗೊಳ್ಳುವ ಆತಂಕ ಸೃಷ್ಟಿಯಾದ ಹಿನ್ನೆಲೆಪ್ರಧಾನಿಮೆಟ್ಟೆಫ್ರೆಡರಿಕ್ಸನ್ ಅವರಸರ್ಕಾರವು ರಾಷ್ಟ್ರವ್ಯಾಪಿ ಆಜಾನ್ ನಿಷೇಧಕ್ಕಾಗಿ ರೂಪುರೇಷೆ ಸಿದ್ಧಪಡಿಸಿದೆ. ಹೆಚ್ಚುತ್ತಿರುವ ಇಸ್ಲಾಮೀಕರಣದಿಂದ ಡೆನ್ಮಾರ್ಕ್ ಎಲ್ಲಿ ಪಾಕಿಸ್ತಾನದಂತಾಗುವುದೋ ಎಂಬ ಭೀತಿ ಅಲ್ಲಿನ ನಾಗರಿಕರನ್ನು ಕಾಡುತ್ತಿದೆ. ಇದನ್ನು ಖುದ್ದು ಡೆನ್ಮಾರ್ಕ್ ವಲಸೆ ಸಚಿವ ಮಾರ್ಟಿನ್ ಬೊಡ್ಸ್‌ಕೊವ್, ದೇಶದ ಕೆಲವು ಭಾಗಗಳು ಇಸ್ಲಾಮಾಬಾದ್‌ನ ಉಪನಗರಗಳಂತೆ ಭಾಸವಾಗುತ್ತವೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಇತ್ತೀಚೆಗೆ ಸ್ಥಳೀಯ ಸುದ್ದಿ ವಾಹಿನಿಯೊಂದರಲ್ಲಿ ಮಾತನಾಡುವ ವೇಳೆ ಸಚಿವ ಮಾರ್ಟಿನ್ ಈ ಆತಂಕಕಾರಿ ವಿಷಯವನ್ನು ಉಲ್ಲೇಖಿಸಿದ್ದಾರೆ. ಡೇನಿಶ್ ಮನೆಗಳ ಮಹಡಿ ಮೇಲಿಂದ ಆಜಾನ್ ಶಬ್ದ ಕೇಳಬಾರದು ಎಂದು ಹೇಳಿದ್ದಾರೆ. ಆಡಳಿತದಲ್ಲಿರುವ ಸೋಶಿಯಲ್ ಡೆಮಾಕ್ರಾಟ್ಸ್ ಸರ್ಕಾರ ಇಸ್ಲಾಮೀಕರಣ ವಿರೋಧಿಸಿದೆ.


ಮುಂಗಾರು ಮಳೆ ಕೊರತೆಯಾಗುತ್ತಿರುವ ಈ ಕಾಲದಲ್ಲಿ ಸಾಮಾನ್ಯ ಜನರಿಗೆ ನೀರಿನ ಪ್ರಾಮುಖ್ಯತೆ ನಿಧಾನವಾಗಿ ಅರ್ಥವಾಗುತ್ತಿದೆ. ಅಂತರ್ಜಲ ಮರುಪೂರಣ ಹಾಗೂ ಮಳೆ ನೀರಿನ ಇಂಗುವಿಕೆಗೆ ನೆರವಾಗುವ ಕಾಂಕ್ರೀಟ್ ವ್ಯವಸ್ಥೆ ವಿನ್ಯಾಸಗೊಳಿಸುವ ಉದ್ದೇಶದಿಂದ ಮಹಾರಾಷ್ಟ್ರದ ಪುಣೆಯ ನವೋದ್ಯಮಿ ರಾಜೇಶ್ ರಾಥೋಡ್ ಮತ್ತು ಚಕ್ಷುಧನ್ಯಾ ಅಭಿವೃದ್ಧಿಪಡಿಸಿದ ಹೊಸ ರಾಸಾಯನಿಕ ಮಿಶ್ರಣಕ್ಕೆ ಪೇಟೆಂಟ್ ಲಭಿಸಿದೆ. ಈ ರಾಸಾಯನಿಕ ಬಳಸಿದ ಕಾಂಕ್ರೀಟ್ ವ್ಯವಸ್ಥೆ ಮಳೆನೀರನ್ನು ಹೆಚ್ಚು ಪರಿಣಾಮಕಾರಿಯಾಗಿ ಭೂಮಿಯೊಳಗೆ ಹರಿಯುವಂತೆ ಮಾಡುವ ಮೂಲಕ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ನೆರವಾಗುತ್ತದೆ. ಮಳೆನೀರು ವ್ಯರ್ಥವಾಗಿ ಹರಿದು ಹೋಗುವುದನ್ನು ತಪ್ಪಿಸಿ, ಜಲ ಸಂರಕ್ಷಣೆ ಮತ್ತು ಸುಸ್ಥಿರ ಜಲ ನಿರ್ವಹಣೆಗೆ ಕೊಡುಗೆ ನೀಡುವುದು ಈ ಆವಿಷ್ಕಾರದ ಹಿಂದಿನ ಉದ್ದೇಶವಾಗಿದೆ. ಈ ಕುರಿತಾದ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

20 ವರ್ಷಕ್ಕೆ ಪೇಟೆಂಟ್!

ಪರ್ವಿಯಸ್(ನೀರು ಹೀರಿಕೊಳ್ಳುವ) ಕಾಂಕ್ರೀಟ್‌ಗಾಗಿ ಅಪಾಯಕಾರಿಯಲ್ಲದ ಪ್ರಿಮಿಕ್ಸ್ ಪರಿಹಾರವೆಂಬ ಹೆಸರಿನಲ್ಲಿ ನಡೆಸಿದ ಆವಿಷ್ಕಾರಕ್ಕೆ ಕೇಂದ್ರ ಸರ್ಕಾರದ ಪೇಟೆಂಟ್ ಕಚೇರಿ 20 ವರ್ಷಗಳ ಪೇಟೆಂಟ್ ಪ್ರಮಾಣಪತ್ರವನ್ನು ನೀಡಿದೆ. ಈ ಪೇಟೆಂಟ್ ಪಡೆಯಲಾದ ರಾಸಾಯನಿಕವು ನೀರು ಹೀರಿಕೊಳ್ಳುವ ಕಾಂಕ್ರೀಟ್‌ನ ಬಲ, ಬಾಳಿಕೆ, ನೀರು ಹೀರಿಕೊಳ್ಳುವ ಸಾಮರ್ಥ್ಯ ಹಾಗೂ ದೀರ್ಘಕಾಲೀನ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ. ಸುಸ್ಥಿರ ಜಲ ನಿರ್ವಹಣೆ ಮತ್ತು ಅಂತರ್ಜಲ ಮರುಪೂರಣ ಯೋಜನೆಗಳಿಗೆ ಇದು ಹೆಚ್ಚು ಸೂಕ್ತವೆಂದು ತಿಳಿದುಬಂದಿದೆ.

ರಾಸಾಯನಿಕ ಪರೀಕ್ಷೆ ಯಶಸ್ವಿ

ನಗರದ ಎಸ್.ಪಿ. ಕಾಲೇಜು ಆವರಣ ಹಾಗೂ ಸತಾರ ಜಿಲ್ಲೆಯ ಐತಿಹಾಸಿಕ ದೇವಾಲಯದ ಆವರಣದಲ್ಲಿ ಈ ರಾಸಾಯನಿಕವನ್ನು ಬಳಸಿ ಮಳೆಗಾಲದಲ್ಲಿ ಉಂಟಾಗುವ ನೀರಿನ ನಿಲುಗಡೆ ತಡೆಯುವುದು ಮತ್ತು ಮಳೆನೀರು ಚರಂಡಿಗಳ ಮೂಲಕ ವ್ಯರ್ಥವಾಗಿ ಹರಿದುಹೋಗುವುದನ್ನು ಕಡಿಮೆ ಮಾಡುವ ಉದ್ದೇಶದಿಂದ ಯಶಸ್ವಿ ಪರೀಕ್ಷೆ ನಡೆಸಲಾಗಿದೆ.



ಸುದ್ದಿ ಸಮಗ್ರ

ನೀರು ಹೀರಿಕೊಳ್ಳುವ ಕಾಂಕ್ರೀಟ್‌ನ ಬಲ, ಬಾಳಿಕೆ ಹೆಚ್ಚಿಸುವ ರಾಸಾಯನಿಕ | ಮಳೆ ನೀರಿನ ಇಂಗುವಿಕೆಗಾಗಿ ಕಾಂಕ್ರೀಟ್ ವ್ಯವಸ್ಥೆ ವಿನ್ಯಾಸ

ಅಂತರ್ಜಲ ಮರುಪೂರಣ ರಾಸಾಯನಿಕಕ್ಕೆ ಪೇಟೆಂಟ್

ಪರಿಸರ ಸ್ನೇಹಿ ಆವಿಷ್ಕಾರ

ಈ ಉತ್ಪನ್ನದ ಪ್ರಮುಖ ಪ್ರಯೋಜನವೆಂದರೆ, ಮಳೆನೀರು ಮಣ್ಣಿನೊಳಗೆ ಸುಲಭವಾಗಿ ಇಂಗುವಂತೆ ಮಾಡಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುತ್ತದೆ. ಇದರಿಂದ ಭಾರೀ ಮಳೆಯ ಸಂದರ್ಭ ಮೇಲ್ಮೈ ನೀರಿನ ಹರಿವು ಮತ್ತು ನೀರಿನ ನಿಲುಗಡೆ ಕಡಿಮೆಯಾಗುತ್ತದೆ. ಜೊತೆಗೆ, ಕ್ಷೀಣಿಸುತ್ತಿರುವ ಅಂತರ್ಜಲ ಮಟ್ಟವನ್ನು ಪುನಃ ತುಂಬಲು ಸಹಕಾರಿ ಆಗುವುದರೊಂದಿಗೆ, ಪರಿಸರ ಸ್ನೇಹಿ ಹಾಗೂ ಅಪಾಯವಿಲ್ಲದ ಉತ್ಪನ್ನವಾಗಿದೆ.



ಸಂಪೂರ್ಣ ಸ್ವದೇಶಿ ಉತ್ಪನ್ನ

ಇದೇ ಉದ್ದೇಶದ ಉತ್ಪನ್ನಗಳು ವಿದೇಶಗಳಲ್ಲಿ ತಯಾರಾಗಿ ಭಾರತಕ್ಕೆ ಆಮದಾಗುತ್ತಿವೆ ಎಂಬುದನ್ನು ರಾಜೇಶ್ ಒಪ್ಪಿಕೊಂಡಿದ್ದಾರೆ. ಅವರು ಅಭಿವೃದ್ಧಿಪಡಿಸಿರುವ ಉತ್ಪನ್ನವು ಭಾರತದಲ್ಲೇ ಅಭಿವೃದ್ಧಿ ಪಡಿಸಲ್ಪಟ್ಟಿದ್ದು, ಆಮದಿಗಿಂತ ಕಡಿಮೆ ವೆಚ್ಚದ್ದಾಗಿದೆ. ಈ ಉತ್ಪನ್ನವನ್ನು ಭಾರತದ ಹವಾಮಾನ ಮತ್ತು ಸ್ಥಳೀಯ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟು ತಯಾರಿಸಲಾಗಿದ್ದು, ಕಾಂಕ್ರೀಟ್‌ನ ಕಾರ್ಯಕ್ಷಮತೆಯ ಜತೆಗೆ ಅಂತರ್ಜಲ ಮರುಪೂರಣಕ್ಕೆ ಸಮಾನ ಆದ್ಯತೆ ನೀಡಲಾಗಿದೆ. ವಿದೇಶಿ ಉತ್ಪನ್ನಗಳು ಮುಖ್ಯವಾಗಿ ಕಾಂಕ್ರೀಟ್‌ನ ಕಾರ್ಯಕ್ಷಮತೆಯ ಮೇಲಷ್ಟೇ ಗಮನಹರಿಸುತ್ತವೆ.

ದೇಗುಲ ಆವರಣದಲ್ಲಿ ಅಳವಡಿಕೆ

ರಾಜೇಶ್ ಅಭಿವೃದ್ಧಿಪಡಿಸಿರುವ ಉತ್ಪನ್ನವು ನಿಜವಾಗಿಯೂ ಪರಿಣಾಮಕಾರಿ. ರಾಸ್ತೆ ಕುಟುಂಬ ಆಡಳಿತದ ದೇಗುಲದ ಆವರಣದಲ್ಲಿ ನೀರಿನ ನಿಲುಗಡೆ ಸಮಸ್ಯೆಯನ್ನು ಗಣನೀಯವಾಗಿ ಕಡಿಮೆ ಮಾಡಿದ್ದು, ಅಂತರ್ಜಲಮಟ್ಟ ಹೆಚ್ಚಿದ ಕಾರಣ ಮರಗಳ ಆರೋಗ್ಯವೂ ಉತ್ತಮವಾಗಿದೆ. ರಾಸ್ತೆ ಕುಟುಂಬ ನಿರ್ಮಿಸಿ ನಿರ್ವಹಿಸುತ್ತಿರುವ ಅನೇಕ ದೇವಾಲಯಗಳಲ್ಲಿ ಒಂದರಲ್ಲಿ ಈ ಉತ್ಪನ್ನವನ್ನು ಪ್ರಾಯೋಗಿಕವಾಗಿ ಬಳಸಲಾಗಿತ್ತು. ಮಳೆನೀರು ಸಂಗ್ರಹಣೆ ಮತ್ತು ಅಂತರ್ಜಲ ಮರುಪೂರಣ ಮಾಡಲು ಸಾಧ್ಯವಿರುವ ದೇವಾಲಯ ಆವರಣಗಳಲ್ಲಿ ಈ ತಂತ್ರಜ್ಞಾನವನ್ನು ಅಳವಡಿಸುವ ಸಾಧ್ಯತೆಯಿದೆ.

ಕಾಲೇಜು ಆವರಣದಲ್ಲಿ ಜೋಡಣೆ

ಎಸ್.ಪಿ. ಕಾಲೇಜು ಆವರಣವು ಅತ್ಯಂತ ಸಂಚಾರ ದಟ್ಟಣೆಯ ತಿಲಕ್ ರಸ್ತೆಯ ಪಕ್ಕದಲ್ಲಿದ್ದು, ಅಲ್ಲಿ ಮಳೆನೀರಿನ ಒಳಚರಂಡಿ ವ್ಯವಸ್ಥೆಯಿಲ್ಲ. ಇದರಿಂದ ರಸ್ತೆಯ ಮೇಲಿನ ಮಳೆನೀರು ಕಾಲೇಜು ಆವರಣಕ್ಕೆ ಹರಿದು ಬಂದು ನೀರು ನಿಲ್ಲುವ ಸಮಸ್ಯೆ ಉಂಟಾಗುತ್ತಿತ್ತು. ಈಗ ಆ ಮಳೆನೀರನ್ನು ಮೊದಲು ಒಂದು ಗುಂಡಿ ಹಾಗೂ ಸಣ್ಣ ಸಂಗ್ರಹ ಟ್ಯಾಂಕ್‌ಗೆ ಹರಿಸಿ, ನಂತರ ಬೋರ್‌ವೆಲ್‌ಗೆ ಮರುಭರ್ತಿ ಮಾಡುವ ವ್ಯವಸ್ಥೆ ಮಾಡಲಾಗಿದೆ. ಇದರ ಪರಿಣಾಮವಾಗಿ ಕಳೆದ ವರ್ಷ ಕಾಲೇಜು ಆವರಣದಲ್ಲಿ ನೀರಿನ ನಿಲುಗಡೆ ಸಮಸ್ಯೆ ಉಂಟಾಗಿಲ್ಲ.

ಕಡಿಮೆ ವೆಚ್ಚದ ಪರಿಹಾರ

ಇದು ಕಾಂಕ್ರೀಟ್‌ನ ಬಲ ಮತ್ತು ಬಾಳಿಕೆಯನ್ನು ಹೆಚ್ಚಿಸುತ್ತದೆ. ಮಳೆನೀರಿನ ಒಳಚರಂಡಿ (ಸ್ಟಾರ್ಮ್‌ವಾಟರ್ ಡ್ರೈನೇಜ್) ವ್ಯವಸ್ಥೆಯ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ. ಸುಸ್ಥಿರ ನಗರಾಭಿವೃದ್ಧಿ, ಜಲ ಸಂರಕ್ಷಣೆ ಹಾಗೂ ಮಳೆನೀರಿನ ಸಮರ್ಪಕ ನಿರ್ವಹಣೆಗೆ ನೆರವಾಗುತ್ತದೆ. ಆಮದು ಮಾಡಿಕೊಳ್ಳುವ ಪರ್ಯಾಯ ಉತ್ಪನ್ನಗಳಿಗೆ ಹೋಲಿಸಿದರೆ, ಇದು ಕಡಿಮೆ ವೆಚ್ಚದ ಪರಿಹಾರವಾಗಿದೆ. ರಾಜೇಶ್ ಅವರ ಪ್ರಕಾರ, ಈ ತಂತ್ರಜ್ಞಾನವನ್ನು ವಾಹನ ನಿಲುಗಡೆ ಪ್ರದೇಶಗಳು, ಪಾದಚಾರಿ ಮಾರ್ಗಗಳು, ವಸತಿ ಬಡಾವಣೆಗಳು, ಶೈಕ್ಷಣಿಕ ಸಂಸ್ಥೆಗಳ ಆವರಣಗಳು, ಕೈಗಾರಿಕಾ ಪ್ರದೇಶಗಳು, ಉದ್ಯಾನಗಳು, ಸಾರ್ವಜನಿಕ ಮುಕ್ತ ಸ್ಥಳಗಳು, ರೈಲು ನಿಲ್ದಾಣಗಳು, ಬಸ್ ಟರ್ಮಿನಲ್‌ಗಳಲ್ಲಿ ಮಳೆನೀರು ಸಂಗ್ರಹಣೆ ಮತ್ತು ಅಂತರ್ಜಲ ಮರುಪೂರಣ ಯೋಜನೆಗಳಲ್ಲಿ ಬಳಸಬಹುದು. ಮಳೆನೀರು ಮೇಲ್ಮೈ ಹರಿವಿನ ಮೂಲಕ ವ್ಯರ್ಥವಾಗುವ ಯಾವುದೇ ಸ್ಥಳದಲ್ಲಿ ಈ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಬಹುದು. ಸುಸ್ಥಿರ ಹಾಗೂ ಪರಿಸರ ಸ್ನೇಹಿ ಮೂಲಸೌಕರ್ಯಗಳ ಮೂಲಕ ಪ್ರತಿ ಮಳೆಯನ್ನೂ ಅಂತರ್ಜಲ ಮರುಪೂರಣಕ್ಕೆ ಒಂದು ಅವಕಾಶವನ್ನಾಗಿ ಪರಿವರ್ತಿಸುವುದೇ ಈ ಉತ್ಪನ್ನವನ್ನು ಅಭಿವೃದ್ಧಿಪಡಿಸಿದ ರಾಜೇಶ್ ಉದ್ದೇಶವಾಗಿದೆ. ಈ ಉತ್ಪನ್ನವನ್ನು ವ್ಯಾಪಕವಾಗಿ ಬಳಸಿದರೆ, ಕ್ಷೀಣಿಸುತ್ತಿರುವ ಅಂತರ್ಜಲಮಟ್ಟವನ್ನು ಹೆಚ್ಚಿಸಲು, ಮಳೆನೀರನ್ನು ಸಂರಕ್ಷಿಸಲು, ನಗರ ಪ್ರದೇಶಗಳ ಪ್ರವಾಹ ಮತ್ತು ನೀರಿನ ನಿಲುಗಡೆ ಸಮಸ್ಯೆಯನ್ನು ತಗ್ಗಿಸಲು ಹಾಗೂ ಭವಿಷ್ಯದ ಪೀಳಿಗೆಗಳಿಗೆ ನೀರಿನ ಭದ್ರತೆ ಬಲಪಡಿಸಲು ನೆರವಾಗಲಿದೆ.

ಕಿರುಸುದ್ದಿ

ತ್ರಿಭಾಷಾ ಸೂತ್ರ: 7-9ನೇ ತರಗತಿಗಳಿಗೆ ಹಳೇ ಪದ್ಧತಿ

•ಹೊಸದಿಲ್ಲಿ: ಈಗಾಗಲೇ 7ರಿಂದ 9ನೇ ತರಗತಿಯಲ್ಲಿರುವ ಹಾಗೂ ಎರಡು ವಿದೇಶಿ ಭಾಷೆಗಳನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳು 10ನೇ ತರಗತಿವರೆಗೆ ಅದೇ ಭಾಷಾ ಸಂಯೋಜನೆಯಲ್ಲಿ ವ್ಯಾಸಂಗ ಮಾಡಬಹುದು. ಅವರ ಮೇಲೆ ತ್ರಿಭಾಷಾ ಸೂತ್ರದ ಅನ್ವಯಿಸುವುದಿಲ್ಲ. ಅವರು ಹಳೆಯ ಪದ್ಧತಿಯಲ್ಲೇ ವ್ಯಾಸಂಗವನ್ನು ಮಾಡಬಹುದು ಎಂದು ಸಿಬಿಎಸ್‌ಇ ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ. ಸಿಬಿಎಸ್‌ಇ ಅಧಿಕಾರಿಗಳ ಸ್ಪಷ್ಟನೆಯಿಂದ ಲಕ್ಷಾಂತರ ಸಿಬಿಎಸ್‌ಇ ವಿದ್ಯಾರ್ಥಿಗಳಿಗೆ ನಿರಾಳವಾಗಿದೆ. ಜು.1ರಿಂದ 9ನೇ ತರಗತಿ ವಿದ್ಯಾರ್ಥಿಗಳು ಕಡ್ಡಾಯವಾಗಿ ಎರಡು ಭಾರತೀಯ ಭಾಷೆಗಳ ಸಹಿತ ಒಟ್ಟು ಮೂರು ಭಾಷೆಗಳನ್ನು ಕಲಿಯಲೇಬೇಕೆಂಬ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ(ಸಿಬಿಎಸ್‌ಇ) ತಿಂಗಳ ಹಿಂದೆ ಆದೇಶಿಸಿತ್ತು.

₹3.66 ಕೋಟಿ ಮೌಲ್ಯದ ವಿಮಾ ಪಾಲಿಸಿಗಳ ಜಪ್ತಿ

•ಹೊಸದಿಲ್ಲಿ: 1,266.63 ಕೋಟಿ ಮೌಲ್ಯದ ಎಸ್‌ಬಿಐ ವಂಚನೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ(ಇಡಿ) 3.66 ಕೋಟಿ ರೂ. ಮೌಲ್ಯದ ಎರಡು ಹೂಡಿಕೆ-ಸಂಬಂಧಿತ ಜೀವ ವಿಮಾ ಪಾಲಿಸಿಗಳನ್ನು ತಾತ್ಕಾಲಿಕವಾಗಿ ಜಪ್ತಿ ಮಾಡಿದೆ. ಎಂ/ಎಸ್ ಅಡ್ವಾಂಟೇಜ್ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ (ಎಒಪಿಎಲ್) ಮತ್ತು ಅದರ ಪ್ರವರ್ತಕ ಶ್ರೀಕಾಂತ್ ಭಾಸಿ ವಿರುದ್ಧದ ತನಿಖೆಯ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಸಿಬಿಐ ದಾಖಲಿಸಿದ ಎಫ್‌ಐಆರ್ ಆಧರಿಸಿ ತನಿಖೆ ಆರಂಭಿಸಿದ ಇಡಿ, ನಕಲಿ ವ್ಯಾಪಾರ ವ್ಯವಹಾರಗಳು, ಸುಳ್ಳು ದಾಖಲೆಗಳು ಹಾಗೂ ಬ್ಯಾಂಕ್ ಹಣದ ದುರುಪಯೋಗದ ಮೂಲಕ ಎಸ್‌ಬಿಐಗೆ ಭಾರೀ ನಷ್ಟ ಉಂಟುಮಾಡಲಾಗಿದೆ ಎಂದು ಆರೋಪಿಸಿದೆ.

ಹೈಡ್ರೋಜನ್ ರೈಲಿನ ವೇಗದ ಪರೀಕ್ಷೆ ಯಶ

•ಹೊಸದಿಲ್ಲಿ: ಭಾರತದ ಮೊದಲ ಹೈಡ್ರೋಜನ್ ಚಾಲಿತ ರೈಲು ಶುಕ್ರವಾರ ಹರಿಯಾಣದ ಜಿಂದ್ ?ಸೋನಿಪತ್ ಮಾರ್ಗದಲ್ಲಿ ಗಂಟೆಗೆ 120 ಕಿಮೀ ವೇಗದಲ್ಲಿ ಯಶಸ್ವಿ ಅಂತಿಮ ಪರೀಕ್ಷೆ ಪೂರ್ಣಗೊಳಿಸಿದೆ. ಇದು ಭಾರತೀಯ ರೈಲ್ವೆಯ ಹಸಿರು ಸಾರಿಗೆ ಮತ್ತು ಇಂಗಾಲ ಹೊರಸೂಸುವಿಕೆ ಕಡಿತಗೊಳಿಸುವ ಯೋಜನೆಯಲ್ಲಿ ಮಹತ್ವದ ಮೈಲುಗಲ್ಲಾಗಿದೆ. ಈ ಯೋಜನೆಗಾಗಿ ಜಿಂದ್‌ನಲ್ಲಿ ಹೈಡ್ರೋಜನ್ ಉತ್ಪಾದನೆ, ಸಂಗ್ರಹಣೆ ಹಾಗೂ ಇಂಧನ ತುಂಬುವ ವಿಶೇಷ ಸೌಲಭ್ಯಗಳನ್ನು ನಿರ್ಮಿಸಲಾಗಿದೆ.

ಬಂಗಾಳದಲ್ಲೂ ಏನಾಸಂ ಜಾರಿಗಾಗಿ ಸಕಲ ಸಿದ್ಧತೆ

•ಕೋಲ್ಕತ್ತಾ: ಗುಜರಾತ್ ಮತ್ತು ಅಸ್ಸಾಂ ಸರ್ಕಾರಗಳು ಅನುಸರಿಸಿರುವ ಪ್ರಕ್ರಿಯೆಗಳಿಗೆ ಸಮಾನವಾಗಿ ಅಗತ್ಯ ಕಾನೂನು ನಿಯಮಗಳಲ್ಲಿ, ಪಶ್ಚಿಮ ಬಂಗಾಳ ಸರ್ಕಾರವೂ ಬಂಗಾಳದಲ್ಲಿ ಏಕರೂಪ ನಾಗರಿಕ ಸಂಹಿತೆ (ಏನಾಸಂ) ಜಾರಿಗೊಳಿಸಲಿದೆ ಎಂದು ಪ.ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಶುಕ್ರವಾರ ಹೇಳಿದ್ದಾರೆ. ಏನಾಸಂ ಅನುಷ್ಠಾನ ನಿಟ್ಟಿನಲ್ಲಿ ನಿಗದಿತ ಪ್ರಕ್ರಿಯೆಗಳಿಗೆ ಸರ್ಕಾರ ಬದ್ಧವಿರಲಿದೆ ಎಂದವರು ವಿಶದಪಡಿಸಿದ್ದಾರೆ.

ಏನಾಸಂ ಅನುಷ್ಠಾನಕ್ಕೆ ನಿರ್ದಿಷ್ಟ ನಿಯಮಾವಳಿಗಳಿವೆ ಮತ್ತು ನಾವಿದಕ್ಕೆ ಸಂಪೂರ್ಣ ಬದ್ಧರಿದ್ದೇವೆ. ಗುಜರಾತ್, ಅಸ್ಸಾಂಗಳಲ್ಲಿ ಇದೇ ಕಾರ್ಯವಿಧಾನ ಅಥವಾ ನಿಯಮಾವಳಿಯನ್ನು ಅನುಸರಿಸಲಾಗಿದೆ ಎಂದು ಸುವೇಂದು ಅಧಿಕಾರಿ ಮಾಹಿತಿ ನೀಡಿದರು. ಗುಜರಾತ್, ಅಸ್ಸಾಂ ಸರ್ಕಾರಗಳು ಏನಾಸಂ ಅನುಷ್ಠಾನಕ್ಕೆ ಪೂರಕ ಶಾಸಕಾಂಗ ಮತ್ತು ಆಡಳಿತಾತ್ಮಕ ಕ್ರಮಗಳನ್ನು ಕೈಗೊಂಡಿದ್ದನ್ನು ಉಲ್ಲೇಖಿಸಿದರು. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಪ್ರೇರಣಾದಾಯಿ ಮಂತ್ರ ವಂದೇಮಾತರಂ ರಚಿಸಿದ ಬಂಕಿಮ್‌ಚಂದ್ರ ಚಟ್ಟೋಪಾಧ್ಯಾಯರ 189ನೇ ಹುಟ್ಟುಹಬ್ಬವನ್ನು ಪ.ಬಂಗಾಳ ಸರ್ಕಾರ ಆಚರಿಸಿದ್ದು, ಈ ಕಾರ್ಯಕ್ರಮ ಸಂದರ್ಭ ಸಿಎಂ ಸುವೇಂದು ಅಧಿಕಾರಿ ಏನಾಸಂ ಅನುಷ್ಠಾನ ಮಾಹಿತಿ ನೀಡಿದರು. ಉತ್ತರ ಕೋಲ್ಕತ್ತಾದ ಕಾಲೇಜ್ ಸ್ಟ್ರೀಟ್‌ನಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಏನಾಸಂ ಅನುಷ್ಠಾನಕ್ಕೆ ಬಿಜೆಪಿ ನಿಗದಿಪಡಿಸಿದ್ದ ಆರು ತಿಂಗಳ ಗಡುವಿಗೆ ಮುಂಚಿತವಾಗೇ ಪ.ಬಂಗಾಳದಲ್ಲಿ ಅನುಷ್ಠಾನಗೊಳ್ಳಲಿದೆ. ಬಂಗಾಳದ ಬಿಜೆಪಿ ಸರ್ಕಾರ ಏನಾಸಂ ಮಸೂದೆಯನ್ನು ಸೋಮವಾರ ವಿಧಾನಸಭೆಯಲ್ಲಿ ಮಂಡಿಸುವ ಸಾಧ್ಯತೆ ಇದೆಯೆಂದು ಮೂಲಗಳು ತಿಳಿಸಿವೆ.

ವೆನೆಜುವೆಲಾ ಭೂಕಂಪ ಸಾವಿನ ಸಂಖ್ಯೆ 589ಕ್ಕೆ

•ವೆನೆಜುವೆಲಾ: ವೆನೆಜುವೆಲಾವನ್ನು ನಡುಗಿಸಿದ ಎರಡು ಪ್ರಬಲ ಭೂಕಂಪಗಳಿಗೆ ಬಲಿಯಾದವರ ಸಂಖ್ಯೆ 589ಕ್ಕೇರಿದ್ದು, ಗಾಯಾಳುಗಳ ಸಂಖ್ಯೆ 2980ಕ್ಕೇರಿದೆ ಎಂದು ಅಧ್ಯಕ್ಷೆ ಡೆಲ್ಸಿ ರಾಡ್ರಿಗಸ್ ತಿಳಿಸಿದ್ದಾರೆ. ಸಂತ್ರಸ್ತ ಪ್ರದೇಶಗಳಲ್ಲಿ ಪರಿಹಾರ ಕಾರ್ಯಗಳಿಗೆ ನೆರವಾಗಲು ಅಂತಾರಾಷ್ಟ್ರೀಯ ರಕ್ಷಣಾ ತಂಡಗಳು ವೆನೆಜುವೆಲಾಗೆ ಆಗಮಿಸಿವೆ.

ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಗಳಿಗೆ ಆದ್ಯತೆ ಕೊಡಲಾಗಿದೆ. ಭೂಕಂಪನದಿಂದ ನೆಲಸಮವಾಗಿರುವ ಕಟ್ಟಡಗಳಡಿ ಸಿಲುಕಿರುವವರ ರಕ್ಷಣೆಗೆ ಪ್ರಯತ್ನಗಳು ಸಾಗಿವೆ. ಈ ನಿಟ್ಟಿನಲ್ಲಿ ನಾವು ನಿರಂತರ ಶ್ರಮಿಸುತ್ತಿದ್ದೇವೆ. ಬುಧವಾರ ಮುಂಜಾನೆಯ ಅವಳಿ ಭೂಕಂಪದಿಂದ ಕರಾವಳಿ ರಾಜ್ಯ ಲಾ ಗ್ವೈರಾ ಸಂಪೂರ್ಣ ಹಾನಿಗೀಡಾಗಿದೆ. ಇಲ್ಲಿನ ಭಗ್ನಾವಶೇಷಗೊಂಡ ಕಟ್ಟಡಗಳಡಿ ಸಿಲುಕಿ ಬದುಕಿರುವವರಿಗಾಗಿ ರಕ್ಷಣಾ ತಂಡಗಳು ಶೋಧ ಕಾರ್ಯಾಚರಣೆ ನಡೆಸುತ್ತಿವೆ ಮತ್ತು ಸಂತ್ರಸ್ತರಿಗೆ ನೀರು, ಆಹಾರ ಪೂರೈಸುತ್ತಿದ್ದು ಇಡೀ ಪ್ರದೇಶ ಮಿಲಿಟರಿ ಹಿಡಿತದಲ್ಲಿದೆ ಎಂದು ರಾಡ್ರಿಗಸ್ ತಿಳಿಸಿದ್ದಾರೆ. ಸರಕಾರಿ ಅಧಿಕಾರಿಗಳು, ಮಿಲಿಟರಿ ಅಧಿಕಾರಿಗಳು ಅಧ್ಯಕ್ಷರ ಜತೆಗಿದ್ದರು.

ಸಾವಿನ ಸಂಖ್ಯೆ: ಸಾವಿನ ಸಂಖ್ಯೆ ಮತ್ತಷ್ಟು ಏರುವ ಆತಂಕವಿದೆ. ವೆನೆಜುವೆಲಾದ 6.76 ಮಿಲಿಯನ್ ಜನರು ಭೂಕಂಪಗಳಿಂದಾಗಿ ತೊಂದರೆಗೀಡಾಗಿದ್ದು, ಈ ಪೈಕಿ ಎರಡು ಮಿಲಿಯನ್ ಜನರು ರಾಜಧಾನಿ ಕರಾಕಸ್‌ನವರು ಎಂದು ಅಂತಾರಾಷ್ಟ್ರೀಯ ವಲಸೆ ಸಂಸ್ಥೆ ಅಂದಾಜಿಸಿದೆ. ಜನರು ತಮ್ಮ ಮನೆಗಳಿರುವ ಜಾಗಕ್ಕೆ ಮರು ಪ್ರವೇಶಿಸಲು ಈ ಕ್ಷಣವೂ ಹೆದರುತ್ತಿದ್ದಾರೆ ಎಂದು ಅಂತಾರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆ ಹೇಳಿದೆ.

ಪಾಕ್‌ನಂತೆ ಭಾರತದಲ್ಲೂ ಬಹುಪತ್ನಿತ್ವ ಜಾರಿಗೊಳಿಸಿ!

•ಮುಂಬೈ: ಪಾಕಿಸ್ತಾನದಂತೆ ಭಾರತದಲ್ಲೂ ಮುಸ್ಲಿಮ್ ವೈಯಕ್ತಿಕ ಕಾನೂನಿನ ಅನ್ವಯ ಬಹುಪತ್ನಿತ್ವ ಜಾರಿ ಮಾಡಬೇಕೆಂದು ಎನ್‌ಸಿಪಿ ಶಾಸಕಿ ಸನಾ ಮಲಿಕ್ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಮಹಾರಾಷ್ಟ್ರ ವಿಧಾನಸಭೆಯಲ್ಲಿ ತ್ರಿವಳಿ ತಲಾಖ್ ಪದ್ಧತಿಯಿಂದ ಮುಸ್ಲಿಮ್ ಮಹಿಳೆಯರು ಎದುರಿಸುವ ಸಮಸ್ಯೆಗಳ ಕುರಿತ ಚರ್ಚೆಯ ವೇಳೆ ಶಾಸಕಿ ಸನಾ ವಿವಾದ ಮೈಗೆಳೆದುಕೊಂಡಿದ್ದಾರೆ. ನಾನು ಬಹುಪತ್ನಿತ್ವವನ್ನು ಸಮರ್ಥನೆ ಮಾಡಿಲ್ಲ ಅಥವಾ ಬೆಂಬಲಿಸಿಲ್ಲ. ಬಿಜೆಪಿ ಶಾಸಕಿ ದೇವಯಾನಿ ಫರಾಂದೆ, ಪಾಕ್‌ನಲ್ಲಿರುವ ಬಹುಪತ್ನಿತ್ವವನ್ನು ಭಾರತ ಅನುಸರಿಸಬೇಕಿಲ್ಲ ಎಂದಿದ್ದರು. ಪಾಕ್ ಉದಾಹರಣೆ ತೆಗೆದುಕೊಂಡು ನಾವು ಯಾಕೆ ನಿರ್ಧರಿಸಬೇಕು. ಪಾಕ್ ನಿಯಮಗಳು ಕುರಾನ್ ಆಧಾರಿತ. ನಾನು ಮಹಾರಾಷ್ಟ್ರದ ಮಗಳು. ಪಾಕಿಸ್ತಾನಕ್ಕೆ ಹೋಗಲ್ಲ ಎಂದು ಸನಾ ಯೂಟರ್ನ್ ಹೊಡೆದಿದ್ದಾರೆ.

ಬಿಜೆಪಿ, ಶಿವಸೇನೆ ವಿರೋಧ: ಪ್ರಧಾನಿ ಮೋದಿ ತ್ರಿವಳಿ ತಲಾಖ್ ವಿರುದ್ಧ ಕಾನೂನು ತಂದು ಮುಸ್ಲಿಮ್ ಮಹಿಳೆಯರ ಗೌರವ ಸಂಪಾದಿಸಿದ್ದಾರೆ. ಆದರೆ ಸನಾ ಮುಸ್ಲಿಮ್ ಮಹಿಳೆಯರಿಗೆ ಕೊಡುವ ಸಂದೇಶವೇನೆಂದು ಶಿವಸೇನೆ ನಾಯಕಿ ಶೈನಾ ಎನ್‌ಸಿ ಪ್ರಶ್ನಿಸಿದ್ದಾರೆ. ಇಲ್ಲಿ ಸಂವಿಧಾನದ ಆಧಾರದಲ್ಲಿ ಆಡಳಿತ ನಡೆಸುವ ಕ್ರಮವಿದೆಯೇ ಹೊರತು ಕುರಾನ್ ಪ್ರಕಾರವಲ್ಲ, ಸಂವಿಧಾನವನ್ನು ಅನುಸರಿಸುವುದಾದರೆ ಭಾರತದಲ್ಲಿ ಇರಬಹುದು ಎಂದು ಬಿಜೆಪಿ ನಾಯಕಿ ಮನೀಶಾ ಚೌಧರಿ ಟೀಕಿಸಿದ್ದಾರೆ. ತಮ್ಮನ್ನು ತಾವು ಸಮರ್ಥಿಸಿಕೊಳ್ಳಲು ಸನಾ ಸಮರ್ಥರು ಎನ್ನುವ ಮೂಲಕ ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ವಿವಾದದಿಂದ ದೂರವುಳಿದಿದ್ದಾರೆ.

ಬಂಕಿಮ್ ಚಂದ್ರ ಜಯಂತಿ: ಪ್ರಧಾನಿ ಮೋದಿ ನಮನ

•ಹೊಸದಿಲ್ಲಿ: 'ವಂದೇ ಮಾತರಂ' ರಾಷ್ಟ್ರೀಯ ಗೀತೆಯ ರಚನೆಕಾರ ಹಾಗೂ ಖ್ಯಾತ ಕಾದಂಬರಿಕಾರ-ಕವಿ ಬಂಕಿಮ್ ಚಂದ್ರ ಚಟ್ಟೋಪಾಧ್ಯಾಯ ಅವರ ಜನ್ಮಜಯಂತಿಯ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಗೌರವ ನಮನ ಸಲ್ಲಿಸಿದ್ದಾರೆ. ಎಕ್ಸ್ ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹಂಚಿಕೊಂಡ ಮೋದಿ, 1838ರ ಜೂ.27ರಂದು ಜನಿಸಿದ ಬಂಕಿಮ್ ಚಂದ್ರರು, 'ವಂದೇ ಮಾತರಂ' ಮೂಲಕ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಶಾಶ್ವತ ಪ್ರೇರಣೆಯೊಂದನ್ನು ನೀಡಿದರು ಎಂದು ಮೋದಿ ಬಣ್ಣಿಸಿದ್ದಾರೆ. ಈ ವರ್ಷ 'ವಂದೇ ಮಾತರಂ'ಗೆ 150 ವರ್ಷಗಳು ಪೂರ್ಣಗೊಳ್ಳುತ್ತಿರುವ ಸಂದರ್ಭದಲ್ಲಿ, ಅವರ ಸಮೃದ್ಧ ಸಾಹಿತ್ಯ ಕೃತಿಗಳು ಇಂದಿಗೂ ಜನರ ಮನಸ್ಸುಗಳನ್ನು ಪ್ರಜ್ವಲಗೊಳಿಸುತ್ತಿದ್ದು, ರಾಷ್ಟ್ರ ನಿರ್ಮಾಣದ ಸಂಕಲ್ಪವನ್ನು ಮತ್ತಷ್ಟು ಬಲಪಡಿಸುತ್ತಿವೆ ಎಂದು ಪ್ರಧಾನಿ ತಿಳಿಸಿದ್ದಾರೆ.

ದೇಶಪ್ರೇಮಿಗಳಿಗೆ ಪ್ರೇರಣಾದಾಯಿ ಗೀತೆ: ಅಮಿತ್ ಶಾ

ವಂದೇಮಾತರಂ ಭಾರತದ ಶಕ್ತಿ

•ಹೊಸದಿಲ್ಲಿ: ವಂದೇಮಾತರಂ ದೇಶಭಕ್ತಿ ಗೀತೆಯಷ್ಟೇ ಅಲ್ಲ, ಭಾರತದ ಪುನರ್‌ನಿರ್ಮಾಣ ಪ್ರಯತ್ನಗಳಿಗೆ ಶಕ್ತಿತುಂಬುವ ಅಪೂರ್ವ ಮಂತ್ರವಾಗಿದೆ. ಬ್ರಿಟಿಷರ ಆಳ್ವಿಕೆ ಸಂದರ್ಭ ದೇಶದ ಪ್ರಜೆಗಳಲ್ಲಿ ರಾಷ್ಟ್ರೀಯ ಆತ್ಮಾಭಿಮಾನವನ್ನು ಬಡಿದೆಬ್ಬಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದ ಬಂಕಿಮ್ ಚಂದ್ರ ಚಟ್ಟೋಪಾಧ್ಯಾಯರು ರಚಿಸಿರುವ ವಂದೇ ಮಾತರಂ, ರಾಷ್ಟ್ರೀಯ ಸಾಂಸ್ಕೃತಿಕ ಜಾಗೃತಿ ಮತ್ತು ರಾಷ್ಟ್ರಭಕ್ತಿಯ ಬಲಿಷ್ಠ ದ್ಯೋತಕವಾಗಿದೆ. ಸ್ವಾತಂತ್ರ್ಯ ಸಂಗ್ರಾಮವು ಅತ್ಯುಚ್ಚ ತೀವ್ರತೆಯ ಘಟ್ಟದಲ್ಲಿದ್ದಾಗ ಬ್ರಿಟಿಷರ ವಿರುದ್ಧ ಹೋರಾಡಲು ದೇಶಪ್ರೇಮಿಗಳಿಗೆ ಪ್ರೇರಣಾದಾಯಿಯಾದ ಮೂಲಮಂತ್ರವೇ ವಂದೇಮಾತರಂ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಬಣ್ಣಿಸಿದ್ದಾರೆ.

ನಾರ್ಕೋ-ಕೋಆರ್ಡಿನೇಶನ್ ಸೆಂಟರ್‌ನ(ಎನ್‌ಸಿಒಆರ್‌ಡಿ) 10ನೇ ಶೃಂಗಮಟ್ಟದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಚಿವರು, ಮಾದಕದ್ರವ್ಯ ಪಿಡುಗಿನ ವಿರುದ್ಧ ರಾಷ್ಟ್ರದ ಅಭಿಯಾನ ಹಿನ್ನೆಲೆಯಲ್ಲಿ ಜೂ.26 ಮಹತ್ತ್ವಪೂರ್ಣ ದಿನವಾಗಿದೆ. ಏಕಕಾಲಕ್ಕೆ ರಾಷ್ಟ್ರಭಕ್ತಿಯ ದ್ಯೋತಕವಾಗಿರುವ ವಂದೇಮಾತರಂನ್ನು ಬರೆದ ಬಂಕಿಮ್‌ಚಂದ್ರ ಚಟ್ಟೋಪಾಧ್ಯಾಯರ ಜನುಮದಿನವೂ ಆಗಿರುವ ಕಾರಣ ಮತ್ತಷ್ಟು ಮಹತ್ತ್ವ ಪಡೆದಿದೆ ಎಂದರು.

ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಬಲಿದಾನಗಳನ್ನು ನೆನಪಿಸಿದ ಸಚಿವ ಶಾ, ಬಹುತೇಕ ರಾಷ್ಟ್ರಭಕ್ತರು ವಂದೇಮಾತರಂ ಜಪಿಸುತ್ತಲೇ ಬ್ರಿಟಿಷರ ಗಲ್ಲು ಶಿಕ್ಷೆಗೆ ಕೊರಳೊಡ್ಡಿದ್ದರು. ನಾವು ಭಾರತೀಯರೆಲ್ಲರಿಗೆ ವಂದೇಮಾತರಂ ಒಂದು ಘೋಷಣೆ ಅಥವಾ ಹಾಡಷ್ಟೇ ಅಲ್ಲ, ಸ್ವಾತಂತ್ರ್ಯ ಸಂಗ್ರಾಮಕ್ಕೆ ಪ್ರೇರಣೆಯಾದ ಗೀತೆ ಮಾತ್ರವಲ್ಲ, ಜತೆಗೆ ಭಾರತದ ಪುನರ್ ನಿರ್ಮಾಣಕ್ಕಿರುವ ಅಪೂರ್ವ ಮಂತ್ರವಾಗಿದೆ. ಜಗತ್ತಿನಲ್ಲೇ ಅತ್ಯುಚ್ಚಸ್ಥಾನದಲ್ಲಿ ಭಾರತಮಾತೆಯನ್ನು ಮರಳಿ ಪ್ರತಿಷ್ಠಾಪಿಸುವ ಧ್ಯೇಯಮಂತ್ರವಾಗಿದೆ ಎಂದು ಸಚಿವರು ವಿವರಿಸಿದರು.

ಮಾದಕವಸ್ತು ನಿಯಂತ್ರಣಕ್ಕೆ ಕಠಿಣ ಕಾಯ್ದೆ: ಮಾದಕವಸ್ತು ಮುಕ್ತ ಭಾರತ ನಿರ್ಮಾಣ ನಿಟ್ಟಿನಲ್ಲಿ ಸರಕಾರದ ಪ್ರಯತ್ನಗಳನ್ನು ಬಲಪಡಿಸುವ ಬಗ್ಗೆ ಚರ್ಚಿಸಲು ಆಯೋಜಿಸಿದ್ದ ಸಭೆಯಲ್ಲಿ, 44 ಕೇಂದ್ರೀಯ ಖಾತೆಗಳು ಮತ್ತು ಇಲಾಖೆಗಳು, ರಾಜ್ಯ ಸರಕಾರಗಳು, ಮಾದಕವಸ್ತು ನಿಯಂತ್ರಣ ಕಾಯಿದೆ ಅನುಷ್ಠಾನ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಬೆಳೆಯುತ್ತಿರೋ ಸಿಂಥೆಟಿಕ್ ಮಾದಕವಸ್ತುಗಳ ಪಿಡುಗಿನ ನಿಯಂತ್ರಣ, ಡಾರ್ಕ್ ನೆಟ್ ಮೂಲಕ ಮಾದಕ ವಸ್ತು ಕಳ್ಳಸಾಗಣೆಗೆ ಮೂಗುದಾರ ಹಾಕುವುದು ಇತ್ಯಾದಿ ವಿಚಾರಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು.

ಕೃತಕ ಬುದ್ಧಿಮತ್ತೆ ಆವಿಷ್ಕಾರ ಶೃಂಗಸಭೆಗೆ ಮೋದಿ ಸಂದೇಶ

ಅವಕಾಶ ಸೃಷ್ಟಿಗೆ ಎಐ ಮಹತ್ವ

•ಹೊಸದಿಲ್ಲಿ: ಪರಿಪೂರ್ಣ ಮತ್ತು ಜವಾಬ್ದಾರಿಯುತವಾಗಿ ಕೃತಕ ಬುದ್ಧಿಮತ್ತೆಯ ಅಳವಡಿಕೆಯು ಅಭಿವೃದ್ಧಿ ರಾಷ್ಟ್ರವಾಗುವ ನಿಟ್ಟಿನಲ್ಲಿ ಭಾರತದ ಯಾನದಲ್ಲಿ ಅತ್ಯಂತ ನಿರ್ಣಾಯಕ ಪಾತ್ರವಹಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಆವಿಷ್ಕಾರ, ಉತ್ಪಾದಕತೆ, ಉದ್ದಿಮೆಗಳಿಗೆ ನವರೂಪ ನೀಡಿಕೆ, ಹೊಸ ಅವಕಾಶಗಳ ಸೃಜಿಸುವಲ್ಲಿ ಕೃತಕ ಬುದ್ಧಿಮತ್ತೆ ಮಹತ್ತ್ವದ ಪಾತ್ರ ವಹಿಸುತ್ತಿದೆ. ತಂತ್ರಜ್ಞಾನ ರಂಗದಲ್ಲಿನ ತ್ವರಿತ ಮುನ್ನಡೆಗಳ ಫಲವಾಗಿ ಲೆಕ್ಕಾಚಾರ, ವಿತ್ತೀಯ ವೃತ್ತಿರಂಗದಲ್ಲೂ ತ್ವರಿತ ಮಾರ್ಪಾಡುಗಳಾಗುತ್ತಿವೆ ಎಂದು ಪ್ರಧಾನಿ ಮೋದಿ ಗಮನ ಸೆಳೆದಿದ್ದಾರೆ. ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಸಿಎಐ) ಆಯೋಜಿಸಿದ ಎಐ ಆವಿಷ್ಕಾರ ಶೃಂಗಸಭೆಗೆ ತಮ್ಮ ಸಂದೇಶದಲ್ಲಿ ಪ್ರಧಾನಿ ಮೋದಿ ಈ ರೀತಿ ಭರವಸೆಗಳ ವ್ಯಕ್ತಪಡಿಸಿದ್ದಾರೆ. ಮಾನವ ನಿರ್ಣಯ ಸಹಿತ ಎಐಯನ್ನು ಜವಾಬ್ದಾರಿಯುತ ಬಳಸಿದಲ್ಲಿ ಎಐ ಆಧಾರಿತ ಪರಿಕರಗಳು ದಕ್ಷತೆಯನ್ನು ಹೆಚ್ಚಿಸಬಲ್ಲವು, ಅನುವರ್ತನಶೀಲತೆಯನ್ನು ಬಲಪಡಿಸಬಲ್ಲವು, ಸೂಕ್ತ ನಿರ್ಧಾರಗಳ ಕೈಗೊಳ್ಳಲು ನೆರವಾಗುವುದು ಮತ್ತು ವೃತ್ತಿಪರರು ಮಹಾನ್ ಮೌಲ್ಯದ ಫಲಿತಾಂಶಗಳ ಪಡೆಯಲು ನೆರವಾಗಲಿವೆ ಎಂದು ಮೋದಿ ತಮ್ಮ ಸಂದೇಶದಲ್ಲಿ ಹೇಳಿದ್ದಾರೆ.



ನಿರ್ಣಾಯಕ ಪಾತ್ರ

2047ರ ವೇಳೆ ಭಾರತವು ಸಂಪನ್ನ ರಾಷ್ಟ್ರವಾಗುವ ಧ್ಯೇಯದ ಸಾಕಾರಕ್ಕಾಗಿ ನಡೆದಿರುವ ಹಲವಾರು ಪ್ರಯತ್ನಗಳ ಭಾಗವಾಗಿ ಸರಕಾರ ವಿವಿಧ ಉಪಕ್ರಮಗಳನ್ನು ಕೈಗೊಳ್ಳುತ್ತಿದೆ. ಎಐಯ ಜವಾಬ್ದಾರಿಯುತ ಬಳಕೆಯು ಈ ನಿಟ್ಟಿನಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ. ರಾಷ್ಟ್ರದ ಪ್ರಗತಿಗೆ ಚಾರ್ಟರ್ಡ್ ಅಕೌಂಟೆಂಟ್‌ಗಳ ಕೊಡುಗೆಯನ್ನು ಪ್ರಧಾನಿ ಶ್ಲಾಘಿಸಿದ್ದಾರೆ. ಒಂದೆಡೆ ಎಐ ರಂಗದ ಅವಕಾಶಗಳನ್ನು ಭಾರತ ಸ್ವೀಕರಿಸುತ್ತಿರುವಂತೆಯೇ, ಸಿಎ ಸೋದರ ಸಮೂಹವು ಹಣಕಾಸು ರಂಗದಲ್ಲಿ ತಜ್ಞತೆ, ಆವಿಷ್ಕಾರಗಳ ಹರಿಕಾರರಾಗಿ ಅತ್ಯುನ್ನತ ದರ್ಜೆಯ ಸಮಗ್ರತೆಯನ್ನು ನಿರಂತರ ಎತ್ತಿಹಿಡಿಯೋ ಮುಖೇನ, ವಿಕಸಿತ ಭಾರತ ನಿರ್ಮಾಣಕ್ಕೆ ಕೊಡುಗೆಯಾಗಲಿದ್ದಾರೆಂಬ ಆತ್ಮವಿಶ್ವಾಸ ತನಗಿದೆ ಎಂದು ಪ್ರಧಾನಿ ಮೋದಿ ಭರವಸೆ ವ್ಯಕ್ತಪಡಿಸಿದ್ದಾರೆ.

ಕಿರುಸುದ್ದಿ

ಪ್ರತಿಭಾ ಪುರಸ್ಕಾರ, ಸನ್ಮಾನ ಇಂದು

ಕುಷ್ಟಗಿ: ಕರ್ನಾಟಕ ರಾಜ್ಯ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘ ತಾಲೂಕಾ ಘಟಕದ ನೇತೃತ್ವದಲ್ಲಿ ಇಲ್ಲಿನ ಎನ್.ಸಿ.ಎಚ್. ಪ್ಯಾಲೇಸ್ ನಲ್ಲಿ ಜೂ. 27ರಂದು ಬೆಳಗ್ಗೆ 10ಕ್ಕೆ ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಮಹನೀಯರಿಗೆ ಸನ್ಮಾನ ಸಮಾರಂಭ ಆಯೋಜಿಸಿದೆ. ಮದ್ದಾನೇಶ್ವರ ಮಠದ ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯವಹಿಸುವರು, ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಶಿಧರ ಕವಲಿ ಅಧ್ಯಕ್ಷತೆವಹಿಸುವರು. ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ ಸಮಾರಂಭ ಉದ್ಘಾಟಿಸುವರು. ಬೈಲ ಹೊಂಗಲ ಶಾಸಕ ಶಿವಾನಂದ ಕೌಜಲಗಿ, ಮಾಜಿ ಸಚಿವ ಅಮರೇಗೌಡ ಪಾಟೀಲ ಬಯ್ಯಾಪೂರ, ಮಾಜಿ ಸಂಸದ ರಮೇಶ ಕತ್ತಿ, ಮಾಜಿ ಶಾಸಕ ಅಪ್ಪು ಪಟ್ಟಣಶೆಟ್ಟಿ, ಪರಣ್ಣ ಮುನವಳ್ಳಿ, ಬಣಜಿಗ ಸಮಾಜದ ರಾಜ್ಯ ಉಪಾಧ್ಯಕ್ಷ ಅಂದಪ್ಪ ಜವಳಿ, ತಾಲೂಕಾ ಘಟಕದ ಗೌರವ ಅಧ್ಯಕ್ಷ ಸೋಮಶೇಖರ ವೈಜಾಪೂರ, ಮಾಜಿ ಶಾಸಕ ಕೆ.ಶರಣಪ್ಪ, ತುಂಗಭದ್ರಾ ಕಾಡಾ ಅಧ್ಯಕ್ಷ ಹಸನಸಾಬ್ ದೋಟಿಹಾಳ, ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಬಸವರಾಜ ಪಡಿ, ವಿಶ್ವನಾಥ ಮಳಗಿ, ಜಿಲ್ಲಾಧ್ಯಕ್ಷ ವೀರೇಶ ಬಂಗಾರಶೆಟ್ಟರ್, ನೌಕರ ಸಂಘದ ಅಧ್ಯಕ್ಷ ಬಸಟೆಪ್ಪ ಸಿಳ್ಳೀನ್, ಮಹಿಳಾ ಘಟಕದ ಗೌರವಾಧ್ಯಕ್ಷೆ ಜಯದೇವಿ ಉಪ್ಪೀನ್, ಅಕ್ಕಮಹಾದೇವಿ ಪಟ್ಟಣಶೆಟ್ಟಿ, ಯುವ ಘಟಕದ ಗೌರವಾಧ್ಯಕ್ಷ ವೀರೇಶ ಬಳ್ಳೊಳ್ಳಿ, ಯುವ ಘಟಕದ ಅಧ್ಯಕ್ಷ ವೀರೇಶ ಕಲಕಬಂಡಿ ಭಾಗವಹಿಸುವರು ಎಂದು ಪ್ರಧಾನ ಕಾರ್ಯದರ್ಶಿ ರವೀಂದ್ರ ಪಾಟೀಲ ತಿಳಿಸಿದ್ದಾರೆ.

ಜೂ.29,30ಕ್ಕೆ ಕೌನ್ಸೆಲಿಂಗ್

ಕುಕನೂರ: ತಾಲೂಕಿನ ಇಟಗಿ ಗ್ರಾಮದ ಪಿಎಂಶ್ರೀ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ಜೂ.29 ಹಾಗೂ 30ರಂದು 6ನೇ ತರಗತಿ ಖಾಲಿ ಉಳಿದಿರುವ ಸೀಟ್ ಗಳಿಗೆ ಕೌನ್ಸೆಲಿಂಗ್ ಮೂಲಕ ತುಂಬಿಕೊಳ್ಳಲಾಗುವುದು. ಈಗಾಗಲೇ 6ನೇ ತರಗತಿ ದಾಖಲಾತಿಗಳು ಮುಗಿದಿದ್ದು, ಇನ್ನೂ 24 ಸೀಟ್‌ಗಳು ಖಾಲಿ ಉಳಿದಿರುತ್ತವೆ. ಆದರಿಂದಾಗಿ 1:30 ಅನುಪಾತದಲ್ಲಿ ಒಂದು ಸೀಟ್‌ಗೆ 30 ವಿದ್ಯಾರ್ಥಿಗಳನ್ನು ಕೌನ್ಸಿಲಿಂಗ್ ಮಾಡಲಾಗುತ್ತದೆ. ಜೂ.29ರಂದು ಸಾಮಾನ್ಯ ವರ್ಗ ಕೌನ್ಸಿಲಿಂಗ್ ನಡೆಯುತ್ತದೆ. ಜೂ.30ರಂದು ಎಸ್ಸಿ, ಎಸ್ಟಿ, ಪ್ರವರ್ಗ 1, 2ಬಿ, ಎರಡು ದಿನ ಬೆಳಗ್ಗೆ 10ರಿಂದ ಕೌನ್ಸಿಲಿಂಗ್ ಪ್ರಾರಂಭವಾಗುವುದು. ವಿದ್ಯಾರ್ಥಿಗಳು ಪಾಲಕರು, ಅರ್ಜಿ ಹಾಕಿರುವ ಪ್ರತಿಯ ಜೆರಾಕ್ಸ್, ಪರೀಕ್ಷೆ ಬರೆದಿರುವ ಪ್ರವೇಶ ಪತ್ರ, ಆಧಾರ ಕಾರ್ಡ್, ಜಾತಿ, ಹಾಗೂ ಆದಾಯ ಪ್ರಮಾಣ ಪತ್ರ, ಜೆರಾಕ್ ಪ್ರತಿಗಳನ್ನು ದಾಖಲೆಗಳನ್ನು ತರಬೇಕು. ಬೇರೆ ತಾಲೂಕುಗಳಾಗಿದ್ದರೆ ತಹಶೀಲ್ದಾರರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರವನ್ನು ತರತಕ್ಕದ್ದು. 1:30 ಅನುಪಾತದಲ್ಲಿ ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಕ್ಷೇತ್ರ ಶಿಕ್ಷಣಾಕಾರಿ ಕಾರ್ಯಾಲಯದಲ್ಲಿ ಮಾಹಿತಿ ಪ್ರಕಟಿಸಲಾಗುವುದೆಂದು. ಇಟಗಿ ಗ್ರಾಮದ ಪಿಎಂಶ್ರೀ ಆದರ್ಶ ವಿದ್ಯಾಲಯದ ಮುಖ್ಯೋಪಾಧ್ಯಾಯ ರಾಮರಡ್ಡೆಪ್ಪ ಹಾಲಕೇರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಸಭೆ

ಸಿರುಗುಪ್ಪ: ನಗರದ ತಾಲೂಕು ಆಡಳಿತ ಕಚೇರಿಯಲ್ಲಿ ಪಲ್ಸ್ ಪೋಲಿಯೋ ಮತ್ತು ಮಲೇರಿಯಾ ಮಾಸಾಚರಣೆಯ ತಾಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಸಭೆ ಜರುಗಿತು. ತಾಲೂಕು ಆರೋಗ್ಯಾಧಿಕಾರಿ ಡಾ.ದಮ್ಮೂರು ಬಸವರಾಜ ಮಾತನಾಡಿ, ಜೂ.28ರಿಂದ ಜುಲೈ 1ರವರೆಗೆ ತಾಲೂಕಿನಲ್ಲಿ ಪಲ್ಸ್ ಪೋಲಿಯೋ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಈ ವರ್ಷ 5 ವರ್ಷದೊಳಗಿನ 59447 ಮಕ್ಕಳಿಗೆ ಪೋಲಿಯೋ ಹನಿ ನೀಡುವ ಗುರಿ ಹೊಂದಲಾಗಿದೆ. ಇದಕ್ಕಾಗಿ 187 ಸ್ಥಿರ ಬೂತ್, 4 ಸಂಚಾರಿ ಬೂತ್ ಹಾಗೂ 15 ಟ್ರಾನ್ಸಿಟ್ ಬೂತ್ ಸ್ಥಾಪಿಸಲಾಗಿದೆ. 392 ಆರೋಗ್ಯ ಸಿಬ್ಬಂದಿ ಮನೆ ಮನೆಗೆ ಭೇಟಿ ನೀಡಿ ಪೋಲಿಯೋ ಹನಿ ಪಡೆಯದ ಮಕ್ಕಳನ್ನು ಗುರುತಿಸಿ ಲಸಿಕೆ ನೀಡಲಿದ್ದಾರೆ ಎಂದರು. ಜಿಲ್ಲಾ ಕೀಟಾ ಶಾಸ್ತ್ರಜ್ಞೆ ಡಾ.ನಂದಿನಿ ಕಡಿ ಅವರು ಜುಲೈ ತಿಂಗಳ ಮಲೇರಿಯಾ ಮಾಸಾಚರಣೆ ಕುರಿತು ಮಾತನಾಡಿ, ಮಲೇರಿಯಾ ಜ್ವರ ಹರಡುವ ಬಗೆ, ಪಿವಿಟಿಜಿ ಮತ್ತು ಪಿಎಫ್ ಪ್ರಭೇದಗಳು ಮತ್ತು ಅದಕ್ಕೆ ದೊರೆಯುವ ಉಚಿತ ಚಿಕಿತ್ಸಾ ಸೌಲಭ್ಯಗಳು, ಸೊಳ್ಳೆಗಳ ಬೆಳವಣಿಗೆ ನೀರಿನಲ್ಲಿ ಬೆಳೆಯುವ ಲಾರ್ವಗಳನ್ನು ಪ್ರಾತ್ಯಕ್ಷಿತವಾಗಿ ತೋರಿಸಿ ನಿಯಂತ್ರಣ ಕ್ರಮ, ಮುಂಜಾಗ್ರತಾ ಕ್ರಮ ಹಾಗೂ ರಕ್ಷಣಾ ಕ್ರಮ ಕುರಿತಂತೆ ಮಾಹಿತಿ ನೀಡಿದರು. ಉಪ ತಹಶೀಲ್ದಾರ್ ಸಿದ್ದಾರ್ಥ ಕಾರಂಜಿ ಮಾತನಾಡಿ, ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಿ ಅಗತ್ಯ ಪ್ರಚಾರ ನಡೆಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದರು. ಆರೋಗ್ಯ ಶಿಕ್ಷಣ ಅಧಿಕಾರಿ ಮಹಮ್ಮದ್ ಖಾಸಿಂ ಹಾಗೂ ವಿವಿಧ ಇಲಾಖೆಯ ಅಧಿಕಾರಿ ಇದ್ದರು.

ಮುಂಗಾರು ವೈಫಲ್ಯ, ರೈತರಲ್ಲಿ ನಿರಾಶೆ | ವಲ್ಲದ ಮನಸ್ಸಿನಿಂದ ಎತ್ತುಗಳಿಗೆ ಅಲಂಕಾರ

ಕಾರ ಹುಣ್ಣಿಮೆ ಸಂಭ್ರಮಕ್ಕೆ ಮಂಕು

ಸಿದ್ದಯ್ಯ ಹೆಸರೂರು

ದಿಗಂತ ವಿಶೇಷ





ಮಸ್ಕಿ: ವರ್ಷವಿಡೀ ಕಠಿಣ ಶ್ರಮ ಪಟ್ಟು ಜಗತ್ತಿಗೆ ಅನ್ನ ನೀಡುವ ರೈತನ ಪಾಲಿಗೆ 'ಕಾರ ಹುಣ್ಣಿಮೆ' ಎಂದರೆ ಹೊಸ ವರ್ಷದ ಸಂಭ್ರಮ. ಮುಂಗಾರು ಮಳೆಯ ಮಣ್ಣಿನ ವಾಸನೆಗೆ ಮೈ ದಡವಿ ಎದ್ದು ನಿಲ್ಲುತ್ತಿದ್ದ ಹಳ್ಳಿಗಳು, ಈ ಬಾರಿ ಮಾತ್ರ ಸ್ಮಶಾನ ಮೌನಕ್ಕೆ ಶರಣಾಗಿವೆ.

ಮುಂಗಾರು ಹಂಗಾಮು ಜಾರಿಯಲ್ಲಿದ್ದರೂ ಮಸ್ಕಿ ತಾಲೂಕಿನಾದ್ಯಂತ ಬಿತ್ತನೆಗೆ ಪೂರಕವಾದ ಒಂದು ಹದ ಮಳೆಯೂ ಬಾರದ ಕಾರಣ, ಮುಂದೆ ಬರುವ ಕಾರ ಹುಣ್ಣಿಮೆ ಹಬ್ಬದ ಸಡಗರವನ್ನು ಬರಗಾಲದ ಆತಂಕ ಸಂಪೂರ್ಣವಾಗಿ ನುಂಗಿ ಹಾಕಿದೆ.

ಎತ್ತುಗಳ ನೋಡಿ ಕರಗಿದ ರೈತನ ಕರಳು: ತಾಲೂಕಿನ ಹಂಪನಾಳ, ವಟಗಲ್, ಗುಡದೂರು, ಅಂತರಗಂಗಿ, ಮೆದಿಕಿನಾಳ ಸೇರಿದಂತೆ ನೂರಾರು ಹಳ್ಳಿಗಳಲ್ಲಿ ಪ್ರತಿವರ್ಷ ಈ ಹೊತ್ತಿಗೆ ಎತ್ತುಗಳ ಕೊರಳ ಗಂಟೆ ಸದ್ದು ಮೊಳಗುತ್ತಿತ್ತು. ಆದರೆ ಈ ಬಾರಿ ಹಳ್ಳಿಗಳ ರಸ್ತೆಗಳಲ್ಲಿ ಧೂಳು ಏಳುತ್ತಿದೆ. ಹಬ್ಬದ ಸಂಪ್ರದಾಯಮುರಿಯಬಾರದು, ಹೊಟ್ಟೆಗಿಲ್ಲದಿದ್ದರೂ ಹೆತ್ತ ಮಗನಂತೆ ಸಾಕಿದ ಬಸವಣ್ಣನಿಗೆ ಹಬ್ಬದ ದಿನ ಉಪವಾಸ ಹಾಕಬಾರದು ಎಂಬ ಒಂದೇ ಕಾರಣಕ್ಕೆ ರೈತರು ಅರ್ಧಮನಸ್ಸಿನಿಂದಲೇ ಎತ್ತುಗಳನ್ನು ಹಳ್ಳಗಳಿಗೆ ಕರೆದೊಯ್ದು ಮೈ ತೊಳೆಯುತ್ತಿದ್ದಾರೆ.

ಮನೆಗಳಲ್ಲಿ ಹೆಣ್ಣುಮಕ್ಕಳು ಜೋಳ, ಬೆಲ್ಲದ ಸಾಂಪ್ರದಾಯಿಕ ಹೊನ್ನುಗ್ಗಿ ಮತ್ತು ಹೋಳಿಗೆಯ ಅಡುಗೆಯ ಸಿದ್ಧತೆಯಲ್ಲಿದ್ದಾರೆ.

ಆದರೆ, ಧಾನ್ಯದ ಕೊಠಡಿಗಳು ಖಾಲಿಯಾಗುತ್ತಿರುವ ಈ ಕಠಿಣ ಪರಿಸ್ಥಿತಿಯಲ್ಲಿ, ಒಣಗುತ್ತಿರುವ ಹೊಲಗಳನ್ನು ನೋಡುತ್ತಾ ಕಣ್ಣೀರ ನಡುವೆಯೇ ಅಡುಗೆ ಮಾಡುವ ಪರಿಸ್ಥಿತಿ ತಾಯಂದಿರದ್ದಾಗಿದೆ. ಎತ್ತುಗಳಿಗೆ ನೈವೇದ್ಯ ಉಣಿಸುವಾಗ ಮುಂದೇನು ಗತಿ ಬಸವಣ್ಣ ಎಂದು ರೈತರು ಎತ್ತುಗಳ ಹೆಗಲ ಮೇಲೆ ಕೈಯಿಟ್ಟು ಕಣ್ಣೀರು ಹಾಕುತ್ತಿರುವ ದೃಶ್ಯಗಳು ಗ್ರಾಮೀಣ ಭಾಗದಲ್ಲಿ ಎದೆ ಸೀಳುವಂತಿವೆ.

ಪ್ರಾರ್ಥನೆಯ ವೇದಿಕೆಯಾಗಲಿರುವ 'ಕರಿ ಹರಿಯುವ' ಸ್ಪರ್ಧೆ: ಹಬ್ಬದ ಸಂಜೆ ಹಳ್ಳಿಗಳ ಪ್ರಮುಖ ಅಗಸಿ ಬಾಗಿಲಿನಲ್ಲಿ ಜರುಗಲಿರುವ ಸಾಂಪ್ರದಾಯಿಕ ಕರಿ ಹರಿಯುವ (ಎತ್ತುಗಳ ಓಟದ) ಸ್ಪರ್ಧೆಗೂ ಸಿದ್ಧತೆಗಳು ನಡೆದಿವೆ.

ಪ್ರತಿವರ್ಷ ಸೀಮೆಯ ಜನರೆಲ್ಲಾ ಸೇರಿ ಕೇಕೆ, ಚಪ್ಪಾಳೆ ತಟ್ಟಿ ಸಂಭ್ರಮಿಸುತ್ತಿದ್ದ ಈ ಕ್ಷಣ, ಈ ಬಾರಿ ಕೇವಲ ಮಳೆರಾಯನನ್ನು ಒಲಿಸಿಕೊಳ್ಳುವ ಒಂದು ಸಾಮೂಹಿಕ ಆಕ್ರಂದನ ಹಾಗೂ ಪ್ರಾರ್ಥನೆಯ ವೇದಿಕೆಯಾಗಲಿದೆ. ಯುವಕರು ಗುಂಡು ಎತ್ತುವ ಸ್ಪರ್ಧೆಗಳಿಂದ ದೂರ ಸರಿದು, ಮುಗಿಲ ಕಡೆಗೆ ಕಣ್ಣು ನೆಟ್ಟು ಮಳೆಗಾಗಿ ಪ್ರಾರ್ಥಿಸುತ್ತಿದ್ದಾರೆ.

> **ನಮ್ಮ ಮಸ್ಕಿ ಸೀಮೆಯಲ್ಲಿ ಇಂತಹ ಪರಿಸ್ಥಿತಿಯನ್ನು ನಾವು ಎಂದೂ ಭಾವಿಸಿಲ್ಲ. ಕಾರ ಹುಣ್ಣಿಮೆ ಬಂತೆಂದರೆ ಭೂಮಿ ಹಸಿರಾಗಿ ಇರಬೇಕಿತ್ತು. ಆದರೆ ಇಂದು ಭೂಮಿ ತಂಪು ಇಲ್ಲ. ಸಾಲ ಮಾಡಿ ತಂದ ಬಿತ್ತನೆ ಬೀಜಗಳು ಹೊಲದಲ್ಲಿ ಮೂಲೆಯಲ್ಲಿ ಕೊಳೆಯುತ್ತಿವೆ. ಸಂಪ್ರದಾಯಕ್ಕಾಗಿ ಬಸವಣ್ಣನಿಗೆ ಬಣ್ಣ ಹಚ್ಚಿ, ಪೂಜೆ ಮಾಡಿ ಹೊನ್ನುಗ್ಗಿ ಉಣಿಸುತ್ತಿದ್ದೇವೆ ಹೊರತು ನಮ್ಮ ಹೊಟ್ಟೆಯಲ್ಲಿ ಮಾತ್ರ ಬೆಂಕಿ ಉರಿಯುತ್ತಿದೆ.**
> **ಮಳೆರಾಯ ಇನ್ನೇಲಾದರೂ ಕಣ್ಣು ಬಿಡದಿದ್ದರೆ ನಮ್ಮ ಬದುಕು ಬೀದಿಗೆ ಬೀಳುತ್ತದೆ.**
> ■ **ಹನುಮಂತ ಬಾರಿಕೇರ ಕಸನದಡ್ಡಿ ನೊಂದ ರೈತರು, ಮಸ್ಕಿ**

ತಾಲೂಕಿನಾದ್ಯಂತ ಮೊಹರಂ ಆಚರಣೆ

ಯಲಬುರ್ಗಾ: ಪಟ್ಟಣ ಸೇರಿದಂತೆ ತಾಲೂಕಿನದ್ಯಾಂತ ಕಳೆದ ಐದಾರು ದಿನಗಳಿಂದ ಹಿಂದೂ-ಮುಸ್ಲಿಂರ ಭಾವೈಕ್ಯತೆಯ ಪ್ರತೀಕ ಮೊಹರಂ ಹಬ್ಬವನ್ನು ಶುಕ್ರವಾರ ಭಕ್ತಿ, ಶ್ರದ್ದೆಯಿಂದ ಶಾಂತಯುತವಾಗಿ ಆಚರಿಸುವ ಮೂಲಕ ಹಬ್ಬಕ್ಕೆ ತೆರೆ ಕಂಡಿತು.

ಗುರುವಾರ ರಾತ್ರಿ ಖತ್ತಲರಾತ್ರಿ ಅಂಗವಾಗಿ ಎಲ್ಲ ಮಸೀದಿಗಳಲ್ಲಿ ಆಹೋರಾತ್ರಿ ಸಾಕಷ್ಟು ಸಂಖ್ಯೆ ಹಿಂದೂ, ಮುಸಲ್ಮಾನ ಭಕ್ತರು ಜಮಾಯಿಸಿದ್ದರು. ಕೋಲಾಟ, ಅಲಾಯಿ, ಹೆಜ್ಜೆ ಕುಣಿತ, ರಿವಾಯತ್, ಪದಗಳು ಕಲಾವಿದರು, ಇಡೀ ರಾತ್ರಿ ಕಾರ್ಯಕ್ರಮ ನಡೆಸಿಕೊಟ್ಟರು.

ಅಲ್ಲದೆ ಹುಸೇನಿ ಹುಸೇನಿಯರು ಹತರಾದ ಸಂಕೇತವಾಗಿ, ಖತಲ ರಾತ್ರಿಯೆಂದು ತಂಡೋಪ ತಂಡವಾಗಿ ಮಸೀದಿಗಳಿಗೆ ತೆರಳಿ ಪೂಜೆ, ಪ್ರಾರ್ಥನೆ ಸಲ್ಲಿಸಿ ಶುಕ್ರವಾರ ನಸುಕಿನಲ್ಲಿ ಅಲಂಕರಿಸಲಾಗಿದ್ದ ಎಲ್ಲ ಮಸೀದಿಗಳಲ್ಲಿ ಅಲಾಯಿ ದೇವರುಗಳನ್ನು ಒಂದೆಡೆ ಸೇರಿಸಿ ವಿವಿಧ ಧಾರ್ಮಿಕ ವಿಧಿ-ವಿಧಾನಗಳನ್ನು ನೆರವೇರಿಸಿದರು.

ಕುಕನೂರು, ಸಂಕನೂರು, ಮುಧೋಳ, ಕುದ್ರಿಮೊತಿ, ಮಂಗಳೂರು, ಬೇವೂರು, ಹಿರೇವಂಕಲಕುಂಟಾ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಆಚರಿಸಲಾಯಿತು. ಪಟ್ಟಣದಲ್ಲಿ ಶುಕ್ರವಾರ ರಾತ್ರಿ ಅಲಾಯಿ ದೇವರ ವಿವಿಧ ವಾದ್ಯ ಮೇಳದೊಂದಿಗೆ ಮೆರವಣಿಗೆ ನಡೆಯಿತು.

ಬಳಿಕ ದೇವರುಗಳನ್ನು ಹೊಳೆಗೆ ಕಳುಹಿಸಲಾಯಿತು. ವಿವಿಧ ಭಾಗಗಳಿಂದ ಸಾವಿರಾರು ಭಕ್ತರು ದೇವರ ದರ್ಶನವನ್ನು ಪಡೆದುಕೊಂಡರು. ಈ ಮೊಹರಂ ಹಬ್ಬದಲ್ಲಿ ಯಾವುದೇ ಗಲಾಟೆ ಆಗದಂತೆ ಶಾಂತಿ ರೀತಿಯಿಂದ ಹಬ್ಬವನ್ನು ಆಚರಿಸುವಲ್ಲಿ ಯಲಬುರ್ಗಾ, ಕುಕನೂರು, ಬೇವೂರು ಪೋಲೀಸ್ ಠಾಣೆಯ ಸಿಪಿಐ ಹಾಗೂ ಪಿಎಸ್ಐಗಳ ನೇತೃತ್ವದಲ್ಲಿ ಪೊಲೀಸರು ಸೂಕ್ತ ಬಂದೋಬಸ್ತ್ ಏರ್ಪಡಿಸಿದ್ದರು.

ಈ ವೇಳೆಯಲ್ಲಿ ಪಟ್ಟಣದ ಗಣ್ಯರಾದ ಆನಂದ ಉಳ್ಳಾಗಡ್ಡಿ, ಶಿವಕುಮಾರ ಭೂತೆ, ಮಹಿಬೂಬಸಾಬ ಮಕಾಂದಾರ, ಬಿ.ಎಸ್.ಪೊಲೀಸ್ ಪಾಟೀಲ, ಇಮಾಮಸಾಬ ಸಂಕನೂರ, ಅಬ್ಬಾಸ ಅಲಿ, ಇಮಾಮಸಾಬ ಕೊತ್ವಾಲ್, ಮಹಮ್ಮದ ಗೌಸ್, ಶಂಕರ್ ಕಲಬುರ್ಗಿ, ರಿಯಾಜ್ ಖಾಜಿ, ಅಮೀರ ಮತ್ತಿತರರು ಇದ್ದರು.



ವಿದ್ಯುತ್ ಕಂದಾಯ ಪಾವತಿಸಿ: ಚಂದ್ರಕಾಂತ




ಕುಷ್ಟಗಿ: ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡಿರುವ ಗ್ರಾಹಕರು ಕೂಡಲೇ ಕಂದಾಯ ಪಾವತಿಸಿ ಇಲಾಖೆಯೊಂದಿಗೆ ಸಹಕರಿಸಬೇಕು ಎಂದು ಹೆಸ್ಕಾಂ ಎಸ್‌ಒ ಚಂದ್ರಕಾಂತ ಮನವಿ ಮಾಡಿದ್ದಾರೆ.

ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಕಂದಾಯ ವಸೂಲಾತಿ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಬಾಕಿ ಉಳಿಸಿಕೊಂಡಿರುವ ಗ್ರಾಹಕರ ಮನೆಗಳಿಗೆ ಭೇಟಿ ನೀಡಿ ಜಾಗೃತಿ ಮೂಡಿಸಲಾಗುತ್ತಿದೆ. ನಿರಂತರ ಹಾಗೂ ಗುಣಮಟ್ಟದ ವಿದ್ಯುತ್ ಸರಬರಾಜು ನಿರ್ವಹಣೆಗೆ ಗ್ರಾಹಕರು ಸಮಯಕ್ಕೆ ಸರಿಯಾಗಿ ಬಿಲ್ ಪಾವತಿಸುವುದು ಅಗತ್ಯವಾಗಿದೆ ಎಂದು ಅವರು ತಿಳಿಸಿದ್ದಾರೆ.

ವಿದ್ಯುತ್ ಬಿಲ್ ಪಾವತಿಸದೇ ದೀರ್ಘಕಾಲ ಬಾಕಿ ಉಳಿಸಿಕೊಂಡಿರುವ ಗ್ರಾಹಕರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. ಆದ್ದರಿಂದ ಯಾವುದೇ ಅನಾನುಕೂಲತೆ ಉಂಟಾಗದಂತೆ ಗ್ರಾಹಕರು ಕೂಡಲೇ ಬಾಕಿ ಮೊತ್ತ ಪಾವತಿಸಬೇಕು ಎಂದು ಎಸ್‌ಒ ಚಂದ್ರಕಾಂತ ತಿಳಿಸಿದ್ದಾರೆ.

ಕಂದಾಯ ಅಭಿಯಾನದ ವೇಳೆ ಸಿಬ್ಬಂದಿಗಳು ಮನೆಮನೆಗೆ ತೆರಳಿ ಬಾಕಿ ವಿವರಗಳನ್ನು ನೀಡುತ್ತಿದ್ದು, ಸಾರ್ವಜನಿಕರು ಉತ್ತಮ ಸ್ಪಂದನೆ ನೀಡುತ್ತಿದ್ದಾರೆ. ಗ್ರಾಹಕರು ಆನ್‌ಲೈನ್ ಹಾಗೂ ನಿಗದಿತ ಕೇಂದ್ರಗಳ ಮೂಲಕ ವಿದ್ಯುತ್ ಬಿಲ್ ಪಾವತಿಸಿ ಇಲಾಖೆಯೊಂದಿಗೆ ಸಹಕರಿಸುವಂತೆ ಅವರು ಮನವಿ ಮಾಡಿದ್ದಾರೆ.

ಸದೃಢ ಕುಟುಂಬಕ್ಕೆ ಗೃಹಲಕ್ಷ್ಮಿ ಯೋಜನೆ ನಿಲ್ಲಿಸಲು ಚಿಂತನೆ: ಎಚ್.ಎಂ.ರೇವಣ್ಣ



ರಾಯಚೂರು: ಆರ್ಥಿಕವಾಗಿ ಸದೃಢವಾದ ಕುಟುಂಬವರು ಗೃಹಲಕ್ಷ್ಮೀ ಯೋಜನೆ ಹಣ ಬೇಡ ಎಂದು ಮುಂದೆ ಬಂದರೆ ಅಂತಹವರ ಖಾತೆಗೆ ಗೃಹಲಕ್ಷ್ಮೀ ಯೋಜನೆ ಹಣ ಜಮೆ ಆಗುವುದನ್ನು ನಿಲ್ಲಿಸಲು ರಾಜ್ಯ ಸರ್ಕಾರ ಯೋಚಿಸುತ್ತಿದೆ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಹಿಂದೆ ಕೇಂದ್ರ ಸರ್ಕಾರ ಉಜ್ವಲ ಯೋಜನೆ ಜಾರಿಗೆ ತಂದ ಸಂದರ್ಭದಲ್ಲಿ ಇದೇ ರೀತಿ ದೇಶದ ಜನತೆಯಲ್ಲಿ ಮನವಿ ಮಾಡಿಕೊಂಡಿದ್ದರು. ಈ ವೇಳೆ ಅನೇಕರು ಉಚಿತವಾಗಿ ನೀಡುವ ಸಿಲೆಂಡರ್‌ನ್ನು ನಿರಾಕರಿಸಿದ್ದರು. ಅದೇ ರೀತಿ ರಾಜ್ಯ ಸರ್ಕಾರ ಗೃಹಲಕ್ಷ್ಮೀ ಯೊಜನೆ ಕುರಿತು ರಾಜ್ಯದ ಜನತೆಯಲ್ಲಿ ಮನವಿ ಮಾಡಿಕೊಳ್ಳಲು ನಿರ್ಧರಿಸಿದೆ ಎಂದರು.

ಗೃಹ ಜ್ಯೋತಿ ಯೊಜನೆಯಲ್ಲಿನ ಫಲಾನುಭವಿಗಳು ಮನೆ ಬಳಕೆಯಲ್ಲದೆ ವಾಣಿಜ್ಯಕ ಬಳಕೆ ಮಾಡಿಕೊಳ್ಳುವುದು ತಿಳಿದು ಬಂದಿದೆ. ಅಂತಹ ಫಲಾನುಭವಿಗಳನ್ನು ಗುರುತಿಸಿ ಉಚಿತ ವಿದ್ಯುತ್ ನಿಲ್ಲಿಸಲಾಗುವುದು ಎಂದರು.

ಉಚಿತವಾಗಿ ವಿತರಿಸುವ ಪಡಿತರ ಅಕ್ಕಿಯನ್ನು ಕೆಲ ನ್ಯಾಯಬೆಲೆ ಅಂಗಡಿಯವರಿಗೇನೇ ಕೆಲ ಫಲಾನುಭವಿಗಳು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದು ಕಂಡುಬರುತ್ತಿದೆ. ಇದನು ತಪ್ಪಿಸುವುದಕ್ಕೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಮೂಲಕ ನಿಲ್ಲಿಸುವುದಕ್ಕೆ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು. ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದರೆ ಕರ್ನಾಟಕದ ಆರ್ಥಿಕ ಸ್ಥಿತಿ ದಿವಾಳಿ ಆಗುತ್ತದೆ ಎಂದು ಕೇಂದ್ರ, ಬಿಜೆಪಿ ಸರ್ಕಾರ ಹೇಳಿತ್ತು. ಆದರೆ, ರಾಜ್ಯದಲ್ಲಿ ಯಾವುದೇ ಗ್ಯಾರಂಟಿ ಯೋಜನೆಗಳನ್ನು ಸ್ಥಗಿತಗೊಳಿಸದೇ ಇಂದಿಗೂ ನೀಡುತ್ತಿದೆ ಎಂದರು.

ಆದರೆ, ಬಿಜೆಪಿ ಅಧಿಕಾರದಲ್ಲಿರು ರಾಜ್ಯಗಳಾದ ಮಹಾರಾಷ್ಟ್ರ, ಮಧ್ಯಪ್ರದೇಶ, ರಾಜಸ್ಥಾನ, ಹರಿಯಾಣ ಸೇರಿದಂತೆ ಇನ್ನು ಕೆಲ ರಾಜ್ಯಗಳಲ್ಲಿ ಗ್ಯಾರಂಟಿ ಯೋಜನೆಗಳ್ಳು ಸ್ಥಗತಿಗೊಳಿಸುವ ಮೂಲಕ ಚುನಾವಣಾ ಪೂರ್ವದಲ್ಲಿ ಜನತೆಗ ನೀಡಿದ ಭರವಸೆಗಳನ್ನು ಈಡೇರಿಸುವಲ್ಲಿ ಬಿಜೆಪಿ ಸರ್ಕಾರ ವಿಫಲವಾಗಿದೆ ಎಂದು ದೂರಿದರು.

ಸುದ್ದಿಗೋಷ್ಠಿಯಲ್ಲಿ ಪಂಚ ಗ್ಯಾರಂಟಿಯ ಜಿಲ್ಲಾ ಉಪಾಧ್ಯಕ್ಷ ನಾಗೇಂದ್ರಪ್ಪ, ಹನುಮಂತಪ್ಪ ಜಾಲಿಬೆಂಚಿ, ನಾಗವೇಣಿ, ಮಲ್ಲಯ್ಯ ಕಮತಗಿ ಸೇರಿದಂತೆ ಇತರರಿದ್ದರು.

ವಿದ್ಯುತ್ ತಂತಿ ತಗುಲಿ ರೈತ ಸಾವು: ಪ್ರತಿಭಟನೆ



ಕಲಬುರಗಿ: ವಿದ್ಯುತ್ ತಂತಿ ತಗುಲಿ ರೈತರೊಬ್ಬರು ಮೃತಪಟ್ಟ ದುರ್ಘಟನೆ ಕಲಬುರಗಿ ಜಿಲ್ಲೆಯ ಅಫಜಲಪುರ ತಾಲೂಕಿನ ಅಳ್ಳಗಿ (ಕೆ) ಗ್ರಾಮದಲ್ಲಿ ಸಂಭವಿಸಿದೆ.

ಮೃತ ರೈತನನ್ನು ಅಳ್ಳಗಿ (ಕೆ) ಗ್ರಾಮದ ಬಸಪ್ಪ ಪೂಜಾರಿ (42) ಎಂದು ಗುರುತಿಸಲಾಗಿದೆ. ಜಮೀನಿನಲ್ಲಿರುವ ಟ್ರಾನ್ಸ್‌ಫಾರ್ಮರ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ವೇಳೆ ಈ ದುರ್ಘಟನೆ ನಡೆದಿರುವುದಾಗಿ ತಿಳಿದುಬಂದಿದೆ.

ಸ್ಥಳೀಯರ ಆರೋಪದಂತೆ, ಲೈನ್ ಮ್ಯಾನ್ ತನ್ನ ಕೆಲಸವನ್ನು ರೈತನಿಂದಲೇ ಮಾಡಿಸಿದ್ದಾನೆ ಎನ್ನಲಾಗಿದ್ದು, ಟ್ರಾನ್ಸ್‌ಫಾರ್ಮರ್‌ಗೆ ಸಂಪರ್ಕ ನೀಡುವ ಸಂದರ್ಭದಲ್ಲಿ ಅಗತ್ಯ ಸುರಕ್ಷತಾ ಕ್ರಮಗಳನ್ನು ಪಾಲಿಸದೇ, ವಿದ್ಯುತ್ ಸರಬರಾಜು ಸ್ಥಗಿತಗೊಳಿಸುವ ಎಲ್‌ಸಿ (ಲೈನ್ ಕ್ಲಿಯರ್) ಪಡೆಯದೇ ಕೆಲಸ ನಡೆಸಲಾಗಿದೆ ಎಂದು ಆರೋಪಿಸಲಾಗಿದೆ. ಈ ವೇಳೆ ವಿದ್ಯುತ್ ಪ್ರವಹಿಸಿ ಬಸಪ್ಪ ಪೂಜಾರಿ ಅವರು ಗಂಭೀರವಾಗಿ ಗಾಯಗೊಂಡು ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಘಟನೆಯ ಸುದ್ದಿ ತಿಳಿಯುತ್ತಿದ್ದಂತೆ ಗ್ರಾಮಸ್ಥರು ಹಾಗೂ ರೈತ ಸಂಘಟನೆಗಳ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಅಫಜಲಪುರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು. ಈ ಸಂಬಂಧ ಅಫಜಲಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪ್ರಕರಣದ ಕುರಿತು ತನಿಖೆ ಮುಂದುವರಿದಿದೆ.

ರೈತನ ಸಾವಿಗೆ ಕಾರಣರಾದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಎಂದು ರೈತ ಸಂಘಟನೆಗಳು ಒತ್ತಾಯಿಸಿವೆ.

ಪುಡಿ ರೌಡಿಗಳಿಗೆ ಹೆದರಿ ನೇಣಿಗೆ ಶರಣು: ಆರೋಪ



ಮುನಿರಾಬಾದ್: ಸಮೀಪದ ಶಹಪುರ ಗ್ರಾಮದಲ್ಲಿ ಮೊಹರಂ ಕೊನೆ ದಿನದ ಮುಂಚೆ ನಡೆಯುವ ಕತ್ತಲ ರಾತ್ರಿಯ ದಿನ ಗಲಾಟೆ ನಡೆದಿದೆ. ಅದಕ್ಕೆ ಯುವಕನೊಬ್ಬ ನೇಣಿಗೆ ಶರಣಾಗಿದ್ದಾನೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಸಾವಿಗೆ ಶರಣಾದ ಯುವಕ ಗೋಣ್ಣೆಪ್ಪ ತಂದೆ ಬಸಪ್ಪ ಶಹಪುರ ಗ್ರಾಮದ ನಿವಾಸಿ (21) ತಿಳಿದು ಬಂದಿದೆ.

ಗುರುವಾರ ರಾತ್ರಿ ಮೊಹರಂ ಕತ್ತಲ ರಾತ್ರಿಯ ವಿಶೇಷ ಹಿನ್ನೆಲೆಯಲ್ಲಿ ಪ್ರತಿಯೊಂದು ಗ್ರಾಮಗಳಲ್ಲಿ ಅಲಾಯಿದೇವರ ಮೆರವಣಿಗೆ, ಹೇಳಿಕೆಗಳು ಹೇಳುವುದು, ಅಲೈಕುಣಿತ, ಹಲಿಗೆ ವಾದ್ಯ ಬಾರಿಸುವುದು ಸಾಮಾನ್ಯ. ಈ ವಿಶೇಷತೆಗಳನ್ನು ನೋಡಲು, ಮಲಗಿ ದೇವರಿಗೆ ಸಕ್ಕರೆ ನೈವೇದ್ಯ ಕೊಡುವುದು ಸೇರಿದಂತೆ ಅರಿಕೆ ಮುಟ್ಟಿಸುವಂತಹ ಕಾರ್ಯಕ್ರಮಗಳನ್ನು ಒಂದು ಗ್ರಾಮದವರು ಮತ್ತೊಂದು ಗ್ರಾಮಕ್ಕೆ ಹೋಗುವುದು ಸಹಜ. ಹೀಗಿರುವಾಗ ಬೇರೆ ಬೇರೆ ಎರಡು ಮೂರು ಗ್ರಾಮಗಳ ಕೆಲ ಪುಡಾರಿ ಯುವಕರ ಗುಂಪು ಒಂದು ಅಲಾಯಿ ಕುಣಿತದ ನೆಪದಲ್ಲಿ ಕುಡಿದು ಶಹಾಪುರ ಗ್ರಾಮದಲ್ಲಿ ಗಲಾಟೆ ಎಬ್ಬಿಸಿದ್ದಾರೆ.

ಆ ದಾಂಧಲೆಯನ್ನು ಪ್ರಶ್ನಿಸಿದ ಆ ಗ್ರಾಮದ ಕೆಲವು ಯುವಕರಿಗೆ ಮನಬಂದಂತೆ ತಳಿಸಿದ್ದಾರೆ. ಇದರಿಂದ 4-5ಯುವಕರಿಗೆ ಸಣ್ಣ ಪುಟ್ಟ ಗಾಯವಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಹೀಗೆ 15-20ಯುವಕರ ತಂಡ ಗ್ರಾಮದಲ್ಲಿ ಲಾಂಗ್, ಮಚ್ಚು, ಚಾಕು, ದೊಣ್ಣೆ ಹಿಡಿದು ಮಧ್ಯರಾತ್ರಿ 2ರ ಹೊತ್ತಿನ ಸಮಯದಲ್ಲಿ ಗಸ್ತು ತಿರಿಗಿ ಕಂಡ ಕಂಡವರಿಗೆ ಹೊಡೆದು ಅವಾಚ್ಯ ಪದಗಳಿಂದ ನಿಂದಿಸಿ ಗ್ರಾಮದಲ್ಲಿ ಭಯಾನಕ ವಾತಾವರಣ ಸೃಷ್ಟಿ ಮಾಡಿದ್ದಾರೆ.

ಕುಟುಂಬಸ್ತರ ಪ್ರಕಾರ ನೇಣಿಗೆ ಶರಣಾದ ಸ್ಥಳ ನೋಡಿದರೆ ಇದು ಆತ್ಮಹತ್ಯೆ ಅಲ್ಲ ಕೊಲೆ ಎಂದು ಆರೋಪಿಸಿದ್ದಾರೆ. ನೇಣು ಹಾಕಿದ ಸ್ಥಳ ಪರಿಶೀಲನೆ ಮಾಡಿದಾಗ ಚಿಕ್ಕ ಟವಲ ಬಳಸಿದೆ. ಅದು ಸರಿಯಾಗಿ ಕುತ್ತಿಗೆಗೆ ಬಿದ್ದಿಲ್ಲ, ಕೈ ಎತ್ತಿದರೆ ಕಬ್ಬಿಣ ಪೈಪ್ ತಗಲುತ್ತೆ, ಶವಕ್ಕೆ ಹತ್ತಿಕೊಂಡ ಸ್ಥಳದಲ್ಲಿ ಚಿಕ್ಕ ಕಟ್ಟೆ ತರ ಕುಂಬೆ ಇದೆ ಇವೆಲ್ಲಾ ಗಮನಿಸಿದಾಗ ಇದು ಕೊಲೆ ಎಂದು ಕುಟುಂಬಸ್ಥರು ಆರೋಪ ಮಾಡಿದ್ದಾರೆ. ಈ ಕುರಿತು ಮುನಿರಾಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಲ ಯುವಕರು ಬೇರೆ ಗ್ರಾಮಗಳಿದ ಶಹಾಪುರ್ ಗ್ರಾಮಕ್ಕೆ ಹೋಗಿದ್ದು ನಿಜ. ನೇಣಿಗೆ ಶರಣಾದ ಗೊಣ್ಣೆಬಸಪ್ಪ ಈ ಯುವಕನಿಗೆ ಇದಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಊರಿನ ಗ್ರಾಮಸ್ಥರು ಹೇಳುತ್ತಿದ್ದು, ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಮುನಿರಾಬಾದ್ ಪಿಎಸ್ಐ ತಿಳಿಸಿದ್ದಾರೆ.

ಸರ್ವಧರ್ಮದಿಂದ ಮೊಹರಂ ಆಚರಣೆ



ಕುಕನೂರು: ತಾಲೂಕಿನ ಭಟಪನಹಳ್ಳಿ ಗ್ರಾಮದಲ್ಲಿ ಮೋಹರಂ ಹಬ್ಬ ಆಚರಿಸಿದರು. ಭಟಪನಹಳ್ಳಿ ಗ್ರಾಮದಲ್ಲಿ ಮುಸ್ಲಿಂ ಸಮಾಜ ಕೇವಲ ಎರಡು ಕುಟುಂಬಗಳಿವೇ, ಆದರೆ ಎಲ್ಲ ಜಾತಿ ಜನಾಂಗದ ಸರ್ವಧರ್ಮದವರು ಸೇರಿಕೊಂಡು, ಜಾತಿಯಿಂದ ದೂರವಾಗಿ ಪ್ರೀತಿಯಿಂದ ಒಂದು ಗೂಡಿ ಮೊಹರಂ ಹಬ್ಬದ ಆಚರಿಸಿದರು.

ಇಲ್ಲಿಯಯುವಸಮುದಾಯದ ಯುವಕರು ಹಲಗಿ ಮಜಲಿನ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ ಕೀಲು ಕುದುರೆ ಕುಣಿಯುತ್ತಾರೆ, ಕಲಾವಿದರಾದ ಮಾರುತಿ ದೇವರಳ್ಳಿ, ಫಕೀರಪ್ಪ ಪೋತುಂಡಿ, ವೀರೇಶ ಗುಡಿಹಿಂದಲ, ನಾಗಪ್ಪ ತಳವಾರ, ಮಹೇಶ ಗುರಿಕಾರ, ಆಕಾಶ ಗಾಳಿ, ಇವರು ಉಲ್ಲಾಸ ಭರಿತವಾಗಿ ಹಲಗಿ ಮಜಲಿನ ತಾಳಕ್ಕೆ ತಕ್ಕಂತೆ ಕುಣಿಯುತ್ತ ಹಬ್ಬಕ್ಕೆ ಮೆರಗು ತರುತ್ತಾರೆ , ಸರ್ವ ಧರ್ಮದವರು ದೇವರುಗಳಿಗೆ ಸಕ್ಕರೆ, ನೈವೇದ್ಯ ಮಾಡಿ ಅರ್ಪಿಸಿದರು. ಭಕ್ತರು ದೀಡ ನಮಸ್ಕಾರ ಸಲ್ಲಿಸಿದರು.

ಹಿರಿಯರಾದ ಖಾಜಸಾಬ ನೂರ ಭಾಷಾ , ಮುಜ್ಜುಮಲ್ಲ, ಚೆನ್ನಪ್ಪ ತಳವಾರ, ರಾಮಚಂದ್ರಪ್ಪ ದೇವರಳ್ಳಿ, ಕರಿಯಪ್ಪ ಹಂದ್ರಾಳ, ಹಂಚ್ಯಾಳಪ್ಪ ಕಲ್ಲಗೋಡಿ, ಬಸಪ್ಪ ಗುಡಿಹಿಂದಲ, ಮಹೇಶ ದೊಡ್ಡಮನಿ, ಮಲ್ಲಪ್ಪ ಗುಡಿಹಿಂದಲ, ಪರಸಪ್ಪ ಹೊಸಮನಿ, ಶರಣಪ್ಪ ಹಾದಿಮನಿ, ಮುಜೆಸಾಬ, ರಾಜಶೇಖರ ಕರಮುಡಿ, ಯಲ್ಲಪ್ಪ ದೇವರಳ್ಳಿ, ಹನುಮಪ್ಪ ಪೋತುಂಡಿ, ಯಲ್ಲಪ್ಪ ಡೋಳ್ಳಿನ, ಹನುಮಪ್ಪ ಹುಲಿಗೇಜ್ಜಿ, ದೇವಪ್ಪ ಭಾವಿಕಟ್ಟಿ, ಪ್ರಭು ಕರಮುಡಿ, ಕೆಂಚಪ್ಪ ನಡುಲಮನಿ, ಎಸ್.ಕೆ.ದಾನಕೈ, ಕುಮಾರ ಭದ್ರಾಪೂರ, ಹನುಮಪ್ಪ ಭಾವಿಕಟ್ಟಿ, ಸಂಜಯ ಕುಡುಗುಂಟಿ, ದೇವಪ್ಪ ನಡುಲಮನಿ, ಸಂದೀಪ ಹಾದಿಮನಿ ಸೇರಿದಂತೆ ಇತರರು ಇದ್ದರು.

ಭಕ್ತರು ಭಕ್ತಿಯಿಂದ ಸೇರಿ ಹೂ ಮಾಲೆ, ಅರ್ಪಿಸಿ ಸರ್ವರಿಗೂ ಆರೋಗ್ಯ ಭಾಗ್ಯ, ಸಂಪತ್ತು, ಮಳೆ ಬೆಳೆ ಚೆನ್ನಾಗಿ ಲಭಿಸಲಿ ಎಂದು ಪ್ರಾರ್ಥಿಸಿ ಕೊಂಡರು.

ಕುಡಿತಿನಿಯಲ್ಲಿ ಮೊಹರಂ ಹಬ್ಬ ಸಂಪನ್ನ

ಕುರುಗೋಡು: ಸಮೀಪದ ಕುಡತಿನಿ ಪಟ್ಟಣದ ಮಸೀದಿಯ ಪೀರಲದೇವರು ಹೊತ್ತು ಪ್ರಮುಖ ಬೀದಿಗಳ ಸಾಗಿ ಪೂಜೆಯೊಂದಿಗೆ ದೇವರ ಪೆಟ್ಟಿಗೆಯಲ್ಲಿ ಪ್ರತಿ ವರ್ಷ ಪದ್ದತಿಯಂತೆ ಶಾಂತಿಯುತ ತೆರೆಕಂಡು ಬಂತು ಕುಡತಿನಿ ಪಟ್ಟಣದಲ್ಲಿ ಮೊಹರಂ ಹಬ್ಬದ ಕೊನೆಯ ದಿನದ ಸಂಭ್ರಮ, ಶೇ.90ರಷ್ಟು ದೇವರು ಹೊತ್ತುವರು ಹಿಂದುಗಳು ಹನ್ನೊಂದು ದಿನವು ಹಿಂದುಗಳೇ ನಿತ್ಯ ಧಾರ್ಮಿಕ ಕಾರ್ಯಸಾಕ್ಷಿಯಾಗಿದ್ದು. ಇಲ್ಲಿ ಜಾತಿ ಭೇದವಿಲ್ಲದೆ ಮೊಹರಂ ಹಬ್ಬ ಆಚರಣೆ ಮಾಡಿ ಭಕ್ತಿ ಸಮರ್ಪಣೆ ಮಾಡುತ್ತಾರೆ.

ಪೂರ್ವದಲ್ಲಿ ದೇವರ ಕಳಿಸುವೇಳೆ ತಮಟೆ, ಅಲಗೆ, ಶಬ್ದ ನಾದಕ್ಕೆ ಯುವಕರು ಸಂಭ್ರಮ ನೋಡುಗರ ಗಮನ ಸೆಳೆಯಿತು, ಹಾಗೂ ಅರಿಸಿನ ಪುಡಿ ಒಬ್ಬರಿಂದ ಒಬ್ಬರಿಗೆ ಎರಚುವ ಮೂಲಕ ಹಬ್ಬದ ಸಂಭ್ರಮದ ಮನೆ ಮಾಡಿತು.

ದೇವರುಗಳ ವಿಸರ್ಜನೆ ವೇಳೆ ದಾರಿಯುದ್ದಕ್ಕೂ ಮಹಿಳೆ ಬಕ್ತರು ಹರಕೆ ಭಕ್ತರು ಬೆಲ್ಲದ ಪಾಲಕ ವಿತರಿಸಲಾಗಿತು.



ಮೊಹರಂ: ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ



ಹನುಮಸಾಗರ: ಪಟ್ಟಣದಲ್ಲಿ ಶುಕ್ರವಾರ ಹಿಂದೂ-ಮುಸ್ಲಿಂ ಭಾವೈಕ್ಯತೆಯ ಸಂಕೇತವಾದ ಮೊಹರಂ ಹಬ್ಬದ ಅಂಗವಾಗಿ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಯೂಥ್ ಫೌಂಡೇಶನ್ ಹಾಗೂ ಹನುಮಸಾಗರ ಅಂಜುಮನ್ -ಎ-ಇಸ್ಲಾಂ ಸಮಿತಿ ಯಿಂದ ಹಜರತ್ ಹಸೇನ್ (ರ.ಅ.) ಹಾಗೂ ಹಜರತ್ ಹುಸೇನ್ (ರ.ಅ.)ಇವರ ಸವಿನೆನಪಿಗಾಗಿ ಸಸಿ ನಡೆಯುವ ಈ ಕಾರ್ಯಕ್ರಮವನ್ನು ಟಿಪ್ಪು ಸುಲ್ತಾನ್ ವೃತ್ತದಲ್ಲಿ ಹಜರತ್ ಮಹ್ಮದ್ ರಾಶೀದ ಖಾಜಿ ಚಾಲನೆ ನೀಡಿದರು.


ನಂತರ ಮಾತನಾಡಿ, ಮರಗಳಿಗೆ ಯಾವುದೇ ಜಾತಿ, ಧರ್ಮ ಅಥವಾ ಬೇಧಭಾವ ಇರುವುದಿಲ್ಲ, ಅವು ಎಲ್ಲರಿಗೂ ಸಮಾನವಾಗಿ ನೆರಳು, ಗಾಳಿ ಮತ್ತು ಜೀವ ನೀಡುತ್ತವೆ. ಅದೇ ರೀತಿ ಸಮಾಜದಲ್ಲೂ ಸೌಹಾರ್ದತೆ, ಸಹಬಾಳ್ವೆ ಮತ್ತು ಭಾವೈಕ್ಯತೆ ಬೆಳೆಯಬೇಕು ಎಂದರು.

ಅಂಜುಮನ್ ಇಸ್ಲಾಂ ಕಮಿಟಿ ಉಪಾಧ್ಯಕ್ಷ ಅಬ್ದುಲ್ ರಜಾಕ್ ಟೇಲರ್ ಮಾತನಾಡಿ, ಯುವಜನರು ಪರಿಸರ ಸಂರಕ್ಷಣೆ ಮತ್ತು ಸಾಮಾಜಿಕ ಸೇವೆಯಲ್ಲಿ ಹೆಚ್ಚು ತೊಡಗಿಸಿಕೊಳ್ಳಬೇಕು. ಮೊಹರಂ ಹಬ್ಬದ ಸಂದರ್ಭದಲ್ಲಿ ಸಸಿ ನೆಡುವುದು ಸಮಾಜಕ್ಕೆ ಉತ್ತಮ ಮಾದರಿಯಾಗಿದೆ ಎಂದರು. ತಂಜೀಮ್ ಇಸ್ಲಾಂ ಕಮಿಟಿ ಅಧ್ಯಕ್ಷ ನಜೀರಸಾಬ ಮೆಣೇದಾಳ ಮಾತನಾಡಿ, ಮುಂದಿನ ಪೀಳಿಗೆಗೆ ಉತ್ತಮ ಪರಿಸರವನ್ನು ಕೊಡುಗೆಯಾಗಿ ನೀಡಬೇಕು. ಪ್ರತಿಯೊಬ್ಬರೂ ವರ್ಷಕ್ಕೊಂದು ಸಸಿ ನೆಟ್ಟು ಅದರ ಜವಾಬ್ದಾರಿ ವಹಿಸಬೇಕು. ಎಂದರು. ಅಬ್ದುಲ್ ರಜಾಕ್ (ಗಿರಣಿ) ಮಾತನಾಡಿದರು.

ಮುಖಂಡರಾದ ಹಜರತ್ ಮಹ್ಮದ್ ರಾಶೀದ ಖಾಜಿ ಯಲಬುರ್ಗಾ, ಹಜರತ್ ಮೌಲಾನ ಇರ್ಷಾದ್ ರಜ್ವಿ ಹಜರತ್ ಮುನೀರ್ ಅಹ್ಮದ್ ಖಾದ್ರಿ, ಅಂಜುಮನ್ ಇಸ್ಲಾಂ ಕಮಿಟಿ ಅಧ್ಯಕ್ಷ ಖಾದರಸಾಬ ತಹಶೀಲ್ದಾರ್, ಉಪಾಧ್ಯಕ್ಷ ಅಬ್ದುಲ್ ರಜಾಕ್ ಟೇಲರ್, ಪೊಲೀಸ್ ಸಿಬ್ಬಂದಿ ಮೈಬುಸಾಬ ,ಡಾ.ಎ.ಪಿ.ಜಿ ಅಬ್ದುಲ್ ಕಲಾಂ ಯೂಥ್ಸ್ ಫೌಂಡೇಶನ್ ಅಧ್ಯಕ್ಷ ದಾದೇಪೀರ ಕಟಗಿ, ಕಾರ್ಯದರ್ಶಿ ಅಬ್ದುಲ್ ರಜಾಕ್ ಗಿರಣಿ, ಸದ್ದಾಂ ಹುಸೇನ್ ತಹಶೀಲ್ದಾರ್,ಸುಲೇಮಾನ್ ಮುದಗಲ್ ಹಾಗೂ ಪದಾಕಾರಿಗಳಾದ ಹುಜೇರ್ ಪಾಷಾ, ಸಾಕ್, ಗುಲಾಮ್ ನಬಿ ದೋಟಿಹಾಳ, ಸೊಹೇಲ್ ದೋಟಿಹಾಳ ಮತ್ತು ಹುಸೇನಸಾಬ ಕಟಗಿ, ಮಹ್ಮದ್ ಕಟಗಿ, ಮೈನು ಕಟಗಿ, ಇಲಿಯಾಸ್ ಮನಿಯಾರ ನೂರಸಾಬ ಮೂಲಿಮನಿ ಇತರರು ಉಪಸ್ಥಿತರಿದ್ದರು.

ಕಿರುಸುದ್ದಿ

ಲಯನ್ಸ್ ಕ್ಲಬ್‌ನ ಪದಾಧಿಕಾರಿಗಳ ಆಯ್ಕೆ


• **ಹೊನ್ನಾವರ:** ಲಯನ್ಸ್ ಜಿಲ್ಲೆ 317 ಬಿ ವ್ಯಾಪ್ತಿಯಲ್ಲಿ ಬರುವ ಒಟ್ಟು 113 ಕ್ಲಬ್‌ಗಳಲ್ಲಿ 65 ಸದಸ್ಯರನ್ನು ಹೊಂದಿರುವ ಹೊನ್ನಾವರ ಲೈನ್ಸ್ ಕ್ಲಬ್ ನ 2026–27ನೇ ಸಾಲಿನ ನೂತನ ಪದಾಧಿಕಾರಿಗಳ ಪಿಎಸ್‌ಟಿ ಆಯ್ಕೆ ಪ್ರಕ್ರಿಯೆ ಸರ್ವಾನುಮತದಿಂದ ಜರುಗಿದೆ. ಕ್ಲಬ್ ನೂತನ ಅಧ್ಯಕ್ಷರಾಗಿ ಮಹೇಶ್ ನಾಗೇಶ್ ನಾಯ್ಕ ಕಾರ್ಯದರ್ಶಿಗಳಾಗಿ ಡಾ. ನರಸಿಂಹ ಪಂಡಿತ್, ಖಜಾಂಚಿಯಾಗಿ ಎಮ್ ವಿ ಹೆಗಡೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಪ್ರಥಮ ಉಪಾಧ್ಯಕ್ಷರಾಗಿ ಎನ್ ಜಿ. ಭಟ್‌ನೇಮಕಗೊಂಡಿರುತ್ತಾರೆ. ಹೊನ್ನಾವರ ಕ್ಲಬ್ಬಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಸೇರಿದಂತೆ ಲಿಯೋ ಕ್ಲಬ್ಬಿನ ಪದಗ್ರಹಣ ಸಮಾರಂಭವು ಜೂನ್ 28 ಭಾನುವಾರ ಸಂಜೆ 5 ಘಂಟೆಗೆ ಹೊನ್ನಾವರ ಲಯನ್ಸ್ ಕ್ಲಬ್ಬಿನ ಸಭಾಭವನದಲ್ಲಿ ನೆರವೇರಲಿದೆ. ಪದಗ್ರಹಣ ಸಮಾರಂಭದ ಇನ್ಸ್ಟಾಲೇಶನ ಆಫೀಸರ್ ಆಗಿ ಎಂಜೆಎಫ್ ಲಯನ್ ಎನ್ ಎಮ್.ಹೆಗಡೆ, ಪಿಡಿಜಿ 317 ಸಿ ಇವರು ಪದಾಧಿಕಾರಿಗಳ ಅಧಿಕಾರ ಸ್ವೀಕಾರ ಹಾಗೂ ಪದಗ್ರಹಣ ಸಮಾರಂಭವನ್ನು ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಭಟ್ಕಳ ಹೊನ್ನಾವರ ವಿಧಾನಸಭಾ ಕ್ಷೇತ್ರದ ಶಾಸಕರಾದ ಮಂಕಾಳ ಎಸ್ ವೈದ್ಯ ರವರು ಹಾಗೂ ಅತಿಥಿಗಳಾಗಿ ನಿವೇದಿತ ಆಳ್ವ ರವರು ಭಾಗವಹಿಸಲಿದ್ದಾರೆ ಎಂದು ಕ್ಲಬ್ ಪ್ರಕಟಣೆ ತಿಳಿಸಿದೆ

ಗಾಂಧಿ ಆತ್ಮಕಥನ: ಶತಮಾನದ ಸಂಭ್ರಮ

• **ಜೋಯಿಡಾ:** ಮಹಾತ್ಮಾ ಗಾಂಧಿಯವರ ಆತ್ಮಕಥೆ 'ನನ್ನ ಸತ್ಯಾನ್ವೇಷಣೆ' ಗೆ ನೂರು ವರ್ಷಗಳು. ಈ ಸಂದರ್ಭದಲ್ಲಿ ಒಂದು ವಿಶೇಷ ಸಂವಾದ★ ಕಾರ್ಯಕ್ರಮದ ಮೂಲಕ ಸಂಭ್ರಮ ಆಚರಣೆಗೆ ಇಲ್ಲಿಯ ಕಾಳಿ ಬ್ರಿಗೇಡ್ ಹಾಗು ಸಂಜೀವನಿ ಸೇವಾ ಟ್ರಸ್ಟ್'ಸಂಘಟನೆಗಳು ಮುಂದಾಗಿವೆ. ಗಾಂಧಿ ಸ್ಮಾರಕ ನಿಧಿ, ಬೆಂಗಳೂರು, ಲೋಹಿಯಾ ಜನ್ಮ ಶತಾಬ್ದಿ ಪ್ರತಿಷ್ಠಾನ, ಶಿವಮೊಗ್ಗ ಹಾಗು ಬಾಪೂಜಿ ಪದವಿಪೂರ್ವ ಕಾಲೇಜು, ಜೋಯಡಾ ಇವರ ಸಂಯುಕ್ತ ಆಶ್ರಯದಲ್ಲಿ ಸೋಮವಾರ ಜೂ.29ರಂದು ಬೆಳಗ್ಗೆ 10.30 ಕ್ಕೆ ಬಾಪೂಜಿ ಕಾಲೇಜಿನ ಸಭಾ ಭವನದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಖ್ಯಾತ ಕವಯಿತ್ರಿ ಹಾಗು ಸಾಹಿತಿ , ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತೆ ಸವಿತಾ ನಾಗಭೂಷಣಕಾರ್ಯಕ್ರಮದ ಉದ್ಘಾಟನೆ ನೆರವೇರಿಸಲಿದ್ದಾರೆ. ಅಧ್ಯಕ್ಷತೆಯನ್ನು ಸಂಜೀವನಿ ಸೇವಾ ಟ್ರಸ್ಟ್ ಮತ್ತು ಸಮೂಹ ಸಂಸ್ಥೆಗಳ ಸಂಸ್ಥಾಪಕರಾದ ರವಿ ರೇಡಕರ್ ವಹಿಸಲಿದ್ದಾರೆ. ಉಪನ್ಯಾಸಕರು, ಶಿಕ್ಷಕರು, ವಿದ್ಯಾರ್ಥಿಗಳು, ರೈತರು, ಸಹಕಾರಿ ಸಂಘಗಳು, ಪತ್ರಕರ್ತರು, ತಾಲ್ಲೂಕಿನ ಬರಹಗಾರರು ಹೀಗೆ ವಿವಿಧ ಕ್ಷೇತ್ರಗಳಿಂದ ಸುಮಾರು 50 ಕ್ಕಿಂತ ಹೆಚ್ಚು ಪ್ರತಿಭಾವಂತರು ಪಾಲ್ಗೊಳ್ಳಲಿದ್ದಾರೆ.

ಮಂಗಳೂರು ಹೈ ಪೀಠಕ್ಕೆ ಉಕ ಸೇರಿಸಲು ವಿರೋಧ

• **ಸಿದ್ದಾಪುರ:** ಪ್ರಸ್ತಾಪಿತ ಮಂಗಳೂರು ಹೈಕೋರ್ಟ್ ಪೀಠದ ವ್ಯಾಪ್ತಿಗೆ ಉತ್ತರ ಕನ್ನಡ ಜಿಲ್ಲೆಯನ್ನು ಒಳಪಡಿಸುವ ಸರ್ಕಾರದ ಆಲೋಚನೆಗೆ ಜಿಲ್ಲೆಯ ನಾಗರಿಕರು ಹಾಗೂ ನ್ಯಾಯವಾದಿಗಳಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಉತ್ತರ ಕನ್ನಡ ಜಿಲ್ಲೆಯನ್ನು ಯಾವುದೇ ಕಾರಣಕ್ಕೂ ಮಂಗಳೂರು ಪೀಠಕ್ಕೆ ಸೇರಿಸದೇ, ಪ್ರಸ್ತುತ ಇರುವ ಧಾರವಾಡ ಹೈಕೋರ್ಟ್ ಪೀಠದ ವ್ಯಾಪ್ತಿಯಲ್ಲೇ ಮುಂದುವರಿಸಬೇಕೆಂದು ಆಗ್ರಹಿಸಿ ಜಿಲ್ಲೆಯ ಸಾರ್ವಜನಿಕರ ಪರವಾಗಿ ಮುಖ್ಯಮಂತ್ರಿಗಳಿಗೆ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆಜ್ಞಾಪನಾ ಪತ್ರವನ್ನು ಸಲ್ಲಿಸಲಾಗಿದೆ.

ಹಾವು ರಕ್ಷಿಸಿದ ಉರಗ ತಜ್ಞ

• **ಗೋಕರ್ಣ:** ಮನೆಗೆ ಬಂದ ನಾಗರ ಹಾವನ್ನ ರಕ್ಷಿಸಿ ಸುರಕ್ಷತವಾಗಿ ಕಾಡಿಗೆ ಬಿಟ್ಟ ಘಟನೆ ಇಲ್ಲಿನ ಅಜ್ಜಿಹಕ್ಕಲಿನಲ್ಲಿ ನಡೆದಿದೆ. ಹೊಸಬು ಗೌಡರವರ ಮನೆ ಒಳಗೆ ಹಾವು ಬಂದು ಆತಂಕ ಸೃಷ್ಟಿಸಿತ್ತು. ತಕ್ಷಣ ಉರಗ ತಜ್ಞ ಸ್ನೇಕ ಬಾಬಣ್ಣನಿಗೆ ಕರೆ ಮಾಡಿದ್ದು, ಸ್ಥಳಕ್ಕೆ ಬಂದ ಬಾಬಣ್ಣ ಹಿಡಿದ್ದಾರೆ, ನಂತರ ಮನೆಯಲ್ಲಿದ್ದ ಕೋಳಿಮೊಟ್ಟೆಯನ್ನ ಹಾವು ನುಂಗಿರುವುದು ತಿಳಿದು ಬಂದಿದ್ದು, ನಾಲ್ಕು ಮೊಟ್ಟೆಯನ್ನ ಬಾಯಿಂದ ಹೊರಹಾಕಿದೆ.



ಗೃಹ ಸಚಿವರ ವಿರುದ್ಧ ಎಚ್.ಎನ್.ಚಂದ್ರಶೇಖರ್ ವಾಗ್ದಾಳಿ

ರಾಜ್ಯದ ಕಾನೂನು ಸುವ್ಯವಸ್ಥೆ ಗಮನಿಸಿ



• **ಕಾರವಾರ:** ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಬೇರೆ ರಾಜ್ಯಗಳ ಭಯೋತ್ಪಾದಕರು ಕರ್ನಾಟಕವನ್ನು ಸುರಕ್ಷಿತ ತಾಣವನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ಗೃಹ ಸಚಿವರು ಇವೆಲ್ಲವುಗಳ ಕಡೆ ಲಕ್ಷ್ಯ ಕೊಡುವ ಬದಲು ಬೇಡದ ವಿಷಯಗಳ ಬಗ್ಗೆ ಅನಗತ್ಯ ಚರ್ಚೆ ಮಾಡುತ್ತಾ ತಿರುಗುತ್ತಿದ್ದಾರೆ ಎಂದು ರಾಜ್ಯ ಬಿಜೆಪಿ ವಕ್ತಾರ ಎಚ್.ಎನ್.ಚಂದ್ರಶೇಖರ್ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ರಾಜ್ಯದಲ್ಲಿ ಅಪರಾಧ ಪ್ರಮಾಣ ತೀವ್ರ ಹೆಚ್ಚಳವಾಗಿರುವ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷಗಳು ಕಳೆಯುತ್ತಾ ಬಂದಿದ್ದರೂ, ಎಲ್ಲಕಡೆ ದಿವಾಳಿ ಎದ್ದಿರುವುದು ಕಾಣುತ್ತಿದೆ. ಈ ಹಿಂದೆ ಯಾವಾಗಲೂ ಕೊರತೆ ಬಜೆಟ್ ಮಂಡನೆಯಾಗಿರಲಿಲ್ಲ, ಸದಾ ಹೆಚ್ಚುವರಿ ಬಜೆಟ್ ಇರುತ್ತಿತ್ತು. ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ರಾಜ್ಯ ಆರ್ಥಿಕವಾಗಿ ಸದೃಢವಾಗಿದೆ ಎಂದು ಹೇಳಿಕೊಂಡಿದ್ದರು. ಆದರೆ, ಕಳೆದ ಮೂರು ವರ್ಷಗಳಿಂದ ನಿರಂತರವಾಗಿ ಸಾಲ ಮಾಡಿ ಕೊರತೆಯ ಬಜೆಟ್ ಮಂಡಿಸಲಾಗುತ್ತಿದೆ. ಗ್ಯಾರಂಟಿ ಯೋಜನೆಗಳಿಗೆ 52 ಸಾವಿರ ಕೋಟಿ ರೂ. ಸಾಕು .ಬಜೆಟ್ಟಿನಲ್ಲಿ ಗ್ಯಾರಂಟಿ ಘೋಷಣೆಯ ನಂತರವೂ 3.70 ಲಕ್ಷ ಕೋಟಿ ರೂ. ಉಳಿಯುತ್ತದೆ. ಹೀಗಿದ್ದೂ ಸರ್ಕಾರ ಒಂದು ಲಕ್ಷ ಕೋಟಿಗೂ ಅಧಿಕ ಸಾಲ ಮಾಡುತ್ತಿರುವುದೇಕೆ ಎಂದು ಪ್ರಶ್ನಿಸಿದರು.

ಗ್ಯಾರಂಟಿ ಹೆಸರಿನಲ್ಲಿ ದಿನಬಳಕೆ ವಸ್ತುಗಳು, ಹಾಲು, ಮದ್ಯ ಸೇರಿದಂತೆ ಎಲ್ಲದರ ಬೆಲೆ ಏರಿಕೆ ಮಾಡಿ ಜನರನ್ನು ವ್ಯವಸ್ಥಿತವಾಗಿ ಶೋಷಿಸಲಾಗುತ್ತಿದೆ. 5 ಸಾವಿರ ಕೋಟಿ ಲೂಟಿ ಮಾಡಲಾಗಿದ್ದು, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಲ್ಯಾಣಕ್ಕೆ ಮೀಸಲಿಟ್ಟಿದ್ದ ಎಸ್ಸಿಪಿ–ಟಿಎಸ್ಪಿ ಹಣವನ್ನೂ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಮುಖರಾದ ಜಗದೀಶ ನಾಯಕ ಮೊಗಟಾ, ಮನೋಜ್ ಭಟ್, ಸುನೀಲ್ ಸೋನಿ, ಸುಭಾಷ್ ಗುನಗಿ, ಸಂಜೀವ ಸಾಳುಂಕೆ ಹಾಗೂ ಕಿಶನ್ ಕಾಂಬ್ಳೆ ಉಪಸ್ಥಿತರಿದ್ದರು.

ಗೃಹಲಕ್ಷ್ಮಿ ಯೋಜನೆಯಲ್ಲಿ ಗೋಲ್‌ಮಾಲ್

ಗೃಹಲಕ್ಷ್ಮಿ ಯೋಜನೆಯಡಿ 2024–25ನೇ ಸಾಲಿನ ಎರಡು ತಿಂಗಳ ಹಣವನ್ನು ಮಹಿಳೆಯರ ಖಾತೆಗೆ ಜಮೆ ಮಾಡಿಲ್ಲ ಎಂಬುದನ್ನು ಸಚಿವರೇ ಒಪ್ಪಿಕೊಂಡಿದ್ದಾರೆ. ಈ ಹಣ ಎಲ್ಲಿ ಹೋಗಿದೆ ಎಂಬ ಬಗ್ಗೆ ಅಧಿವೇಶನದಲ್ಲಿ ಪ್ರಶ್ನಿಸಿದರೂ ಸರ್ಕಾರ ಉತ್ತರಿಸಿಲ್ಲ. ಸಿಎಜಿ ವರದಿಯ ಪ್ರಕಾರ, ರಾಜ್ಯದಲ್ಲಿ ಅಸ್ತಿತ್ವದಲ್ಲೇ ಇಲ್ಲದ 23,262 ಬೋಗಸ್ ಮಹಿಳೆಯರ ಖಾತೆಗಳಿಗೆ ಹಣ ಪಾವತಿಯಾಗಿದೆ. ಅಲ್ಲದೆ, 19 ಸಾವಿರಕ್ಕೂ ಹೆಚ್ಚು ಮಹಿಳೆಯರಿಗೆ ಒಂದೇ ಖಾತೆಯ ಮೂಲಕ 1.80 ಕೋಟಿ ರೂಪಾಯಿ ಹೆಚ್ಚುವರಿ ಹಣ ವರ್ಗಾವಣೆಯಾಗಿದೆ. ಮೂರು ವರ್ಷಗಳ ಕಾಲ ಅನರ್ಹರಿಗೆ ಹಣ ಹಾಕಿ, ಈಗ ಹೊಸದಾಗಿ ಅರ್ಜಿ ಸಲ್ಲಿಸಲು ಕೋರುತ್ತಿರುವುದು ಹಗರಣವನ್ನು ಮುಚ್ಚಿಹಾಕುವ ಯತ್ನವಾಗಿದೆ ಎಂದು ಎಚ್.ಎನ್.ಚಂದ್ರಶೇಖರ್ ಆರೋಪಿಸಿದರು.

> ಕಾಂಗ್ರೆಸ್ಸಿನವರು ಕೇವಲ ಆದರ ಚಾಲಕನನ್ನು (ಮುಖ್ಯಮಂತ್ರಿ) ಬದಲಾಯಿಸಿದ್ದಾರೆಯೇ ಹೊರತು ಇಡೀ ವ್ಯವಸ್ಥೆ ಬದಲಾಗದೇ ಸಂಪೂರ್ಣ ಹದಗೆಟ್ಟಿದೆ .ಈ ಆಡಳಿತ ವೈಖರಿಯ ವಿರುದ್ಧ ಸ್ವತಃ ಕಾಂಗ್ರೆಸ್ ಶಾಸಕರೇ ಅಸಮಾಧಾನ ವ್ಯಕ್ತಪಡಿಸುತ್ತಿರುವುದು ಸರ್ಕಾರದ ವಿಫಲತೆಗೆ ಸಾಕ್ಷಿಯಾಗಿದೆ
>
> ■ ಎಚ್.ಎನ್.ಚಂದ್ರಶೇಖರ್

ರೋಗ ಮುಕ್ತ ಜೀವನಕ್ಕೆ ಯೋಗ ಅವಶ್ಯ

• **ಹೊನ್ನಾವರ:** ಪಟ್ಟಣದ ಸೇಂಟ್ ಥೋಮಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಆರೋಗ್ಯಕರ ವಯಸ್ಸಿಗೆ ಯೋಗ ' ಪರಿಕಲ್ಪನೆಯಡಿ ಜೂನ್22ರಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ವಿದ್ಯಾರ್ಥಿಗಳು ಯೋಗದ ಮಹತ್ವವನ್ನು ಭಾಷಣದ ಮೂಲಕ ವ್ಯಕ್ತಪಡಿಸಿದರು.

ಶಿಕ್ಷಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಸೂರ್ಯ ನಮಸ್ಕಾರ, ಯೋಗದ ವಿವಿಧ ಆಸನಗಳನ್ನು ಪ್ರದರ್ಶಿಸಿದರು.

ಕಿಂಡರ್ಗಾರ್ಟನ್ ದಿಂದ 5ನೇ ತರಗತಿಯವರೆಗಿನ ಮಕ್ಕಳು ಅತ್ಯುತ್ಸಾಹದಿಂದ ಜೊತೆಗೂಡಿ ಯೋಗದ ವಿವಿಧ ಆಸನಗಳನ್ನು ಪ್ರಸ್ತುತಪಡಿಸಿದ್ದು ವಿಶೇಷವಾಗಿತ್ತು.

ಶಾಲಾ ಪ್ರಾಂಶುಪಾಲರಾದ ತೆರೆಸಾ ಫರ್ನಾಂಡಿಸ್ ಮಾತನಾಡಿ, ಆರೋಗ್ಯವೇ ಸಂಪತ್ತು ದಿನವು ಯೋಗ ಮಾಡಿ ಆರೋಗ್ಯವಂತ ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ಸ್ವಸ್ಥ ದೇಹ, ಸ್ವಚ್ಛ ಮನಸ್ಸು ದಿನವೂ ಯೋಗ ಮಾಡುವುದರಿಂದ ಮನಸು ಶಾಂತವಾಗಿ ಓದಿನಲ್ಲಿ ಏಕಾಗ್ರತೆ ಹೆಚ್ಚುತ್ತದೆ ಎಂದು ವಿದ್ಯಾರ್ಥಿಗಳಿಗೆ ಸಂದೇಶ ನೀಡಿದರು.

ಶಾಲೆಯ ಎಲ್ಲ ಸಿಬ್ಬಂದಿ ಸಾಮೂಹಿಕ ಯೋಗಾಸನ ಮಾಡುವುದರಮೂಲಕಸಕ್ರಿಯವಾಗಿ ಭಾಗವಹಿಸಿದರು. ಕಾರ್ಯಕ್ರಮವು ಏಕತೆ, ಶಾಂತಿ ಹಾಗೂ ಸಕಾರಾತ್ಮಕ ಚಿಂತನೆ ಮೂಡಿಸುವಲ್ಲಿ ಯಶಸ್ವಿಯಾಯಿತು. ಸಂಸ್ಥೆಯ ಮುಖ್ಯಸ್ಥರಾದ ರೆ. ಐಶನ್ ಜೋಶ್ವ ಖಜಾಂಚಿಗಳಾದಶ್ರೀ.ಕೆ.ಸಿ.ವರ್ಗೀಸ್ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು.



ಇಂದು ಷಷ್ಟ್ಯಬ್ಧಿ ಅಭಿನಂದನೆ ಕಾರ್ಯಕ್ರಮ



• **ಹೊನ್ನಾವರ :** ಖ್ಯಾತ ತಬಲಾ ಕಲಾವಿದರಾದ ಗೋಪಾಲಕೃಷ್ಣ ಗೋವಿಂದ ಹೆಗಡೆ ಕಲ್ಭಾಗ ಇವರ ಷಷ್ಟ್ಯಬ್ಧಿಯ ನಿಮಿತ್ತ ಜೂನ್ 27ರಂದು ಶನಿವಾರ ಅಭಿನಂದನಾ ಸಮಾರಂಭ ಹಾಗೂ 'ತಾಲ ಗೋಪಾಲ'ಅಭಿನಂದನಾ ಪುಸ್ತಕ ಬಿಡುಗಡೆ ಕಾರ್ಯಕ್ರಮ ಪ್ರಭಾತನಗರದ ಮೂಡಗಣಪತಿ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಭಿನಂದನಾ ಸಮಿತಿಯ ಅಧ್ಯಕ್ಷ ವೆಂಕಟ್ರಮಣ ಹೆಗಡೆ ಕವಲಕ್ಕಿ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಟಿಯಲ್ಲಿ ಕಾರ್ಯಕ್ರಮದ ಕುರಿತು ಮಾಹಿತಿ ನೀಡಿದರು. ಅವರು ದೇಶ ಹಾಗೂ ವಿದೇಶದಲ್ಲಿ ಶಿಷ್ಯವರ್ಗ ಹೊಂದಿರುವ ಕಲಾವಿದರಾದ ಗೋಪು ಹೆಗಡೆ ಹಲವು ಹಿರಿಯ ಕಲಾವಿದರ ಜೊತೆ ತಬಲಾ ಸಾಥ್ ನೀಡಿದ್ದಾರೆ. ಎಸ್ .ಡಿ.ಎಂ. ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸಾವಿರಾರು ವಿದ್ಯಾರ್ಥಿಗಳಿಗೆ ತಬಲಾ ಶಿಕ್ಷಣ ಬೋಧಿಸಿದ್ದಾರೆ. ಅವರ ಷಷ್ಠಿಪೂರ್ತಿಯ ಅಂಗವಾಗಿ ತಾಲ – ಮಾನ ಕಾರ್ಯಕ್ರಮ ಆಯೋಜಿಸಿದ್ದು, ಶ್ರೀ ರಾಮಚಂದ್ರಪುರ ಮಠದ ಪರಮಪೂಜ್ಯ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳ ಸಾನಿಧ್ಯ ವಹಿಸಿ ಆರ್ಶಿವಚನ ನೀಡಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಹಿಂದುಸ್ತಾನಿ ಗಾಯಕರಾದ ಪಂಡಿತ ಗಣಪತಿ ಭಟ್ ಹಾಸಣಗಿ, ಪಂಡಿತ ಪರಮೇಶ್ವರ ಹೆಗಡೆ, ಪತ್ರಕರ್ತರಾದ ಬಿ. ಗಣಪತಿ ಆಗಮಿಸಲಿದ್ದು, ಸಾಮವೇದ ವಿದ್ವಾಂಸರಾದ ವೇ. ಸುಬ್ರಹ್ಮಣ್ಯ ಭಟ್ ಉಂಚಗೇರಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶ್ರೀಕುಮಾರ ಗ್ರೂಪ್ ನ ವೆಂಕಟ್ರಮಣ ಹೆಗಡೆ ಅಧ್ಯಕ್ಷತೆ ವಹಿಸುವರು. ಹಿರಿಯ ಪತ್ರಕರ್ತರಾದ ಜಿ.ಯು. ಭಟ್ ಮತ್ತು ಶಿವಾನಿ ಕೃಷ್ಣಮೂರ್ತಿ ಭಟ್ ಉಪಸ್ಥಿತರಿರುವರು. ಮೋಹನ ಹೆಗಡೆ ಹೆರವಟ್ಟಾ ಅಭಿನಂದನಾ ನುಡಿಗಳನ್ನಾಡುವರು.

ಸಮಿತಿ ಗೌರವಾಧ್ಯಕ್ಷಡಾ.ಎಂ.ಜಿ.ಹೆಗಡೆ, ಗೌರವ ಕಾರ್ಯದರ್ಶಿ ಜಿ.ಕೆ.ಭಟ್ ವಂದೂರು, ಖಜಾಂಚಿ ಉದಯ ಹೆಗಡೆ ಮುಡಾರೆ, ಜಿ.ಕೆ.ಹೆಗಡೆ ಹರಿಕೇರಿ,ಡಾ ಸತೀಶ ಭಟ್, ಸುಬ್ರಹ್ಮಣ್ಯ ಹೆಗಡೆ, ವಿನಾಯಕ ಬೆಟಕುರು, ಮಧು ಕುಡಳಾಕರ್, ವಿನಾಯಕ ಹರಡಸೆ, ಸುಬ್ರಹ್ಮಣ್ಯ ಹರಿಕೇರಿ ಮತ್ತಿತರರು ಉಪಸ್ಥಿತರಿದ್ದರು.

ತುರ್ತು ಪರಿಸ್ಥಿತಿಯ ಕರಾಳ ದಿನಾರಚರಣೆ



• **ಶಿರಸಿ:** ಕಾಂಗ್ರೆಸ್ ಸರ್ಕಾರ ಹೇರಿದ್ದ ತುರ್ತು ಪರಿಸ್ಥಿತಿಯ ಕರಾಳ ಅಧ್ಯಾಯಕ್ಕೆ 51 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ, ಇಲ್ಲಿನ ಬಿಜೆಪಿ ಜಿಲ್ಲಾ ಕಾರ್ಯಾಲಯ ದೀನದಯಾಳ ಭವನದಲ್ಲಿ 'ಸಂವಿಧಾನ ಹತ್ಯಾದಿನ' ಕಾರ್ಯಕ್ರಮ ಆಯೋಜಿಸಲಾಗಿತ್ತು. ಈಸಂದರ್ಭದಲ್ಲಿ ಅಂದಿನ ತುರ್ತು ಪರಿಸ್ಥಿತಿ ವಿರೋಧಿಸಿ ಹೋರಾಡಿ ಜೈಲು ವಾಸ ಅನುಭವಿಸಿದ್ದ ಹಿರಿಯರಾದ ನಾರಾಯಣ ಭಾಸ್ಕರ ಭಟ್ ಗದ್ದೆಮನೆ ಹಾಗೂ ವೆಂಕಟ್ರಮಣ ಸೀತಾರಾಮ ಹೆಗಡೆ ಕೆಸರಕೊಪ್ಪ ಅವರನ್ನು ಗೌರವಿಸಲಾಯಿತು.

ಕಾರ್ಯಕ್ರಮದ ಮುಖ್ಯ ವಕ್ತಾರ, ಆರೆಸ್ಸೆಸ್ ಶಿರಸಿ ವಿಭಾಗ ವ್ಯವಸ್ಥಾ ಪ್ರಮುಖ ಸತ್ಯನಾರಾಯಣ ಭಟ್ ಮಾತನಾಡಿ, ಅಂದಿನ ಪ್ರಧಾನಿ ಇಂದಿರಾ ಗಾಂಧಿ ತಮ್ಮ ಅಧಿಕಾರ ಉಳಿಸಿಕೊಳ್ಳುವ ಹಠಕ್ಕಾಗಿ, ಪ್ರಜಾಹಿತ ಲೆಕ್ಕಿಸದೆ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ತುರ್ತು ಪರಿಸ್ಥಿತಿ ಹೇರಿದ್ದರು. ಪತ್ರಿಕಾ ಸ್ವಾತಂತ್ರ್ಯ ಹರಣ ಮತ್ತು ಕಾನೂನಾತ್ಮಕ ಪ್ರಶ್ನೆ ಮಾಡುವ ಹಕ್ಕನ್ನೇ ಕಸಿದುಕೊಂಡಿದ್ದು ಕರಾಳ ಇತಿಹಾಸ. ಇದರ ವಿರುದ್ಧ ಆರೆಸ್ಸೆಸ್ ಹಾಗೂ ಜನಸಂಘದ ಕಾರ್ಯಕರ್ತರು 'ಜೈಲ್ ಭರೋ' ಸೇರಿದಂತೆ ಹಲವು ಸ್ವರೂಪದ ಹೋರಾಟ ನಡೆಸಿ ಸರ್ವಾಧಿಕಾರಿ ಧೋರಣೆಯನ್ನು ವಿರೋಧಿಸಿದರು ಎಂದು ನೆನಪಿಸಿಕೊಂಡರು.

ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಎಸ್. ಹೆಗಡೆ ಕರ್ಕಿ ಪ್ರಾಸ್ತಾವಿಕವಾಗಿ ಮಾತನಾಡಿ, ಅಂದು ಸಂವಿಧಾನದ ಕಗ್ಗೊಲೆ ಮಾಡಿದ ಕಾಂಗ್ರೆಸ್ ಇಂದು ಸಂವಿಧಾನ ರಕ್ಷಕನಂತೆ ಮುಖವಾಡ ಧರಿಸಿರುವುದು ಹಾಸ್ಯಾಸ್ಪದ. ಜನರಿಗೆ ನೈಜ ಇತಿಹಾಸದ ಜಾಗೃತಿ ಮೂಡಿಸಲು ಈ ದಿನ ಆಚರಿಸಲಾಗುತ್ತಿದೆ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುರುಪ್ರಸಾದ ಹೆಗಡೆ ಹರ್ತೆಬೈಲ್ ಸ್ವಾಗತಿಸಿ, ಪ್ರಶಾಂತ ನಾಯ್ಕ ವಂದಿಸಿದರು. ವೇದಿಕೆಯಲ್ಲಿ ವಿಭಾಗ ಪ್ರಭಾರಿ ಆರ್.ಡಿ. ಹೆಗಡೆ, ಜಿಲ್ಲಾ ಉಪಾಧ್ಯಕ್ಷರಾದ ಅಶೋಕ ಛಲವಾದಿ, ಪ್ರಭಾವತಿ ಗೌಡ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

ರಂಗ ಪುರಸ್ಕಾರ ಸಮಾರಂಭ ಇಂದು



• **ಅಂಕೋಲಾ:** ಸಂಗಾತಿ ರಂಗಭೂಮಿ ಅಂಕೋಲಾ ಇವರ ಆಶ್ರಯದಲ್ಲಿ ರಂಗಕರ್ಮಿ ಸಿ. ಜಿ. ಕೃಷ್ಣಮೂರ್ತಿ ಸ್ಮರಣಾರ್ಥ ಸಿಜಿಕೆ ರಂಗಪುರಸ್ಕಾರ ಸಮಾರಂಭ ಇಂದು (ಜೂನ್ 27) ಬೆಳಿಗ್ಗೆ 10.30 ಗಂಟೆಗೆ ಪಟ್ಟಣದ ಡಿ.ಎಡ್ ಸಭಾಭವನದಲ್ಲಿ ನಡೆಯಲಿದೆ. ಹೊನ್ನಾವರ ತಾಲೂಕಿನ ಮಾಡಗೇರಿ ನಿವಾಸಿ ರಂಗಕರ್ಮಿ ಶ್ರೀನಿವಾಸ ನಾಯ್ಕ ಅವರಿಗೆ ಸಿಜಿಕೆ ರಂಗ ಪುರಸ್ಕಾರ ನೀಡಿ ಗೌರವಿಸಲಾಗುವುದು.

ಹೆರಂಗಡಿಯ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀನಿವಾಸ ನಾಯ್ಕ ಅವರು ರಂಗಭೂಮಿ ನಟ, ನಿರ್ದೇಶಕ, ತಂತ್ರಜ್ಞ ಮತ್ತು ಸಂಘಟಕರಾಗಿ ಮಕ್ಕಳ ನಾಟಕ ರಚನಾಕಾರರಾಗಿ ಗುರುತಿಸಿಕೊಂಡಿದ್ದು, ಬಿ.ಇಡಿ,ಎಂ.ಎ ಚಿನ್ನದ ಪದಕ, ಗುಂಡಬಾಳ ಯಕ್ಷಗಾನ ಮೇಳದ ಅಧ್ಯಯನಕ್ಕೆ ಎಂ.ಪಿಲ್ ಪದವಿ,ನಾಟಕ ರಂಗದ ಡಿಪ್ಲೋಮಾ ಪದವಿ ಪಡೆದಿದ್ದಾರೆ.

ಧಾರವಾಡ, ಹಾವೇರಿ,ಉತ್ತರ ಕನ್ನಡ ಜಿಲ್ಲೆಗಳಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ನಂತರ ಪ್ರಾಂಶುಪಾಲರಾಗಿ ನೇರ ನೇಮಕಾತಿ ಹೊಂದಿ ಯಶಸ್ವಿ ವೃತ್ತಿ ಜೀವನ ನಡೆಸುತ್ತಿರುವ ಅವರ ಎಲ್ಲಾ ಸೇವೆಗಳನ್ನು ಪರಿಗಣಿಸಿ ಉತ್ತರ ಕನ್ನಡ ಜಿಲ್ಲೆಯಿಂದ ಸಿ.ಜಿ.ಕೆ ರಂಗ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ ರಾಜ್ಯದ 31 ಜಿಲ್ಲೆಗಳಲ್ಲಿ ಬೀದಿರಂಗದಿನ ಆಚರಿಸಿ ಸಿ.ಜಿ.ಕೆ ರಂಗಪುರಸ್ಕಾರ ಪ್ರದಾನ ಕಾರ್ಯಕ್ರಮ ನಡೆಸಲಾಗುತ್ತದೆ ಎಂದು ಸಂಘಟಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾರಿಜಟಕ ದೇವರ ವಾರ್ಷಿಕ ಅವಾರಿ ಜುಲೈ 7ರಂದು



• **ಅಂಕೋಲಾ:** ತಾಲೂಕಿನ ಮಂಜಗುಣಿಯ ತಾರಿಜಟಕ ದೇವರ ವಾರ್ಷಿಕ ಅವಾರಿ ಕಾರ್ಯಕ್ರಮ ಜುಲೈ 7ರಂದು ನಡೆಯಲಿದೆ. ಅಂಕೋಲಾ ತಾಲೂಕು ಮತ್ತು ಗೋಕರ್ಣ ಗಡಿಭಾಗದ ನಡುವೆ ಹರಿಯುವ ಗಂಗಾವಳಿ ನದಿಯ ತೀರದಲ್ಲಿ ಪುರಾತನ ಕಾಲದಿಂದ ಆರಾಧಿಸಲ್ಪಡುವ ತಾರಿ ಜಟಕನ ಹಬ್ಬ ಪ್ರತಿವರ್ಷ ಜೂನ್ ಕೊನೆ ಅಥವಾ ಜುಲೈ ತಿಂಗಳ ಆರಂಭದಲ್ಲಿ ಮಳೆಗಾಲದ ಸಮಯದಲ್ಲಿ ನಡೆಸಲಾಗುತ್ತಿದ್ದು ಸಾವಿರಾರು ಜನರು ದೇವರ ಸನ್ನಿಧಿಯಲ್ಲಿ ತಮ್ಮ ಹರಕೆಗಳನ್ನು ಸಲ್ಲಿಸುತ್ತಾರೆ. ಜುಲೈ 7ರಂದು ನಡೆಯುವ ಅವಾರಿ ಕಾರ್ಯಕ್ರಮದಲ್ಲಿ ಸರ್ವ ಭಕ್ತರು ಪಾಲ್ಗೊಂಡು ತಮ್ಮ ಹರಕೆಗಳನ್ನು ತೀರಿಸುವಂತೆ ಆಡಳಿತ ಮಂಡಳಿಯ ಪ್ರಕಟಣೆಯಲ್ಲಿ ತಿಳಿಸಿದೆ.

ಭಾವೈಕ್ಯತೆಯ ಮೊಹರಂ ಆಚರಣೆ



• **ದಾಂಡೇಲಿ:** ಪವಿತ್ರ ಮೊಹರಂ ಹಬ್ಬದ ಕಡೆಯ ದಿನವನ್ನು ಹಿಂದೂ–ಮುಸ್ಲಿಂ ಬಾಂಧವರು ನಗರದಲ್ಲಿ ಶುಕ್ರವಾರ ಸಂಭ್ರಮ, ಸಡಗರದಿಂದ ಆಚರಿಸಿದರು.

ನಗರದ ವಿವಿಧ ಬೀದಿಗಳಲ್ಲಿ ಬೆಳಗ್ಗೆಯಿಂದಲೇ ನಡೆದ ದೇವರುಗಳ (ಪಂಜಾ) ಮೆರವಣಿಗೆ ಅಬ್ಬರದ ಮಳೆಯ ನಡುವೆಯು ಗಮನ ಸೆಳೆಯಿತು. ಸಾರ್ವಜನಿಕರು ಪಂಜಾ ದೇವರುಗಳ ದರ್ಶನ ಪಡೆದರು. ಶುಕ್ರವಾರ ರಾತ್ರಿ ನಗರದೆಲ್ಲೆಡೆಗಳ ಪಂಜಾ ಕೆ.ಸಿ ವೃತ್ತಕ್ಕೆ ಬಂದು ಸೇರಿತು. ಐದು ದಿನಗಳ ಕಾಲ ನಗರದ ವಿವಿದೆಡೆ ಪ್ರತಿಷ್ಠಾಪಿಸಲಾಗಿದ್ದ ಪಂಜಾ ದೇವರುಗಳನ್ನು ಶುಕ್ರವಾರ ರಾತ್ರಿ ವಿಸರ್ಜಿಸಲಾಯಿತು. ಈ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಂ ಧರ್ಮ ಬಾಂಧವರು ಹಾಗೂ ವಿವಿಧ ಧರ್ಮಗಳ ಬಾಂಧವರು ಉಪಸ್ಥಿತರಿದ್ದರು.

ಈ ಮೊಹರಂ ನ್ನು ಮುಹರ್ರಂ–ಉಲ್–ಹರಾಮ್ ಎಂದೂ ಸಹ ಕರೆಯುತ್ತಾರೆ. ಹಿಜ್ರಿ ಕ್ಯಾಲೆಂಡರ್‌ನಲ್ಲಿ ಮುಸ್ಲಿಂ ಸಮುದಾಯಕ್ಕೆ ಹೊಸ ವರ್ಷದ ಆರಂಭವನ್ನು ಸೂಚಿಸುವ ಮೊದಲ ತಿಂಗಳು ಇದು. ರಂಜಾನ್ ನಂತರ ಇಸ್ಲಾಮಿಕ್ ಕ್ಯಾಲೆಂಡರ್‌ನಲ್ಲಿ ಇದು ಎರಡನೇ ಪವಿತ್ರ ತಿಂಗಳು ಎಂದು ಪರಿಗಣಿಸಲಾಗಿದೆ. ಪ್ರವಾದಿ ಮುಹಮ್ಮದ್ ಅವರ ಮೊಮ್ಮಗ ಹಜರತ್ ಇಮಾಮ್ ಹುಸೇನ್ ಅವರ ನಿಧನಕ್ಕೆ ಶೋಕ ವ್ಯಕ್ತಪಡಿಸುವ ತಿಂಗಳು ಅಂತ ಹೇಳಲಾಗುತ್ತದೆ.

ಅರಣ್ಯವಾಸಿಗಳು ಎಸ್‌ಐಆರ್ ಗಂಭೀರವಾಗಿ ಪರಿಗಣಿಸಲಿ



• **ಯಲ್ಲಾಪುರ:** ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯಲ್ಲಿ (ಎಸ್ ಐಆರ್) ಅಗತ್ಯ ದಾಖಲೆಗಳನ್ನ ಸಲ್ಲಿಸಲು ಅರಣ್ಯವಾಸಿಗಳು ನಿರ್ಲಕ್ಷಿಸಬಾರದು. ಮತದಾರರ ಹಕ್ಕು ತಪ್ಪಿದ್ದಲ್ಲಿ ಭಾರತದ ಪೌರತ್ವ ನಷ್ಟವಾಗುವುದು. ಪೌರತ್ವ ನಷ್ಟದಿಂದ ಅರಣ್ಯ ಭೂಮಿ ಹಕ್ಕನ್ನು ಪಡಿಯಲು ವಂಚಿತರಾಗುತ್ತೀರಿ ಎಂದು ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ಹೇಳಿದರು.

ಅವರು ತಾಲೂಕಿನ ಹಾಸಣಗಿ ಮತ್ತು ಕಂಪ್ಲಿ ಗ್ರಾಮ ಅರಣ್ಯವಾಸಿಗಳಿಂದ ದಶಲಕ್ಷ ಗಿಡ ನೆಡುವ ಅಭಿಯಾನದ ಅಂಗವಾಗಿ ಹಾಸಣಗಿಯ ಶಿರನಾಳ ಗಣಪತಿ ದೇವಸ್ಥಾನದ ಆವರಣದಲ್ಲಿ ಗಿಡ ನೆಡುವ ಜಾಗೃತ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯು ಪ್ರಜೆಯ ಭಾರತದ ಪೌರತ್ವವನ್ನ ಮತ್ತು ಹಕ್ಕನ್ನು ನಿರ್ಧರಿಸುವುದರಿಂದ ಭಾರತದ ಪೌರತ್ವದಿಂದ ವಂಚಿತರಾದರೆ, ಅರಣ್ಯವಾಸಿಗಳಿಗೆ ದೇಶದ ಭೂಮಿ ಹಕ್ಕು ಪಡಿಯಲು ಸಾಧ್ಯವಾಗದು. ಆದ್ದರಿಂದ ಪರಿಷ್ಕರಣೆ ಸಂದರ್ಭದಲ್ಲಿ ಚುನಾವಣೆಆಯೋಗದ್ರಢೀಕರಿಸಿದ 11 ವಿವಿಧ ದಾಖಲೆಗಳಲ್ಲಿ ಒಂದನ್ನು ಸಲ್ಲಿಸಬೇಕೆಂದರಲ್ಲದೇ ಪೌರತ್ವ ನಷ್ಟದಿಂದ ಭೂಮಿ ಹಕ್ಕನ್ನಲ್ಲದೇ, ಗ್ಯಾರಂಟಿ, ವಿಧವ ವೇತನ , ವೃದ್ಯಾಪ್ಯ ವೇತನ, ಸಹಾಯಧನ, ಬ್ಯಾಂಕ್ ಸಾಲ, ರೇಷನ, ರೈತರಿಗೆ ಸಹಾಯ ಮುಂತಾದ ಸೌಲಭ್ಯದಿಂದ ವಂಚಿತರಾಗುವ ಪ್ರಸಂಗ ಬರಬಹುದು.

ಪ್ರತಿಯೊಬ್ಬ ಅರಣ್ಯವಾಸಿಯು ಸಾಕಷ್ಟು ಪ್ರಮಾಣದಲ್ಲಿ, ದೀರ್ಘಕಾಲದ ಹಾಗೂ ಹಣ್ಣು ಹಂಪಲ ಗಿಡಗಳನ್ನ ನೆಡುವ ದಿಸೆಯಲ್ಲಿ ಕಾರ್ಯ ಪ್ರವರ್ತರಾಗಬೇಕು. ಗ್ರೀನ್ ಕಾರ್ಡ ಪ್ರಮುಖರ ನೇತೃತ್ವದಲ್ಲಿ ಗಿಡ ನೆಡುವ ಕಾರ್ಯವು, ಅರಣ್ಯವಾಸಿಗಳೊಂದಿಗೆ ಪರಿಣಾಮಕಾರಿ ಕಾರ್ಯ ಜಿಲ್ಲಾದ್ಯಂತ ಜರುಗುತ್ತಿರುವುದು ವಿಶೇಷ ಎಂದರು.

ಈ ವೇಳೆ ಪ್ರಧಾನ ಸಂಚಾಲಕ ಚಂದ್ರಶೇಖರ ಪೂಜಾರಿ ಹಾಸಣಗಿ, ವಿನೋದ ತಳೇಕರ, ನರಸಿಂಹ ನಾಯ್ಕ ಬಿಳಕೆ, ಮಹೇಶ ಮರಾಠಿ ಶಿರನಾಲ, ಚಂದ್ರಕಾಂತ ಮರಾಠಿ ಶಿರನಾಲ, ಪ್ರಶಾಂತ ಮಾದನಸರ, ರಾಮಚಂದ್ರ ಹೆಗಡೆ ಬಿಳಕೆ, ಚಂದ್ರಕಾಂತ ಬೈದಕೋಡ, ಕೃಷ್ಣ ನಾಯ್ಕ ಕೆಮ್ಮಣ್ಣೆ, ವಿಠ್ಠಲ ಪೂಜಾರಿ ಕಂಪ್ಲಿ, ವೆಂಕಟರಮಣ ಹೆಗಡೆ ಬಿಳಕೆ , ನಾಗೇಂದ್ರ ಮಾಣಿ ಕುಣಬಿ, ಸದನಾಂದ ಪೂಜಾರಿ, ರವಿ ಗಣಪತಿ ಸಿದ್ದಿ ಮಂಚಿಕೇರಿ ಮುಂತಾದವರು ನೇತೃತ್ವವಹಿಸಿದರು.

ಅರಣ್ಯವಾಸಿಗಳಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮಾಹಿತಿ ಮತ್ತು ಕಾನೂನು ಅಂಶಗಳ ಕುರಿತು ಸಾರ್ವತ್ರಿಕವಾಗಿ ಶಿರಸಿಯ ಜಿಲ್ಲಾ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಕಾರ್ಯಾಣಲಯದಲ್ಲಿ ಕಾನೂನು ಘಟಕ ಸ್ಥಾಪನೆಗೆ ನಿರ್ಧರಿಸಲಾಗಿದೆ ಎಂದರು.

ಅಂತರ್ ಜಿಲ್ಲಾ ಮಹಿಳಾ ಆರೋಪಿ ಬಂಧನ



• **ಶಿರಸಿ:** ನಗರದ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರ ಗಮನ ಬೇರೆಸಿ ಕಳ್ಳತನ ಮಾಡುತ್ತಿದ್ದ ಅಂತರ್ ಜಿಲ್ಲಾ ಮಹಿಳಾ ಆರೋಪಿಯನ್ನು ಶಿರಸಿ ನಗರ ಠಾಣೆ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬೆಂಗಳೂರಿನ ರಾಜಾಜಿನಗರದ (66ನೇ ಕ್ರಾಸ್, 5ನೇ ಬ್ಲಾಕ್) ಜ್ಯೋತಿ ಅಲಿಯಾಸ್ ಸಂಜನಾ ವೆಂಕಟೇಶ ಪಸುಪುಲೇಟ್ (32) ಬಂಧಿತ ಆರೋಪಿಯಾಗಿದ್ದಾಳೆ.

ಸೊರಬ ತಾಲೂಕಿನ ಚಂದ್ರಗುತ್ತಿ ಸಮೀಪದ ಕಲಗೋಡದ ಸವಿತಾ ಆನಂದ ನಾಯ್ಕ ಎಂಬುವವರು ಯಲ್ಲಾಪುರದ ಅಡಿಕೆಸರ ಗ್ರಾಮದಿಂದ ಚಂದ್ರಗುತ್ತಿಗೆ ಹೋಗಲು ಶಿರಸಿ ಬಸ್ ನಿಲ್ದಾಣಕ್ಕೆ ಬಂದಿದ್ದರು. ಈ ವೇಳೆ ತಮ್ಮ ಅಕ್ಕ ನಾಗರತ್ನ ಅವರಿಗೆ ಶಿರಸಿ–ಬನವಾಸಿ ಬಸ್ ಹತ್ತಿಸುವಾಗ ಜನಜಂಗುಳಿಯ ಲಾಭ ಪಡೆದ ಆರೋಪಿತೆ, ಸವಿತಾ ಅವರ ವ್ಯಾನಿಟಿ ಬ್ಯಾಗ್‌ನ ಜಿಪ್ ತೆಗೆದು ಸ್ಟೀಲ್ ಬಾಕ್ಸ್‌ನಲ್ಲಿದ್ದ 1 ಲಕ್ಷ ರೂ. ಮೌಲ್ಯದ ಚಿನ್ನದ ಸರ, 50 ಸಾವಿರ ರೂ. ಮೌಲ್ಯದ ಚಿನ್ನದ ಕಿವಿಯ ಬೆಂಡೋಲೆ, ಸರಪಳಿ, ಮಾಟ ಹಾಗೂ ಮೊಬೈಲ್, ನಗದು ಸೇರಿ ಒಟ್ಟು 1.59 ಲಕ್ಷ ರೂ. ಮೌಲ್ಯದ ಸ್ವತ್ತುಗಳನ್ನು ಕಳವು ಮಾಡಿದ್ದಳು. ಈ ಕುರಿತು ಶಿರಸಿ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಪ್ರಕರಣ ದಾಖಲಿಸಿಕೊಂಡ ಪೊಲೀಸರು ಕ್ಷಿಪ್ರ ಕಾರ್ಯಾಚರಣೆ ನಡೆಸಿ ಜೂನ್ 25ರಂದು ಆರೋಪಿತೆಯನ್ನು ವಶಕ್ಕೆ ಪಡೆದಿದ್ದಾರೆ. ವಿಚಾರಣೆ ವೇಳೆ ಆಕೆ ಈ ಕಳ್ಳತನ ಸೇರಿ ಸೆಪ್ಟೆಂಬರ್ 24, 2025 ರಂದು ನಡೆಸಿದ್ದ ಮತ್ತೊಂದು ಕಳ್ಳತನದ ಅಪರಾಧವನ್ನು ಒಪ್ಪಿಕೊಂಡಿದ್ದಾಳೆ. ಬಂಧಿತಳಿಂದ ಪೊಲೀಸರು 2 ಪ್ರತ್ಯೇಕ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 9 ಲಕ್ಷ ರೂ. ಮೌಲ್ಯದ 70 ಗ್ರಾಂ ಬಂಗಾರದ ಆಭರಣಗಳನ್ನು ಜಪ್ತುಪಡಿಸಿಕೊಂಡಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್,ಹೆಚ್ಚುವರಿ ಪೊಲೀಸ್ ಅಧೀಕ್ಷಕ ಕೃಷ್ಣಮೂರ್ತಿ ಜಿ, ಡಿಎಸ್ಪಿ ಗೀತಾ ಪಾಟೀಲ್ ಹಾಗೂ ಸಿಪಿಐ ಸಂಪತ್ ಈ.ಸಿ ಮಾರ್ಗದರ್ಶನದಲ್ಲಿ, ನಗರ ಠಾಣೆ ಪಿಎಸ್‌ಐ ನರಸಿಂಹಲು ಮತ್ತು ತನಿಖಾ ಪಿಎಸ್‌ಐ ನಾರಾಯಣ ರಾಥೋಡ ನೇತೃತ್ವದಲ್ಲಿ ಈ ಯಶಸ್ವಿ ಕಾರ್ಯಾಚರಣೆ ನಡೆದಿದೆ.

ಕಾರ್ಯಾಚರಣೆಯಲ್ಲಿ ಅಪರಾಧ ವಿಭಾಗದ ಸಿಬ್ಬಂದಿಗಳಾದ ಕೋಟೇಶ ನಾಗರವಳ್ಳಿ, ರಾಮಯ್ಯ ಪೂಜಾರಿ, ಹನುಮಂತ ಮಾಕಾಪೂರ, ಸದ್ದಾಂ ಹುಸೇನ್, ಚನ್ನಬಸಪ್ಪ ಕೆ, ರಾಜು ಎಮ್, ಸುನೀಲ್, ಪ್ರಶಾಂತ, ಶಂಕರಮ್ಮ, ದೀಪಾ ಹಾಗೂ ಕಾರವಾರ ಟೆಕ್ನಿಕಲ್ ಸೆಲ್‌ನ ಉದಯ ಗುನಗಾ ಮತ್ತು ಬಬನ ಕದಂ ಪಾಲ್ಗೊಂಡಿದ್ದರು.

ಶನಿವಾರದ ಪಂದ್ಯಗಳು

ಕೇಪ್ ವರ್ದೆ-ಸೌದಿ ಅರೇಬಿಯಾ, (ಬೆಳಗ್ಗೆ 5:30)
ಉರುಗ್ವೆ-ಸ್ಪೇನ್, (ಬೆಳಗ್ಗೆ 5:30)
ಬೆಲ್ಜಿಯಂ-ನ್ಯೂಜಿಲೆಂಡ್, (ಬೆಳಗ್ಗೆ 8:30)
ಈಜಿಪ್ಟ್-ಇರಾನ್, (ಬೆಳಗ್ಗೆ 8:30)
ಪಾನಾಮಾ-ಇಂಗ್ಲೆಂಡ್, (ಮಧ್ಯರಾತ್ರಿ 2:30)
ಕ್ರೊಯೇಷ್ಯಾ-ಘಾನಾ, (ಮಧ್ಯರಾತ್ರಿ 2:30)

ಕಿರುಸುದ್ದಿ

ಜರ್ಮನಿ ವಿರುದ್ಧ ಜಯ ಈಕ್ವೆಡಾರ್‌ನಲ್ಲಿ ರಜೆ

ದುಬೈ: ಈಕ್ವೆಡಾರ್ ಫುಟ್ಬಾಲ್ ತಂಡವು ಜರ್ಮನಿ ವಿರುದ್ಧ 2-1 ಅಂತರದ ಭರ್ಜರಿ ಗೆಲುವಿನೊಂದಿಗೆ ವಿಶ್ವಕಪ್‌ನ ನಾಕೌಟ್ ಹಂತವನ್ನು ತಲುಪಿದ ನಂತರ ಈಕ್ವೆಡಾರ್ ಅಧ್ಯಕ್ಷ ಡೇನಿಯಲ್ ನೊಬೊವಾ ಶುಕ್ರವಾರ ರಾಷ್ಟ್ರೀಯ ರಜಾದಿನವೆಂದು ಘೋಷಿಸಿದರು.ಟೀಕೆಗಳು, ಅವಮಾನಗಳು ಮತ್ತು ಅವರು ಅನುಭವಿಸಿದ ಕಠಿಣ ಕ್ಷಣಗಳ ಹೊರತಾಗಿಯೂ, ಚೇತರಿಸಿಕೊಳ್ಳುವಲ್ಲಿ ಯಶಸ್ವಿಯಾದ ಆಟಗಾರರು ಮತ್ತು ತರಬೇತುದಾರರಿಗೆ ಧನ್ಯವಾದಗಳು. ನಾಳೆ, ರಜಾದಿನ! ಎಂದು ನೊಬೊವಾ ಎಕ್ಸ್(ಟ್ವಿಟ್ಟರ್) ಪೋಸ್ಟ್‌ನಲ್ಲಿ ಘೋಷಿಸಿ ದರು. ಐವರಿ ಕೋಸ್ಟ್ ವಿರುದ್ಧದ ಸೋಲು ಮತ್ತು ಕುರಾಕಾವೊ ವಿರುದ್ಧದ ಡ್ರಾ ನಂತರ ಗುರುವಾರ ನಡೆದ ತನ್ನ ಅಂತಿಮ ಲೀಗ್ ಪಂದ್ಯದಲ್ಲಿ ಈಕ್ವೆಡಾರ್‌ಗೆ ಗೆಲುವು ಅಗತ್ಯವಾಗಿತ್ತು.

ಶೂಟಿಂಗ್: ಭಾರತ ಅಗ್ರ

ಹೊಸದಿಲ್ಲಿ: 7 ಚಿನ್ನದ ಸಹಿತ ಒಟ್ಟು 24 ಪದಕಗಳನ್ನು ಗೆದ್ದಿರುವ ಭಾರತ ತಂಡ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವ ಚಾಂಪಿಯನ್‌ಶಿಪ್ ಕೂಟದಲ್ಲಿ ಅಗ್ರಸ್ಥಾನ ಗಳಿಸಿತು. ಕೊನೆಯ ದಿನದಂದು ಅತ್ಯುತ್ತಮ ಪ್ರದರ್ಶನ ನೀಡಿರುವ ಭಾರತೀಯ ಶೂಟರ್‌ಗಳು ಪಿಸ್ತೂಲ್, ರೈಫಲ್ ವಿಭಾಗಗಳಲ್ಲಿ ಮಿಂಚಿದರು. ಆದಾಗ್ಯೂ ಶಾಟ್‌ಗನ್ ವಿಭಾಗದಲ್ಲಿ ಯಾವುದೇ ಪದಕ ದೊರಕಲಿಲ್ಲ. 7 ಚಿನ್ನ, 8 ಬೆಳ್ಳಿ, 9 ಕಂಚಿನ ಪದಕಗಳನ್ನು ಗೆದ್ದಿರುವ ಭಾರತೀಯ ಶೂಟರ್‌ಗಳು ವೈಯಕ್ತಿಕ ತಟಸ್ಥ ಕ್ರೀಡಾಪಟುಗಳನ್ನು ಮೀರಿಸಿದರು. ಆ ಗುಂಪು 14 ಪದಕಗಳನ್ನು ಗೆದ್ದಿತ್ತು. ಇಟಲಿ ಮೂರನೇ ಸ್ಥಾನ ಪಡೆಯಿತು. 10 ಪದಕಗಳನ್ನು ಗೆದ್ದಿತ್ತು.

ಕಾಮನ್‌ವೆಲ್ತ್: ವೇಟ್ ಲಿಫ್ಟಿಂಗ್ ತಂಡ ಪ್ರಕಟ

ಹೊಸದಿಲ್ಲಿ: ಗ್ಲಾಸ್ಗೋ ಕಾಮನ್‌ವೆಲ್ತ್ ಮಹಾ ಕೂಟದಲ್ಲಿ ಭಾರತ ವೇಟ್‌ಲಿಫ್ಟಿಂಗ್ ತಂಡವನ್ನು ಎರಡು ಒಲಿಂಪಿಕ್ ಪದಕ ವಿಜೇತೆ ಮೀರಾಬಾಯಿ ಚಾನು ಮುನ್ನಡೆಸಲಿದ್ದಾರೆ. ಜುಲೈ 23ರಿಂದ ಶುರುವಾಗಲಿರುವ ಈ ಕೂಟಕ್ಕೆ ಭಾರತ ವೇಟ್‌ಲಿಫ್ಟಿಂಗ್ ತಂಡವನ್ನು ಪ್ರಕಟಿಸಲಾಗಿದೆ. 48 ಕೆ.ಜಿ ವಿಭಾಗದಲ್ಲಿ ಸ್ಪರ್ಧಿಸಲಿರುವ ಮೀರಾಬಾಯಿ ಪ್ರಮುಖ ಸ್ಪರ್ಧಿಯಾದರೆ, ಈ ತಂಡದಲ್ಲಿ ಲವ್‌ಪ್ರೀತ್ ಸಿಂಗ್(+110 ಕೆ.ಜಿ.), ರಿಶಿಕಾಂತಾ(60 ಕೆ.ಜಿ.), ಅಜಯ ಬಾಬು(79 ಕೆ.ಜಿ.), ದಿಲ್ಬಾಗ್ ಸಿಂಗ್(94 ಕೆ.ಜಿ.) ಸೇರಿದ್ದಾರೆ. ವೇಟ್‌ಲಿಫ್ಟಿಂಗ್ ಕೂಟವು ಜುಲೈ 26ರಿಂದ 30ರವರೆಗೆ ನಡೆಯಲಿದೆ.

ತಂಡ: ಮಹಿಳೆಯರಲ್ಲಿ(ಕೆ.ಜಿ.): ಮೀರಾಬಾಯಿ(48), ಜ್ಞಾನೇಶ್ವರಿ(53), ಬಿಂದ್ಯಾರಾಣಿ(58, ಹರ್ಜಿಂದರ್ ಕೌರ್(69), ಮಾರ್ಟಿನಾ(+86).
ಪುರುಷರಲ್ಲಿ(ಕೆ.ಜಿ.): ರಿಶಿಕಾಂತ(60), ರಾಜಾ(65), ಅಜಯ(79), ದಿಲಬ್ಗ್(94), ಲವ್‌ಪ್ರೀತ್(+110)

ರಗ್ಬಿ: ಹೈದರಾಬಾದ್‌ಗೆ ಜಯ

ಹೈದರಾಬಾದ್: ಇಲ್ಲಿ ನಡೆಯುತ್ತಿರುವ ರಗ್ಬಿ ಪ್ರೀಮಿಯರ್ ಲೀಗ್‌ನಲ್ಲಿ ಹೈದರಾಬಾದ್ ಹೀರೋಸ್ ತಂಡವು ಕೋಲ್ಕತ್ತಾ ಬಂಗಾ ಟೈಗರ್ಸ್ ವಿರುದ್ಧ 28-0 ಅಂತರದ ಭರ್ಜರಿ ಜಯ ಸಾಧಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನವನ್ನು ಕಾಯ್ದುಕೊಂಡಿತು. ಪಂದ್ಯದ ಆರಂಭದಿಂದಲೇ ಹೈದರಾಬಾದ್ ಹೀರೋಸ್ ವೇಗದ ದಾಳಿ ಮತ್ತು ಚುರುಕಿನ ಚೆಂಡಿನ ಚಲನೆಯ ಮೂಲಕ ತನ್ನ ಪ್ರಾಬಲ್ಯ ಮೆರೆದಿತು. ಮೈದಾನದಾದ್ಯಂತ ಕೋಲ್ಕತ್ತಾ ಬಂಗಾ ಟೈಗರ್ಸ್‌ನ ರಕ್ಷಣಾ ಪಡೆಯನ್ನು ಚದುರಿಸುತ್ತಾ ನಿರಂತರ ಒತ್ತಡ ಹೇರಿತು. ಕೊನೆಯಲ್ಲಿ ಅವಕಾಶ ಮಾಡಿಕೊಡದೆ ಗೆಲುವು ದಾಖಲಿಸಿತು.

ಮುನ್ನಡೆಯತ್ತ ಭಾರತ ಎ

ಗಾಲೆ: 452 ರನ್ ಗಳಿಸಿ 6 ವಿಕೆಟ್ ಕಳೆದುಕೊಂಡಿದ್ದ ಭಾರತ ಎ ತಂಡ ಡಿಕ್ಲೇರ್ ಕೊಟ್ಟಿದ್ದು ಶ್ರೀಲಂಕಾ 113 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡಿದೆ. ಗಾಲೆದಲ್ಲಿ ನಡೆಯುತ್ತಿರುವ ಭಾರತ ಮತ್ತು ಶ್ರೀಲಂಕಾ ಎ ತಂಡಗಳ ನಡುವಿನ ಅನಧಿಕೃತ ಟೆಸ್ಟ್ ಪಂದ್ಯವು ಎರಡನೇ ದಿನ ರೋಚಕ ಹಂತಕ್ಕೆ ಹೋಯಿತು. ಸುದರ್ಶನ್, ಧ್ರುವ್ ಜುರೇಲ್ ಅವರ ಶತಕ ಮತ್ತು ಶೇಕ್ ರಶೀದ್ ಅವರ ಅರ್ಧ ಶತಕದ ನೆರವಿನಿಂದ ಭಾರತ ಎ 452 ರನ್‌ಗಳಿಗೆ ಡಿಕ್ಲೇರ್ ನೀಡಿತು. ಜುರೇಲ್ 141 ರನ್‌ಗಳಿಸಿ ಅಜೇಯರಾಗಿದ್ದರು. ಶ್ರೀಲಂಕಾ ಎ ತಂಡ ಕೂಡ ಫರ್ನಾಂಡೊ ಅವರ 65 ರನ್‌ಗಳ ಬ್ಯಾಟಿಂಗ್‌ನೊಂದಿಗೆ ಉತ್ತಮ ಸ್ಥಿತಿಯಲ್ಲಿದೆ. ಭಾರತ ಎ ವಿಕೆಟ್ ಕಿತ್ತಿದೆ.

2-1 ಅಂತರದಲ್ಲಿ ಜರ್ಮನಿ ಮಣಿಸಿ ನಾಕೌಟ್‌ಗೆ ಲಗ್ಗೆ | ಗೊನ್ಸಾಲೊ ಪ್ಲಾಟಾ ನಿರ್ಣಾಯಕ ಗೋಲು

ಈಕ್ವೆಡಾರ್ ಅಬ್ಬರ, ಜರ್ಮನಿಗೆ ಶಾಕ್!

ಈಸ್ಟ್ ರುದರ್‌ಫೋರ್ಡ್ (ಅಮೆರಿಕ): ಗೊನ್ಸಾಲೊ ಪ್ಲಾಟಾ ಅಂತಿಮ ಹಂತದಲ್ಲಿ ಗಳಿಸಿದ ಗೋಲಿನ ನೆರವಿನಿಂದ ಈಕ್ವೆಡಾರ್ 2-1 ಅಂತರದಲ್ಲಿ ಜರ್ಮನಿಯನ್ನು ಮಣಿಸಿ ವಿಶ್ವಕಪ್ ನಾಕೌಟ್ ಹಂತಕ್ಕೆ ಲಗ್ಗೆ ಇಟ್ಟಿತು. ಇದರೊಂದಿಗೆ ಜರ್ಮನಿ ವಿಶ್ವಕಪ್ ಪಂದ್ಯಾವಳಿಯಲ್ಲಿ ದೊಡ್ಡ ಆಘಾತವೊಂದು ಎದುರಿಸಿದೆ.

ಎರಡನೇ ನಿಮಿಷದಲ್ಲೇ ಲೆರಾಯ್ ಸಾನೆ ಗೋಲು ಬಾರಿಸಿ ಜರ್ಮನಿಗೆ ಮುನ್ನಡೆ ತಂದುಕೊಟ್ಟರು. ಆದರೆ ಒಂಬತ್ತನೇ ನಿಮಿಷದಲ್ಲಿ ನಿಲ್ಸನ್ ಅಂಗುಲೊ ಸಮಬಲ ಸಾಧಿಸಿದರು. 77ನೇ ನಿಮಿಷದಲ್ಲಿ ಕಾರ್ನರ್ ಕಿಕ್‌ನಿಂದ ಬಂದ ಚೆಂಡನ್ನು ಗೊನ್ಸಾಲೊ ಪ್ಲಾಟಾ ಗೋಲಾಗಿ ಪರಿವರ್ತಿಸಿ ಈಕ್ವೆಡಾರ್‌ಗೆ ರೋಚಕ ಗೆಲುವು ತಂದುಕೊಟ್ಟರು. ಮೊದಲ ಎರಡು ಪಂದ್ಯಗಳನ್ನು ಗೆದ್ದು ಈಗಾಗಲೇ ಗುಂಪಿನ ಅಗ್ರಸ್ಥಾನ ಖಚಿತಪಡಿಸಿಕೊಂಡಿದ್ದ ಜರ್ಮನಿಗೆ ಈ ಸೋಲು ಹಿನ್ನಡೆಯಾದರೂ, ತಂಡ ನಾಕೌಟ್ ಹಂತದಲ್ಲಿದೆ. ನಾಲ್ಕು ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದ ಈಕ್ವೆಡಾರ್, ಉತ್ತಮ ಮೂರನೇ ಸ್ಥಾನ ಪಡೆದ ತಂಡಗಳ ಪೈಕಿ ಒಂದಾಗಿ ಮುಂದಿನ ಸುತ್ತಿಗೆ ಅರ್ಹತೆ ಪಡೆಯಿತು.



ಸ್ಕೋರ್

- ಲೆರೋಯ್(ಜರ್ಮನಿ): 2ನೇ ನಿಮಿಷ
- ನಿಲ್ಸನ್ ಅಂಗುಲೊ(ಈಕ್ವೆಡಾರ್): 9ನೇ ನಿಮಿಷ
- ಗೊಂಜಾಲೊ(ಈಕ್ವೆಡಾರ್): 77ನೇ ನಿಮಿಷ

ನಾಕೌಟ್‌ಗೆ ನೆದರ್ಲೆಂಡ್ಸ್

ಕ್ಯಾನ್ಸಾಸ್ ಸಿಟಿ (ಅಮೆರಿಕ): ಬ್ರಿಯಾನ್ ಬ್ರಾಬ್ಬೆ ಅವರ ಮೂರನೇ ಗೋಲು ಹಾಗೂ ಟ್ಯುನೀಶಿಯಾದಿಂದ ಬಂದ ಎರಡು ಆತ್ಮಹತ್ಯಾ ಗೋಲುಗಳ ನೆರವಿನಿಂದ ನೆದರ್ಲೆಂಡ್ಸ್ 3-1 ಅಂತರದಲ್ಲಿ ಟ್ಯುನೀಶಿಯಾವನ್ನು ಮಣಿಸಿ ಫಿಫಾ ವಿಶ್ವಕಪ್‌ನ ಗುಂಪು ಎಫ್‌ನಲ್ಲಿ ಅಗ್ರಸ್ಥಾನಿಯಾಗಿ ನಾಕೌಟ್ ಹಂತ ಪ್ರವೇಶಿಸಿತು.

ಪಂದ್ಯ ಆರಂಭವಾಗಿ ಕೇವಲ ಎರಡೇ ನಿಮಿಷಗಳಲ್ಲಿ ಟ್ಯುನೀಶಿಯಾ ನಾಯಕ ಎಲಿಸ್ ಸ್ಕಿರಿ ಕ್ಲಿಯರ್ ಮಾಡಲು ಯತ್ನಿಸಿದ ಚೆಂಡು ಸ್ವಂತ ಗೋಲು ಸೇರಿ ಡಚ್ ತಂಡಕ್ಕೆ ಉಚಿತ ಮುನ್ನಡೆ ದೊರೆಯಿತು. ಏಳನೇ ನಿಮಿಷದಲ್ಲಿ ಬ್ರಿಯಾನ್ ಬ್ರಾಬ್ಬೆ ಗೋಲು ಬಾರಿಸಿ ಮುನ್ನಡೆಯನ್ನು 2-0ಕ್ಕೆ ಹೆಚ್ಚಿಸಿದರು. ಇದು ಟೂರ್ನಿಯಲ್ಲಿ ಅವರ ಮೂರನೇ ಗೋಲಾಗಿತ್ತು.ದ್ವಿತೀಯಾರ್ಧದಲ್ಲಿ ಹಝೆಮ್ ಮಸ್ತೂರಿ ಟ್ಯುನೀಶಿಯಾ ಪರ ಒಂದು ಗೋಲು ಗಳಿಸಿ ಅಂತರವನ್ನು ಕಡಿಮೆ ಮಾಡಿದರೂ, ಕಾರ್ನರ್‌ನಿಂದ ಬಂದ ಚೆಂಡಿಗೆ ಜಾನ್ ಪಾಲ್ ವ್ಯಾನ್ ಹೆಕೆ ಹೊಡೆದ ಹೆಡರ್ ಅನೀಸ್ ಸ್ಲಿಮಾನೆ ದೇಹಕ್ಕೆ ತಾಗಿ ಮತ್ತೊಮ್ಮೆ ಆತ್ಮಹತ್ಯಾ ಗೋಲಾಗಿ ಪರಿಣಮಿಸಿತು. ಇದರೊಂದಿಗೆ ನೆದರ್ಲೆಂಡ್ಸ್ 3-1 ಅಂತರದ ಸುಲಭ ಗೆಲುವು ದಾಖಲಿಸಿತು.

ಜಪಾನ್-ಸ್ವೀಡನ್ ಡ್ರಾ; ಎರಡೂ ತಂಡ ನಾಕೌಟ್‌ಗೆ

ಆರ್ಲಿಂಗ್ಟನ್ (ಅಮೆರಿಕ): ಡೈಜೆನ್ ಮೈಡಾ ಹಾಗೂ ಆಂಥೋನಿ ಎಲಾಂಗಾ ತಲಾ ಒಂದು ಗೋಲು ದಾಖಲಿಸಿದ ಪರಿಣಾಮ ಜಪಾನ್ ಮತ್ತು ಸ್ವೀಡನ್ ನಡುವಿನ ಪಂದ್ಯ 1-1 ಗೋಲುಗಳ ಸಮಬಲದಲ್ಲಿ ಅಂತ್ಯಗೊಂಡಿತು. ಈ ಫಲಿತಾಂಶದೊಂದಿಗೆ ಎರಡೂ ತಂಡಗಳು ಫಿಫಾ ವಿಶ್ವಕಪ್‌ನ ನಾಕೌಟ್ ಹಂತಕ್ಕೆ ಪ್ರವೇಶಿಸಿವೆ. ಪಂದ್ಯದ ಆರಂಭದಿಂದಲೇ ಚುರುಕಾಗಿ ಆಡಿದ ಜಪಾನ್, ಡೈಜೆನ್ ಮೈಡಾ ಅವರ ಗೋಲಿನ ಮೂಲಕ ಮುನ್ನಡೆ ಸಾಧಿಸಿತು. ಆದರೆ ಕೇವಲ ಆರು ನಿಮಿಷಗಳ ಬಳಿಕ ಸ್ವೀಡನ್‌ನ ಆಂಥೋನಿ ಎಲಾಂಗಾ ಸಮಬಲದ ಗೋಲು ಗಳಿಸಿ ಪಂದ್ಯವನ್ನು ಮತ್ತೆ ಸಮಬಲಕ್ಕೆ ತಂದರು. ಹೀಗಾಗಿ ಪಂದ್ಯ 1-1ರಲ್ಲಿ ಅಂತ್ಯಗೊಂಡಿತು. ಈ ಫಲಿತಾಂಶದೊಂದಿಗೆ ಜಪಾನ್ ಸತತ ಮೂರನೇ ವಿಶ್ವಕಪ್‌ನಲ್ಲಿ ಹಾಗೂ ಒಟ್ಟಾರೆ ಐದನೇ ಬಾರಿ ಗುಂಪು ಹಂತ ದಾಟಿ ನಾಕೌಟ್ ಪ್ರವೇಶಿಸಿತು.

ಐವರಿಗೆ ಗೆಲುವು

ಫಿಲಡೆಲ್ಫಿಯಾ: ನಿಕೊಲಸ್ ಪೆಪೆ ಅವರ ದ್ವಿಗೋಲುಗಳ ನೆರವಿನಿಂದ ಐವರಿ ಕೋಸ್ಟ್ 2-0 ಅಂತರದಲ್ಲಿ ಕುರಸಾವೊ ತಂಡವನ್ನು ಮಣಿಸಿ, ವಿಶ್ವಕಪ್ ಇತಿಹಾಸದಲ್ಲೇ ಮೊದಲ ಬಾರಿಗೆ ನಾಕೌಟ್ ಹಂತಕ್ಕೆ ಅರ್ಹತೆ ಪಡೆಯಿತು. ಮೊದಲಾರ್ಧ ಹಾಗೂ ದ್ವಿತೀಯಾರ್ಧದಲ್ಲಿ ತಲಾ ಒಂದು ಗೋಲು ಗಳಿಸಿದ ಪೆಪೆ, ಐವರಿ ಕೋಸ್ಟ್‌ಗೆ ಅಮೂಲ್ಯ ಜಯ ತಂದುಕೊಟ್ಟರು. ಮೊದಲ ಎರಡು ಪಂದ್ಯಗಳಲ್ಲಿ ಈಕ್ವೆಡಾರ್ ವಿರುದ್ಧ ಜಯ ಹಾಗೂ ಜರ್ಮನಿ ವಿರುದ್ಧ ಸೋಲು ಕಂಡಿದ್ದ ಐವರಿ ಕೋಸ್ಟ್, ನಿರ್ಣಾಯಕ ಪಂದ್ಯದಲ್ಲಿ ಗೆದ್ದು ಗುಂಪು ಹಂತ ದಾಟಿತು. ಗೆಲ್ಲಲೇಬೇಕಾದ ಒತ್ತಡದಲ್ಲಿದ್ದ ಕುರಸಾವೊಗೆ ಅವಕಾಶ ಸದುಪಯೋಗವಾಗದೆ ಟೂರ್ನಿಯಿಂದ ನಿರ್ಗಮಿಸ ಬೇಕಾಯಿತು. ನಾಕೌಟ್ ಹಂತದಲ್ಲಿ ಐವರಿ ಕೋಸ್ಟ್, ಫ್ರಾನ್ಸ್ ಅಥವಾ ನಾರ್ವೆ ವಿರುದ್ಧ ಸೆಣಸಲಿದೆ.

ಕೊನೆಯ ಕಿಕ್‌ನಲ್ಲಿ ಟರ್ಕಿ ಜಯಘೋಷ

ಗೋಲುಗಳ ಪಟ್ಟಿ

- ಆಸ್ಟನ್ ಟ್ರಸ್ಟಿ(ಅಮೆರಿಕ): 3ನೇ ನಿಮಿಷ
- ಆರ್ದಾ ಗುಲೆರ್(ಟರ್ಕಿ): 10ನೇ ನಿಮಿಷ
- ಬ್ಯಾರಿಸ್(ಟರ್ಕಿ): 31ನೇ ನಿಮಿಷ
- ಸಬ್‌ಸ್ಟೇನ್(ಅಮೆರಿಕ): 49ನೇ ನಿಮಿಷ
- ಕಾನ್ ಅಯ್ಯಾನ್(ಟರ್ಕಿ): 90+8ನೇ ನಿಮಿಷ

ವಿಶ್ವಕಪ್: ಅಮೆರಿಕಕ್ಕೆ ಸೋಲು, ಟರ್ಕಿಗೆ ಗೆಲುವಿನ ಖುಷಿ

ಇಂಗಲ್‌ವುಡ್ (ಕ್ಯಾಲಿಫೋರ್ನಿಯಾ): ಈಗಾಗಲೇ ನಾಕೌಟ್ ಹಂತದ ಸ್ಥಾನ ಖಚಿತಪಡಿಸಿಕೊಂಡಿದ್ದ ಅಮೆರಿಕ ವಿರುದ್ಧ ಟರ್ಕಿ ಕೊನೆಯ ಕ್ಷಣದ ಗೋಲಿನ ನೆರವಿನಿಂದ 3-2 ಅಂತರದ ರೋಚಕ ಗೆಲುವು ದಾಖಲಿಸಿತು.

ಪಂದ್ಯ ಆರಂಭವಾದ ಮೂರನೇ ನಿಮಿಷದಲ್ಲೇ ಆಸ್ಟನ್ ಟ್ರಸ್ಟಿ ಗೋಲು ಬಾರಿಸಿ ಅಮೆರಿಕಕ್ಕೆ ಮುನ್ನಡೆ ತಂದುಕೊಟ್ಟರು. ಆದರೆ ಆರ್ದಾ ಗುಲರ್ ಹಾಗೂ ಒರ್ಕುನ್ ಕೊಕ್ಚು ಮೊದಲಾರ್ಧದಲ್ಲೇ ಗೋಲು ಗಳಿಸಿ ಟರ್ಕಿಗೆ 2-1ರ ಮುನ್ನಡೆ ಒದಗಿಸಿದರು. ದ್ವಿತೀಯಾರ್ಧದ ಆರಂಭದಲ್ಲೇ ಸೆಬಾಸ್ಟಿಯನ್ ಬೆರ್ಹಾಲ್ಟರ್ ಸಮಬಲದ ಗೋಲು ಬಾರಿಸಿ ಅಮೆರಿಕಕ್ಕೆ ಮತ್ತೆ ಆಶಾಕಿರಣ ಮೂಡಿಸಿದರು. ನಂತರ ಎರಡೂ ತಂಡಗಳು ಗೆಲುವಿಗಾಗಿ ಹೋರಾಟ ನಡೆಸಿದವು. ಹೆಚ್ಚುವರಿ ಸಮಯದ ಎಂಟನೇ ನಿಮಿಷದಲ್ಲಿ ಕ್ಯಾನ್ ಉಜುನ್ ನೀಡಿದ ಪಾಸ್ ಅನ್ನು ಕಾನ್ ಐಹಾನ್ ಗೋಲಾಗಿ ಪರಿವರ್ತಿಸಿ ಟರ್ಕಿಗೆ 3-2ರ ರೋಚಕ ಗೆಲುವು ತಂದುಕೊಟ್ಟರು.



9 ಹೊಸ ಆಟಗಾರರೊಂದಿಗೆ ಆಡಿದ ಅಮೆರಿಕ: ಈ ಪಂದ್ಯಕ್ಕೆ ಅಮೆರಿಕದ ಮುಖ್ಯ ಕೋಚ್ ಮೌರಿಸಿಯೋ ಪೊಚೆಟ್ಟಿನೊ ಪ್ರಮುಖ ಆಟಗಾರರಿಗೆ ವಿಶ್ರಾಂತಿ ನೀಡಿ ಒಟ್ಟು ಒಂಬತ್ತು ಹೊಸ ಆಟಗಾರರನ್ನು ಕಣಕ್ಕಿಳಿಸಿದ್ದರು. ಗಾಯದಿಂದ ಚೇತರಿಸಿಕೊಂಡ ಕ್ರಿಶ್ಚಿಯನ್ ಪುಲಿಸಿಕ್ 58ನೇ ನಿಮಿಷದಲ್ಲಿ ಬದಲಿ ಆಟಗಾರನಾಗಿ ಮೈದಾನಕ್ಕಿಳಿದರು. ಈಗಾಗಲೇ ಪರಾಗ್ವೆ ಹಾಗೂ ಆಸ್ಟ್ರೇಲಿಯಾ ವಿರುದ್ಧದ ಗೆಲುವಿನೊಂದಿಗೆ ಡಿ ಗುಂಪಿನ ಅಗ್ರಸ್ಥಾನಿಯಾಗಿ ನಾಕೌಟ್ ಹಂತ ಪ್ರವೇಶಿಸಿರುವ ಅಮೆರಿಕ, ಮುಂದಿನ ಸುತ್ತಿನಲ್ಲಿ ಬೋಸ್ನಿಯಾ-ಹರ್ಜಗೋವಿನಾವನ್ನು ಎದುರಿಸಲಿದೆ. ಟರ್ಕಿ ಮಾತ್ರ ಟೂರ್ನಿಯಿಂದ ಹೊರಬಿದ್ದಿದ್ದರೂ, ಸಮಾಧಾನದ ಗೆಲುವಿನೊಂದಿಗೆ ಅಭಿಯಾನ ಮುಗಿಸಿತು.

ಆಸ್ಟ್ರೇಲಿಯಾ-ಪರಾಗ್ವೆ ಪಂದ್ಯ ಡ್ರಾ

ಫ್ರಾನ್ಸಿಸ್ಕೋ: ದಿನದ ಮತ್ತೊಂದು ಪಂದ್ಯದಲ್ಲಿ ಆಸ್ಟ್ರೇಲಿಯಾ ಹಾಗೂ ಪರಾಗ್ವೆ ತಂಡಗಳು ಡ್ರಾಗೆ ರಾಜಿಯಾದವು. ಹಿಂದಿನ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಆಸ್ಟ್ರೇಲಿಯಾ ತಂಡವನ್ನು ಪರಾಗ್ವೆ ಕಟ್ಟಿ ಹಾಕಿತು. ಆಸ್ಟ್ರೇಲಿಯಾಗೆ 3 ಪ್ರಮುಖ ಕಾರ್ನರ್‌ಗಳು ಸಿಕ್ಕರೂ ಬಳಸಿಕೊಳ್ಳಲಿಲ್ಲ. ಅತ್ತ ಪರಾಗ್ವೆಗೂ 1 ಕಾರ್ನರ್ ಸಿಕ್ಕಿತ್ತು. ಆದರೆ ಪಂದ್ಯದುದ್ದಕ್ಕೂ ಯಾವುದೇ ಗೋಲು ದಾಖಲಾಗಲೇ ಇಲ್ಲ.

ಭಾರತಕ್ಕೆ ಹೆಚ್ಚಿದ ಒತ್ತಡ | ಸೆಮಿಗಾಗಿ ಫೈಟ್

ದ.ಆಫ್ರಿಕಾಗೆ ಭರ್ಜರಿ ಗೆಲುವು

ಬ್ರಿಸ್ಟಾಲ್: ನೆದರ್ಲೆಂಡ್ಸ್ ತಂಡವನ್ನು 88 ರನ್‌ಗಳಿಂದ ಸೋಲಿಸಿರುವ ದ.ಆಫ್ರಿಕಾ ಮಹಿಳೆಯರ ತಂಡವು ಟಿ20 ವಿಶ್ವಕಪ್ ಪಂದ್ಯಾವಳಿಯ ಸೆಮಿ ರೇಸ್ ಇನ್ನಷ್ಟು ರೋಚಕಗೊಳಿಸಿದೆ. ತಜ್ಮಿನ್ ಬ್ರಿಟ್ಸ್ ಅವರ ಸ್ಫೋಟಕ ಶತಕ ಮತ್ತು ಆಯಾಬೊಂಗಾ ಖಾಕಾ ಅವರ ಕರಾರುವಾಕ್ ಬೌಲಿಂಗ್ ದಾಳಿಯ ನೆರವಿನಿಂದ ಪ್ರಾಬಲ್ಯ ಸಾಧಿಸಿರುವ ಹರಿಣರು ಭಾರತವನ್ನು ಮತ್ತೆ ಸಂಕಷ್ಟಕ್ಕೆ ಸಿಲುಕಿಸಿದ್ದಾರೆ.

ಗುರುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆಫ್ರಿಕಾ 20 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 208 ರನ್ ಗಳಿಸಿತು. ಬ್ರಿಟ್ಸ್ 69 ಬಾಲ್‌ಗಳನ್ನು ಎದುರಿಸಿ 114 ರನ್ ಬಾರಿಸಿದರು. 15 ಬೌಂಡರಿ, 3 ಸಿಕ್ಸರ್‌ಗಳನ್ನು ಸಿಡಿಸಿದ ಅವರು, ಔಟಾಗದೆ ಉಳಿದರು. ಇನ್ನುಳಿದಂತೆ ನಾಯಕಿ ಲೌರಾ ವಾಲ್ವಾರ್ಡ್ಟ್ 45 ರನ್ ಗಳಿಸಿದರು. ಸ್ಫೋಟಕ ಬ್ಯಾಟಿಂಗ್ ಮಾಡಿದ ಡೆರ್ಕ್‌ಸೆನ್ 16 ಬಾಲ್‌ಗಳಲ್ಲಿ 37★ ರನ್ ಗಳಿಸಿದರು.

ಗುರಿ ಬೆನ್ನತ್ತಿದ ನೆದರ್ಲೆಂಡ್ಸ್ 8 ವಿಕೆಟ್ ನಷ್ಟಕ್ಕೆ 120 ರನ್ ಮಾತ್ರ ಗಳಿಸಿತು. ಫೆಬೆ 41 ಬಾಲ್‌ಗಳಲ್ಲಿ 41 ರನ್ ಗಳಿಸಿದರು. ಸನ್ಯಾ 36 ರನ್ ಗಳಿಸಿದರು. ಸ್ಟೆರ್ರಿ 26 ರನ್ ಗಳಿಸಿದರು. ಆಫ್ರಿಕಾ ಪರ ಖಾಕಾ 19 ರನ್‌ಗೆ 3 ವಿಕೆಟ್ ಕಿತ್ತರು. ಚೋಲೆ 16 ರನ್‌ಗೆ 2 ವಿಕೆಟ್ ಕಿತ್ತರು.

ಮೊದಲನೇ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಹೀನಾಯವಾಗಿ ಸೋತಿದ್ದ ದ.ಆಫ್ರಿಕಾ ಬಳಿಕ ನಡೆದ 3 ಸತತ ಪಂದ್ಯಗಳಲ್ಲಿ ಜಯಭೇರಿ ಬಾರಿಸಿದೆ. ಇದರೊಂದಿಗೆ ಅಂಕಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದ್ದು, ಸೆಮಿಗಾಗಿ ಬಲಿಷ್ಠ ಪೈಪೋಟಿ ನಡೆಸಲು ಸಜ್ಜಾಗಿದೆ. ಮುಂದಿನ ಪಂದ್ಯದಲ್ಲಿ ಆಫ್ರಿಕನ್ನರು ಬಾಂಗ್ಲಾವನ್ನು ಎದುರಿಸಲಿದ್ದರೆ, ಭಾರತ ತಂಡ ಬಲಿಷ್ಠ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ. ಆ ಪಂದ್ಯದಲ್ಲಿ ಸೋಲು ತಂಡ ವಿಶ್ವಕಪ್‌ನಿಂದ ಬಹುತೇಕ ಹೊರಬೀಳಬಹುದು. ಆದಾಗ್ಯೂ ಭಾರತದ ರನ್‌ರೇಟ್ 2ಕ್ಕೂ ಹೆಚ್ಚಾಗಿರುವುದು ಬಲ ತಂದಿದೆ. ಹೀಗಾಗಿ ದ.ಆಫ್ರಿಕಾ ಬಾಂಗ್ಲಾ ವಿರುದ್ಧ ಗೆದ್ದರೂ ಹೆಚ್ಚಿನ ರನ್‌ರೇಟ್‌ನಿಂದ ಗೆಲ್ಲಬೇಕು. ಭಾರತ ಏನಾದರೂ ಆಸ್ಟ್ರೇಲಿಯಾ ವಿರುದ್ಧ ಗೆದ್ದರೆ ಸೆಮಿ ಟಿಕೆಟ್ ಖಚಿತವಾಗಬಹುದು.



ಪ್ರವಾಸಿ ಭಾರತಕ್ಕೆ ಹೀನಾಯ ಸೋಲು | ಶ್ರೇಯಸ್ ಅಯ್ಯರ್‌ಗೆ ಕಳಪೆ ಆರಂಭ

ಐರ್ಲೆಂಡ್‌ಗೆ ಐತಿಹಾಸಿಕ ಜಯ!

ಬೆಲ್‌ಫಾಸ್ಟ್: ಭಾರತ ಟಿ20 ತಂಡಕ್ಕೆ 15ನೇ ನಾಯಕರಾಗಿ ಪದಾರ್ಪಣೆ ಮಾಡಿದ ಶ್ರೇಯಸ್ ಅಯ್ಯರ್ ಮೊದಲ ಪಂದ್ಯದಲ್ಲೇ ದೊಡ್ಡ ಆಘಾತ ಎದುರಿಸಿದ್ದು, ಇತಿಹಾಸದಲ್ಲಿ ಮೊದಲನೇ ಬಾರಿ ಭಾರತ ಐರ್ಲೆಂಡ್‌ನೊಂದಿಗೆ ಸೋಲು ಕಂಡಿದೆ.

ಹೊಸ ತಂಡ, ಹೊಸ ನಾಯಕನೊಂದಿಗೆ ಐರ್ಲೆಂಡ್ ಸರಣಿಗಿಳಿದ ಭಾರತ ತಂಡವು, ತೀವ್ರ ಬ್ಯಾಟಿಂಗ್ ವೈಫಲ್ಯ ಅನುಭವಿಸಿತು. ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡು 182 ರನ್ ಬಿಟ್ಟುಕೊಟ್ಟಿತು, 9 ವಿಕೆಟ್ ಬಿದ್ದವು. ಗುರಿ ಬೆನ್ನತ್ತಿದ ಭಾರತ 18.5 ಓವರ್‌ಗಳಲ್ಲಿ 148 ರನ್‌ಗಳಿಗೆ ಆಲೌಟ್ ಆಯಿತು. ಈ ಗೆಲುವಿನೊಂದಿಗೆ ಸರಣಿಯಲ್ಲಿ ಮುನ್ನಡೆ ಸಾಧಿಸಿರುವ ಐರ್ಲೆಂಡ್ ಇತಿಹಾಸದಲ್ಲಿ ಮೊದಲನೇ ಬಾರಿಗೆ ಭಾರತ ವಿರುದ್ಧ ಕ್ರಿಕೆಟ್ ಪಂದ್ಯವೊಂದನ್ನು ಗೆದ್ದಿದೆ.

ಅಭಿಷೇಕ್ ಶರ್ಮ ಹೋರಾಟ: ಗುರಿ ಬೆನ್ನತ್ತಿದ ಭಾರತಕ್ಕೆ ಅಭಿಷೇಕ್ ಶರ್ಮ ಸ್ಫೋಟಕ ಆರಂಭ ಕೊಟ್ಟರು. ಸರಳವಾಗಿ ಗೆಲ್ಲುವಂತೆ ಕಾಣಿಸಿಕೊಂಡ ನಂತರ ಸಂಜು 5, ಕಿಶನ್ 1 ರನ್‌ಗೆ ವಿಕೆಟ್ ಒಪ್ಪಿಸಿದರು. ಆದಾಗ್ಯೂ ಅಭಿ ಸುಮ್ಮನಿರಲಿಲ್ಲ, ಬಂದ ಬೌಲರ್‌ಗಳನ್ನೆಲ್ಲಾ ದಂಡಿಸುತ್ತಾ ದಡದತ್ತ ಸಾಗುತ್ತಿದ್ದರು. ಪವರ್‌ಪ್ಲೇನಲ್ಲಿ ಭಾರತ 3 ವಿಕೆಟ್‌ಗೆ 68 ರನ್‌ಗಳಿಸಿತ್ತು. 20 ಬಾಲ್‌ಗಳಲ್ಲಿ 49 ರನ್‌ಗಳಿಸಿದ ಅಭಿಷೇಕ್ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ಶ್ರೇಯಸ್ 3 ರನ್, ತಿಲಕ್ 19 ರನ್, ಸುಂದರ್ 9 ರನ್‌ಗೆ ವಿಕೆಟ್ ಒಪ್ಪಿಸಿದ ನಂತರ ಭಾರತ ತೀವ್ರ ಆಘಾತ ಎದುರಿಸಿತು. ಆದಾಗ್ಯೂ ಶಿವಂ ದುಬೆ ಒಂದೆರಡು ಸಿಕ್ಸರ್‌ಗಳ ಮೂಲಕ ಪಂದ್ಯಕ್ಕೆ ಜೀವ ತುಂಬಿದರು. 14 ಬಾಲ್‌ಗಳಲ್ಲಿ 25 ರನ್‌ಗಳಿಸಿ ದುಬೆ ಔಟಾದರು. ಅಕ್ಷರ್ 15 ರನ್‌ಗೆ ಹೋರಾಟ ನಿಲ್ಲಿಸಿದರು.

ವೈಭವ್‌ಗಿಲ್ಲ ಜಾಗ

ಬಹು ನಿರೀಕ್ಷಿತ ವೈಭವ್ ಸೂರ್ಯವಂಶಿ ಪದಾರ್ಪಣೆ ಶುಕ್ರವಾರ ಆಗಲಿಲ್ಲ. ಮೈದಾನದಲ್ಲಿ ಕಾಣಿಸಿಕೊಂಡರೂ ವೈಭವ್ ಆಡುವ 11ರ ಬಳಗದಲ್ಲಿ ಕಾಣಿಸಿಕೊಳ್ಳಲಿಲ್ಲ. ಇದೇ ಮೊದಲ ಬಾರಿಗೆ ಟಾಸ್‌ಗೆ ಬಂದ ನಾಯಕ ಶ್ರೇಯಸ್ ಅಯ್ಯರ್ ಸಮಯ ಬಂದಾಗ ವೈಭವ್ ಕಂಡಿತವಾಗ್ಯೂ ಆಡುತ್ತಾರೆ ಎಂದರು.

ಸಂಕ್ಷಿಪ್ತ ಸ್ಕೋರ್

ಐರ್ಲೆಂಡ್ 20 ಓವರ್‌ಗಳಲ್ಲಿ 182/9: ಟಕ್ಕರ್ 50*, ಗಾರೆತ್ 49; ಹರ್ಷಿತ್ 24/3
ಭಾರತ 18.5 ಓವರ್‌ಗಳಲ್ಲಿ 148/10: ಅಭಿಷೇಕ್ 49, ದುಬೆ 25; ಮ್ಯಾಥಿವ್ 38/3, ಹಾಲೊರ್ಡ್ 28/3

ಐರ್ಲೆಂಡ್‌ಗೆ ಟಕ್ಕರ್ ಆಸರೆ: ಟಾಸ್ ಗೆದ್ದ ಭಾರತ ಬೌಲಿಂಗ್ ಆಯ್ಕೆ ಮಾಡಿತು. ಟಿಮ್ 17, ರಾಸ್ 12 ರನ್ ಗಳಿಸಿ ವಿಕೆಟ್ ಒಪ್ಪಿಸಿದ ನಂತರ ಐರ್ಲೆಂಡ್ ಸಂಕಷ್ಟಕ್ಕೆ ಸಿಲುಕಿಕೊಂಡಿತ್ತು. ನಾಯಕ ಟಕ್ಕರ್ ತಂಡಕ್ಕೆ ಆಸರೆಯಾದರು. ಪವರ್‌ಪ್ಲೇನಲ್ಲಿ ಐರ್ಲೆಂಡ್ 36ರನ್ ಮಾತ್ರ ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ಟಕ್ಕರ್ ಜತೆಗೆ ಗಾರೆತ್ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಈ ಜೋಡಿ ಪಂದ್ಯದ ದಿಕ್ಕನ್ನೇ ಬದಲಾಯಿಸಿತು. ಟಕ್ಕರ್ 50, ಗಾರೆತ್ 49 ರನ್‌ಗೆ ವಿಕೆಟ್ ಒಪ್ಪಿಸಿದ ನಂತರ ಐರ್ಲೆಂಡ್ ಸಂಕಷ್ಟಕ್ಕೆ ಸಿಲುಕಿಕೊಂಡಿತು. ಡೆತ್ ಓವರ್‌ಗಳಲ್ಲಿ ಜಾರ್ಜ್ 19 ರನ್‌ಗಳಿಸಿ ಸ್ಕೋರ್ ಹಿಗ್ಗಿಸಿದರು. ಭಾರತ ಪರ ಹರ್ಷಿತ್ ರಾಣಾ 3, ಅಕ್ಷರ್, ಅರ್ಷದೀಪ್ 2 ವಿಕೆಟ್ ಕಿತ್ತರು.

ಯುಎಸ್ ಓಪನ್: ಶ್ರೀಕಾಂತ್, ರೌಣಕ್ ಮುನ್ನಡೆ

ನ್ಯೂ ಯಾರ್ಕ್: ತಮ್ಮ ಕರಾರುವಾಕ್ ಪ್ರದರ್ಶನ ಮುಂದುವರಿಸಿರುವ ಭಾರತದ ಕಿಡಂಬಿ ಶ್ರೀಕಾಂತ್ ಮತ್ತು ರೌಣಕ್ ಚೌಹಾಣ್ ಪ್ರತಿಷ್ಠಿತ ಯುಎಸ್ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಮೂರನೇ ಸುತ್ತಿಗೆ ಮುನ್ನಡೆದರು.ಜೆ. ಲೀ ಅವರನ್ನು ಎದುರಿಸಿದ್ದ ಅನುಭವಿ ಕಿಡಂಬಿ ಶ್ರೀಕಾಂತ್ 21-14, 21-13ರಿಂದ ಗೆಲುವು ಸಾಧಿಸಿದರು. ಮತ್ತೊಂದು ಪಂದ್ಯದಲ್ಲಿ ಟಿ. ಸಿ. ಚೌ ಅವರನ್ನು ಎದುರಿಸಿದ್ದ ರೌಣಕ್ 21-17, 26-26ರಿಂದ ಗೆಲುವು ಸಾಧಿಸಿ ಮುನ್ನಡೆದರು. ಇದೇ ಮೊದಲ ಬಾರಿಗೆ ಮುಖ್ಯ ಡ್ರಾಗೆ ಅರ್ಹತೆ ಪಡೆದ ರೌಣಕ್ ಗಮನ ಸೆಳೆದಿದ್ದಾರೆ. ಮಹಿಳೆಯರ ವಿಭಾಗದಲ್ಲೂ ಭಾರತೀಯರ ಪ್ರಾಬಲ್ಯ ಮುಂದುವರಿಯುತು. ದೇವಿಕಾ ಸಿಹಾಗ್, ಸೇಹಾಂಗ್ ಅವರೊಂದಿಗೆ 21-17, 21-19ರಿಂದ ಗೆಲುವು ಸಾಧಿಸಿದರು. ತುಂಗ್ ಅವರನ್ನು ಎದುರಿಸಿದ್ದ ಉದಯೋನ್ಮುಖ ಆಟಗಾರ್ತಿ ತನ್ವಿ ಶರ್ಮ, 21-12, 21-19ರಿಂದ ಭರ್ಜರಿ ಗೆಲುವು ದಾಖಲಿಸಿದರು. ರಕ್ಷಿತಾ ರಾಮ್‌ರಾಜ್ ಅವರು ಚೇನ್ ವಿರುದ್ಧ 21-4, 21-19ರಿಂದ ಗೆಲುವು ಸಾಧಿಸಿದರು.

ಇಂದು ಎರಡು ಪಂದ್ಯ | ವೀಕ್ಷಣೆಗೆ ಅಭಿಮಾನಿಗಳ ಕಾತರ

ಹುಬ್ಬಳ್ಳಿಯಲ್ಲಿ ಮಹಾರಾಜ ಟ್ರೋಫಿ

ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ಇಲ್ಲಿಯ ನೃಪತುಂಗ ಬೆಟ್ಟದಿಂದ ಬೀಸುವ ತಣ್ಣನೆಯ ಮಳೆ ಗಾಳಿಯೂ ಈಗ ಕ್ರಿಕೆಟ್ ಕಂಪು ಸೂಸುತ್ತಿದೆ. ಏಳು ವರ್ಷದ ಬಳಿಕ ರಾಜನಗರದ ಕೆಎಸ್‌ಸಿಎ ಮೈದಾನದಲ್ಲಿ ನಡೆಯುತ್ತಿರುವ ಟಿ-20 ಚುಟುಕು ಕ್ರಿಕೆಟ್ ಪಂದ್ಯಗಳ ವೀಕ್ಷಣೆಗೆ ಅಭಿಮಾನಿಗಳು ಕಾತರರಾಗಿದ್ದಾರೆ.

ಮೈಸೂರಿನಲ್ಲಿ ಮೊದಲ ಹಂತದ ಪಂದ್ಯಗಳು ಮುಗಿದಿದ್ದು, ಶನಿವಾರದಿಂದ(ಜೂ.27) ಮಹಾರಾಜ ಟ್ರೋಫಿಯ ಕ್ರಿಕೆಟ್ ಟೂರ್ನಿಯ ಎರಡನೇ ಹಂತದ ಪಂದ್ಯಗಳು ಹುಬ್ಬಳ್ಳಿಯಲ್ಲಿ ಆರಂಭವಾಗಲಿವೆ. ಟೂರ್ನಿಗೆಂದು ಕಳೆದ 1 ತಿಂಗಳಿನಿಂದ ಕ್ರೀಡಾಂಗಣ ಸಜ್ಜುಗೊಳಿಸಲಾಗಿದೆ. ನಗರದಲ್ಲಿ ಮೋಡ ಕವಿದು ಆಗಾಗ ತುಂತುರು ಮಳೆಯಾಗುತ್ತಿದೆ. ಟೂರ್ನಿಗೆ ಮಳೆಯ ಆತಂಕ ಎದುರಾದರೂ ಸಹ 50ಕ್ಕೂ ಹೆಚ್ಚು ಸಿಬ್ಬಂದಿ ನಿರ್ವಹಣೆಗೆ ಸಿದ್ಧರಿದ್ದಾರೆ.

ಏಳು ದಿನ ಒಟ್ಟು 12 ಪಂದ್ಯಗಳ ಪೈಕಿ ಆರು ಪಂದ್ಯಗಳು ಹೊನಲು ಬೆಳಕಿನಲ್ಲಿ ನಡೆಯಲಿವೆ. ಕರ್ನಾಟಕ ತಂಡದ ಜನಪ್ರಿಯ ಆಟಗಾರರಾದ ಮನೀಶ್ ಪಾಂಡೆ, ಕರುಣ ನಾಯರ್, ವೈಶಾಕ ವಿಜಯಕುಮಾರ, ಶ್ರೇಯಸ್ ಗೋಪಾಲ ಆಕರ್ಷಕರಾಗಿದ್ದಾರೆ. ಶುಕ್ರವಾರ ಬೆಂಗಳೂರ ಬ್ಲಾಸ್ಟರ್ಸ್, ಶಿವಮೊಗ್ಗ ಹಾಗೂ ಗುಲ್ಬರ್ಗಾ ತಂಡದ ಆಟಗಾರರು ಮೈದಾನದಲ್ಲಿ ಅಭ್ಯಾಸ ನಡೆಸಿದರು. ಪಂದ್ಯ ವೀಕ್ಷಣೆಗೆ ಕ್ರೀಡಾಂಗಣದಲ್ಲಿ 8 ಸಾವಿರ ಆಸನಗಳ ವ್ಯವಸ್ಥೆ ಮಾಡಲಾಗಿದೆ. ಪ್ರವೇಶಕ್ಕೆ ರೂ.150 ಹಾಗೂ 200 ದರ ನಿಗದಿ ಮಾಡಲಾಗಿದೆ. ಮೂರು ಹಾಗೂ ನಾಲ್ಕನೇ ದ್ವಾರದಲ್ಲಿ ಟಿಕೆಟ್ ದೊರೆಯಲಿವೆ.

ಇಂದು ಬೆಂಗಳೂರು -ಶಿವಮೊಗ್ಗ ಮುಖಾಮುಖಿ: ಹುಬ್ಬಳ್ಳಿ ನಡೆಯುವ ಮೊದಲ ಪಂದ್ಯದಲ್ಲಿ ಶುಭಾಂಗ ಹೆಗ್ಡೆ ನಾಯಕತ್ವದ ಕಲ್ಯಾಣಿ ಬೆಂಗಳೂರ ಬ್ಲಾಸ್ಟರ್ಸ್ ಹಾಗೂ ಸ್ಮರಣ ರವಿಚಂದ್ರ ನಾಯಕತ್ವದ ಶಿವಮೊಗ್ಗ ಯೋಧಾಸ್ ಮುಖಾಮುಖಿಯಾಗಲಿವೆ. ನಾಲ್ಕು ಪಂದ್ಯದಲ್ಲಿ ಮೂರು ಪಂದ್ಯಗಳ ಗೆಲ್ಲುವ ಮೂಲಕ ಬೆಂಗಳೂರು ಬ್ಲಾಸ್ಟರ್ಸ್ ತಂಡ 6 ಅಂಕದೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಹುಬ್ಬಳ್ಳಿಯಲ್ಲಿಯೂ ಶಿವಮೊಗ್ಗ ತಂಡದ ವಿರುದ್ಧ ಜಯಗಳಿಸುವ ಮೂಲಕ ಅಗ್ರಸ್ಥಾನ ಭದ್ರ ಪಡಿಸಿಕೊಳ್ಳುವ ಆತ್ಮ ವಿಶ್ವಾಸವಿದೆ.


ಮೈಸೂರು ವಾರಿಯರ್ಸ್-ಗುಲ್ಬರ್ಗ್ ಮಿಸ್ಟಿಕ್ಸ್ ಹಣಾಹಣಿ: ಶರತ್ ಬಿಆರ್ ನಾಯಕತ್ವದ ಗುಲ್ಬರ್ಗಾ ಮಿಸ್ಟಿಕ್ಸ್ ಹಾಗೂ ವೈಶಾಕ್ ವಿಜಯಕುಮಾರ್ ನೇತೃತ್ವದ ಮೈಸೂರು ವಾರಿಯರ್ಸ್ ತಂಡ ಇಲ್ಲಿ ನಡೆಯುವ ಎರಡನೇ ಪಂದ್ಯದಲ್ಲಿ ಸೆಣಸಲಿವೆ. ಗುಲ್ಬರ್ಗಾ ತಂಡ ಎರಡು ಪಂದ್ಯಗಳ ಗೆಲ್ಲುವ ಮೂಲಕ 2 ನೇ ಸ್ಥಾನದಲ್ಲಿದೆ. ಮೈಸೂರ ತಂಡ ಕೊನೆಯ ಸ್ಥಾನದಲ್ಲಿದ್ದು, ಪುಟಿದೇಳುವ ವಿಶ್ವದಲ್ಲಿ ಇದೆ.

ಮಧ್ಯಾಹ್ನ 2 ಗಂಟೆಗೆ ಕಲ್ಯಾಣಿ ಬೆಂಗಳೂರ ಬ್ಲಾಸ್ಟರ್ಸ್ ಹಾಗೂ ಶಿವಮೊಗ್ಗ ಯೋಧಾಸ್
ಸಂಜೆ 7 ಗಂಟೆಗೆ ಮೈಸೂರು ವಾರಿಯರ್ಸ್- ಗುಲ್ಬರ್ಗ್ ಮಿಸ್ಟಿಕ್ಸ್

ಪದಬಂಧ

ರಾಜಾ ಸಂಗಮೇಶ ಹಿರೇಮಠ

6027



6026 ಉತ್ತರ

ಎಡದಿಂದ ಬಲಕ್ಕೆ:
1.ಸರಸ್ವತಿ 3.ಸುಖೀರಾಜ್ಯ
5.ಸಮಾಪ್ತ 6.ಅವಯವ
8.ಗಂಧಕ 10.ನಮನ
12.ಬಗೆಹರಿ 14.ಫಕೀರ
15.ಜನಬಲ
16.ಹಠಮಾರಿ

ಮೇಲಿನಿಂದ ಕೆಳಕ್ಕೆ:
1.ಅಕ್ಕಸ 2.ವಸತಿ
3.ಸುಪ್ತಚೇತನ
4.ರಾಜಕೇತನ 7.ಢಡಿಯ
8.ಗಂಧರ್ವಗಾನ
9.ಕದಳೀಫಲ 11.ಮಜ್ಜಿಗೆ
12.ಬರಹ 13.ರಿಪೇರಿ

ಎಡದಿಂದ ಬಲಕ್ಕೆ
1.ವಿಶ್ವವಿದ್ಯಾಲಯದಿಂದ ಡಿಗ್ರಿ ಪಡೆದವ (5)
5.ಎಣೆ-ಹೋಲಿಕೆಯ ಸಮಾನಪದ (2)
6.ತೀವ್ರವಾದ ಕೋಪ-ಉದ್ರೇಕದ ಸ್ಥಿತಿ (3)
7.ಒಳ್ಳೆಯ ಗುರುತು-ಸೊಗಸಿನಿಂದ ಕೂಡಿದ್ದು (4)
8.ಹಮ್ಮುಬಿಮ್ಮುಗಳಿಲ್ಲದ ಗುಣ ತಿರುಗಿದೆ (3)
10.ಹಣೆಯ ಮೇಲಿಟ್ಟುಕೊಳ್ಳುವ ಬೊಟ್ಟು (3)
12.ಗಣಿಯ ನಡುವೆ ಗುಂಪಿನ ಮುಂದಾಳು ಇದ್ದಾನೆ (4)
14.ಎರಡು ಅಥವಾ ಹೆಚ್ಚು ನದಿಗಳ ಕೂಟ (3)
16.ಚಟ-ನಡವಳಿಕೆಯಿಲ್ಲಿ ತಿರುಗಿದೆ (2)
17.ಜೀವಧಾರಕ ನೆತ್ತರಿನ ಹರಿಯುವಿಕೆ (5)

ಮೇಲಿನಿಂದ ಕೆಳಕ್ಕೆ
1.10ನೆ ತರಗತಿಯ ನಂತರದ ಶಿಕ್ಷಣ ಹಂತ (5)
2.ನೋಡು-ಗಮನಿಸುವಿಕೆ (3)
3.ಭೂಮಿಯ ಅಡಿಯಲ್ಲಿದೆಯೆನ್ನುವ ಲೋಕ (4)
4.ಒಳಹೋಗುವಿಕೆ-ಪ್ರಾರಂಭವಿದು (3)
6.ಆಜ್ಞೆ-ಅಪ್ಪಣೆಯ ಸಮಾನಪದ (3)
9.ಸರ್ಕಾರ ಸ್ಥಾಪಿಸಿದ ಸ್ವತಂತ್ರ ಸಂಸ್ಥೆ (3)
11.ತಾವರೆಗಳಿಂದ ತುಂಬಿದ ಕೊಳ (5)
13.ಆಕಾಶಕಾಯಗಳು ಕಕ್ಷೆಯಲ್ಲಿ ಸುತ್ತುವಿಕೆ (4)
14.ಖಚಿತತೆ ಇಲ್ಲದ್ದು-ನಂಬಲು ಕಷ್ಟವಾದುದು (3)
15.ಶಬ್ದ-ಲಯಗಳ ಸಂಯೋಜನೆ ತಲೆಕೆಳಗಾಗಿದೆ (3)

ಕಿರುಸುದ್ದಿ



ಗದಗ: ಪ್ರವಾದಿ ಮಹಮ್ಮದ್ ಪೈಗಂಬರ್ ರ ಮೊಮ್ಮಕ್ಕಳಾದ ಹಜರತ್ ಹಸನ್-ಹುಸ್ಸೇನ್ ಅವರ ತ್ಯಾಗ, ಬಲಿದಾನ ಸ್ಮರಿಸುವ ಮೊಹರಂ ಹಬ್ಬವನ್ನು ಗದಗ-ಬೆಟಗೇರಿ ಅವಳಿ ನಗರ ಸೇರಿದಂತೆ ಜಿಲ್ಲೆಯಾದ್ಯಂತ ಶುಕ್ರವಾರ ಆಚರಿಸಲಾಯಿತು.

ನೂತನ ಎಸ್‌ಡಿಎಂಸಿ ರಚನೆ





ಮುಂಡರಗಿ: ಮುಂಡರಗಿ ಪುರಸಭೆ ವ್ಯಾಪ್ತಿಯ ಬ್ಯಾಲವಾಡಗಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನೂತನ ಎಸ್‌ಡಿಎಂಸಿಯನ್ನು ಸಿ.ಆರ್.ಪಿ ಪಿ.ಎಚ್. ಹೊಳಿಯಮ್ಮನವರ ಅವರ ನೇತೃತ್ವದಲ್ಲಿ ರಚಿಸಲಾಯಿತು. ಅಧ್ಯಕ್ಷರಾಗಿ ನಜೀರಸಾಬ ಮುಲ್ಲಾ ಮತ್ತು ಉಪಾಧ್ಯಕ್ಷರಾಗಿ ಶ್ರೀದೇವಿ ಬ್ಯಾಲವಾಡಗಿ ಆಯ್ಕೆಯಾಗಿದ್ದಾರೆ ಹಾಗೂ ಸರ್ಕಾರದ ನಿಯಮದ ಪ್ರಕಾರ ಉಳಿದ ಸದಸ್ಯರನ್ನು ಆಯ್ಕೆಮಾಡಲಾಯಿತು ಎಂದು ಶಾಲೆ ಪ್ರಧಾನ ಗುರುಗಳಾದ ಪೂಜಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ವೇಳೆ ನಬಿಸಾಬ ಕೆಲೂರ, ಸಂತೋಷ ಹಿರೇಮನಿ, ರಾಜಾಭಕ್ಷ ಬೆಟಗೇರಿ, ಡಿ.ಎಂ.ಕಾತರಕಿ ಮುಂತಾದವರಿದ್ದರು.

ಇಕೆವೈಸಿಗೆ ಜೂನ್ 30 ಕೊನೆ ದಿನ

ಗಜೇಂದ್ರಗಡ: ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಜಾಬ್ ಕಾರ್ಡ್ ಹೊಂದಿರುವ ಗ್ರಾಮೀಣ ಭಾಗದ ಪ್ರತಿಯೊಬ್ಬ ಕೂಲಿಕಾರರು ಇಕೆವೈಸಿ ಮಾಡಿಸಿಕೊಳ್ಳಲು ಜೂನ್ 30 ಕೊನೆಯ ದಿನವಾಗಿದೆ. ಇಕೆವೈಸಿ ಮಾಡಿಸಿಕೊಳ್ಳದೆ ಇರುವವರು ಕಡ್ಡಾಯವಾಗಿ ಮಾಡಿಸಿಕೊಳ್ಳಬೇಕು ಎಂದು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ ಬಿ. ಕಂದಕೂರ ಹೇಳಿದರು.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ನರೇಗಾ ಜಾಬ್ ಕಾರ್ಡ್ ಹೊಂದಿರುವ ಕೂಲಿಕಾರರಿಗೆ ಅಕ್ಟೋಬರ್ 2025ರಿಂದಲೇ ಇಕೆವೈಸಿ ಮಾಡಿಸಿಕೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಈ ತಿಂಗಳ (ಜೂನ್ 30) ಇಕೆವೈಸಿ ಮಾಡಿಸಿಕೊಳ್ಳಲು ಕೊನೆಯ ದಿನವಾಗಿದೆ. ಹಾಗಾಗಿ ಇಕೆವೈಸಿ ಮಾಡಿಸದೇ ಇರುವ ಕೂಲಿಕಾರರು ಇಕೆವೈಸಿ ಮಾಡಿಸಬೇಕು. ಇಲ್ಲವಾದರೆ ಜಾಬ್ ಕಾರ್ಡ್ ಬಂದ್ ಆದರೆ ಗ್ರಾಮ ಪಂಚಾಯತ್ ಮತ್ತು ತಾಲೂಕ ಪಂಚಾಯತ್ ಜವಾಬ್ದಾರರಲ್ಲ ಎಂದರು. ಜುಲೈ 1 ರಿಂದ ವಿಬಿ ಜಿ ರಾಮ್ ಜಿ ಯೋಜನೆ ಜಾರಿ ಬರಲಿದೆ. ಗ್ರಾಮೀಣ ಭಾಗದ ಕೂಲಿಕಾರರು ಜಾಬ್ ಕಾರ್ಡ್ ಕೆ.100 ರಷ್ಟು ಪ್ರಗತಿ ಸಾಧಿಸಬೇಕು. ಆ ನಿಟ್ಟಿನಲ್ಲಿ ಗ್ರಾಮ ಪಂಚಾಯತ್ ಸಿಬ್ಬಂದಿ ಇಕೆವೈಸಿ ಮಾಡುತ್ತಿದ್ದಾರೆ. ಆದಕ್ಕೆ ಕೂಲಿಕಾರರು ಸಹಕಾರ ನೀಡಿ ಇಕೆವೈಸಿ ಮಾಡಿಸಿಕೊಳ್ಳಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ನಾಡಿಗೆ ಅಪಾರ ನಷ್ಟ



ನರಗುಂದ: ಅಪಾರ ಭಕ್ತ ಸಮೂಹವನ್ನು ಹೊಂದಿದ ಗದಗನ ಸಿದ್ಧರಾಮೇಶ್ವರ ಸಂಸ್ಥಾನ ವಿರಕ್ತಮಠದ ಪೀಠಾಧಿಪತಿ ಗಂಗಾಧರ ಸ್ವಾಮೀಜಿ ಅಕಾಲಿಕ ನಿಧನರಾಗಿದ್ದು ನಮಗೆಲ್ಲ ನೋವನ್ನುಂಟು ಮಾಡಿದೆ ಎಂದು ಭೈರನಹಟ್ಟಿ-ಶಿರೋಳ ತೋಂಟದಾರ್ಯ ಮಠದ ಶಾಂತಲಿಂಗ ಸ್ವಾಮೀಜಿ ಹೇಳಿದ್ದಾರೆ.

ಅವರು 2019 ರಲ್ಲಿ ಯಶವಂತ ನಗರದ ಸಿದ್ಧರಾಮೇಶ್ವರ ಸಂಸ್ಥಾನ ವಿರಕ್ತಮಠದ ಪೀಠಾಧಿಪತಿಗಳಾಗಿದ್ದರು. ಸುಮಾರು 300 ವರ್ಷಗಳ ಇತಿಹಾಸ ಪರಂಪರೆಯನ್ನು ಹೊಂದಿರುವ ಮಠವಾಗಿದೆ. ಗಂಗಾಧರ ಸ್ವಾಮೀಜಿ ಶ್ರೀಗಳ ಜಗದ್ಗುರು ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ ಮಾರ್ಗದರ್ಶನದಲ್ಲಿ ಸಾಮಾಜಿಕ, ಆಧ್ಯಾತ್ಮಿಕ ಕೈಂಕರ್ಯವನ್ನು ನಿರಂತರವಾಗಿ ಮಾಡಿಕೊಂಡು ಬಂದಿದ್ದರು. ಇವರ ಅಕಾಲಿಕ ಅಗಲಿಕೆ ನಾಡಿಗೆ ತುಂಬಲಾರದ ನಷ್ಟವಾಗಿದೆ ಎಂದು ದುಃಖ ವ್ಯಕ್ತಪಡಿಸಿದ್ದಾರೆ.

ಚಂದ್ರಹಾಸ ಉಳ್ಳಾಗಡ್ಡಿ ನಿಧನ



ಮುಂಡರಗಿ: ಇಲ್ಲಿಯ ಪ್ರಗತಿಪರ ರೈತ, ರೈತಪರ ಹೋರಾಟಗಾರ, ಹಾಲುಮತ ಸಮಾಜದ ಹಿರಿಯ ಚಂದ್ರಹಾಸ ಉಳ್ಳಾಗಡ್ಡಿ (80) ಗುರುವಾರ ರಾತ್ರಿ ನಿಧರಾದರು. ಮೃತರು ಪತ್ನಿ, ಮೂವರು ಪುತ್ರರು ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಇವರು 1990ರ ದಶಕದಲ್ಲಿ ರೈತ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದು ರೈತರಿಗೆ ನ್ಯಾಯ ದೊರಕಿಸಿಕೊಟ್ಟ ನಾಯಕರು. ಎಪಿಎಂಸಿ ಮಾಜಿ ಸದಸ್ಯರು,ಭುವನೇಶ್ವರಿ ಸಂಸ್ಥೆಯ ಶಾಲಾ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿ ಸಾಕಷ್ಟು ಕೆಲಸಕಾರ್ಯವನ್ನು ಮಾಡಿದ್ದಾರೆ. ಚಂದ್ರಹಾಸ ಉಳ್ಳಾಗಡ್ಡಿ ಅವರ ನಿಧನಕ್ಕೆ ಮಾಜಿ ಸಚಿವ ಎಸ್.ಎಸ್. ಪಾಟೀಲ, ವೈ.ಎನ್. ಗೌಡರ, ಕರಬಸಪ್ಪ ಹಂಚಿನಾಳ, ಮಂಜುನಾಥ ಮುಂಡವಾಡ, ರಾಘು ಕುರಿಯವರ, ಆನಂದಗೌಡ ಪಾಟೀಲ, ಲಿಂಗರಾಜ ಗೌಡ ಪಾಟೀಲ, ಎ.ವೈ. ನವಲಗುಂದ, ಬಸವರಾಜ ಮುದ್ದಿ, ಆರ್.ಬಿ.ಡಂಬಳಮಠ, ಆರ್.ಬಿ.ಹಕ್ಕಂಡಿ, ಮಂಜುನಾಥ ತೆಗ್ಗಿನಮನಿ, ವೆಂಕಟೇಶ ಗುಗ್ಗರಿ, ಎನ್.ಎಸ್.ಶೇಡದ ಮತ್ತು ಕೋಟೆ ಪ್ರೌಢಶಾಲೆಯ ಸಿಬ್ಬಂದಿ ಸಂತಾಪ ಸೂಚಿಸಿದ್ದಾರೆ.



ಗದಗ: ತಾಲೂಕಿನ ಮುಳಗುಂದದ ಗಾಂಧಿ ಕಟ್ಟೆಬಳಿ ಮೊಹರಂ ಅಂಗವಾಗಿ ಶುಕ್ರವಾರ ಶರಬತ್ತ ವಿತರಿಸಲಾಯಿತು. ಅಂಜುಮನ್ ಕಮಿಟಿ ಅಧ್ಯಕ್ಷ ತಾಜುದ್ದಿನ ಕಿಂಡ್ರಿ, ಧರ್ಮಗುರು ಲಾಲಸಾಹೇಬ ಮಕಾಂದಾರ, ಅಬ್ದುಲ್ ಜಾಫರ್, ಅಂಜುಮನ್ ಕಮಿಟಿ ಉಪಾಧ್ಯಕ್ಷ ಎ.ಡಿ.ಮುಜಾವರ, ಹೈದರಲಿ ಖವಾಸ, ಮಾಬೂಬಲಿ ದುರ್ಗಿಗುಡಿ, ರಾಜೇಸಾಬ ಸೈಯದಬಡೆ ಮೊದಲಾದವರಿದ್ದರು.

ಜೂನ್ 29ರಂದು ದತ್ತಿನಿಧಿ ಕಾರ್ಯಕ್ರಮ

ಮುಂಡರಗಿ: ಶ್ರೀ ಜ.ಅ.ಶಿವಾನುಭವ ಸೇವಾ ಸಮಿತಿ, ಶ್ರೀ ಜ.ಅ.ಅಕ್ಕನಬಳಗದ ಸುವರ್ಣ ಮಹೋತ್ಸವ ಹಾಗೂ ಶ್ರೀ ಜ.ಅ.ವಿ.ಸಮಿತಿ ಮತ್ತು ಅನ್ನಾ ಸೇವಾ ಟ್ರಸ್ಟ್ ಹುಬ್ಬಳ್ಳಿ ಇವುಗಳ ಸಹಯೋಗದಲ್ಲಿ ಅಪ್ಪ ಕುರಿತು ವಿಶೇಷ ಶಿವಾನುಭವ ಮತ್ತು 1848 ನೇ ಮಾಸಿಕ ಶಿವಾನುಭವ, ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಅವರ ಸಂಸ್ಮರಣೆಗಾಗಿ ಅನ್ನಾಸೇವಾ ಟ್ರಸ್ಟ್ ವತಿಯಿಂದ ಸ್ಥಾಪಿಸಿದ ದತ್ತಿನಿಧಿ ಕಾರ್ಯಕ್ರಮವು ಜೂನ್ 29 ರಂದು ಬೆಳಗ್ಗೆ 10.30ಕ್ಕೆ ಶ್ರೀ ಜ.ಅ. ಕಲ್ಯಾಣ ಮಂಟಪದಲ್ಲಿ ಜರುಗಲಿದೆ.

ಕಾರ್ಯಕ್ರಮದ ಸಾನ್ನಿಧ್ಯವನ್ನು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು ವಹಿಸುವರು. ನೇತೃತ್ವವನ್ನು ಶ್ರೀಮಠದ ಉತ್ತರಾಧಿಕಾರಿ ಡಾ.ಮಲ್ಲಿಕಾರ್ಜುನ ಸ್ವಾಮೀಜಿ ಮತ್ತು ಚನ್ನಬಸವ ದೇವರು ವಹಿಸುವರು. ಉಪಸ್ಥಿತಿಯನ್ನು ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ವಹಿಸುವರು. ಮುಖ್ಯ ಅತಿಥಿಗಳಾಗಿ ಶಶಿ ಸಾಲಿ, ಡಾ.ಬಸವರಾಜ ಧಾರವಾಡ, ಡಾ.ಬಿ.ಜಿ.ಜವಳಿ, ಲಕ್ಷ್ಮೀದೇವಿ ಬೇವಿನಕಟ್ಟಿಮಠ ಆಗಮಿಸುವರು. ಈ ವೇಳೆ ಸಿಐ ಅಯ್ಯನಗೌಡ ಪಾಟೀಲ ಅವರಿಗೆ ಗುರುರಕ್ಷೆ ಜರುಗುವುದು. ಈ ಸಂದರ್ಭದಲ್ಲಿ ಹೇಮಲತಾ ಬಸವರಾಜ ಹೊರಟ್ಟಿ, ರಾಣಿ ಚೆನ್ನಮ್ಮಾ ಪ್ರಶಸ್ತಿ ಪಡೆದ ಭಾಗ್ಯಶ್ರೀ ಹಳ್ಳಿಕೇರಿಮಠ, ಉದ್ಯಮಿ ಮಂಜುನಾಥ ಹೊಟ್ಟಿಗೌಡರ ಅವರಿಗೆ ವಿಶೇಷ ಸನ್ಮಾನ ಕಾರ್ಯಕ್ರಮ ನಡೆಯಲಿದೆ. ಅಕ್ಕನಬಳಗದ ಸರ್ವ ಸದಸ್ಯರಿಗೆ ಶ್ರೀಗಳಿಂದ ಆಶೀರ್ವಾದ ಜರುಗುವುದು.



ಗದಗ: ತಾಲೂಕಿನ ಲಕ್ಕುಂಡಿಯಲ್ಲಿ ತ್ಯಾಗ ಬಲಿದಾನಗಳ ಪ್ರತೀಕವಾದ ಮೊಹರಂ ಹಬ್ಬವನ್ನು ಇಲ್ಲಿಯ ಹಿಂದೂ ಮುಸಲ್ಮಾನರ ಭಾಂದವರು ಶ್ರದ್ಧಾ ಭಕ್ತಿಯಿಂದ ಆಚರಿಸಿದರು. ಇಲ್ಲಿಯ 6 ಮಸೂತಿಗಳಲ್ಲಿ ಕಳೆದ ಐದು ದಿನಗಳಿಂದ ಡೋಲಿ ಮತ್ತು ಪಾಂಜಾ ದೇವರನ್ನು ಪ್ರತಿಷ್ಠಾಪಿಸಲಾಗಿತ್ತು. ಶುಕ್ರವಾರ ಮುಂಜಾನೆ ಪಾಂಜಾ ಮತ್ತು ಡೋಲಿ ದೇವರನ್ನು ಬಜಾರ ರಸ್ತೆಯಲ್ಲಿ ಯುವಕರ ಹೆಜ್ಜೆ ಮೇಳಗಳೊಂದಿಗೆ ಮೆರವಣಿಗೆ ಮಾಡಲಾಯಿತು.

ಸಿಬ್ಬಂದಿಗೆ ತರಬೇತಿ ಕಾರ್ಯಾಗಾರ | ಪರಿಣಾಮಕಾರಿ ಅನುಷ್ಠಾನಕ್ಕೆ ಸಿದ್ಧತೆ

ಜು.1ರಿಂದ ವಿಬಿಜಿ ರಾಮ್ ಜಿ ಜಾರಿ



ಗದಗ: ಗ್ರಾಮೀಣ ಉದ್ಯೋಗ ಭದ್ರತೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ರೂಪಿಸಿರುವ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜ್‌ಗಾರ್ ಆ್ಯಂಡ್ ಅಜೀವಿಕ ಮಿಷನ್ (ಗ್ರಾಮೀಣ) ವಿಬಿಜಿ ರಾಮ್ ಜಿ ಯೋಜನೆ ದೇಶಾದ್ಯಂತ ಜು.1ರಿಂದ ಜಾರಿಗೆ ಬರಲಿದ್ದು, ಗದಗ ಜಿಲ್ಲೆಯಲ್ಲಿಯೂ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಿದ್ಧತೆಗಳು ಆರಂಭಗೊಂಡಿವೆ.

ಈ ಹಿನ್ನೆಲೆಯಲ್ಲಿ ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ವಿಬಿ-ಜಿ ರಾಮ್ ಜಿ ಯೋಜನೆ ಕುರಿತು ಜಿಲ್ಲೆಯ ವಿವಿಧ ಹಂತದ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ತರಬೇತಿ ಕಾರ್ಯಾಗಾರ ಆಯೋಜಿಸಲಾಯಿತು. ರಾಜ್ಯ ಆಯುಕ್ತಾಲಯದಿಂದ ತರಬೇತಿ ಪಡೆದ ಮಾಸ್ಟರ್ ಟ್ರೈನರ್‌ಗಳ ಮೂಲಕ ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ ಸಿ.ಆರ್. ಮುಂಡರಗಿ ನೇತೃತ್ವದಲ್ಲಿ ತರಬೇತಿ ನೀಡಲಾಯಿತು.

ಉಪ ಕಾರ್ಯದರ್ಶಿ ಸಿ.ಆರ್. ಮುಂಡರಗಿ ಮಾತನಾಡಿ, ಜಿಲ್ಲೆಯಲ್ಲಿ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಅಗತ್ಯ ರೂಪುರೇಷೆಗಳನ್ನು ಸಿದ್ಧಪಡಿಸಲಾಗುತ್ತಿದೆ. ಗ್ರಾಮೀಣ ಅಕುಶಲ ಕಾರ್ಮಿಕರಿಗೆ ಉದ್ಯೋಗಾವಕಾಶ ಕಲ್ಪಿಸುವುದರ ಜೊತೆಗೆ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿ ಪರಿಣಾಮಕಾರಿಯಾಗಿ ಕೈಗೊಳ್ಳಲು ಯೋಜನೆ ಸಹಕಾರಿಯಾಗಲಿದೆ ಎಂದರು.

ಜಿಲ್ಲೆಯ ಎಲ್ಲಾ ತಾಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ), ಗ್ರಾಮ ಪಂಚಾಯಿತಿ ಆಡಳಿತ ಅಧಿಕಾರಿಗಳು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗಣಕಯಂತ್ರ ನಿರ್ವಾಹಕರು ಹಾಗೂ ಜಿಲ್ಲಾ ಮತ್ತು ತಾಲೂಕು ಮಟ್ಟದ ಸಿಬ್ಬಂದಿ ಭಾಗವಹಿಸಿದ್ದರು.

> **ವಿಬಿಜಿ ರಾಮ್ ಜಿ ಯೋಜನೆಯಲ್ಲಿ ಜಲ ಭದ್ರತೆ, ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ, ಜೀವನೋಪಾಯ ಸೌಲಭ್ಯಗಳು ಹಾಗೂ ಹವಾಮಾನ ವೈಪರೀತ್ಯ ಶಮನ ಕಾಮಗಾರಿಗಳಿಗೆ ಯೋಜನೆಯಲ್ಲಿ ಆದ್ಯತೆ ನೀಡಲಾಗಿದೆ. ಸಮಗ್ರ ಡಿಜಿಟಲ್ ವ್ಯವಸ್ಥೆಯ ಮೂಲಕ ಆಡಳಿತ, ಪಾರದರ್ಶಕತೆ, ಹೊಣೆಗಾರಿಕೆ ಹಾಗೂ ನಾಗರಿಕರ ಭಾಗವಹಿಸುವುದು ಮತ್ತಷ್ಟು ಬಲಪಡಿಸುವ ಉದ್ದೇಶವಿದೆ.**
> ■ ಸಿ.ಆರ್. ಮುಂಡರಗಿ , ಉಪ ಕಾರ್ಯದರ್ಶಿ

125 ದಿನಗಳ ಕಡ್ಡಾಯ ಉದ್ಯೋಗ ಖಾತ್ರಿ

ವಿಬಿಜಿ ರಾಮ್ ಜಿ ಯೋಜನೆಯಡಿ ಸ್ವಯಂಪ್ರೇರಿತವಾಗಿ ಅಕುಶಲ ಕೆಲಸಕ್ಕಾಗಿ ಬೇಡಿಕೆ ಸಲ್ಲಿಸುವ ಗ್ರಾಮೀಣ ಕುಟುಂಬಗಳ ವಯಸ್ಕ ಸದಸ್ಯರಿಗೆ ಒಂದು ಆರ್ಥಿಕ ವರ್ಷದಲ್ಲಿ 125 ದಿನಗಳ ಕಡ್ಡಾಯ ಉದ್ಯೋಗ ಖಾತ್ರಿ ನೀಡಲಾಗುತ್ತದೆ. ಯೋಜನೆಯು ವಿಕಸಿತ ಗ್ರಾಮ ಪಂಚಾಯಿತಿ ಯೋಜನೆ ಮೂಲಕ ಸ್ಥಳೀಯ ಅಗತ್ಯಗಳಿಗೆ ಅನುಗುಣವಾಗಿ ಕಾಮಗಾರಿಗಳನ್ನು ಆಯ್ಕೆ ಮಾಡಿ ಅನುಷ್ಠಾನಗೊಳಿಸುವ ವ್ಯವಸ್ಥೆಯನ್ನು ಒಳಗೊಂಡಿದೆ. ಗ್ರಾಮ ಪಂಚಾಯಿತಿಗಳಿಗೆ ಕುಟುಂಬಗಳ ನೋಂದಣಿ, ಉದ್ಯೋಗ ಅರ್ಜಿ ಸ್ವೀಕಾರ, ಕಾಮಗಾರಿಗಳ ನಿರ್ವಹಣೆ ಹಾಗೂ ದಾಖಲೆಗಳ ಸಂರಕ್ಷಣೆ ಸೇರಿದಂತೆ ಪ್ರಮುಖ ಜವಾಬ್ದಾರಿಗಳನ್ನು ವಹಿಸಲಾಗಿದೆ ಎಂದು ಉಪ ಕಾರ್ಯದರ್ಶಿ ಸಿ.ಆರ್. ಮುಂಡರಗಿ ತಿಳಿಸಿದರು.

- ಭಾರತ ಸ್ವಾತಂತ್ರ್ಯದ ಶತಮಾನೋತ್ಸವದ ವೇಳೆ 2047ರೊಳಗೆ ಭಾರತ ಸಂಪೂರ್ಣ ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ರೂಪಿಸುವ ವಿಕಸಿತ ಭಾರತ 2047 ಗುರಿ ಸಾಧನೆಗೆ ವಿಬಿಜಿ ರಾಮ್ ಜಿ ಯೋಜನೆ ಮಹತ್ವದ ಹೆಜ್ಜೆ
- ಗ್ರಾಮೀಣ ಉದ್ಯೋಗ ಭದ್ರತೆ ಮತ್ತು ಜೀವನೋಪಾಯ ವೃದ್ಧಿಗೆ ಹೊಸ ದಿಕ್ಕು ನೀಡುವುದು ಕೇಂದ್ರದ ಉದ್ದೇಶ ಎನ್ನುವುದು ಅಧಿಕಾರಿಗಳ ಅಭಿಪ್ರಾಯ

ಬದಲಾವಣೆಗಳ ಮಾಹಿತಿ

ಸರ್ಕಾರದ ಮಾರ್ಗಸೂಚಿಯಂತೆ ಜು.1ರಿಂದ ಯೋಜನೆ ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಎಲ್ಲಾ ವರ್ಗದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಹಂತ ಹಂತವಾಗಿ ತರಬೇತಿ ನೀಡಲಾಗುತ್ತಿದೆ. ಹಿಂದಿನ ನರೇಗಾ ಯೋಜನೆ ಹಾಗೂ ಪರಿಷ್ಕೃತ ವಿಬಿಜಿ ರಾಮ್ ಜಿ ಯೋಜನೆಯ ನಡುವಿನ ಪ್ರಮುಖ ಬದಲಾವಣೆಗಳ ಕುರಿತು ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯಿಂದ ತರಬೇತಿ ಪಡೆದ ನಾಲ್ವರು ಮಾಸ್ಟರ್ ಟ್ರೈನರ್‌ಗಳು ಮಾಹಿತಿ ನೀಡಿದರು.

ದೇಶಿ ಕೃಷಿಯಲ್ಲಿ ಅಡಗಿದೆ ನಮ್ಮ ಪರಂಪರೆ, ಸಂಸ್ಕೃತಿ




ಶಿರಹಟ್ಟಿ: ರೈತರು ಕೃಷಿಯಲ್ಲಿ ಖುಷಿ ಕಾಣಬೇಕು. ಮಣ್ಣು, ನೀರು, ಗಿಡಮರ, ದನಕರ ಹಾಗೂ ಗೋಮಾತೆಯಲ್ಲಿ ದೇವರು ಕಾಣಬೇಕು. ಸಾವಯವ ಕೃಷಿಯಲ್ಲಿ ನಮ್ಮ ಪರಂಪರೆ ಮತ್ತು ಸಂಸ್ಕೃತಿ ಅಡಗಿದ್ದು, ಪ್ರಕೃತಿ ಹಾಳು ಮಾಡಿದರೆ ಅದು ವಿಕೃತಿ, ಪ್ರೀತಿಯಿಂದ ಉನ್ನತಿಕರಿಸಿದರೇ ನಮ್ಮ ಸಂಸ್ಕೃತಿ. ಹಾಗಾಗಿ ರೈತ ಬಾಂಧವರು ಸಾವಯವ ಕೃಷಿ ಪದ್ಧತಿ ಅಳವಡಿಸಿಕೊಳ್ಳಬೇಕು ಎಂದು ಕನ್ನೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಶ್ರೀಗಳು ಹೇಳಿದರು.

ತಾಲೂಕಿನ ಕಡಕೋಳ ಗ್ರಾಮದ ಕಪ್ಪತ್ತಗುಡ್ಡದ ತಪ್ಪಲಿನಲ್ಲಿರುವ ದೇವರಡ್ಡಿ ಆಗಸನಕೊಪ್ಪ ಅವರ ತೋಟದಲ್ಲಿ ಶುಕ್ರವಾರ ಗೋವು ಆಧಾರಿತ, ನಂದಿ ಆಧಾರಿತ ಕೃಷಿಕರ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ಕೃಷಿ ಪದ್ಧತಿ ಕೇವಲ ಒಂದು ಕಾರ್ಯವಲ್ಲ, ಅದೊಂದು ಸಂಸ್ಕೃತಿ. ಸಕಲ ಜೀವರಾಶಿಗೂ ಅನ್ನ ನೀಡುವ ಜೀವಾಮೃತ. ಬೆಳೆಗೆ ಅತೀಯಾದ ರಾಸಾಯನಿಕ ಗೊಬ್ಬರ ಬಳಸಿ ನಾವು ಸೇವಿಸುವ ಆಹಾರಕ್ಕೆ ವಿಷವಿಟ್ಟು ಹಣ ಸಂಪಾದಿಸುವುದು ಅಕ್ಷಮ್ಯ ಅಪರಾಧ. ಗೋವುಗಳ ಗೊಬ್ಬರ ಬಳಸಿ ಉತ್ತಮ ಬೆಳೆ ಬೆಳೆದು ಆರೋಗ್ಯಯುತ ಸಮಾಜ ಕಟ್ಟಲು ರೈತರು ಶ್ರಮಿಸಬೇಕು ಎಂದರು.

ರೈತರು ರಾಸಾಯನಿಕ ಗೊಬ್ಬರ ಬಳಸಿ ಮಣ್ಣಿನ ಫಲವತ್ತತೆ ಸಂಪೂರ್ಣ ಹಾಳು ಮಾಡುತ್ತಿದ್ದಾರೆ. ತರಕಾರಿ, ಹಣ್ಣು ಹಂಪಲು, ದವಸ ಧಾನ್ಯ ಬೆಳೆಯಲು ರೈತರು ಸೆಗಣಿ ಗೊಬ್ಬರ, ತಿಪ್ಪೆ ಗೊಬ್ಬರ ಬಳಸಬೇಕು. ಕೀಟಬಾಧೆಗೆ ಗೋಮೂತ್ರ ರಾಮಬಾಣ ಇದ್ದಂತೆ. ಹಾಗಾಗಿ ರೈತರು ಸಾವಯವ ಕೃಷಿಗೆ ಮೊದಲ ಆದ್ಯತೆ ನೀಡಬೇಕು. ಹಿಂದಿನ ದಿನಗಳಲ್ಲಿ ಹಸುಗಳ ಹಾಲು, ಮೊಸರನ್ನು ಸೇವಿಸಿ ಬಲಿಷ್ಠರಾಗುತ್ತಿದ್ದರು. ಪ್ರಸ್ತುತ ದಿನಗಳಲ್ಲಿ ಆಲ್ಕೊಹಾಲ್ ಪ್ರಮಾಣ ಜಾಸ್ತಿ ಸೇವಿಸಿ ಅರ್ಧ ಆಯಸ್ಸನ್ನೇ ಯುವಜನರು ಕಳೆದುಕೊಳ್ಳುತ್ತಿರುವುದು ವಿಷಾದದ ಸಂಗತಿ. ಗೋವುಗಳ ಉಸಿರಾಟದ ವಾಸನೆಯಿಂದ ಮನುಷ್ಯನ ಶ್ವಾಸಕೋಶ ಉತ್ತಮಗೊಳ್ಳುತ್ತದೆ. ಬಹುತೇಕ ರೋಗ ರುಜಿನಿಗಳು ನಮ್ಮ ಬಳಿ ಸುಳಿಯುವುದಿಲ್ಲ. ಹಸುವಿನಿಂದ ಮನುಷ್ಯನಿಗೆ ಆಗುವ ಲಾಭಗಳೇನು ಎಂಬುದನ್ನು ಮೊದಲು ನಾವೆಲ್ಲರೂ ಅರ್ಥಮಾಡಿಕೊಳ್ಳಬೇಕು. ಕೃಷಿ ಬಗ್ಗೆ ಇರುವ ನಿರ್ಲಕ್ಷ್ಯ ಮನೋಭಾವವನ್ನು ಕೈಬಿಡಬೇಕು ಎಂದರು.

ಈ ಸಂದರ್ಭದಲ್ಲಿ ನಂದಿವೇರಿ ಶಿವಕುಮಾರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ರುದ್ರಣ್ಣ ಗುಳಗುಳಿ, ದೇವರಡ್ಡಿ ಆಗಸನಕೊಪ್ಪ, ರವಿಕಾಂತ ಅಂಗಡಿ, ತಿಪ್ಪಣ್ಣ ಕೊಂಚಿಗೇರಿ, ಮಂಜುನಾಥ ಮಾಗಡಿ, ನಟರಾಜ ರಾನಡೆ, ಬಸವರಾಜ ತುಳಿ, ರವಿ ಹೊಂಬಾಳಿ, ಬಸವರಾಜ ನಾವಿ, ಮಂಗಳಾ ನೀಲಗುಂದ, ಶರಣಪ್ಪ ಹರ್ಲಾಪೂರ, ಶರಣಪ್ಪ ಹೊಂಬಳ, ಚನ್ನವೀರಪ್ಪ ಕೊಂಚಿಗೇರಿ, ಧರ್ಮರಾಜ ಕೊಂಚಿಗೇರಿ ಹಾಗೂ ನೂರಾರು ರೈತರು ಉಪಸ್ಥಿತರಿದ್ದರು.

ಗುರುರಕ್ಷಾ, ಅಭಿನಂದನಾ ಸಮಾರಂಭ ನಾಳೆ



ಮುಂಡರಗಿ: ಪಟ್ಟಣದ ಗಣ್ಯವರ್ತಕರಾದ ಗೋವಿಂದರಾಜ ಕಾಲವಾಡ ಅವರ ಪುತ್ರ ಸಂಜೀವಕುಮಾರ ಗೋವಿಂದರಾಜ ಕಾಲವಾಡ ಅವರು ಸಿಎ ಪರೀಕ್ಷೆಯಲ್ಲಿ ಉತ್ತೀರ್ಣರಾದ ಕಾರಣ ಜೂನ್ 28 ರಂದು ಬೆಳಗ್ಗೆ 10.30ಕ್ಕೆ ಶ್ರೀ ಜ.ಅ.ಕಲ್ಯಾಣ ಮಂಟಪದಲ್ಲಿ ಸಂಜೀವಕುಮಾರ ಕಾಲವಾಡ ಅವರಿಗೆ ಗುರುರಕ್ಷಾ ಮತ್ತು ಅಭಿನಂದನಾ ಸಮಾರಂಭವನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮದ ಸಾನ್ನಿಧ್ಯವನ್ನು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು ವಹಿಸುವರು. ಅಧ್ಯಕ್ಷತೆಯನ್ನು ಗದಗ ಗಣ್ಯ ವರ್ತಕ ಶ್ರೀಧರ ಕಾಲವಾಡ ವಹಿಸುವರು. ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಎಸ್.ಎಸ್.ಪಾಟೀಲ, ವೈ.ಎನ್. ಗೌಡರ, ಎನ್.ಎಚ್. ಇಲ್ಲೂರ, ಕೆ.ವಿ.ಹಂಚಿನಾಳ, ಕೊಟ್ರೇಶ ಅಂಗಡಿ ಭಾಗವಹಿಸುವರು.

ಜೂ.28ರಿಂದ ಪಲ್ಸ್ ಪೋಲಿಯೋ ಕಾರ್ಯಕ್ರಮ

ಮುಂಡರಗಿ: ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ ಅನುಷ್ಠಾನದ ಹಿನ್ನೆಲೆಯಲ್ಲಿ ತಾಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿಯ ಸಭೆಯು ತಹಶೀಲ್ದಾರ್ ಎರ್ರಿಸ್ವಾಮಿ ಪಿ.ಎಸ್. ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ತಾಲೂಕು ವೈದ್ಯಾಧಿಕಾರಿ ಡಾ. ಸಂತೋಷಗೌಡ ಪಾಟೀಲ ಮಾತನಾಡಿ ಜೂ.28ರಿಂದ ಜು.1ರ ವರೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮವಿದ್ದು, ಜೂ.28ರಂದು ಬೂತ್ ಮಟ್ಟದಲ್ಲಿ 0-5 ವರ್ಷದ ಮಕ್ಕಳಿಗೆ ಲಸಿಕೆ ಹಾಕಲಾಗುವುದು ಹಾಗೂ ಜೂ.29 ರಿಂದ ಜು.1ರ ವರೆಗೆ ಲಸಿಕಾ ಕೇಂದ್ರಕ್ಕೆ ಬರದೇ ಇವರು ಮಕ್ಕಳನ್ನು ಹುಡುಕಿ ಅಂತ ಮಕ್ಕಳಿಗೆ ಮನೆ-ಮನೆ ಭೇಟಿ ನೀಡಿ ಲಸಿಕೆಯನ್ನು ನೀಡಲಾಗುವುದು. ಒಟ್ಟು ನಮ್ಮ ತಾಲೂಕಿನಲ್ಲಿ 104 ಟೀಮ್‌ಗಳನ್ನು ಮಾಡಲಾಗಿದ್ದು, ಒಟ್ಟು 12,597 ಮಕ್ಕಳಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದೆ ಎಂದರು.

ತಹಶೀಲ್ದಾರ್ ಎರ್ರಿಸ್ವಾಮಿ ಪಿ. ಎಸ್. ಮಾತನಾಡಿ, ಮುಂಡರಗಿ ನಗರದ 23 ವಾರ್ಡ್‌ಗಳ ಬೂತ್‌ಗಳಲ್ಲಿ ಲಸಿಕೆ ಹಾಕುವ ಸಿಬ್ಬಂದಿಗೆ ಪುರಸಭೆ ವತಿಯಿಂದ ಬೆಳಗ್ಗೆ ಅಲ್ಪೋಪಹಾರ ಮತ್ತು ಊಟದ ವ್ಯವಸ್ಥೆ ಮಾಡಿಸಬೇಕೆಂದು ಪುರಸಭೆ ಮುಖ್ಯಾಧಿಕಾರಿಗಳಿಗೆ ಹೇಳಿದರು. ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಎಂ.ಎಸ್. ಸಜ್ಜನರ ಸ್ವಾಗತಿಸಿದರು.



ಕೇಂದ್ರ ಸರ್ಕಾರ ಕೂಡಲೇ ಮಳೆ ವಿಮೆ ಮರು ಜಾರಿಗೊಳಿಸಲು ಆಗ್ರಹ



ನರಗುಂದ: ಸರ್ಕಾರ ಈ ಹಿಂದೆ ದೇಶದ ರೈತರಿಗೆ ಅನುಕೂಲವಾಗಲೆಂದು ಮಳೆ ವಿಮೆ ಯೋಜನೆ ಜಾರಿಗೆ ತಂದಿತ್ತು. ಆದರೀಗ ಮಳೆ ವಿಮೆಯನ್ನು ಸ್ಥಗಿತ ಮಾಡಿದ್ದಕ್ಕೆ ರೈತರಿಗೆ ತೊಂದರೆಯಾಗಿದೆ. ಆದ್ದರಿಂದ ಕೇಂದ್ರ ಸರ್ಕಾರ ಕೂಡಲೇ ಈ ಯೋಜನೆಯನ್ನು ಪುನ: ಜಾರಿಗೆ ತರಬೇಕೆಂದು ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕು ಅಧ್ಯಕ್ಷ ಉಮೇಶ ಮರ್ಚಪ್ಪನವರ ಆಗ್ರಹಿಸಿದರು.

ಅವರು ಪಟ್ಟಣದ ಮಿನಿ ವಿಧಾನಸೌಧ ಆವರಣದಲ್ಲಿ ರೈತ ಸಂಘ ಹಾಗೂ ಹಸಿರು ಸೇನೆ ಆಶ್ರಯದಲ್ಲಿ ತಹಶೀಲ್ದಾರ್‌ಗೆ ಮನವಿ ನೀಡಿ ಮಾತನಾಡಿದರು. ಭಾರತ ದೇಶ ಕೃಷಿ ಪ್ರಧಾನ ದೇಶವಾಗಿದೆ. ಈ ಹಿಂದೆ ಕೇಂದ್ರ ಸರ್ಕಾರ ಮಳೆ ಆಧಾರಿತವಾಗಿ ರೈತರಿಗೆ ಮಳೆ ವಿಮೆ ಯೋಜನೆ ಜಾರಿಗೆ ತಂದಿತ್ತು. ಆಕಸ್ಮಾತ್ ಮಳೆ ಕೈಕೊಟ್ಟರೆ ಈ ವಿಮೆಯಲ್ಲಿ ಭಾಗವಹಿಸಿದ ರೈತರಿಗೆ ಮಳೆ ವಿಮೆ ಪರಿಹಾರ ಬರುತಿತ್ತು. ಆದರೆ ಸದ್ಯ ಸರ್ಕಾರ ಈ ಯೋಜನೆಯನ್ನು ಸ್ಥಗಿತ ಮಾಡಿದ್ದು ಸರಿಯಾದ ಕ್ರಮವಲ್ಲ. ಕೇಂದ್ರ ಸರ್ಕಾರ ಈ ಯೋಜನೆಯನ್ನು ಮರು ಜಾರಿ ಮಾಡಲು ಕ್ರಮ ತೆಗೆದುಕೊಳ್ಳಬೇಕು. ಒಂದು ವೇಳೆ ಸರ್ಕಾರ ಈ ಯೋಜನೆಯನ್ನು ಜಾರಿ ಮಾಡದಿದ್ದರೆ ನರಗುಂದ ಬಂಡಾಯ ನೆಲದಿಂದ ದೇಶವ್ಯಾಪಿ ರೈತರು ಹೋರಾಟಕ್ಕೆ ಸಜ್ಜಾಗುತ್ತೇವೆಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ಶಿರಸ್ತೇದಾರ ಪರಶುರಾಮ ಕಲಾಲ ರೈತರ ಮನವಿ ಸ್ವೀಕರಿಸಿ ಸರ್ಕಾರಕ್ಕೆ ರವಾನೆ ಮಾಡಲಾಗುವದೆಂದು ತಿಳಿಸಿದರು. ಈ ಸಂದರ್ಭದಲ್ಲಿ ದೇವನಗೌಡ ಗಾಣಿಗೇರ, ನಾಗರಾಜ ಹೊರಕೇರಿ, ಅಪ್ಪಣ್ಣ ಮೊರಬದ, ರಾಮನಗೌಡ ಹಾಲಗೌಡ್ರ, ಬಸವರಾಜ ಹಡಪದ, ಶ್ರೀಶೈಲ ಹೆಬ್ಬಾಳ, ಅನೀಲ ಯರಗಟ್ಟಿ, ಮಂಜುನಾಥ ಮೊರಬದ, ಶಿವಾನಂದ ಹಡಪದ, ತೋರಗಲ್ಲ ಸೇರಿದಂತೆ ಅನೇಕರಿದ್ದರು.

ಜುಲೈ 11ರಂದು ರಾಷ್ಟ್ರೀಯ ಲೋಕ ಅದಾಲತ್: ನಾಗವೇಣಿ



ಗದಗ: ಜಿಲ್ಲೆಯಲ್ಲಿ ಜು.11 ರಂದು ರಾಷ್ಟ್ರೀಯ ಲೋಕ ಅದಾಲತ್ ಹಮ್ಮಿಕೊಳ್ಳಲಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ನಾಗವೇಣಿ ತಿಳಿಸಿದರು.

ನಗರದ ಜಿಲ್ಲಾ ಸತ್ರ ನ್ಯಾಯಾಲಯದ ವಿಡಿಯೋ ಕಾನ್ಫರನ್ಸ್ ಹಾಲ್‌ದಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಲೋಕ ಅದಾಲತ್ ಕುರಿತು ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿ, ಜಿಲ್ಲೆಯಲ್ಲಿ ರಾಜೀ ಸಂಧಾನಕ್ಕಾಗಿ ಪ್ರತಿಯೊಂದು ನ್ಯಾಯಾಲಯಕ್ಕೆ ಒಂದು ಬೆಂಚಿನಂತೆ ಒಟ್ಟು 15 ಬೆಂಚಗಳನ್ನು ರಚಿಸಿದ್ದು ಗದಗ ಜಿಲ್ಲೆಯಲ್ಲಿ ಒಟ್ಟು 21011 ವಿವಿಧ ಚಾಲ್ತಿ ಪ್ರಕರಣಗಳಿದ್ದು ಅದರಲ್ಲಿ ಈಗಾಗಲೇ ರಾಜೀ ಆಗಬಹುದಾದ 2835 ಪ್ರಕರಣಗಳನ್ನು ಗುರುತಿಸಿದ್ದು, ಕಳೆದ ಮಾರ್ಚ-2026 ರಂದು ಜರುಗಿದ ಲೋಕ್ ಅದಾಲತ್‌ನಲ್ಲಿ 3383 ಚಾಲ್ತಿ ಪ್ರಕರಣಗಳನ್ನು ಹಾಗೂ 62299 ವ್ಯಾಜ್ಯಪೂರ್ವ ಪ್ರಕರಣಗಳನ್ನು ಸೇರಿ ಒಟ್ಟು 65682 ಪ್ರಕರಣಗಳು ರಾಜೀ ಮೂಲಕ ಇತ್ಯರ್ಥಪಡಿಸಿದೆ. ಇದರಲ್ಲಿ ವಿಶೇಷವಾಗಿ 03 ಕೌಟುಂಬಿಕ ಪ್ರಕರಣಗಳನ್ನು ಪುನಃ ಒಂದುಗೂಡಿಸಿ ಕಳುಹಿಸಲಾಗಿದೆ ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಿ.ಎಸ್.ಶಿವನಗೌಡ್ರ, ಮಾತನಾಡಿ, ಪ್ರಸ್ತುತ ಜಿಲ್ಲೆಯ ನ್ಯಾಯಾಲಯಗಳಲ್ಲಿ ಒಟ್ಟು 21,101 ಪ್ರಕರಣಗಳು ಬಾಕಿ ಇವೆ. ಇವುಗಳ ಪೈಕಿ ರಾಜೀ ಸಂಧಾನದ ಮೂಲಕ ಸೌಹಾರ್ದಯುತ ಇತ್ಯರ್ಥಕ್ಕೆ ಸೂಕ್ತವಾಗಿರುವ 2,835 ಪ್ರಕರಣಗಳನ್ನು ಈಗಾಗಲೇ ಪ್ರಾಧಿಕಾರವು ಗುರುತಿಸಿ ಆಯ್ಕೆ ಮಾಡಿಕೊಂಡಿದೆ. ಉಳಿದ ಪ್ರಕರಣಗಳನ್ನು ರಾಜೀ ಸಂಧಾನಕ್ಕೆ ಒಳಪಡಿಸುವ ಪ್ರಕ್ರಿಯೆ ಮುಂದುವರಿದಿದೆ ಎಂದರು.

ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವ ಪ್ರಕರಣಗಳ ಇತ್ಯರ್ಥಕ್ಕಾಗಿ ಆ.21, 22 ಮತ್ತು 23 ರಂದು ವಿಶೇಷ ಲೋಕ ಅದಾಲತ್ ನಡೆಯಲಿದೆ. ಇದಕ್ಕೆ ಸಮಾಧಾನ ಸಮಾರೋಹ ಎಂದು ಹೆಸರಿಡಲಾಗಿದೆ. ನಮ್ಮ ಜಿಲ್ಲೆಯಿಂದ ರಾಜಿ ಮಾಡಿಕೊಳ್ಳಲು ಯೋಗ್ಯವಿರುವ 21 ಪ್ರಕರಣಗಳನ್ನು ಸುಪ್ರೀಂ ಕೋರ್ಟ್‌ನಿಂದ ಗುರುತಿಸಿ ಕಳುಹಿಸಿಕೊಡಲಾಗಿದೆ. ಈ ಎಲ್ಲಾ ಪ್ರಕರಣಗಳ ಪಕ್ಷಗಾರರಿಗೆ ಈಗಾಗಲೇ ನೋಟಿಸ್ ಕಳುಹಿಸಲಾಗಿದೆ. ಈ ಪ್ರಕರಣಗಳ ಪಕ್ಷಗಾರರು ದಿಲ್ಲಿಯ ಸುಪ್ರೀಂ ಕೋರ್ಟ್‌ಗೆ ಹೋಗುವ ಅಗತ್ಯವಿರುವುದಿಲ್ಲ ಎಂದರು.

ಎಲ್ಲರೊಂದಿಗೆ ಚರ್ಚಿಸಿ ಭಾಗವಹಿಸಲಿ



ಗದಗ: ಭಕ್ತರ ಸಹಕಾರ ಹಾಗೂ ಕಾಣಿಕೆಗಳಿಂದ ಮಠ-ಮಾನ್ಯಗಳು ನಡೆದುಕೊಂಡು ಬಂದಿವೆ. ದೇಣಿಗೆ ನೀಡುವವರು ತಮ್ಮ ಹೆಸರನ್ನು ನೋಂದಾಯಿಸುವುದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಪರಂಪರೆ ಎಂದು ವೀರೇಶ್ವರ ಪುಣ್ಯಾಶ್ರಮ ಸೋಲ್ ಟ್ರಸ್ಟ್‌ನ ಚಂದ್ರು ಬಾಳೆಹಳ್ಳಿಮಠ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಳೆದ 5 ವರ್ಷದಿಂದ ಸೋಲ್ ಟ್ರಸ್ಟ್‌ನ ಸಭೆಗಳು ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ ಎಂಬ ಆರೋಪಗಳ ಕುರಿತು ಪ್ರತಿಕ್ರಿಯಿಸಿದ ಅವರು, ರಾಜು ಖಾನಪ್ಪನವರು ಜಾತ್ರೆಯನ್ನು ವಿರೋಧಿಸುವ ಬದಲು ಸಮಾಜದ ಹಿರಿಯರನ್ನು ಕರೆದು ಸಭೆ ನಡೆಸಿ, ಎಲ್ಲರೊಂದಿಗೆ ಚರ್ಚಿಸಿ ಜಾತ್ರೆಯಲ್ಲಿ ಭಾಗವಹಿಸಬೇಕು ಎಂದರು.

ವಸಂತಗೌಡ ಪೊಲೀಸ್ ಪಾಟೀಲ ಮಾತನಾಡಿ, ಭಕ್ತರ ಜೋಳ ಹಾಗೂ ಕಾಳುಕಡಿ ವಸ್ತುಗಳ ವ್ಯವಹಾರಕ್ಕೆ ಸಂಬಂಧಿಸಿದಂತೆ ಬೆದರಿಕೆ ಹಾಕಲಾಗುತ್ತಿದೆ ಎಂಬ ಆರೋಪ ಕೇಳಿಬಂದಿದ್ದು, ಇಂತಹ ಘಟನೆಗಳು ಸರಿಯಲ್ಲ ಎಂದರು. ಶಿವರುದ್ರಪ್ಪ ಇಟಗಿ ಮಾತನಾಡಿ, ಕಲ್ಲಯ್ಯ ಅಜ್ಜನವರಿಗೆ ದುಡ್ಡು ಕೇಳಿದ ಆರೋಪಗಳನ್ನು ಪ್ರಸ್ತಾಪಿಸಿದ ಅವರು, ಯಾವುದೇ ರೀತಿಯ ಹಣದ ಬೇಡಿಕೆ ಇಟ್ಟಿಲ್ಲ ಎಂದು ಸ್ಪಷ್ಟಪಡಿಸಿದರು. ಪ್ರಕಾಶ ಬಸರಿಗಿಡದ ಮಾತನಾಡಿ, ನಮ್ಮ ಅಜ್ಜಾವ್ರ ಸಮಾಧಿ ಇದೇ ಸ್ಥಳದಲ್ಲಿದೆ. ಹಾಗಾಗಿ ಈ ಸ್ಥಳವನ್ನು ಬಿಟ್ಟು ಬೇರೆ ಕಡೆ ಬಾವಿತೊಡಿಸುವಂತೆ ಹೇಳಲಾಗಿದೆ. ಇನ್ನೂ ಕೆಲವು ಮಠದ ಆಸ್ತಿಗೆ ಸಂಬಂಧಿಸಿದ ವಿಚಾರಗಳು ನ್ಯಾಯಾಲಯದಲ್ಲಿದ್ದು, ನಾವು ಯಾವುದೇ ಆಸ್ತಿ ಕಬಳಿಸುವ ಪ್ರಯತ್ನ ಮಾಡಿಲ್ಲ ಎಂದರು. ಎಂ.ಆರ್.ಹಿರೇಮಠ, ಚನ್ನಬಸಯ್ಯ ಬಂಕಾಪುರ, ಪರಶುರಾಮ ಕಟ್ಟಿಮನಿ ಇದ್ದರು.

ಮಠದ ಬಗ್ಗೆ ಆಕ್ಷೇಪ ಸರಿಯಲ್ಲ

ಗದಗ: ಕಳೆದ ಹನ್ನೊಂದು ವರ್ಷಗಳಿಂದ ಕೆ.ಎಚ್.ಪಾಟೀಲ ಅಭಿಮಾನಿ ಬಳಗದ ವತಿಯಿಂದ ಪುಟ್ಟರಾಜ ಅಜ್ಜನವರ ಸೇವಾ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದೇವೆ ಎಂದು ಬಳಗದ ಉಪಾಧ್ಯಕ್ಷ ರಮೇಶ ಮುಳಗುಂದ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಯಾರಿಂದಲೂ ಒಂದು ರೂಪಾಯಿ ಸಹ ಪಡೆಯದೆ ಮದುವೆ ಸೇರಿದಂತೆ ಸೇವಾ ಕಾರ್ಯಗಳ ಸಂಪೂರ್ಣ ವೆಚ್ಚವನ್ನು ಪೀರಸಾಬ್ ಕೌತಾಳ ಅವರು ಭರಿಸುತ್ತಿದ್ದಾರೆ. ಎಲ್ಲರೂ ಒಂದೇ ಎಂಬ ಸಂದೇಶವನ್ನು ಹಿಂದೂ ಧರ್ಮ ಸಾರುತ್ತದೆ. ಆದರೆ ಹಿಂದೂ ಮುಖಂಡ ಎಂದು ಹೇಳಿಕೊಂಡು ರಾಜು ಖಾನಪ್ಪನವರು ಮಠದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುವುದು ಸರಿಯಲ್ಲ, ಪುಟ್ಟರಾಜ ಗವಾಯಿಗಳ ಹಾಗೂ ಪಂಚಾಕ್ಷರಿ ಅಜ್ಜನವರ ಭೂಮಿಯಾದ ಈ ಸ್ಥಳದಲ್ಲಿ ಕೋಮು ಗಲಭೆ ಕೆರಳಿಸುವಂತಹ ಹೇಳಿಕೆಗಳು ಸರಿಯಲ್ಲ, ಎಲ್ಲರೂ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು ಎಂದರು.

ವಿನೋದ್ ಸಿದ್ಲಿಂಗ್, ಚಂದ್ರು ಕಡಕೋಳ, ಅನಿಲ್ ಶಿಂಗಟಾನಕೇರಿ, ಹಣಮಂತಪ್ಪ ಆಸಂಗಿ, ದಾವಲ, ಅಜರುದ್ದೀನ್ ಮೂಲಿಮನಿ, ರಜಾಕ್ ಸೌಡಿ ಇದ್ದರು.



ಬಿಎಲ್‌ಒ ಕರ್ತವ್ಯಗಳಿಂದ ಮುಕ್ತಿಗೊಳಿಸಿ: ಸುಶೀಲಾ ಚಲವಾದಿ



ಮುಂಡರಗಿ: ಅಂಗನವಾಡಿ ಕಾರ್ಯಕರ್ತೆಯರಿಗೆ ಹೆಚ್ಚುವರಿ ಚುನಾವಣೆ ಕೆಲಸಗಳಿಂದಾಗಿ ದೈಹಿಕ ಮತ್ತು ಮಾನಸಿಕ ಒತ್ತಡಕ್ಕೊಳಗಾಗಿ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಹಾಗೆಯೇ ಅಂಗನವಾಡಿಯಲ್ಲಿ ಮಕ್ಕಳ ಪಾಲನೆ ಮತ್ತು ಸಮರ್ಪಕ ಶಿಕ್ಷಣ ನೀಡಿ ಕಾಳಜಿ ವಹಿಸುವುದಕ್ಕೆ ತೊಂದರೆಯಾಗುತ್ತಿದೆ. ಆದ್ದರಿಂದ ಅಂಗನವಾಡಿ ಕಾರ್ಯಕರ್ತೆಯರನ್ನು ಬಿಎಲ್‌ಒ ಕರ್ತವ್ಯಗಳಿಂದ ಮುಕ್ತಿಗೊಳಿಸಬೇಕು ಎಂದು ತಾಲೂಕು ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ (ಸಿಐಟಿಯು) ಸುಶೀಲಾ ಚಲವಾದಿ ಒತ್ತಾಯಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಎಲ್‌ಒ ಕೆಲಸಗಳಿಂದ ಮುಕ್ತಿ ನೀಡಿ ಕೇವಲ ಅಂಗನವಾಡಿ ಕೆಲಸಗಳಿಗೆ ಮಾತ್ರ ಅವಕಾಶ ನೀಡಬೇಕೆನ್ನುವುದು ಬಹುದಿನದ ಬೇಡಿಕೆಯಾಗಿದೆ. ಸರ್ಕಾರ ಈ ಬಗ್ಗೆ ಗಮನ ಹರಿಸುವ ಕೆಲಸ ಮಾಡಬೇಕು. ಜೂ.25ರಂದು ಇಲ್ಲಿನ ತಹಶೀಲ್ದಾರ್ ಕಾರ್ಯಾಲಯದಲ್ಲಿ ಚುನಾವಣೆ ಮತಪಟ್ಟಿ ಪರಿಷ್ಕರಣೆ ಕುರಿತಾದ ಬಿಎಲ್‌ಒಗಳ ತರಬೇತಿಯಲ್ಲಿ ಕೊರ್ಲಹಳ್ಳಿ ಅನ್ನಕ್ಕ ಹಮ್ಮಿಗಿ ಎಂಬುವವರಿಗೆ ಕೆಲಸದ ಒತ್ತಡದಿಂದ ಬಿಪಿ ಹೆಚ್ಚಾಗಿ ಮೂರ್ಛೆ ಬಿದ್ದಿದ್ದರು. ತಕ್ಷಣವೇ ಸ್ವತಃ ತಹಶೀಲ್ದಾರ್ ಅವರೇ ತಮ್ಮ ವಾಹನದಲ್ಲಿ ತಾಲೂಕು ಆಸ್ಪತ್ರೆಗೆ ದಾಖಲಿಸಿದರು. ಹೆಚ್ಚಿನ ಚಿಕಿತ್ಸೆಗಾಗಿ ಅನ್ನಕ್ಕ ಅವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಈ ಹಿಂದೆಯೂ ಇಂತಹ ಘಟನೆಗಳು ನಡೆದಿವೆ. ಬಿಎಲ್‌ಒ ಕೆಲಸದಿಂದ ಮುಕ್ತಿಗೊಳಿಸಬೇಕು. ಇಲ್ಲದಿದ್ದರೆ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಸಿಐಟಿಯು ತಾಲೂಕು ಅಂಗನವಾಡಿ ನೌಕರರ ಸಂಘದ ಉಪಾಧ್ಯಕ್ಷೆ ಅನ್ನಪೂರ್ಣ ಸಾಲಿಮಠ ಮಾತನಾಡಿ, ಬಿಎಲ್‌ಒ ಕೆಲಸದ ಮೇಲೆಹೋದಾಗ ಅಂಗನವಾಡಿ ಕೆಲಸಗಳು ನಿಲ್ಲುತ್ತವೆ. ಮೇಲಾಧಿಕಾರಿಗಳು ಪರಿಶೀಲನೆಗೆ ಬಂದಾಗ ರಿಜಿಸ್ಟರ್ ಬರೆಯದಿದ್ದರೆ ನೋಟಿಸ್ ನೀಡುತ್ತಾರೆ. ಇದರಿಂದಾಗಿ ಕೆಲಸದ ಒತ್ತಡ ಹೆಚ್ಚಾಗುತ್ತಿದೆ. ಚುನಾವಣೆ ಕಮಿಟಿಯವರು ನೀವು ಬಿಎಲ್‌ಒ ಕೆಲಸ ಮಾಡಬೇಕು. ಮಾಡದಿದ್ದರೆ ಬಿಎಲ್‌ಒ ಮತ್ತು ಅಂಗನವಾಡಿ ಕಾರ್ಯಕರ್ತೆ ಎರಡು ಹುದ್ದೆಗೆ ರಾಜೀನಾಮೆ ಕೊಡಬೇಕು ಎನ್ನುತ್ತಾರೆ. ಹೀಗಾದರೆ ನಾವು ಯಾವ ರೀತಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಎಂದು ಪ್ರಶ್ನಿಸಿದರು. ಸಂಘದ ಕಾರ್ಯದರ್ಶಿ ಕಮಲಾಕ್ಷೀ ಬೀಳಗಿ, ವಿಶಾಲಾಕ್ಷೀ ದೇವರಮನಿ, ಜಯಶ್ರೀ ರಾಮನಗೌಡ, ಶಾಂತಾ ಹಿರೇಮಠ ಇದ್ದರು.

ಶಾಲೆ ಪ್ರಾರಂಭೋತ್ಸವ ಇಂದು

ನರಗುಂದ: ಪಟ್ಟಣದ ಹಳೇ ಎಪಿಎಂಸಿ ಹತ್ತಿರದ ಟಿಎಪಿಸಿಎಂಎಸ್ ಆವರಣದಲಿ ಜೂನ್ 27ರ ಬೆಳಗ್ಗೆ 11 ಗಂಟೆಗೆ ಶ್ರೀ ಸಿದ್ದೇಶ್ವರ ವಿದ್ಯಾ ವರ್ಧಕ ಸಂಘದ ಆಡಿಯಲ್ಲಿನ ವಿಸ್ಡಮ್ ಪಬ್ಲಿಕ್ ಆಂಗ್ಲ ಮಾಧ್ಯಮ ಶಾಲೆಯ ಪ್ರಾರಂಭೋತ್ಸವದ ಉದ್ಘಾಟನೆಯನ್ನು ಶಾಸಕ ಸಿ.ಸಿ. ಪಾಟೀಲ ಅವರು ಮಾಡಲಿದ್ದಾರೆಂದು ಸಂಸ್ಥೆಯ ಕಾರ್ಯದರ್ಶಿ ಎಸ್.ಆರ್. ಪಾಟೀಲ ತಿಳಿಸಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಟಿಎಪಿಸಿಎಂಎಸ್ ಅಧ್ಯಕ್ಷ ಎ.ಎಂ. ಹುಡೇದ ವಹಿಸುವರು. ಅತಿಥಿಗಳಾಗಿ ನಿಂಗಣ್ಣ ಗಾಡಿ, ಕಸಬಾ ಪಿಕೆಪಿಎಸ್ ಉಪಾಧ್ಯಕ್ಷ ವಸಂತ ಭೂಸಾರೆ, ಶಂಕರಗೌಡ ನಾಯ್ಕರ, ಸಂಸ್ಥೆಯ ಅಧ್ಯಕ್ಷ ಎಸ್.ವಿ. ಹೆಗಡಾಳ, ಮುಖ್ಯೋಪಾಧ್ಯಾಯಿನಿ ಅಶ್ವಿನಿ ವಿ.ಜಿ. ಹಾಗೂ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿ ಇರುವರು.

ಜಿಲ್ಲೆಯ ಬಹುತೇಕ ಭಾಗದಲ್ಲಿ ಮಳೆ | ನಿಟ್ಟುಸಿರು ಬಿಟ್ಟ ಅನ್ನದಾತ

ಚಿಗುರೊಡೆದ ಪೈರಿಗೆ ಜೀವಕಳೆ

▸ ಕಿರಣ ಮಾಸಣಗಿ

• **ಹಾವೇರಿ:** ಬಿತ್ತನೆ ಮಾಡಿದ ನಂತರ ಕಣ್ಮರೆಯಾಗಿದ್ದ ಮಳೆ, ಬೀಜ ಮೊಳಕೆಯೊಡೆದು ಚಿಗುರುವ ಹೊತ್ತಿಗೆ ಅನ್ನದಾತರಲ್ಲಿ ಆತಂಕ ಮೂಡಿಸಿತ್ತು. ಆದರೆ, ಕಳೆದ ಎರಡ್ಮೂರು ದಿನಗಳಿಂದ ವರುಣದೇವನ ಕೃಪೆಯಿಂದ ಸುರಿದ ಮಳೆಗೆ ಜಿಲ್ಲೆಯ ಅನ್ನದಾತರು ಸಮಾಧಾನದ ನಿಟ್ಟುಸಿರು ಬಿಡುವಂತಾಗಿದೆ.

ಜಿಲ್ಲೆಯಾದ್ಯಂತ ಮುಂಗಾರು ಮಳೆಯ ಕೊರತೆಯ ನಡುವೆಯೂ ಶೇ.89.86ರಷ್ಟು ಬಿತ್ತನೆಯಾಗಿದ್ದು, ಮಳೆ ಕೊರತೆಯಿಂದ ಚಿಗುರೊಡೆದಿದ್ದ ಹಲವು ಬೆಳೆಗಳು ಬಾಡುವ ಹಂತ ತಲುಪಿತ್ತು. ಜಿಲ್ಲೆಯ ಬಹುತೇಕ ಭಾಗದಲ್ಲಿ ಎರಡು ದಿನ ಹದ ಮಳೆಯಾದ ಬೆನ್ನಲ್ಲೇ ಚಿಗುರೊಡೆಯುತ್ತಿದ್ದ ಪೈರಿಗೆ ಜೀವಕಳೆ ಬಂದಿದೆ.

3.28ಲಕ್ಷ ಹೆಕ್ಟೇರ್ ಬಿತ್ತನೆ ಗುರಿ: ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ ಒಟ್ಟು 3,28,956 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯ ಗುರಿಯನ್ನು ಕೃಷಿ ಇಲಾಖೆ ಹೊಂದಿದ್ದು, ಇದುವರೆಗೆ ಶೇ.89.86ರಷ್ಟು ಬಿತ್ತನೆ ಕಾರ್ಯ ಪೂರ್ಣಗೊಂಡಿದೆ. ಜೂನ್ ಮೊದಲ ವಾರ ಸುರಿದ ಮಳೆಯನ್ನೇ ನಂಬಿಕೊಂಡು ಅನೇಕ ರೈತರು ಸೋಯಾಬಿನ್, ಮೆಕ್ಕೆಜೋಳ, ದ್ವಿದಳ ಧಾನ್ಯಗಳು, ಶೇಂಗಾ ಹೀಗೆ ಹಲವು ಬೆಳೆಗಳನ್ನು ಬಿತ್ತನೆ ಮಾಡಿದ್ದರು. ಈ ವೇಳೆ ಕಡಿಮೆ ತೇವಾಂಶ ಹಿನ್ನೆಲೆಯಲ್ಲಿ ಹಲವು ಬೆಳೆಗಳ ಮೇಲೆ ಪರಿಣಾಮ ಉಂಟು ಮಾಡುವ ಆತಂಕವನ್ನೂ ಎದುರಿಸುವಂತಾಗಿತ್ತು.

ಈ ಬಾರಿ ಮುಂಗಾರು ಮಳೆ ದುರ್ಬಲ ಎಂಬ ಮಾಹಿತಿಯನ್ನು ಹವಾಮಾನ ಇಲಾಖೆ ಈ ಮೊದಲೆ ಕೊಟ್ಟಿದ್ದರೂ ಸಹ ಮೇ ತಿಂಗಳಲ್ಲಿ ಸುರಿದ ಮುಂಗಾರು ಪೂರ್ವ ಮಳೆಗೆ ಸಾಕಷ್ಟು ರೈತರು ಬಿತ್ತನೆ ಮಾಡಿದ್ದರು. ಬಳಿಕ ಮಳೆಯಾಗದೇ ಬಿಸಿಲಿನ ತೀವ್ರತೆ ಹೆಚ್ಚಳದಿಂದ ಮೊಳಕೆಯೊಡೆದ ಕೆಲ ಬೆಳೆಗಳು ಒಣಗಿ ಹೋಗಿದ್ದರಿಂದ, ಜೂನ್ ಮೊದಲ ವಾರ ಸುರಿದ ಹದ ಮಳೆಗೆ ಮತ್ತೊಮ್ಮೆ ಬಿತ್ತನೆ ಮಾಡಿದ್ದರು.



> ಜಿಲ್ಲೆಯಲ್ಲಿ ಈಗಾಗಲೇ ಶೇ.89.86ರಷ್ಟು ಬಿತ್ತನೆಯಾಗಿದೆ. ಬುಧವಾರ ರಾತ್ರಿ ಸುರಿದ ಮಳೆ ಸೋಯಾಬಿನ್, ಮೆಕ್ಕಜೋಳ ಸೇರಿದಂತೆ ವಿವಿಧ ಬೆಳೆಗಳಿಗೆ ಜೀವ ತುಂಬಿದೆ. ಇನ್ನೂ 2-3 ದಿನ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಇನ್ನೂ ಬಿತ್ತನೆ ಮಾಡದ ರೈತರು ಭೂಮಿಯ ತೇವಾಂಶ ನೋಡಿಕೊಂಡು ಬಿತ್ತನೆ ಮಾಡಬೇಕು.
>
> ■ **ಕೆ.ಮಲ್ಲಿಕಾರ್ಜುನ, ಕೃಷಿ ಜೆ.ಡಿ., ಹಾವೇರಿ**

ಎರಡನೇ ಸಾರಿ ಬಿತ್ತನೆ ಮಾಡಿದ ಬಳಿಕವೂ ಮಳೆ ಮಾಯವಾಗಿ ರೈತರು ಕಂಗೆಟ್ಟಿದ್ದರು. ಬಿತ್ತನೆ ಬೀಜ, ರಸಗೊಬ್ಬರಕ್ಕಾಗಿ ಸಾಕಷ್ಟು ಹಣ ವೆಚ್ಚ ಮಾಡಿದ್ದಾರೆ. ಇದೀಗ ಮಳೆ ಕೈಕೊಟ್ಟರೆ ಹಾಕಿದ ಹಣವೂ ಕೈತಪ್ಪಿ ಸಂಕಷ್ಟಕ್ಕೆ ಸಿಲುಕಬೇಕಾದ ಸ್ಥಿತಿ ನಿರ್ಮಾಣವಾಗಬಹುದು ಎಂಬುದು ರೈತರ ಆತಂಕವಾಗಿತ್ತು. ಬುಧವಾರದ ಮಳೆ ರೈತರಿಗೆ ಸಂತಸ ನೀಡಿದೆ.

ಇದುವರೆಗೆ ಬಿತ್ತನೆಯಾದ ಕ್ಷೇತ್ರ

- ಏಕದಳ ಧಾನ್ಯಗಳು: 2,47,035 ಹೆಕ್ಟೇರ್
- ದ್ವಿದಳ ಧಾನ್ಯಗಳು: 1,341 ಹೆಕ್ಟೇರ್
- ಎಣ್ಣೆ ಕಾಳುಗಳು: 32,435 ಹೆಕ್ಟೇರ್
- ವಾಣಿಜ್ಯ ಬೆಳೆಗಳು: 14,782 ಹೆಕ್ಟೇರ್

ವಾಡಿಕೆಗಿಂತ ಕಡಿಮೆ ಮಳೆ: ಕಳೆದ ಒಂದು ದಿನದಲ್ಲಿ ಬ್ಯಾಡಗಿ, ಹಾವೇರಿ, ಹಿರೇಕೆರೂರ, ರಾಣೇಬೆನ್ನೂರ, ಶಿಗ್ಗಾವಿ, ರಟ್ಟೀಹಳ್ಳಿಯಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಆದರೆ, ಹಾನಗಲ್ ಮತ್ತು ಸವಣೂರು ತಾಲೂಕಿನಲ್ಲಿ ಮಾತ್ರ ವಾಡಿಕೆಗಿಂತ ಕಡಿಮೆ ಮಳೆ ಬಿದ್ದಿದೆ.

ಹಾನಗಲ್‌ನಲ್ಲಿ 7.70ಮಿಮಿ ವಾಡಿಕೆ ಮಳೆಗೆ 7.54ಮಿಮಿ, ಸವಣೂರ 2.10ಮಿಮಿ ವಾಡಿಕೆ ಮಳೆಗೆ 1.74ಮಿಮಿ, ಬ್ಯಾಡಗಿ ವಾಡಿಕೆ ಮಳೆ 3.10ಮಿಮಿ ಸುರಿದ ಮಳೆ 8.60ಮಿಮಿ. ಹಾವೇರಿಯಲ್ಲಿ 3.50ಮಿಮಿ ವಾಡಿಕೆ ಮಳೆಗೆ 4.31ಮಿಮಿ, ಹಿರೇಕೆರೂರಿನಲ್ಲಿ 3.40ಮಿಮಿ ವಾಡಿಕೆ ಮಳೆಗೆ 7.55ಮಿಮಿ, ರಾಣೆಬೆನ್ನೂರಿನಲ್ಲಿ 1.50ಮಿಮಿ ವಾಡಿಕೆ ಮಳೆಗೆ 7.72ಮಿಮಿ, ಶಿಗ್ಗಾವಿಯಲ್ಲಿ 3.40ಮಿಮಿ ವಾಡಿಕೆ ಮಳೆಗೆ 3.67ಮಿಮಿ, ರಟ್ಟೀಹಳ್ಳಿಯಲ್ಲಿ 1.10ಮಿಮಿ ವಾಡಿಕೆ ಮಳೆಗೆ 2.82ಮಿಮಿ ಮಳೆ ಸುರಿದು ರೈತರಲ್ಲಿ ಸಂತಸ ಮೂಡಿಸಿದೆ.

ದಿಗಂತ ವಿಶೇಷ

ಮುನಿಸಿಕೊಂಡ ವರುಣ | ಆತಂಕದಲ್ಲಿ ಅನ್ನದಾತರು

ಚಿಗುರೊಡೆಯದ ರೈತನ ಬೆಳೆ


▸ ವೆಂಕಟೇಶ ದೇಸಾಯಿ

• **ಬಳ್ಳಾರಿ:** ಕಳೆದ ಸುಮಾರು ದಿನಗಳಿಂದ ವರುಣದೇವ ಮುನಿಸಿಕೊಂಡಿದ್ದು, ದೇಶಕ್ಕೆ ಅನ್ನ ನೀಡುವ ರೈತರಲ್ಲಿ ಆತಂಕ ಮನೆ ಮಾಡಿದೆ.

ಮುಂಗಾರು ಆರಂಭವಾಗುತ್ತಿದ್ದಂತೆ ರೈತರು, ಕೃಷಿ ಚಟುವಟಿಕೆಗಳಲ್ಲಿ ತೊಡಗಿ, ಬಿತ್ತನೆಗೆ ಮುಂದಾಗಿದ್ದರು. ಕೆಲ ರೈತರು ಕಾಡುನೋಡುವ ತಂತ್ರಕ್ಕೆ ಮುಂದಾಗಿದ್ದರು. ಆದರೆ, ಮುಂಗಾರು ಕ್ಷೀಣಿಸಿದ ಹಿನ್ನೆಲೆ ಭೂಮಿ ಹದಗೊಳಿಸಿ ಬಿತ್ತನೆಗೆ ಮುಂದಾಗಿದ್ದ ರೈತರು ಮುಗಿಲಿನತ್ತ ಮುಖ ಮಾಡಿ ಕುಳಿತಿದ್ದಾರೆ.

ಮುಂಗಾರು ಪ್ರಾರಂಭವಾಗುತ್ತಿದ್ದಂತೆ ಚುರುಕುಗೊಳ್ಳುತ್ತಿದ್ದ ಕೃಷಿ ಚಟುವಟಿಕೆಗಳು, ಬಿತ್ತನೆ ಕಾರ್ಯ ಮಂಕಾಗಿದೆ. ಇನ್ನೊಂದಡೆ ತುಂಗಭದ್ರಾ ಜಲಾಶಯದ ಕಾಲುವೆಗಳನ್ನು ಆಶ್ರಯಿಸಿದ ರೈತರು, ಇನ್ನೊಂದಡೇ, ಮಳೆಯಾಶ್ರಿತ ಅನ್ನದಾತರು ಸೇರಿ ಬಿತ್ತನೆಗಾಗಿ ಸದ್ಯ ವರುಣನ ಪ್ರಾರ್ಥಿಸುವ ಸ್ಥಿತಿ ನಿರ್ಮಾಣವಾಗಿದೆ. ಆರಂಭದಲ್ಲಿ ಅಬ್ಬರಿಸಿದ ಮುಂಗಾರು ಮಳೆ ಬಿತ್ತನೆ ವೇಳೆ ಕೈಕೊಟ್ಟ ಹಿನ್ನೆಲೆ ಜಿಲ್ಲೆಯಲ್ಲಿ ನಿರೀಕ್ಷೆ ತಕ್ಕಂತೆ ಬಿತ್ತನೆಯಿಂದ ದೂರ ಉಳಿಯುವಂತೆ ಮಾಡಿದೆ.

ಉತ್ತಮ ಮಳೆ, ಮಂಕಾದ ಬಿತ್ತನೆ: ಪ್ರಸಕ್ತ ವರ್ಷ ಪ್ರಾರಂಭದಲ್ಲಿ ಮುಂಗಾರು ಮಳೆ ವಾಡಿಕೆಗಿಂತ ಹೆಚ್ಚು ಅಬ್ಬರಿಸಿದ್ದರೂ, ಬಿತ್ತನೆ ಕಾರ್ಯ ಮಂಕಾಗಿದೆ. ಜೂ.1ರಿಂದ ಜೂ.24ರ ವರೆಗೆ, ಸಿರುಗುಪ್ಪ ತಾಲೂಕಿನಲ್ಲಿ 65 ಎಂಎಂ ವಾಡಿಕೆಯಲ್ಲಿ 77ಎಂಎಂ ಮಳೆ ಸುರಿದು ಶೇ.17ರಷ್ಟು ಹೆಚ್ಚಾಗಿದೆ. ಕುರುಗೋಡು ತಾಲೂಕಿನಲ್ಲಿ 52.2ಎಂಎಂ ವಾಡಿಕೆಯಲ್ಲಿ 55.7 ಎಂಎಂ ಮಳೆಯಾಗಿದ್ದು, ಶೇ.6ರಷ್ಟು ಹೆಚ್ಚುವರಿಯಾಗಿದೆ.



ಬಳ್ಳಾರಿಯಲ್ಲಿ 53 ಎಂಎಂ ವಾಡಿಕೆ ಮಳೆಯಾಗಬೇಕಿತ್ತು.ಆದರೆ,106.5 ಎಂಎಂ ಮಳೆ ಸುರಿದು ಶೇ.6ರಷ್ಟು ಹೆಚ್ಚುವರಿಯಾಗಿದೆ. ಆದರೆ, ಕಂಪ್ಲಿ ತಾಲೂಕಿನಲ್ಲಿ 43.8 ವಾಡಿಕೆಯಲ್ಲಿ 23.9 ಎಂಎಂ ಮಾತ್ರ ಮಳೆಯಾಗಿದ್ದು, ಶೇ.45ರಷ್ಟು ಕೊರತೆಯಾಗಿದೆ.


ಸಂಡೂರು ತಾಲೂಕಿನಲ್ಲಿ 81.6ಎಂಎಂ ವಾಡಿಕೆಯಲ್ಲಿ 18 ಎಂಎಂ ಮಳೆ ಸುರಿದು, ಶೇ.59ರಷ್ಟು ಮಳೆ ಕೊರತೆಯಾಗಿದ್ದು, ಜಿಲ್ಲೆಯಲ್ಲಿ ಒಟ್ಟು 59.6 ಎಂಎಂ ವಾಡಿಕೆಯಲ್ಲಿ 61.2 ಎಂಎಂ ಮಳೆ ಸುರಿದಿದೆ, ರೈತರು ಸಂತಸದಲ್ಲಿದ್ದರು. ಆದರೆ, ಬಿತ್ತನೆ ವೇಳೆ ವರುಣ ಮುನಿಸಿಕೊಂಡ ಹಿನ್ನೆಲೆ ಜಿಲ್ಲೆಯಲ್ಲಿ ಬಿತ್ತನೆ ಕಾರ್ಯ ಮಂಕಾಗಿದೆ.

ಬರಿದಾದ ತುಂಗಭದ್ರೆ, ರೈತರಲ್ಲಿ ಆತಂಕ: ಕಳೆದ ವರ್ಷ ಜೂನ್ ತಿಂಗಳಲ್ಲಿ ಮುಂಗಾರು ಮಳೆ ಉತ್ತಮವಾಗಿದ್ದರಿಂದ ತುಂಗಭದ್ರಾ ಜಲಾಶಯದಲ್ಲಿ 48.270 ಟಿಎಂಸಿಯಷ್ಟು ನೀರು ಸಂಗ್ರಹಗೊಂಡು ಜಿಲ್ಲೆಯಲ್ಲಿ ಬಿತ್ತನೆ ಕಾರ್ಯ ಚುರುಕುಗೊಂಡಿತ್ತು. ಆದರೆ, ಪ್ರಸಕ್ತ ವರ್ಷ ಮಳೆ ಕೊರತೆಯಿಂದ ಬಿತ್ತನೆ ಕಾರ್ಯಕ್ಕೆ ಮಂಕು ಹಿಡಿದಿದೆ. ಜಿಲ್ಲೆಯ ಕುರುಗೋಡು, ಬಳ್ಳಾರಿ, ಕಂಪ್ಲಿ, ಸಿರುಗುಪ್ಪ, ಸಂಡೂರು ತಾಲೂಕಿನ ಬಹುತೇಕ ರೈತರು ತುಂಗಭದ್ರಾ ಎಚ್ ಎಲ್‌ಸಿ ಹಾಗೂ ಎಲ್‌ಎಲ್‌ಸಿ ಕಾಲುವೆಗಳನ್ನೇ ಅವಲಂಬಿಸಿದ್ದಾರೆ. ಆದರೆ, ಮಳೆ ಕೊರತೆಯಿಂದ ಜಲಾಶಯದಲ್ಲಿ ನೀರಿನ ಕೊರತೆ ಎದುರಾದ ಹಿನ್ನೆಲೆ ರೈತರು ಬಿತ್ತನೆಗಾಗಿ ಎದುರು ಮುಗಿಲಿನತ್ತ ಮುಖ ಮಾಡುವಂತಾಗಿದೆ. ಜಲಾಶಯದಲ್ಲಿ ಸದ್ಯ ಕೇವಲ 10 ಟಿಎಂಸಿ ಮಾತ್ರ ನೀರಿದೆ. ಮಳೆ ಬಂದ್ರೆ ಮಾತ್ರ ಕಾಲುವೆಗೆ ನೀರು ಎನ್ನುವ ಸ್ಥಿತಿ ಎದುರಾಗಿದೆ.

> ಪ್ರಸಕ್ತ ವರ್ಷ ಮುಂಗಾರು ಆರಂಭದಲ್ಲಿ ಅಬ್ಬರಿಸಿದ್ದರೂ ಬಿತ್ತನೆ ವೇಳೆ ವರುಣ ದೇವ ಮುನಿಸಿಕೊಂಡಿದ್ದಾನೆ. ಈ ಬಾರಿಯ ಮುಂಗಾರಿನಲ್ಲಿ ಎಲ್ ನೀನೋ ಪ್ರಭಾವದಿಂದಾಗಿ ಮಳೆ ಅಭಾವ ಕಾಡುವ ಸಾಧ್ಯತೆಯಿದೆ. ಈ ಹಿನ್ನೆಲೆ ರೈತರು ಕಡಿಮೆ ನೀರಿನಲ್ಲಿ ಅಲ್ಪಾವಧಿ ಬೆಳೆಗಳನ್ನು ಬೆಳೆಯಲು ಮುಂದಾಗಬೇಕು. ಕಡಿಮೆ ಖರ್ಚು ಹೆಚ್ಚು ಆದಾಯ ಕಂಡುಕೊಳ್ಳುವ ದ್ವಿದಳ, ಸಿರಿಧಾನ್ಯ ಬೆಳೆಗಳ ಬಿತ್ತನೆಗೆ ಮುಂದಾಗಬೇಕು.
>
> ■ **ಸೋಮಸುಂದರ್ ಕೆ.ಎಂ., ಕೃಷಿ ಇಲಾಖೆ ಜಂಟಿ ನಿರ್ದೇಶಕರು ಬಳ್ಳಾರಿ**

ಉಪನ್ಯಾಸಕರ ನಿಯೋಜಿಸುವ ನಿರ್ಧಾರ ಕೈಬಿಡಿ: ಹೊರಟ್ಟಿ

• **ಹುಬ್ಬಳ್ಳಿ:** ಪದವಿ ಪೂರ್ವ ಶಿಕ್ಷಣದ ಗುಣಮಟ್ಟ ಹಾಗೂ ವಿದ್ಯಾರ್ಥಿಗಳು ಹಿತಾಸಕ್ತಿ ಸಲುವಾಗಿ ರಾಜ್ಯ ಸರ್ಕಾರ ಹಾಗೂ ಶಿಕ್ಷಣ ಇಲಾಖೆ ಸರ್ಕಾರಿ ಪ್ರೌಢ ಶಾಲೆಗಳಲ್ಲಿನ 9 ಹಾಗೂ 10 ನೇ ತರಗತಿಗಳನ್ನು ಬೋಧಿಸಲು ಸರ್ಕಾರಿ ಪದವಿ ಪೂರ್ವ ಕಾಲೇಜ್‌ಗಳ ಉಪನ್ಯಾಸಕರ ನಿಯೋಜಿಸುವ ನಿರ್ಧಾರ ಕೈಬಿಡಬೇಕು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಆಗ್ರಹಿಸಿದ್ದಾರೆ.



ಈ ಕುರಿತು ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿರುವ ಅವರು, ಪದವಿ ಪೂರ್ವ ಉಪನ್ಯಾಸಕರ ಪಿಯು ತರಗತಿಗಳ ಬೋಧನೆಗೆ ಮಾತ್ರ ಪರಗಣಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು.

ಹೊಸ ಕರಡು ನಿಯಮಗಳ ಪ್ರಕಾರ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ನೇರ ನೇಮಕಾತಿ ಮತ್ತು ಬಡ್ತಿಯ ಮೂಲಕ ನೇಮಕಗೊಂಡ ಉಪನ್ಯಾಸಕರು ಸರ್ಕಾರಿ ಪ್ರೌಢಶಾಲೆಗಳಲ್ಲಿ 9 ಮತ್ತು 10 ನೇ ತರಗತಿಗಳನ್ನು ಬೋಧಿಸುವುದು ಕಡ್ಡಾಯವಾಗಿದೆ ಎಂದು ತಿಳಿಸಿದ್ದಾರೆ.

ಪಿಯು ಉಪನ್ಯಾಸಕರು (ಗ್ರೂಪ್-ಬಿ) ಮತ್ತು ಪ್ರೌಢಶಾಲಾ (ಗ್ರೂಪ್-ಸಿ) ಶಿಕ್ಷಕರಿಗೆ ಪ್ರತ್ಯೇಕ ವೃಂದ ಮತ್ತು ನೇಮಕಾತಿ (ಸಿಎಸ್‌ಆರ್) ನಿಯಮಗಳಿವೆ. ಪದವಿಯೊಂದಿಗೆ ಬಿ.ಇಡಿ ಪೂರ್ಣಗೊಳಿಸಿದ ಅಭ್ಯರ್ಥಿಗಳನ್ನು ಪ್ರೌಢಶಾಲಾ ಶಿಕ್ಷಕರೆಂದು ನೇಮಕಗೊಳಿಸಿ 8 ರಿಂದ 10 ನೇ ತರಗತಿಯ ವಿಷಯಗಳನ್ನು ಬೋಧಿಸಲು ನೇಮಕ ಮಾಡಿಕೊಳ್ಳಲಾಗುತ್ತದೆ. ಸ್ನಾತಕೋತ್ತರ ಪದವಿಯೊಂದಿಗೆ ಬಿ.ಇಡಿ ಪದವಿ ಹೊಂದಿರುವ ಅಭ್ಯರ್ಥಿಗಳನ್ನು ಪದವಿ ಪೂರ್ವ (ಪಿಯು) ಉಪನ್ಯಾಸಕರೆಂದು ನೇಮಕಗೊಳಿಸಿ ಪಿಯು ಪ್ರಥಮ ಹಾಗೂ ಪಿಯು ದ್ವಿತೀಯ ತರಗತಿಯ ವಿಷಯಗಳನ್ನು ಬೋಧಿಸಲು ನೇಮಕ ಮಾಡಿಕೊಳ್ಳಲಾಗುತ್ತದೆ.

ಪ್ರಥಮ ಮತ್ತು ದ್ವಿತೀಯ ಪಿಯುಸಿ ಹಂತವು ವಿದ್ಯಾರ್ಥಿಗಳ ಉನ್ನತ ಶಿಕ್ಷಣ ಮತ್ತು ವೃತ್ತಿಪರ ಭವಿಷ್ಯವನ್ನು ರೂಪಿಸುವ ಪ್ರಮುಖ ಹಂತವಾಗಿದೆ. ಈ ಹಂತದಲ್ಲಿ ಗುಣಮಟ್ಟದ ಬೋಧನೆ, ನಿರಂತರ ಮಾರ್ಗದರ್ಶನ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗೆ ಉಪನ್ಯಾಸಕರ ಸಂಪೂರ್ಣ ಗಮನ ಅಗತ್ಯವಿದೆ ಎಂದು ತಿಳಿಸಿದ್ದಾರೆ.

ಉಪನ್ಯಾಸಕರ ಸಮಯವನ್ನು 9ನೇ ಮತ್ತು 10ನೇ ತರಗತಿಗಳಿಗೆ ಹಂಚುವುದರಿಂದ ಪಿಯು ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟದ ಮೇಲೆ ನೇರ ಪರಿಣಾಮ ಬೀರುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗೆ ಅಡ್ಡಿಯಾಗುವುದು, ವಿಷಯದ ಆಳವಾದ ಬೋಧನೆಗೆ ಸಮಯ ಕಡಿಮೆಯಾಗುವುದು. ಗ್ರಾಮೀಣ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳು ಹೆಚ್ಚಿನ ಹಾನಿಗೊಳಗಾಗುವ ಸಾಧ್ಯತೆ ವಿದ್ಯಾರ್ಥಿಗಳ ಫಲಿತಾಂಶ ಮತ್ತು ಉನ್ನತ ಶಿಕ್ಷಣದ ಅವಕಾಶಗಳ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ತಿಳಿಸಿದ್ದಾರೆ.

ಹೀರಾ, ಮೋತಿ ಕುದುರೆಗಳಿಗೆ ವಿಠ್ಠಲನ ಸನ್ನಿಧಿಯಲ್ಲಿ ವಿಶೇಷ ಆತಿಥ್ಯ

▸ ಸಂತೋಷಕುಮಾರ್ ಕಾಮತ್

• **ಮಾಂಜರಿ:** ಹೀರಾ ಮತ್ತು ಮೋತಿ ಅವರಿಗೆ ಮಹಾರಾಷ್ಟ್ರದ ಪಂಢರಪುರದ ವಿಠ್ಠಲನ ಸನ್ನಿಧಿಯಲ್ಲಿ ಆಷಾಢ ಏಕಾದಶಿಯಲ್ಲಿ ರಾಜ ಮರ್ಯಾದೆ ಸಿಗುತ್ತದೆ. ಪ್ರತಿ ವರ್ಷ ಪಂಢರಪುರಕ್ಕೆ ಹೊರಡುವ 315 ಕಿ.ಮೀ. ದಾರಿಯುದ್ದಕ್ಕೂ ಇವರೂ ಹೆಜ್ಜೆ ಹಾಕುತ್ತಾರೆ!

> ▸ ಈ ಪರಂಪರೆಗೆ 192 ವಸಂತ
>
> ▸ ಲಕ್ಷಾಂತರ ಭಕ್ತರ ಆರಾಧ್ಯ ದೈವ

ಹೀರಾ, ಮೋತಿ ಎಂಬುದು ಎರಡು ಕುದುರೆಗಳ ಹೆಸರು. ಚಿಕ್ಕೋಡಿ ತಾಲೂಕಿನ ಅಂಕಲಿ ಗ್ರಾಮದ ಶಿತೋಳೆ ಮನೆತನದವರು ಸಾಕಿರುವ ಈ ಕುದುರೆ ಜೋಡಿಗೆ ಪಂಢರಪುರದ ದೇವಸ್ಥಾನದಲ್ಲಿ ವಿಶೇಷ ಆತಿಥ್ಯ ಸಿಗುತ್ತದೆ.

ಪ್ರತಿವರ್ಷ ಜೇಷ್ಠ ಮಾಸದ ದ್ವಾದಶಿಯಂದು ಅಂಕಲಿಯ ಶಿಥೋಳೆ ಸರ್ಕಾರದ ಅರಮನೆ ಆವರಣದ ಅಂಬಾಬಾಯಿ ಮಂದಿರದಲ್ಲಿ ಕುದುರೆಗಳನ್ನು ಪೂಜಿಸಿ ಬೀಳ್ಕೊಡಲಾಗುತ್ತದೆ. ಅಂಕಲಿಯಿಂದ ಆಳಂದಿಗೆ ಹೊರಡುವ ಈ ಎರಡೂ ಕುದುರೆಗಳು ಪ್ರತಿ ದಿನ ಸುಮಾರು 30 ಕಿ.ಮೀ ನಡೆದುಕೊಂಡು 8-10 ದಿನಗಳಲ್ಲಿ ಆಳಂದಿ ತಲುಪುತ್ತವೆ. ಆಳಂದಿಯಲ್ಲಿ ನಾಲ್ಕೈದು ದಿನ ವಿಶ್ರಾಂತಿ ಪಡೆದು, ಅಲ್ಲಿಂದ 315 ಕಿ.ಮೀ ದೂರದ ಪಂಢರಪುರದವರೆಗೆ ನಡೆದುಕೊಂಡೇ ತಲುಪುತ್ತವೆ.



ಈ ಬಾರಿ ದಿಂಡಿಯಲ್ಲಿ ಜೂನ್ 27ರಂದು ಹೊರಟಿರುವ ಕುದುರೆಗಳು ಜುಲೈ 17ರಂದು ಪಂಢರಪುರವನ್ನು ತಲುಪುತ್ತವೆ. ಆಳಂದಿಯಿಂದ ಸಂತ-ಜ್ಞಾನೇಶ್ವರ ಮಹಾರಾಜರ ಪಲ್ಲಕ್ಕಿಯು ಮಾವುಲಿಯ ರಥದ ಮುಂದೆ ಈ ಕುದುರೆಗಳನ್ನು ಭಕ್ತರು ಪೂಜಿಸುವುದು ವಾಡಿಕೆ. ಪಂಢರಪುರದಲ್ಲಿ ಆಷಾಢ ಏಕಾದಶಿ ಜಾತ್ರಾ ಮಹೋತ್ಸವದಲ್ಲಿ ಆರತಿ ಬೆಳಗಿ, ಮಹಾ ನೈವೇದ್ಯ ಅರ್ಪಿಸುತ್ತಾರೆ. ಹೀಗಾಗಿ ಕರ್ನಾಟಕದ ಹೀರಾ-ಮೋತಿ ಕುದುರೆಗಳು ಲಕ್ಷಾಂತರ ಭಕ್ತರ ಆರಾಧ್ಯ ದೈವವಾಗಿವೆ.

ಕರ್ನಾಟಕ-ಮಹಾರಾಷ್ಟ್ರದ ಸಾಂಸ್ಕೃತಿಕ ಕೊಂಡಿಯಾಗಿರುವ ಈ ಸಂಪ್ರದಾಯ 2 ಶತಮಾನಗಳಿಂದ ನಡೆದುಕೊಂಡು ಬಂದಿದೆ. ಅಂಕಲಿಯ ಶಿತೋಳೆ ಮನೆತನದವರು ತಲೆತಲಾಂತರದಿಂದ 'ಮಾನ'ದ ಕುದುರೆಗಳನ್ನು ಸಾಕುತ್ತಿದ್ದಾರೆ. 1832ರಿಂದ ಆರಂಭಗೊಂಡ ಈ ಪರಂಪರೆಗೆ 192 ವಸಂತ ತುಂಬಿವೆ. ಏಳೆಂಟು ತಲೆಮಾರಿನಿಂದ ಅಂಕಲಿಯ ಮಾನದ ಕುದುರೆಗಳು ಆಷಾಢ ಏಕಾದಶಿಯ ದಿಂಡಿಯಲ್ಲಿ ಮಾತ್ರ ಭಾಗವಹಿಸುತ್ತವೆ.

ಇದೀಗ ಅಂಕಲಿಯ ಶಿತೋಳೆ ಕುಟುಂಬದ ಶ್ರೀಮಂತ ಉರ್ಜಿತಸಿಂಹ ರಾಜೆ ಇದರ ನೇತೃತ್ವ ವಹಿಸುತ್ತಿದ್ದು, ಹೀರಾ ಕುದುರೆಯ ಮೇಲೆ ಸಂತ ಜ್ಞಾನೇಶ್ವರ ಮಹಾರಾಜರ ಪಾದುಕೆ ಇಟ್ಟು ಮೆರವಣಿಗೆ ಮಾಡಲಾಗುತ್ತದೆ. ಹೀರಾ ಕುದುರೆಗೆ ಸಾಥಿಯಾಗಿ ಮೋತಿ ಕುದುರೆಯನ್ನೂ ತೆಗೆದುಕೊಂಡು ಹೋಗಲಾಗುತ್ತದೆ. ಈ ಎರಡೂ ಕುದುರೆಗಳನ್ನು ತುಕಾರಂ ಕೋಳಿ, ಅಕ್ಷಯ ಪರೀಟ ಅವರು ಸಲಹುತ್ತಾರೆ. ದಿಂಡಿ ವೇಳೆ ಎಲ್ಲೆಲ್ಲಿ ತಂಗುತ್ತವೆಯೋ ಅಲ್ಲೆಲ್ಲ ಭಕ್ತರು ಪೂಜೆ ಸಲ್ಲಿಸುತ್ತಾರೆ. ಕುದುರೆಗಳನ್ನು ಒಂದು ಜಾಗದಲ್ಲಿ ವರ್ತುಲಾಕಾರ ಓಡಿಸುವುದು (ರಿಂಗಣ) ವಿಶೇಷ ಆಚರಣೆ.

ಕ್ಷುಲ್ಲಕ ಕಾರಣಕ್ಕೆ ವ್ಯಕ್ತಿ ಕತ್ತು ಕೊಯ್ದು ಬರ್ಬರ ಹತ್ಯೆ

• **ಶಿರಸಿ:** ಕ್ಷುಲ್ಲಕ ಕಾರಣಕ್ಕಾಗಿ ವ್ಯಕ್ತಿಯೊಬ್ಬನ ಕತ್ತು ಕೊಯ್ದು ಬರ್ಬರವಾಗಿ ಕೊಲೆ ಮಾಡಿರುವ ಘಟನೆ ತಾಲೂಕಿನ ಇಟಗುಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಶಿಂಗನಮನೆಯಲ್ಲಿ ನಡೆದಿದೆ.

ಶಿಂಗನಮನೆಯ ನಿವಾಸಿ ಪರಮೇಶ್ವರ ಬಾಬು ನಾಯ್ಕ (ಪರಮೇಶಿ) (35) ಕೊಲೆಯಾದ ದುರ್ದೈವಿ. ಕೊಲೆ ಮಾಡಿದ ಶಂಕೆಯ ಮೇಲೆ ಅದೇ ಗ್ರಾಮದ ಪರಮೇಶ್ವರ ತಿಮ್ಮ ನಾಯ್ಕ (27) ಎಂಬಾತನನ್ನು ಪೊಲೀಸರು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ. ಅಕ್ರಮ ಸಂಬಂಧದ ಶಂಕೆ ವ್ಯಕ್ತವಾಗಿದ್ದರೂ ಸಹ, ಹತ್ಯೆಗೆ ನಿಖರ ಕಾರಣ ಪೊಲೀಸ್ ತನಿಖೆಯಿಂದ ತಿಳಿಯಬೇಕಿದೆ.


ಮೃತ ಪರಮೇಶಿ ಅವರು ಜೂನ್ 25ರ ಸಂಜೆ ಮೊಬೈಲ್ ಕರೆ ಬಂದ ಹಿನ್ನೆಲೆಯಲ್ಲಿ ಮನೆಯ ಸಮೀಪದ ಅರಣ್ಯ ಪ್ರದೇಶದ ಕಡೆಗೆ ತೆರಳಿದ್ದರು. ರಾತ್ರಿಯಾದರೂ ಅವರು ವಾಪಸ್ ಬರದೇ ಇದ್ದಾಗ ಆತಂಕಗೊಂಡ ಗ್ರಾಮಸ್ಥರು ಹುಡುಕಾಟ ನಡೆಸಿ, 112 ತುರ್ತು ಸಹಾಯವಾಣಿಗೆ ಮಾಹಿತಿ ನೀಡಿದ್ದಾರೆ. ತಕ್ಷಣವೇ ಶಿರಸಿ ಗ್ರಾಮೀಣ ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ ಹುಡುಕಾಟ ನಡೆಸಿದ್ದು, ಜೂನ್ 26ರ ಶುಕ್ರವಾರ ಬೆಳಿಗ್ಗೆ ಅರಣ್ಯ ಪ್ರದೇಶದಲ್ಲಿ ಪರಮೇಶಿ ಅವರ ಶವ ರಕ್ತದ ಮಡುವಿನಲ್ಲಿ ಪತ್ತೆಯಾಗಿದೆ. ಪಕ್ಕದ ಮನೆಯ ಸಹೋದರನೂ ಆಗಿರುವ ಪರಮೇಶಿಯನ್ನು ಅರಣ್ಯ ಪ್ರದೇಶಕ್ಕೆ ಕರೆದೊಯ್ದು ಕತ್ತಿಯಿಂದ ಕತ್ತು ಕೊಯ್ದು ಹತ್ಯೆ ಮಾಡಿದ್ದ ಆರೋಪಿ, ತದನಂತರ ಏನೂ ತಿಳಿಯದವನಂತೆ ಮನೆಯಲ್ಲಿ ಬಂದು ಕುಳಿತಿದ್ದ. ಗ್ರಾಮಸ್ಥರು ಹುಡುಕಾಡುವಾಗ ಕೊಲೆ ನಡೆದ ಜಾಗಕ್ಕೆ ಯಾರನ್ನೂ ಹೋಗಲು ಬಿಡದೆ ದಿಕ್ಕು ತಪ್ಪಿಸಲು ಯತ್ನಿಸಿದ್ದ. ಇದರಿಂದ ಅನುಮಾನಗೊಂಡ ಗ್ರಾಮಸ್ಥರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಆಗಮಿಸಿದ ಕಾರವಾರದ ಶ್ವಾನದಳವು ನೇರವಾಗಿ ಆರೋಪಿಯ ಮನೆಗೆ ನುಗ್ಗಿ, ಕೊಲೆಗೆ ಬಳಸಿ ಬಚ್ಚಿಟ್ಟಿದ್ದ ಕತ್ತಿಯ ಬಳಿ ಹೋಗಿ ನಿಂತಿದೆ. ಶ್ವಾನ ನೀಡಿದ ನಿಖರ ಸುಳಿವಿನ ಆಧಾರದ ಮೇಲೆ ಪೊಲೀಸರು ಆರೋಪಿಯನ್ನು ತಕ್ಷಣವೇ ವಶಕ್ಕೆ ಪಡೆದಿದ್ದಾರೆ.

ಘಟನಾ ಸ್ಥಳಕ್ಕೆ ಬೆರಳಚ್ಚು ತಜ್ಞರ ತಂಡ ಹಾಗೂ ಸುಶೋ ತಂಡ ಭೇಟಿ ನೀಡಿ ಸಾಕ್ಷ್ಯ ಕಲೆ ಹಾಕಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್, ಡಿಎಸ್‌ಪಿ ಗೀತಾ ಪಾಟೀಲ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಗ್ರಾಮೀಣ ಪಿಐ ರಮೇಶ ಹೂಗಾರ ಹಾಗೂ ಪಿಎಸ್‌ಐ ಸಂತೋಷಕುಮಾರ ಎಂ.ನೇತೃತ್ವದ ತಂಡವು ಕೆಲವೇ ಗಂಟೆಗಳಲ್ಲಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದು, ಶಿರಸಿ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಮಂತ್ರಿ ಸ್ಥಾನ ಬೇಡ ಎನ್ನಲು ನಾನು ಸೋನಿಯಾ ಅಲ್ಲ: ಎಚ್.ಎಂ.ರೇವಣ್ಣ

• **ರಾಯಚೂರು:** ಮಂತ್ರಿ ಸ್ಥಾನ ಬೇಡ ಎನ್ನುವುದಕ್ಕೆ ನಾನು ಸೋನಿಯಾ ಗಾಂಧಿಯಲ್ಲ. ಮಂತ್ರಿ ಆಗಬೇಕೆನ್ನುವವರಲ್ಲಿ ನಾನೂ ಒಬ್ಬ. ನನ್ನ ಆಶೆಯನ್ನು ಈಗಾಗಲೇ ಒಂದು ಬಾರಿ ವ್ಯಕ್ತಪಡಿಸಿರುವೆ. ಏನಾಗುತ್ತದೆಯೋ ಗೊತ್ತಿಲ್ಲ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ಹೇಳಿದರು.



ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ಸಚಿವನಾಗಬೇಕೆಂದರೆ ಶಾಸಕನಾಗಿರಬೇಕು. ಇಲ್ಲದಿದ್ದರೆ ವಿಧಾನಪರಿಷತ್ ಸದಸ್ಯನಾಗಿರಬೇಕು. ಆದರೆ, ನಾನು ಶಾಸಕನೂ ಅಲ್ಲ, ವಿ.ಪ ಸದಸ್ಯನೂ ಅಲ್ಲ. ಎರಡೂ ಇಲ್ಲದಿದ್ದರೆ ಎನ್.ಎಸ್ .ಬೋಸರಾಜು ರೀತಿಯಲ್ಲಿ ಸಚಿವರಾದ ನಂತರ ಆರು ತಿಂಗಳ ಒಳಗಾಗಿ ಎರಡರಲ್ಲಿ ಒಂದರಲ್ಲಿಯಾದರೂ ಸದಸ್ಯನಾಗಬೇಕು. ಇವೆರಡೂ ಇಲ್ಲದಿರುವಾಗ ಎಲ್ಲಿಂದ ತರಲಿ ಸಚಿವ ಸ್ಥಾನವನ್ನು ಎಂದು ತಮ್ಮ ಅಸಾಹಯಕತೆ ವ್ಯಕ್ತಪಡಿಸಿದರು. ನನಗೆ 76 ವರ್ಷಗಳಾದರೂ ಪಕ್ಷದ ನಿಷ್ಠಾವಂತನಾಗಿದ್ದೇನೆ ಹೊರತು ಕಾಂಗ್ರೆಸ್ ಬಿಟ್ಟು ಬೇರೆ ಪಕ್ಷಕ್ಕೆ ಹೋಗಿಲ್ಲ. ಈಗಾಗಲೇ ಮಂತ್ರಿಯಾಗಿ ಕೆಲಸ ಮಾಡಿರುವೆ. ಇಗ ನನಗೆ ಮಂತ್ರಿ ಸ್ಥಾನವನ್ನು ನೀಡುವುದು ಬಿಡುವುದು ಪಕ್ಷಕ್ಕೆ ಬಿಟ್ಟ ವಿಷಯ ಎಂದರು.

ಮೂವತ್ತೆರಡರ ಹರೆಯದಲ್ಲಿ ಅಡಿಗಾಸ್ ಯಾತ್ರಾ ಸಂಸ್ಥೆ

ಪ್ರವಾಸೋದ್ಯಮದಲ್ಲಿ ವಿಶ್ವಾಸಾರ್ಹ ಹೆಸರು

• **ಹುಬ್ಬಳ್ಳಿ:** ಸತತ ಪಯತ್ನ, ಕಠಿಣ ಪರಿಶ್ರಮ ಹಾಗೂ ಹೊಸತನ್ನು ಅಳವಡಿಸಿಕೊಂಡು ಅದನ್ನು ಜಾರಿಗೊಳಿಸುವುದು ಪ್ರತಿ ಉದ್ಯಮದ ಯಶಸ್ಸಿನ ಕೀಲಿ ಕೈ. ಅದರಲ್ಲೂ, ಮಾಹಿತಿ ತಂತ್ರಜ್ಞಾನದ ಈ ಯುಗದಲ್ಲಿ, ದಿನಕ್ಕೊಂದು ಹೊಸ ಆವಿಷ್ಕಾರದ ಪರ್ವಕಾಲದಲ್ಲಿ, ನಿರಂತರವಾಗಿ, ವಿಭಿನ್ನವಾಗಿ ಯೋಜನೆಗಳನ್ನು ಮೈಗೂ ಡಿಸಿಕೊಂಡು ಮುಂಚೂಣಿಯಲ್ಲಿ ನಿಲ್ಲಬಲ್ಲ ಸಂಸ್ಥೆಗಳಲ್ಲೊಂದು ಶ್ರೀಯುತ ಕೆ. ನಾಗರಾಜ್ ಅಡಿಗರ ''ಕನಸಿನ ಕೂಸು '' ಅಡಿಗಾಸ್ ಯಾತ್ರಾ / ಅಡಿಗಾಸ್ ವರ್ಲ್ಡ್ ಸಂಸ್ಥೆ. ಸಂಸ್ಥೆಗೀಗ 32 ರ ಹರೆಯ. ಕರಾವಳಿ ಕರ್ನಾಟಕದ ಉಡುಪಿ ಜಿಲ್ಲೆಯ, ಕುಂದಾಪುರ ತಾಲ್ಲೂಕಿನ ಕಟ್ಕೆರೆ ಅಡಿಗರ ಹುಟ್ಟೂರು.1994 ರಲ್ಲಿ ಟ್ರಾವೆಲ್ಸ್ ಉದ್ಯಮವನ್ನು ಆರಂಭಿಸಿ ಮೊತ್ತ ಮೊದಲು ನೇಪಾಳ ಪ್ರವಾಸಕ್ಕೆ ಉತ್ತರ ಕರ್ನಾಟಕ ದಿಂದ 22 ಜನರನ್ನು ಕರೆದೊಯ್ದಿದ್ದು ಮೊದಲ ನೇಪಾಳ ಪ್ರವಾಸ ಯಶಸ್ವಿಯಾಗಿತ್ತು. ಅಲ್ಲಿಂದ ಅಡಿಗರು ನಿರಂತರವಾಗಿ ಹೊಸ ಹೊಸ ಪ್ರಯತ್ನಗಳನ್ನು, ಸ್ಥಳಗಳನ್ನು ಪ್ರವಾಸೋದ್ಯಮ ದಲ್ಲಿ ಪರಿಚಯಿಸಿ ಅದನ್ನು ಯಶಸ್ವಿಗೊಳಿಸುವಲ್ಲಿ ಅವರ ಪರಿ ಶ್ರಮ, ಸತತ ಅಧ್ಯಯನ, ವಿಶ್ವಾಸಾರ್ಹತೆ ಸರಿಸಾಟಿಯಿಲ್ಲದ್ದು.



ಅಡಿಗಾಸ್ ಸಂಸ್ಥೆಯು ಪ್ರವಾಸಿಗರ / ಯಾತ್ರಿಕರ ಅಭಿರುಚಿ ಹಾಗೂ ಬೇಡಿಕೆಗೆ ಅನುಗುಣವಾಗಿ 500 ಕ್ಕೂ ಹೆಚ್ಚು ಪ್ರವಾಸಗಳನ್ನು ದೇಶಿಯ, ಅಂತರ ರಾಷ್ಟ್ರೀಯ, ಗ್ರಾಹಕಾನುಕೂಲಿತ ಹಾಗೂ ಮಧುಚಂದ್ರ ಪ್ರವಾಸಗಳು ಯೋಜಿಸಿದೆ.ಅಂತರ ರಾಷ್ಟ್ರೀಯ ಪ್ರವಾಸಗಳಲ್ಲಿ ಯುರೋಪ್, ಯುಕೆ, ಆಸ್ಟ್ರೇಲಿಯಾ, ದುಬೈ, ಇಂಡೋನೇಷಿಯಾ, ಸಿಂಗಾಪುರ್, ಮಲೇಷಿಯಾ, ಥೈಲ್ಯಾಂಡ್, ಬಾಲಿ, ವಿಯಟ್ನಾಮ್, ಕಾಂಬೋಡಿಯಾ, ಹಾಂಕಾಂಗ್ -ಮಕಾವು, ಸ್ಕಾಂಡೀನೇವಿಯನ್ ಕಂಟ್ರಿಸ್ ಜಪಾನ್, ಶ್ರೀಲಂಕಾ, ನೇಪಾಳ ಮತ್ತು ಭೂತಾನ್ ಪ್ರವಾಸಗಳು ಅಪಾರ ಜನ ಮನ್ನಣೆಯನ್ನು ಗಳಿಸಿವೆ. ಬಹುತೇಕ ಪ್ರವಾಸಿಗರಿಗೆ ವಿದೇಶಿ ಪ್ರವಾಸಕ್ಕೆ ಅಡಿಗಾಸ್ ಮೊದಲ ಆಯ್ಕೆ ಯಾಗಿರುತ್ತದೆ. ನೂತನ ಪ್ರಯೋಗಗಳಿಗೆ ಸದಾ ಮುಕ್ತವಾಗಿರುವ ಅಡಿಗಾಸ್ ಈ ಬಾರಿ Domestic Fixed Departures ಎನ್ನುವ ಯೋಜನೆಯಡಿ ಭಾರತದಾದ್ಯಂತ ಪ್ರಸಿದ್ಧ ಪ್ರವಾಸಿ ತಾಣ ಗಳಿಗೆ ಪ್ರತಿಷ್ಠಿತ ಪಂಚತಾರ ಹೋಟೆಲ್ ಹಾಗೂ ರೆಸಾರ್ಟ್ ಗಳಲ್ಲಿ ವಸತಿ, ಐಷಾರಾಮಿ ವಾಹನಗಳಲ್ಲಿ ಪ್ರಯಾಣ, ನಿಖರ ಮಾಹಿತಿಯನ್ನೊಳಗೊಂಡ ಕಾರ್ಯಕ್ರಮ ಪಟ್ಟಿ, ಮುಂಚಿತವಾಗಿ ಕಾದಿರಿಸಿದ ಸುಸಜ್ಜಿತ ಹೋಟೆಲ್ ಗಳಲ್ಲಿ ಉಟೋಪಹಾರ, ಸ್ಥಳೀಯ ಗೈಡ್ ಗಳ ಸೌಲಭ್ಯವಿದ್ದು, ನಿಮ್ಮ ಪ್ರವಾಸವು ಸುಖಕರವಾಗಿರುತ್ತದೆ.ದೇಶಿಯ ಪ್ರವಾಸಗಳಲ್ಲಿ ಅಡಿಗಾಸ್ ಮೊದಲ ಆಯ್ಕೆ ಯಾಗಿರುತ್ತದೆ.

CUTOMISED TOURS

ನಿಮ್ಮ ಆಯ್ಕೆಯ ದೇಶಿಯ ಅಥವಾ ವಿದೇಶಿ ಪ್ರವಾಸಿ ತಾಣಕ್ಕೆ, ನೀವು ಇಚ್ಚೆಸಿದ ದಿನಾಂಕದಲ್ಲಿ, ನಿಮ್ಮ ಆದಾಯಕ್ಕನುಗುಣವಾಗಿ ಪಂಚಾತಾರಾ ಸೌಲಭ್ಯಗಳೊಂದಿಗೆ , ವ್ಯವಸ್ಥೆ ಮಾಡುವ ಸಾಮರ್ಥ್ಯ ಅಡಿಗಾಸ್ ಸಂಸ್ಥೆ ಹೊಂದಿದೆ.. ಹೀಗೆ 500 ಕ್ಕೂ ಮೀರಿದ ವಿಭಿನ್ನ, ವೈವಿಧ್ಯಮಯ ಪ್ರವಾಸಗಳ ಆಯ್ಕೆಯಿಂದ ಅಡಿಗಾಸ್ ಇಂದು ಕರ್ನಾಟಕದ ಮನೆಮಾತಾಗಿದೆ.

ವಿಶ್ವಾಸ ಮತ್ತು ನಂಬಿಕೆ ಎಂಬ ಎರಡು ಆಧಾರ ಸ್ಥಂಭಗಳ ಮೇಲೆ ನಿಂತಿರುವ ಪ್ರವಾಸೋಧ್ಯಮ ಕ್ಷೇತ್ರದಲ್ಲಿ 30 ವರ್ಷಗಳಿಂದ ತೊಡಗಿಸಿಕೊಂಡಿರುವ ಅಡಿಗಾಸ್ ಸಂಸ್ಥೆ ಅಪಾರ ಜನ ಮನ್ನಣೆಯನ್ನು ಗಳಿಸಿದೆ. ಭಾರತ ಸರಕಾರದ ಪ್ರವಾಸೋಧ್ಯಮ ಸಚಿವಾಲಯದ '' ಅನುಭವಿ ಸೇವಾ ಪೂರೈಕೆದಾರ '', ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ, ಸತತ 4 ವರ್ಷಗಳಿಂದ ಅತ್ಯುತ್ತಮ ಪ್ರವಾಸಿ ಸಂಸ್ಥೆ ಎಂಬ ಹೆಗ್ಗಳಿಕೆ ಮತ್ತು ಪ್ರಶಸ್ತಿ, ಇಕನಾಮಿಕ್ಸ್ ಟೈಮ್ಸ್ ನಿಂದ ಉತ್ತಮ ಪ್ರವಾಸಿ ಸಂಸ್ಥೆ ಎಂಬ ಪ್ರಶಸ್ತಿ ಹೀಗೆ ಹತ್ತು ಹಲವಾರು ಪ್ರಶಸ್ತಿಗಳು ಸಂಸ್ಥೆಯ ಯಶಸ್ಸಿಗೆ ಹಿಡಿದ ಕೈಗನ್ನಡಿ.ಆಸಕ್ತರು ಹೆಚ್ಚಿನ ಮಾಹಿತಿಗೆ ಅಡಿಗಾಸ್ ಯಾತ್ರಾವನ್ನು ಸಂಪರ್ಕಿಸಿ: 080 26616678/ 7022259008/ 9449478944. website : www.adigasyatra.com

ಪೆಟ್ರೋಲ್-ಡೀಸೆಲ್ ಬೆಲೆ ಇಳಿಕೆಗೆ ಸಮಯ ಬೇಕು: ಜೋಶಿ

• **ಹುಬ್ಬಳ್ಳಿ:** ಪೆಟ್ರೋಲ್-ಡೀಸೆಲ್ ಬೆಲೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಡಿಮೆಯಾಗಿದೆ. ದೇಶದಲ್ಲಿ ಕಡಿಮೆ ಮಾಡುವ ಬಗ್ಗೆ ಸಂಬಂಧಿಸಿದ ಇಲಾಖೆಯವರು ನಿರ್ಧರಿಸುತ್ತಾರೆ. ಇದು ಏಕಾಏಕಿ ತೈಲ ದರ ಕಡಿಮೆ ಮಾಡಲು ಸಾಧ್ಯವಿಲ್ಲ, ಇದು ಸುಧೀರ್ಘ ಪ್ರಕ್ರಿಯೆ ಆಗಿದೆ. ಬೆಲೆ ಕಡಿಮೆಯಾಗಲು ಸ್ವಲ್ಪ ಸಮಯ ಆಗಲಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿದರು.



ನಗರದಲ್ಲಿ ಮಾಧ್ಯದವರೊಂದಿಗೆ ಮಾತನಾಡಿದ ಅವರು, ಶಾಸಕ ಸಂತೋಷ ಲಾಡ್ ಅವರಿಗೆ ಬಿಜೆಪಿ ನಾಯಕರನ್ನು ಟೀಕಿಸುವುದೇ ಕೆಲಸ. ಪ್ರಧಾನಿ ಮೋದಿ ಹಾಗೂ ನನ್ನನ್ನು ಟೀಕಿಸಿದರೂ ಅವರಿಗೆ ಸಚಿವ ಸ್ಥಾನ ಸಿಕ್ಕಿಲ್ಲ. ಅಭಿವೃದ್ಧಿ ವಿಚಾರದ ಬಗ್ಗೆ ಮಾತನಾಡುವ ಅವರು ಯಾವ ಸರ್ಕಾರ ಎಷ್ಟು ಅಭಿವೃದ್ಧಿ ಮಾಡಿದೆ ಎಂಬುವುದು ಇಡೀ ದೇಶಕ್ಕೆ ಗೊತ್ತಿದೆ. ದೇಶದಲ್ಲಿ ಅಭಿವೃದ್ಧಿ ಮಾಡಿದ್ದರಿಂದ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಕಾಂಗ್ರೆಸ್ ನಾಯಕರು ಹತಾಶೆ ಮನೋಭಾವದಿಂದ ಹೀಗೆ ಮಾತನಾಡುತ್ತಿದ್ದಾರೆ. ಭ್ರಷ್ಟಾಚಾರ ಮಾಡಿದವರು, ಪ್ರಜಾಪ್ರಭುತ್ವ ಕತ್ತು ಹಿಸುಕಿದವರು ದೇಶದ ಬಗ್ಗೆ ಮಾತನಾಡುವುದು ಹಾಸ್ಯಾಸ್ಪದ ಎಂದರು.

ಬಿಆರ್‌ಟಿಎಸ್ ಸಾರಿಗೆ ವ್ಯವಸ್ಥೆ ಸರಿಯಾಗಿ ನಿರ್ವಹಣೆ ಮಾಡಿದರೆ ಅದು ಉತ್ತಮ ಯೋಜನೆಯಾಗಿದೆ. ಟ್ರಾಫಿಕ್ ಸಮಸ್ಯೆ ಪರಿಹಾರ ಕಂಡುಕೊಳ್ಳಲು ರಾಜ್ಯ ಸರ್ಕಾರದ ನಿರ್ಧಾರ ಕೈಗೊಳ್ಳಬೇಕು. ಜನಪ್ರತಿನಿಧಿಗಳ ಸಭೆ ಕರೆದರೆ ಅಲ್ಲಿ ಈ ಯೋಜನೆ ಬಗ್ಗೆ ಸಲಹೆ ನೀಡಲಾಗುವುದು ಎಂದು ಹೇಳಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ನಾಳೆ ಪ್ರತಿಭಾ ಪುರಸ್ಕಾರ

ಭಟ್ಕಳ : ತಾಲೂಕು ದೇವಾಡಿಗ ಸಂಘ ಉತ್ತರ ಕನ್ನಡ ಜಿಲ್ಲಾ ದೇವಾಡಿಗ ಸಮಾಜ ನೌಕರರ ಸಂಘ ಮುರ್ಡೇಶ್ವರ ಇವರ ಸಂಯುಕ್ತ ಆಶ್ರಯದಲ್ಲಿ ಜೂ. 28ರಂದು ಮಾವಿನಕಟ್ಟೆಯ ಮಂಜುನಾಥ ಕನ್ವೆನ್ಷನ್ ಹಾಲ್ ನಲ್ಲಿ ಮಧ್ಯಾಹ್ನ 3 ಗಂಟೆಗೆ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಕಾರ್ಯಕ್ರಮ ಏರ್ಪಡಿಸಲಾಗಿದೆ.ಕಾರ್ಯಕ್ರಮದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಸನ್ಮಾನಿಸಿ ಎಸ್ಸೆಸ್ಸೆಲ್ಸಿ, ಪಿಯುಸಿ ಹಾಗೂ ಪದವಿ ಸೇರಿದಂತೆ ವಿವಿಧ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು. ಕಾರ್ಯಕ್ರಮದಲ್ಲಿ ಸಮಾಜದ ಮುಖಂಡರು, ಗಣ್ಯರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಆಯೋಜಕರು ಮನವಿ ಮಾಡಿದ್ದಾರೆ. ಅರ್ಹ ವಿದ್ಯಾರ್ಥಿಗಳು ಹಾಗೂ ಸಾಧಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು ಎಂದು ತಿಳಿಸಲಾಗಿದೆ.

ಶಾಲೆಯ ಅಭಿವೃದ್ಧಿಗೆ ದೇಣಿಗೆ

ಭಟ್ಕಳ: ತಾಲೂಕಿನ ಮುಂಡಳ್ಳಿಯ ನಂಬರ್ 2 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ದಿ. ಲಕ್ಷ್ಮೀ ಹೊನ್ನಪ್ಪ ನಾಯ್ಕ ಕೇಶ್ವಿಮನೆ ನೀರಗದ್ದೆ ಇವರ ಸ್ಮರಣಾರ್ಥ ಇವರ ಕುಟುಂಬದವರು ಶಾಲೆಯ ಅಭಿವೃದ್ಧಿಗೆ 10 ಲಕ್ಷ ರೂಪಾಯಿ ದೇಣಿಗೆ ನೀಡಿದ್ದಾರೆ.ಈಗಾಗಲೇ ಶಾಲೆಯ ಮೇಲ್ಛಾವಣಿಗೆ ಸುಮಾರು 4 ಲಕ್ಷ ರೂಪಾಯಿ ವೆಚ್ಚದಲ್ಲಿ ಅತ್ಯುತ್ತಮ ಗುಣಮಟ್ಟದ ಶೀಟ್ ಅಳವಡಿಸಿಕೊಟ್ಟಿದ್ದಾರೆ. ಅದರಂತೆ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಹೈಟೆಕ್ ಶೌಚಾಲಯ ಮತ್ತು ನೂತನ ಅಡುಗೆ ಕೋಣೆ ನಿರ್ಮಿಸಿಕೊಡಲು ಮುಂದಾಗಿದ್ದಾರೆ. ಶಾಲೆಯ ಅಭಿವೃದ್ಧಿಗೆ ಇವರು ಉತ್ತಮ ಕೊಡುಗೆ ನೀಡಿದ್ದು, ಎಲ್ಲರಿಗೂ ಮಾದರಿ ಆಗಿದೆ. ಶಾಲೆಯ ಅಭಿವೃದ್ಧಿಗೆ ಉತ್ತಮ ರೀತಿಯಲ್ಲಿ ಕೊಡುಗೆ ನೀಡಿದ್ದಕ್ಕಾಗಿ ಇವರಿಗೆ ಶಾಲೆಯ ಎಸ್ಡಿಎಂಸಿ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಶಾಲೆಯ ಮುಖ್ಯಶಿಕ್ಷರು, ಶಿಕ್ಷಕರ ವೃಂದ ಹಾಗೂ ವಿದ್ಯಾರ್ಥಿ ಮತ್ತು ಪಾಲಕರು ಅಭಿನಂದನೆ ಸಲ್ಲಿಸಿದ್ದರು.

ತಿಮ್ಮಮ್ಮ ನಾಯ್ಕ ನಿಧನ



ಸಿದ್ದಾಪುರ: ತಾಲೂಕಿನ ಕವಂಚೂರು ಗ್ರಾ.ಪಂ ಹಾಗೂ ಸೇವಾ ಸಹಕಾರಿ ಸಂಘ ಹಿತ್ತಲಕೊಪ್ಪ ಇದರ ಮಾಜಿ ಅಧ್ಯಕ್ಷ ದಿ. ಗಣಪತಿ ನಾಯ್ಕ ಕವಂಚೂರು ಇವರ ಧರ್ಮಪತ್ನಿ ತಿಮ್ಮಮ್ಮ ಗಣಪತಿ ನಾಯ್ಕ (88) ಕವಂಚೂರು ಇವರು ನಿಧನರಾದರು. ಮೃತರಿಗೆ ನಾಲ್ಕು ಪುತ್ರರು, ನಾಲ್ಕು ಜನ ಪುತ್ರಿಯರು ಹಾಗೂ ಅಪಾರ ಬಂಧು-ಬಳಗವಿದೆ.

ಸುಬ್ಬಿ ನಾಯ್ಕ ನಿಧನ



ಮುಂಡಗೋಡ: ತಾಲೂಕಿನ ಬೆಡಸಗಾಂವ ಗ್ರಾಮದ ನಿವಾಸಿ ಸುಬ್ಬಿ ಬಂಗಾರ್ಯ ನಾಯ್ಕ(86) ಅನಾರೋಗ್ಯದಿಂದ ನಿಧನರಾದರು. ಇವರು 2005ರಿಂದ 2010ರವರೆಗೆಬೆಡಸಗಾಂವ ಸಹಕಾರಿ ಸಂಘದ ನಿರ್ದೇಶಕರಾಗಿ ಕಾರ್ಯನಿರ್ವಹಿಸಿ, ರೈತರ ಹಿತಾಸಕ್ತಿಗಾಗಿ ಶ್ರಮಿಸಿದ್ದರು. ಮೃತರಿಗೆ ಇಬ್ಬರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವಿದೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	62699	68399
ಬಿಳಿಗೋಟು	27309	34523
ಕೆಂಪುಗೋಟು	28699	33699
ಬೆಟ್ಟೆ	40099	47200
ರಾಶಿ	48909	52099
ಚಾಲಿ	44199	48215

ಯಲ್ಲಾಪುರ	ಕನಿಷ್ಠ	ಗರಿಷ್ಠ
ಆಪಿ	55299	55299
ರಾಶಿ	48699	53735
ಬೆಟ್ಟೆ	36719	46099
ಕೆಂಪುಗೋಟು	20600	35199
ಬಿಳಿಗೋಟು	21600	34109
ಚಾಲಿ	36009	47711
ಕೋಕಾ	16012	27699
ಕಾಳುಮೆಣಸು	62601	65200



ಗೋಕರ್ಣ: ಇಲ್ಲಿನ ಕೋಟಿತೀರ್ಥಕಟ್ಟೆಯ ಮಠಾಧ್ಯರಘೋತ್ತಮ ಮಠದಲ್ಲಿ ಮೈತ್ರೇಯಿ ಮಹಿಳಾ ಮಂಡಳಿ,ಸೇವಾ ಭಾರತಿ ಸಂಸ್ಥೆ ಪತಂಜಲಿ ಯೋಗ ಸಮಿತಿ, ಮೇಧಾದಕ್ಷಿಣಾಮೂರ್ತಿ ವೇಧಭವನ ಸಂಸ್ಕೃತ ಮಹಾವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ನಡೆದ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.

ಯೋಗದಿಂದ ರೋಗ ಮುಕ್ತ: ಸತೀಶ ಕುಮಾರ

ಭಟ್ಕಳ: ತಾಲೂಕಿನ ಅಳ್ವೇಕೋಡಿ ದುರ್ಗಾಪರಮೇಶ್ವರಿ ದೇವಸ್ಥಾನದ ಸನಿಹದಲ್ಲಿ 12ನೇ ವಿಶ್ವ ಯೋಗ ದಿನಾಚರಣೆಯ ಅಂಗವಾಗಿ ಪತಂಜಲಿ ಯೋಗ ಕೇಂದ್ರ, ದುರ್ಗಾಪರಮೇಶ್ವರಿ ದೇವಾಲಯದ ಆಡಳಿತ ಮಂಡಳಿ, ಆರೋಗ್ಯ ಭಾರತಿ ಟ್ರಸ್ಟ್, ಸರಕಾರಿ ಆಯುಷ್ ಇಲಾಖೆ ಇವುಗಳ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಭಾರತ್ ಸ್ವಾಭಿಮಾನ ಟ್ರಸ್ಟಿನ ಭಟ್ಕಳ ತಾಲೂಕು ಪ್ರಭಾರಿ ಸತೀಶ್ ಕುಮಾರ ನಾಯ್ಕ, ಯೋಗ ಭಾರತೀಯ ಸನಾತನ ಪರಂಪರೆಯಾಗಿದೆ. ಆಯಸ್ಸು ವೃದ್ಧಿಗೆ ಆರೋಗ್ಯ ಭಾಗ್ಯಕ್ಕೆ ಯೋಗವೇ ಪ್ರಧಾನ ಮೆಟ್ಟಲು ಎಂದರು. ದುರ್ಗಾಪರಮೇಶ್ವರಿ ದೇವಾಲಯದ ಆಡಳಿತ ಕಮಿಟಿ ಅಧ್ಯಕ್ಷ ತಿಮ್ಮಪ್ಪ ಹೊನ್ನಿಮನೆ ಮಾತನಾಡಿದರು. ಆಡಳಿತ ಮಂಡಳಿಯ ನಾರಾಯಣ ದೈಮನೆ, ಶಿರಾಲಿ ಗ್ರಾಪಂ ಮಾಜಿ ಅಧ್ಯಕ್ಷ ಭಾಸ್ಕರ ದೈಮನೆ, ತಾಲೂಕು ಪತಂಜಲಿ ಸಮಿತಿಯ ಪ್ರಭಾರಿಗಳಾದ ದುರ್ಗಾದಾಸ ನಾಯ್ಕ ಮಾತನಾಡಿದರು. ದುರ್ಗಾಪರಮೇಶ್ವರಿ ದೇವಸ್ಥಾನದ ಆಡಳಿತ ಮಂಡಳಿಯ ಧರ್ಮದರ್ಶಿಗಳಾದ ಹನುಮಂತ ನಾಯ್ಕ, ಅರವಿಂದ ಪೈ, ಗಜಾನನ ಪುರಾಣಿಕ, ಮಂಜುನಾಥ್ ಕೋಡಿಹಿತ್ತಲ, ಭಟ್ಕಳ ತಾಲೂಕು ಪತಂಜಲಿ ಮಹಿಳಾ ಪ್ರಭಾರಿ ಲತಾ ನಾಗರಾಜ್ ನಾಯ್ಕ , ಉದ್ಯಮಿ ಬಾಬು ಮೊಗೇರ ಉಪಸ್ಥಿತರಿದ್ದರು. ಆಯುಷ್ ಆರೋಗ್ಯಾಧಿಕಾರಿ ಮಾನಸ ಹಾಗೂ ಪ್ರದೀಪ ನಾಯಕ ಯೋಗ ತರಬೇತಿ ನೀಡಿದರು. ಪತಂಜಲಿ ಸಮಿತಿಯ ಪ್ರಧಾನ ಕಾರ್ಯದರ್ಶಿ ಶಿಕ್ಷಕ ನಾರಾಯಣ ನಾಯ್ಕ ಸ್ವಾಗತಿಸಿದರು. ಲತಾ ವಾಸು ನಾಯ್ಕ ಪ್ರಾರ್ಥಿಸಿದರು. ಶಿಕ್ಷಕಿ ರಾಜೀವಿ ಮೊಗೇರ ನಿರೂಪಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಮಂಜುನಾಥ ಕೋಡಿಹಿತ್ತಲ್ ಯೋಗದ ವಿಶೇಷ ಭಂಗಿಯನ್ನು ಪ್ರದರ್ಶಿಸಿದರು.



ಭಟ್ಕಳ: ಶಿರಸಿಯ ರವೀಂದ್ರ ನಾಯ್ಕ ನೇತೃತ್ವದ ಜಿಲ್ಲಾ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ನೇತೃತ್ವದಲ್ಲಿ ಪರಿಸರ ಜಾಗೃತಿ ಮತ್ತು ಸಂರಕ್ಷಣೆ ಉದ್ದೇಶದಿಂದ ಹಮ್ಮಿಕೊಂಡಿರುವ ದಶ ಲಕ್ಷ ಗಿಡ ನೆಡುವ ಅಭಿಯಾನವು ತಾಲ್ಲೂಕಿನ 13 ಗ್ರಾಮ ಪಂಚಾಯಿತ್ ವ್ಯಾಪ್ತಿಯ ಸುಮಾರು 57 ವಿವಿಧ ಹಳ್ಳಿಗಳಲ್ಲಿ ನಡೆಸಲಾಯಿತು.

ಬಂಡಿಕೇರಿ ಮಠ-ಕೋಟಿ ತೀರ್ಥ ರಸ್ತೆಯ ದುಸ್ಥಿತಿ

ಅರೆಬರೆ ಕಾಮಗಾರಿಯಿಂದ ಸಂಚಾರಕ್ಕೆ ತೊಡಕು

ಗೋಕರ್ಣ: ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳು ಸರಿಯಾದ ನಿರ್ವಹಣೆ ಇರದಿರುವುದು ಹಾಗೂ ಅರೆಬರೆ ಹೊಂಡ ಮುಚ್ಚಿದ್ದರಿಂದ ಮಳೆಗಾಲಕ್ಕೆ ಸಂಚಾರಕ್ಕೆ ತೊಡಕಾಗುತ್ತಿರುವುದು ಒಂದೆಡೆಯಾದರೆ ಗ್ರಾಮೀಣ ಭಾಗದ ಪಂಚಾಯತ ಸಂಬಂಧಿಸಿದ ರಸ್ತೆಗಳ ಸ್ಥಿತಿ ಅಯೋಮಯವಾಗಿದ್ದು, ಸರಿಪಡಿಸುವವರು ಯಾರು ಎಂದು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ.

ಇಲ್ಲಿನ ಓಂ ಕಡಲತೀರಕ್ಕೆ ಸಾಗುವ ಮುಖ್ಯ ರಸ್ತೆಯಿಂದ ಬಂಡಿಕೇರಿ ಮಠ ಹಾಗೂ ಕೋಟಿ ತೀರ್ಥಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಜವಳೆಕೆರೆ ಬಳಿ ಬೃಹತ್ ಹೊಂಡ ಬಿದ್ದು ಎರಡು ವರ್ಷಗಳಾಗಿದ್ದು, ಇದುವರೆಗೂ ಸರಿಪಡಿಸಿವ ಕಾರ್ಯ ಮಾಡಿಲ್ಲ. ಮಳೆ ಬಂದಾಗ ಕೆರೆಯಂತಾಗುವ ರಸ್ತೆಯಲ್ಲಿ ಶಾಲೆಗೆ ಹೋಗುವ ಪುಟ್ಟಮಕ್ಕಳು ತೆರಳುತ್ತಾರೆ. ಮಕ್ಕಳು ಮುಳುಗುವಷ್ಟು ನೀರು ಇಲ್ಲಿ ನಿಲ್ಲುತ್ತಿದ್ದು,ಅವಘಡ ಸಂಭವಿಸುವ ಆತಂಕವಿದೆ. ಬೈಕ್ ಸವಾರರು, ಪಾದಾಚಾರಿಗಳು ಈಗಾಗಲೇ ಹಲವರು ಬಿದ್ದು ಗಾಯಗೊಂಡಿದ್ದು, ಜೀವಾಪಾಯದಿಂದ ಪಾರಾಗಿದ್ದಾರೆ. ಈ ಬಗ್ಗೆ ಗ್ರಾಮ ಪಂಚಾಯತಕ್ಕೆ ಮನವಿ ನೀಡಿ ಜನರು ಸೋತಿದ್ದು, ರಸ್ತೆ ಸರಿಪಡಿಸುವವರು ಯಾರು ಎಂದು ಹುಡಕಬೇಕಿದೆ.

ಮಹಾಗಣಪತಿ ಮಂದಿರದಿಂದ ಗಾಯತ್ರಿ ಓಣಿ ಮೂಲಕ ಕುಡ್ಲೆ ಕಡಲತೀರಕ್ಕೆ ಸಾಗುವ ಮಾರ್ಗದ ಗೋಗರ್ಭದ ಹತ್ತಿರದ ರಸ್ತೆ ಸಂಪೂರ್ಣ ಹೊಂಡ ಬಿದ್ದಿದ್ದು, ಹೊಂಡದಲ್ಲಿ ರಸ್ತೆಯೋ ಅಥವಾ ರಸ್ತೆಯಲ್ಲಿ ಹೊಂಡ ಬಿದ್ದಿದೆಯೋ ಎಂಬ ಅನುಮಾನ ಬರುವಂತಾಗಿದ್ದು, ಇದೇ ಮಾರ್ಗ ಓಂ ಕಡಲತೀರಕ್ಕೆ ಸಾಗುವ ಮುಖ್ಯ ರಸ್ತೆಯನ್ನ ಸಂಪರ್ಕಿಸುತ್ತದೆ. ನಿತ್ಯ ಪ್ರವಾಸಿಗರು, ಸ್ಥಳೀಯರ ವಾಹನಗಳು ತೆರಳು, ಪಾದಚಾರಿಗಳು ತರಳುತ್ತಾರೆ. ಇಲ್ಲಿನ ರಸ್ತೆ ಅಭಿವೃದ್ಧಿ ಮರೀಚಿಕೆಯಾಗಿದೆ. ಇದರಂತೆ ಇಲ್ಲಿನ ಅನೇಕ ಕಡೆಯ ಚಿಕ್ಕ ಓಣಿ, ಒಳ ರಸ್ತೆಗಳು ಸಂಪೂರ್ಣ ಹಾಳಾಗಿದೆ. ಯಾವುದಾದರೂ ಅನುದಾದಲ್ಲಿ ಹಣ ಉಳಿದಿರುವುದನ್ನ ಖರ್ಚು ಮಾಡುವ ಸಲುವಾಗಿ ಆರ್ಥಿಕ ವರ್ಷದ ಕೊನೆಯ ತಿಂಗಳವಾದ ಮಾರ್ಚನಲ್ಲಿ ಯಾವುದಾರೂ ಮೂಲೆಯಲ್ಲಿನ ರಸ್ತೆಯ ಚರಂಡಿ ನಿರ್ಮಿಸುವುದು, ಮತ್ತಿತರ ಬೇಡದ ಕೆಲಸಗಳಿಗೆ ಹಣ ವ್ಯಯಿಸುತ್ತಾರೆ ಎಂದು ಸ್ಥಳೀಯರು ಹೇಳುತ್ತಿದ್ದು, ಈ ರೀತಿ ಸಾರ್ವಜನಿಕ ಹಣ ಪೋಲು ಮಾಡುವುದರ ಬದಲು ಅವಶ್ಯವಿದ್ದಲ್ಲಿ ಗುರುತಿಸಿ ರಸ್ತೆ, ಬಾವಿ ಮತ್ತಿತರ ಅಭಿವೃದ್ಧಿ ಕಾರ್ಯಕ್ಕೆ ಬಳಸವಂತಾಗ ಬೇಕು ಎಂದಿದ್ದಾರೆ.

ಬೇಡವಾದಲ್ಲಿ ರಸ್ತೆಗಳ ನಿರ್ಮಾಣ: ಮಂತ್ರಿಮಹೋದಯರು, ಜನಪ್ರತಿನಿಧಿಗಳ ಪ್ರಭಾವ ಬಳಸಿ ಇಲ್ಲಿನ ಹಲವೆಡೆ ರಸಾರ್ಟ, ಹೊಟೇಲ್‌ಗಳಿಗೆ ಅನುಕೂಲವಾಗುವ ಹಾಗೆ ಸಿಮೆಂಟ್ ರಸ್ತೆಗಳನ್ನ ಮಾಡಿಕೊಂಡಿದ್ದಾರೆ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ. ಇದಕ್ಕೆಪೂರಕ ಎಂಬಂತೆ ಹಲವು ಘಟನೆಗಳು ಬೆಳಕಿಗೆ ಬಂದಿದೆ. ಆದರೆ ನೂರಾರು ಜನರಿಗೆ ಅನುಕೂಲವಾಗುವ ಕಡೆ ಯಾಕೆ ರಸ್ತೆ ಸರಿಪಡಿಸುತ್ತಿಲ್ಲ ಎಂದು ಜನರು ಪ್ರಶ್ನಿಸುತ್ತಿದ್ದಾರೆ.



ಸವಾರರ ಪರದಾಟ

ಮಾದನಗೇರಿಯಿಂದ ಗೋಕರ್ಣಕ್ಕೆ ಬರುವ ರಾಜ್ಯ ಹೆದ್ದಾರಿ, ಗಂಗಾವಳಿ ಮೂಲಕ ಅಂಕೋಲಾಕ್ಕೆ ತೆರಳುವ ತದಡಿ- ಕೇಣಿ ರಾಜ್ಯ ಹೆದ್ದಾರಿಗಳ ಹಲವು ಕಡೆ ರಸ್ತೆ ಹೊಂಡ ಮುಚ್ಚದೆ ಬಿಡಲಾಗಿದೆ. ರಸ್ತೆಯ ಅಂಚಿನ ಗಿಡಗಳ ಮಾರ್ಗ ಮುಚ್ಚುವ ಹಂತಕ್ಕೆ ಬಂದಿದ್ದು, ಕೆಲವು ಕಡೆ ಚರಂಡಿ ಸ್ವಚ್ಛಗೊಳಿಸದೆ ಬಿಟ್ಟಿದ್ದು, ವಾಹನ ಸವಾರರಿಗೆ ಸಂಚಾರಕ್ಕೆ ಸಂಕಷ್ಟ ತಂದಿದೆ.

ಎಸ್ಐಆರ್ ಪ್ರಕ್ರಿಯೆ ಯಶಸ್ವಿಗೊಳಿಸಿ

ಭಟ್ಕಳ: ಭಟ್ಕಳ ಉಪವಿಭಾಗದಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್) ಪ್ರಕ್ರಿಯೆ ನಡೆಯಲಿದ್ದು, ಮತದಾರರು ಸಹಕಾರ ನೀಡಬೇಕು ಎಂದು ಸಹಾಯಕ ಆಯುಕ್ತ ಮಹೇಶ ಹೇಳಿದರು.



ಅವರು ತಮ್ಮ ಕಚೇರಿಯಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಬಗ್ಗೆ ಮಾಹಿತಿ ನೀಡಿದರು. ಭಟ್ಕಳ ಉಪವಿಭಾಗದಲ್ಲಿ 1 ಮತದಾರರ ನೋಂದಣಾಧಿಕಾರಿ, 2 ಸಹಾಯಕ ಮತದಾರರ ನೋಂದಣಾಽಕಾರಿಗಳು, 252 ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎ) ಹಾಗೂ 25 ಬಿಎಲ್ ಓಫ ಮೇಲ್ವಿಚಾರಕರನ್ನು ನೇಮಿಸಲಾಗಿದೆ. ಎಸ್ ಐ ಆರ್ ಪ್ರಕ್ರಿಯೆಗೆ ಜಿಲ್ಲಾ ಮಟ್ಟದಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ. ಈಗಾಗಲೇ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಭೂತ್ ಮಟ್ಟದ ಏಜೆಂಟರನ್ನು ನೇಮಕ ಮಾಡಿದೆ.

ವಿಐಪಿ ಮತ್ತು ಪಿಡಬ್ಲ್ಯುಡಿ ಮತದಾರರ ಮ್ಯಾಪಿಂಗ್ ಕೂಡ ಮಾಡಲಾಗಿದೆ. ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಆರಂಭವಾಗುವವರೆಗೆ ಮ್ಯಾಪಿಂಗ್ ಪ್ರಕ್ರಿಯೆ ಮುಂದುವರಿಯಲಿದೆ ಎಂದ ಅವರು ಈಗಾಗಲೇ ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ಹಾಗೂ ರಾಜಕೀಯ ಪಕ್ಷಗಳು ಭೂತ್ ಮಟ್ಟದ ಏಜೆಂಟರಿಗೆ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗ ಪ್ರಕ್ರಿಯೆ ಬಗ್ಗೆ ತರಬೇತಿಯನ್ನು ನೀಡಲಾಗಿದೆ. ಮತದಗಟ್ಟೆ ಅಧಿಕಾರಿಗಳು ಜೂನ್ 30 ರಿಂದ ಜುಲೈ 29ರವರೆಗೆ ಮನೆ ಮನೆಗೆ ಭೇಟಿ ನೀಡಿ ಮತದಾರರಿಗೆ ಎರಡು ಎನ್ಯುಮರೇಶನ್ ಫಾರಂಗಳನ್ನು ನೀಡಲಿದ್ದು, ಮತದಾರರುಎರಡು ಎನ್ಯುಮರೇಶನ್ ಪ್ರತಿಗಳನ್ನು ಭರ್ತಿ ಮಾಡಿ ಒಂದನ್ನು ಬಿಎಲ್ ಓಗಳಿಗೆ ನೀಡುವುದು ಮತ್ತು ಇನ್ನೊಂದನ್ನು ತಮ್ಮ ಬಳಿಯೇ ಇಟ್ಟುಕೊಳ್ಳಬೇಕಿದೆ. ಆ ಎರಡು ಎನ್ಯುಮರೇಶನ್ ಪ್ರತಿಗಳಿಗೆ ಬಿಎಲ್ಓ ಮತ್ತು ಮತದಾರರು ಅಥವಾ ಅವರ ಕುಟುಂಬದ ಸದಸ್ಯರು ಕಡ್ಡಾಯವಾಗಿ ಸಹಿ ಮಾಡಬೇಕು ಎಂದ ಅವರು ಬಿಎಲ್ಓ ಮನೆ ಭೇಟಿಗೆ ಬಂದಾಗ ಚುನಾವಣಾ ಆಯೋಗ ಸೂಚಿಸಿದ 12 ದಾಖಲೆಗಳಲ್ಲಿ ಎರಡು ದಾಖಲೆಗಳನ್ನು ಸಲ್ಲಿಸಬೇಕಿದೆ. ಉಪವಿಭಾಗದಲ್ಲಿ ಎಸ್ ಐ ಆರ್ ಪ್ರಕ್ರಿಯೆಗೆ ಸಾರ್ವಜನಿಕರು ಸಂಪೂರ್ಣ ಸಹಕಾರ ನೀಡಿ ಯಶಸ್ವಿಗೊಳಿಸಬೇಕು ಎಂದು ಅವರು ಹೇಳಿದರು.



ಕುಮಟಾ: ಶುಕ್ರವಾರ ಕೋನಳ್ಳಿಯ ವನದುರ್ಗಾ ಸಭಾಭವನದಲ್ಲಿ ನಾಮಧಾರಿ ವಾರ್ಷಿಕ ಸಂಚಿಕೆಯನ್ನು ಕೋನಳ್ಳಿಯ ವನದುರ್ಗಾ ದೇವಾಲಯದ ಧರ್ಮದರ್ಶಿ ಎಚ್.ಆರ್. ನಾಯ್ಕ ಅನಾವರಣಗೊಳಿಸಿದರು.

ಶ್ರೇಯಸ್ಸಿಗೆ ಸಂಘಟನೆ ಅಗತ್ಯ: ಪ್ರಸಾದ್

ಮುಂಡಗೋಡ: ಸರ್ಕಾರಿ ನೌಕರರಿಗೆ ತಮ್ಮ ಹಾಗೂ ತಮ್ಮವರ ಶ್ರೇಯಸ್ಸಿಗಾಗಿ ಸಂಘಟನೆ ಅಗತ್ಯ ಎಂದು ನೂತನ ತಹಶೀಲ್ದಾರ ಪ್ರಸಾದ್ ಎಸ್. ಎ. ಹೇಳಿದರು. ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಘಟಕದ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಉದ್ಘಾಟಿಸಿ ಅವರುಮಾತನಾಡಿದರು. ಶಿಸ್ತು, ಸಂಯಮ ಹಾಗೂ ಸಹಬಾಳ್ವೆಯೊಂದಿಗೆ ಕರ್ತವ್ಯ ನಿರ್ವಹಿಸುವ ಮೂಲಕ ಸಾರ್ವಜನಿಕ ಸೇವೆಗೆ ಆದ್ಯತೆ ನೀಡಬೇಕು. ಶಿಕ್ಷಕರ ಸಂಘದೊಂದಿಗೆ ಕೈ ಜೋಡಿಸಿ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು. ಶಿರಸಿ ಶೈಕ್ಷಣಿಕ ಜಿಲ್ಲೆ ಶಾಖೆಯ ಪ್ರಾ ಶಾ ಶಿ ಸಂಘದ ಅಧ್ಯಕ್ಷರಾದ ಸತೀಶ ನಾಯಕ ಬಾವಿಕೇರಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಚುನಾವಣಾ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದ ಬಿಇಒ ಸುಮಾ ಜಿ ರವರು ಆಯ್ಕೆಯಾದ ಪ್ರತಿನಿಧಿಗಳಿಗೆ ಅಧಿಕೃತ ಪ್ರಮಾಣ ಪತ್ರ ವಿತರಿಸಿದರು.ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಘಟಕದ ನೂತನ ಅಧ್ಯಕ್ಷ ಕೆ ಕೆ ಕರುವಿನಕೊಪ್ಪ, ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಘಟಕದ ಅಧ್ಯಕ್ಷ ಎಸ್ ಆರ್. ಡೋರಿ ಮಾತನಾಡಿದರು. ತಾಲೂಕಾ, ಜಿಲ್ಲಾ ಹಾಗೂ ರಾಜ್ಯ ಸಂಘಗಳಿಗೆ ವಿವಿಧ ಹುದ್ದೆಗಳಿಗೆ ನಾಮನಿರ್ದೇಶಿತರಾದ ಹಿರಿ-ಕಿರಿಯ ಶಿಕ್ಷಕರಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ತಹಶೀಲ್ದಾರ ಪ್ರಸಾದ್ ಎಸ್ ಎ, ಬಿ ಇ ಓ ಸುಮಾ ಜಿ., ತಾಲೂಕಾ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಶ್ ವಾಸುದೇವ ನಾಯ್ಕ ರವರನ್ನು ಮತ್ತು ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಸತೀಶ ನಾಯಕ ಬಾವಿಕೇರಿ ಹಾಗೂ ತಾಲ್ಲೂಕು ಘಟಕದ ನೂತನ ಪದಾಧಿಕಾರಿಗಳನ್ನು, ಸಲಹಾ ಸಮಿತಿ ಸದಸ್ಯರನ್ನು ಈ ಪದಗ್ರಹಣ ಸಮಾರಂಭದಲ್ಲಿ ಸನ್ಮಾನಿಸಲಾಯಿತು.ಜಿಲ್ಲಾ ಸಂಘದ ಸಂಘಟನಾ ಕಾರ್ಯದರ್ಶಿ ನಾಗರತ್ನ ಪ್ರಾರ್ಥಿಸಿದರು. ಸಂಘದ ಸಹ ಕಾರ್ಯದರ್ಶಿ ನಾಗರಾಜ ನಾಯ್ಕ ಸ್ವಾಗತಿಸಿದರು. ತಾಲೂಕಾ ಸಂಘದ ಸಂಘಟನಾ ಕಾರ್ಯದರ್ಶಿಯಾಗಿ ನಾಮನಿರ್ದೇಶಿತರಾಗಿರುವ ಶಿಕ್ಷಕ ಬಸವರಾಜ ಬೆಂಡ್ಲಗಟ್ಟಿ ನಿರೂಪಿಸಿದರು. ತಾಲೂಕಾ ಸಂಘದ ಸಂಘಟನಾ ಕಾರ್ಯದರ್ಶಿಯಾಗಿ ನಾಮನಿರ್ದೇಶಿತರಾಗಿರುವ ಶಿಕ್ಷಕ ಯಲ್ಲಪ್ಪ ಜಿ ಹಳ್ಳಿ ವಂದಿಸಿದರು. ತಹಶೀಲ್ದಾರ ಕಚೇರಿಯ ರಾಘವೇಂದ್ರ ಗಿರಡ್ಡಿ, ಬಿ ಆರ್‌ಸಿ ಸಮನ್ವಯಾಧಿಕಾರಿ ರಮೇಶ್ ಅಂಬಿಗೇರ, ತಾಲೂಕಾ ದೈ.ಶಿ.ಪರಿವೀಕ್ಷಕ ಅಶೋಕ ಸಂಕರಿಕೊಪ್ಪ, ತಾಲೂಕಾ ಶಿಕ್ಷಕ ಸಂಘದ ಎಲ್ಲಾ ಪದಾಧಿಕಾರಿಗಳು, ನೌಕರ ಸಂಘದ ಪದಾಧಿಕಾರಿಗಳು ಹಾಗೂ ತಾಲೂಕಿನ ವಿವಿಧ ಶಿಕ್ಷಕರ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಶಿಕ್ಷಕ ವೃಂದ ಉಪಸ್ಥಿತರಿದ್ದರು.



ತರಬೇತಿ ಸದುಪಯೋಗ ಪಡೆದುಕೊಳ್ಳಿ



ಅಂಕೋಲಾ: ಭಾರತೀಯ ವಿಕಾಸ ಟ್ರಸ್ಟ್ ಮಣಿಪಾಲ್, ಸಂಗಮ ಸೇವಾ ಸಂಸ್ಥೆ ಅಂಕೋಲಾ, ಹಾಗೂ ಶ್ರೀ ಶಾರದಾಂಬಾ ಮಹಿಳಾ ಮಂಡಳ, ಅಂಕೋಲಾ ಇವರ ಸಹಯೋಗದಲ್ಲಿ ನಡೆದ ಏಳು ದಿನಗಳ ಬ್ಯೂಟಿ ಪಾರ್ಲರ್ ಹಾಗೂ ಸಾರಿಬಾಕ್ಸ್ ಪೋಲ್ಡರ್ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭ ಅಂಕೋಲಾ ಅರ್ಬನ್ ಬ್ಯಾಂಕ್ ಮಹಡಿಯ ಮೇಲೆ ಯಶಸ್ವಿಯಾಗಿ ನಡೆಯಿತು.

ಅಂಕೋಲಾ ಅರ್ಬನ್ ಬ್ಯಾಂಕ್ ಅಧ್ಯಕ್ಷ ರಾಜೇಂದ್ರ ಶಾಂಬಾ ಶೆಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂತಹ ಕೌಶಲ್ಯಾಭಿವೃದ್ಧಿ ತರಬೇತಿಗಳ ಉಪಯೋಗವನ್ನು ಸಾರ್ವಜನಿಕರು ಹೆಚ್ಚು ಹೆಚ್ಚು ಪಡೆದು ಸ್ವಾಲಂಬಿಗಳಾಗಬೇಕು ಎಂದರು.ಭಾರತೀಯ ವಿಕಾಸ ಟ್ರಸ್ಟ್ ನ ರಾಘವೇಂದ್ರ ಆಚಾರ್ಯರು ಜನರು ಹೆಚ್ಚು ಆಸಕ್ತಿಯಿಂದ ಕಲಿತರೆ ತಮ್ಮ ಸಹಕಾರ ಮುಂದೆಕೂಡ ಇರುತ್ತದೆ ಎಂದರು.ಶ್ರೀ ಶಾರದಾಂಬಾ ಮಹಿಳಾ ಮಂಡಳಿಯ ಅಧ್ಯಕ್ಷೆ ಸುಧಾ ಜಿ. ಶೆಟ್ಟಿ , ಸಂಗಮ ಸೇವಾ ಸಂಸ್ಥೆಯ ಜಯಾ ಗೌಡ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ವರ್ಷಿಣಿ ಶೆಟ್ಟಿ ಯವರ ಪ್ರಾರ್ಥಿಸಿದರು. ಯೋಗಿತಾ ಎಸ್.ಶೆಟ್ಟಿ ಸ್ವಾಗತಿಸಿದರು. ಸುಧಾ ಪ್ರಶಾಂತ ಶೆಟ್ಟಿ, ಪೂಜಾ ಮುಂತಾದವರು ಶಿಬಿರಾರ್ಥಿಗಳ ಪರವಾಗಿ ಅನಿಸಿಕೆಗಳನ್ನು ಹಂಚಿಕೊಂಡರು. ತರಬೇತಿದಾರರಾದ ಮಾಯಾ ಕೆ. ಶೆಟ್ಟಿ ಉಪಸ್ಥಿತರಿದ್ದರು.


ಕರಡೊಳ್ಳಿ ಗ್ರಾಮಕ್ಕೆ ಕುಡಿಯುವ ನೀರು

ಯಲ್ಲಾಪುರ: ತಾಲೂಕಿನ ಕರಡೊಳ್ಳಿ ಗ್ರಾಮದ ಹಿಂದುಳಿದ ಗೌಳಿ ಸಮುದಾಯದ ಕುಟುಂಬಗಳು ಹಲವು ದಿನಗಳಿಂದ ಎದುರಿಸುತ್ತಿದ್ದ ಕುಡಿಯುವ ನೀರಿನ ಸಮಸ್ಯೆಗೆ ಉದ್ಯಮಿ ಹಾಗೂ ಸಮಾಜಸೇವಕ ಬಾಲಕೃಷ್ಣ ನಾಯಕ ಅವರು ಸ್ಪಂದಿಸಿ, ತಮ್ಮ ಸ್ವಂತ ವೆಚ್ಚದಲ್ಲಿ ಕೊಳವೆ ಬಾವಿ ಕೊರೆಸಿಕೊಟ್ಟು ಶಾಶ್ವತ ನೀರಿನ ಸೌಲಭ್ಯ ಕಲ್ಪಿಸಿದ್ದಾರೆ. ಅವರ ಈ ಸಮಾಜಮುಖಿ ಕಾರ್ಯಕ್ಕೆ ಗ್ರಾಮಸ್ಥರಿಂದ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ.

ಕೆಲ ದಿನಗಳ ಹಿಂದೆ ಕರಡೊಳ್ಳಿ ಗ್ರಾಮದನಿವಾಸಿಗಳು ಬಾಲಕೃಷ್ಣ ನಾಯಕ ಅವರನ್ನು ಭೇಟಿ ಮಾಡಿ, ಗ್ರಾಮದಲ್ಲಿ ತೀವ್ರ ಕುಡಿಯುವ ನೀರಿನ ಅಭಾವವಿದ್ದು, ಬಡ ಕುಟುಂಬಗಳು ಸಂಕಷ್ಟ ಅನುಭವಿಸುತ್ತಿರುವ ಬಗ್ಗೆ ಮನವಿ ಸಲ್ಲಿಸಿದ್ದರು. ಗ್ರಾಮಸ್ಥರ ಮನವಿಯನ್ನು ಗಂಭೀರವಾಗಿ ಪರಿಗಣಿಸಿದ ಅವರು ತಕ್ಷಣವೇ ಕೊಳವೆ ಬಾವಿ ಕೊರೆಸುವ ಕಾರ್ಯಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಾಲಕೃಷ್ಣ ನಾಯಕ ಅವರು, ಸಮಾಜದ ಸೇವೆ ಮಾಡುವ ಅವಕಾಶ ದೊರೆತಿರುವುದು ನನಗೆ ಸಂತೋಷ ತಂದಿದೆ. ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸವನ್ನು ಮುಂದೆಯೂ ಇದೇ ರೀತಿಯಲ್ಲಿ ಮುಂದುವರಿಸುತ್ತೇನೆ. ನಿಮ್ಮೆಲ್ಲರ ಆಶೀರ್ವಾದ ಮತ್ತು ಸಹಕಾರ ಸದಾ ಇರಲಿ ಎಂದರು.

ಕೊಳವೆ ಬಾವಿ ಯಶಸ್ವಿಯಾಗಿ ನೀರು ನೀಡಿದ ಸಂದರ್ಭದಲ್ಲಿ ಲಕ್ಷ್ಮಣ ಕೋಕರೆ, ಮದನೂರು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ವಿಟ್ಟು ಶೇಳಕೆ, ಶ್ಯಾಮ್ ಸಿಂಧೆ, ಮಹೇಶ್ ದೇಸಾಯಿ, ಚಂದು ಮಾಡಾಕರ್, ವಿಜಯಕುಮಾರ್ ಸೇರಿದಂತೆ ಗ್ರಾಮಸ್ಥರು ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿದ್ದು ಹರ್ಷ ವ್ಯಕ್ತಪಡಿಸಿದರು.



ವಿದ್ಯುತ್ ಖಾಸಗೀಕರಣಕ್ಕೆ ವಿರೋಧ



ಜೋಯಿಡಾ: ಹೆಸ್ಕಾಮ್ ಕಾರ್ಯಕ್ಷೇತ್ರದಲ್ಲಿರುವ ಮೂರು ಜಿಲ್ಲೆಗಳಲ್ಲಿ ವಿದ್ಯುತ್ ವಿತರಣೆಗಾಗಿ ಅನುಮತಿ ನೀಡುವಂತೆ, ಟಾಟಾ ಪವರ್ ಕಂಪನಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಅರ್ಜಿ ಸಲ್ಲಿಸಿದೆ. ಸದ್ಯ ಇರುವ ಹೆಸ್ಕಾಮ್ ಕಂಪನಿಯ ಜಾಗದಲ್ಲಿ ಟಾಟಾ ಕಂಪನಿಗೆ ವಿತರಣಾ ಜವಾಬ್ದಾರಿಯನ್ನು ನೀಡುವುದನ್ನು ತೀವ್ರವಾಗಿ ವಿರೋಧಿಸುವದಾಗಿ ಜೋಯಡಾ ತಾಲ್ಲೂಕಿನ ಗಣ್ಯರು ಸಭೆ ಸೇರಿ ನಿರ್ಣಯ ಕೈಗೊಂಡಿದ್ದಾರೆ. ಸರ್ಕಾರಿ ಸ್ವಾಮ್ಯದಲ್ಲಿರುವ ಕಂಪನಿಗಳಿಂದ ಈ ಭಾಗದಲ್ಲಿ ಉತ್ತಮವಾದ ಸೇವೆ ಸಿಗುತ್ತಿದೆ. ಸಾಮಾಜಿಕ ಹೊಣೆಗಾರಿಕೆ ಖಾಸಗಿ ಕಂಪನಿಗಳಿಗೆ ಇರುವದಿಲ್ಲ. ಅದೇ ರೀತಿ ಲಾಭದ ಆಸೆಗೆ ನಗರ ಪ್ರದೇಶ ಮತ್ತು ಹೆಚ್ಚಿನ ಆದಾಯದ ಚಟುವಟಿಕೆಗಳತ್ತ ಹೆಚ್ಚಿನ ಗಮನ ಕೊಟ್ಟು, ಗ್ರಾಮೀಣ ಪ್ರದೇಶಕ್ಕೆ ಖಾಸಗಿ ಕಂಪನಿಯವರು ನಿರ್ಲಕ್ಷಿಸುವ ಆತಂಕ ಇದೆ. ವ್ಯಾಪಾರಸ್ಥರ ಸಂಘದ ಅಧ್ಯಕ್ಷರಾದ ಸುಧಾಕರ ದೇಸಾಯಿ ಪ್ರಾಸ್ತಾವಿಕ ಮಾತನಾಡಿದರು. ವ್ಯಾಪಾರಸ್ಥರ ಸಂಘದ ಮಾಜಿ ಅಧ್ಯಕ್ಷ ರಫೀಕ್ ಖಾಜಿ ಟಾಟಾ, ಕರ್ನಾಟಕ ಕಿಸಾನ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ, ರವಿ ರೇಡಕರ್ ಮಾತನಾಡಿದರು. ಈ ಸಂದರ್ಭದಲ್ಲಿ ಮಾಜಿ ಅಧ್ಯಕ್ಷ ರಾದ ಕೆ ಎಲ್ ನಾಯ್ಕ್, ಮಾಜಿ ಗ್ರಾಪಂ ಉಪಾಧ್ಯಕ್ಷ ಸಂತೋಷ ಮಂತೆರೊ, ಮಾಜಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿನಯ ದೇಸಾಯಿ, ಮಾಜಿ ಗ್ರಾಮ ಪಂಚಾಯತಿ ಅಧ್ಯಕ್ಷ ರಾದ ಅರುಣ ಕಾಮರೇಕರ್, ದಲಿತ ಸಂಘದ ಅಧ್ಯಕ್ಷ ಶ್ರೀಕಾಂತ ಹರಿಜನ, ವ್ಯಾಪಾರಸ್ಥರ ಸಂಘದ ಉಪಾಧ್ಯಕ್ಷ ರಾದ ರವಿ ಮಿರಾಶಿ ಹಾಗು ಕಿರಣ ನಾಯ್ಕ್, ಕಾಳಿ ಬ್ರಿಗೇಡ್ ನ ಸಮಿರ ಮುಜಾವರ, ಅಂಬಾರಿ ಸಂಸ್ಥೆಯ ಭವಾನಿ ಚವ್ಹಾಣ, ಮತ್ತು ಊರಿನ ಗಣ್ಯ ನಾಗರಿಕರು ಉಪಸ್ಥಿತರಿದ್ದರು.

ಮಳೆಗೆ ಎರಡು ಮನೆಗಳಿಗೆ ಹಾನಿ

ಕುಮಟಾ: ಮಂಗಳವಾರ ರಾತ್ರಿ ಸುರಿದ ಭಾರೀ ಗಾಳಿ-ಮಳೆಯಿಂದ ತಾಲೂಕಿನ ಉಳ್ಳೂರುಮಠ ಹಾಗೂ ಬಾಸೊಳ್ಳಿ ಗ್ರಾಮಗಳಲ್ಲಿ ಎರಡು ಮನೆಗಳಿಗೆ ಹಾನಿ ಸಂಭವಿಸಿದೆ.ಉಳ್ಳೂರುಮಠ ಗ್ರಾಮದ ರಾಮಚಂದ್ರ ನಾರಾಯಣ ನಾಯ್ಕ ಅವರ ವಾಸದ ಮನೆಯ ಮೇಲೆ ಜಂಗ್ಲಿ ಜಾತಿಯ ಮರದ ದೊಡ್ಡ ಕೊಂಬೆ ಮುರಿದು ಬಿದ್ದ ಪರಿಣಾಮ ಮನೆಯ ಮೇಲ್ಛಾವಣಿಯ ಹಂಚುಗಳು ಹಾನಿಗೊಳಗಾಗಿವೆ. ಈ ಘಟನೆಯಿಂದ ಅಂದಾಜು ರೂ.18,000 ನಷ್ಟ ಸಂಭವಿಸಿದೆ ಎಂದು ಅಧಿಕಾರಿಗಳ ವರದಿಯಲ್ಲಿ ತಿಳಿಸಲಾಗಿದೆ.ಅದೇ ರೀತಿ, ಬಾಸೊಳ್ಳಿ ಗ್ರಾಮದ ಭಾರತಿ ರಮೇಶ ಮುಕ್ರಿ ಅವರ ವಾಸದ ಮನೆಯ ಮೇಲ್ಛಾವಣಿಗೆ ಹೊದಿಕೆ ಮಾಡಲಾಗಿದ್ದ ಕಬ್ಬಿಣದ ತಗಡುಗಳು ಭಾರೀ ಗಾಳಿಯ ರಭಸಕ್ಕೆ ಹಾರಿ ಹೋಗಿ ಮನೆಗೆ ಹಾನಿಯಾಗಿದೆ. ಇದರಿಂದ ಮನೆಯ ಮೇಲ್ಛಾವಣಿ ಸಂಪೂರ್ಣ ಹಾನಿಗೊಳಗಾಗಿದ್ದು, ಕುಟುಂಬದವರಿಗೆ ತೊಂದರೆ ಉಂಟಾಗಿದೆ.ಎರಡೂ ಘಟನೆಗಳಲ್ಲಿ ಜನರು ಹಾಗೂ ಜಾನುವಾರುಗಳಿಗೆ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸ್ಥಳಕ್ಕೆ ಸಂಬಂಧಿಸಿದ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಹಾನಿಯ ವರದಿಯನ್ನು ಮೇಲಧಿಕಾರಿಗಳಿಗೆ ಸಲ್ಲಿಸಿದ್ದಾರೆ.


ಮಾದಕ ದ್ರವ್ಯ ವಿರೋಧಿ ದಿನಾಚರಣೆ



ಹೊನ್ನಾವರ: ಪಟ್ಟಣದ ಎಂ.ಪಿ.ಇ. ಸೊಸೈಟಿಯ ಎಸ್.ಡಿ.ಎಂ. ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಅಂತಾರರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನಾಚರಣೆಯ ಅಂಗವಾಗಿ ಅರಿವು ಕಾರ್ಯಕ್ರಮ ಜರುಗಿತು. ಪಿಎಸ್ಐ ಮಹಾಂತೇಶ್ ವಾಲ್ಮೀಕಿ ಮಾತನಾಡಿ, ಮಾದಕ ದ್ರವ್ಯಗಳ ಸೇವನೆಯಿಂದ ವ್ಯಕ್ತಿಯ ಆರೋಗ್ಯ, ಶಿಕ್ಷಣ ಹಾಗೂ ಸಮಾಜದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು. ಯುವಜನರು ಮಾದಕ ದ್ರವ್ಯಗಳಿಂದ ದೂರವಿದ್ದು ಉತ್ತಮ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಸಮಾಜದಲ್ಲಿ ಮಾದಕ ದ್ರವ್ಯಗಳ ಬಳಕೆಯನ್ನು ತಡೆಗಟ್ಟಲು ಪ್ರತಿಯೊಬ್ಬರೂ ಜಾಗೃತರಾಗಿರಬೇಕೆಂದು ತಿಳಿಸಿದರು. ಎಎಸ್ಐ ಭಗವತಿ ಹವಾಲ್ದಾರ್, ರಾಜಶ್ರೀ ಪಾಲ್ಗೊಂಡಿದ್ದರು.ಪ್ರಭಾರಿ ಪ್ರಾಚಾರ್ಯರಾದ ನಿಜಲಿಂಗಪ್ಪ ಎಚ್ ಇವರು ಅಧ್ಯಕ್ಷತೆ ವಹಿಸಿದ್ದರು.ಎಂ. ಎನ್. ಅಡಿಗುಂಡಿ ಅವರು ನಿರ್ವಹಿಸಿದರು ಕಾರ್ಯಕ್ರಮ ನಿರೂಪಿಸಿದರು. ಶ್ರೀರಾಮಭಟ್ ಅವರು ವಂದಿಸಿದರು. ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಮಾದಕ ದ್ರವ್ಯಗಳ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸುವಲ್ಲಿ ಯಶಸ್ವಿಯಾಯಿತು.

ವಿದ್ಯುತ್ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ

ಹೊನ್ನಾವರ: ರಾಜ್ಯದ ವಿದ್ಯುತ್ ವಲಯವನ್ನು ಖಾಸಗಿಕರಣ ಮಾಡುವುದನ್ನು ವಿರೋಽಸಿ ತಾಲೂಕಿನ ವಿವಿಧ ರೈತ ಸಂಘಟನೆ ವಿವಿಧ ಸಂಘಟನೆಯ ವತಿಯಿಂದ ರಾಜ್ಯ ಸರ್ಕಾರಕ್ಕೆ ತಹಶೀಲ್ದಾರ ಮೂಲಕ ಮನವಿ ಸಲ್ಲಿಸಿದರು.ರೈತ ಸಂಘಟನೆ, ಹೊನ್ನಾವರ ಉಳಿಸಿ ಬೆಳೆಸಿ, ಹೆಸ್ಕಾಂ ನಿವೃತ್ತ ನೌಕರರು, ವಿದ್ಯುತ್ ಗುತ್ತಿಗೆದಾರರು,ಕರವೇ ರಕ್ಷಣಾ ವೇದಿಕೆ, ಯುವ ಒಕ್ಕೂಟ, ದೇವರಾಜ ಅರಸು ವೇದಿಕೆ, ಆಟೊ ಯೂನಿಯನ್ ಸೇರಿದಂತೆ ವಿವಿಧ ಸಂಘಟನೆಯ ಕಾರ್ಯಕರ್ತರು ಶರಾವತಿ ವೃತ್ತದ ಬಳಿ ಜಮಾವಣೆಗೊಂಡು ಖಾಸಗಿಕರಣದಿಂದ ಉಂಟಾಗುವ ಅನಾಹುತದ ವಿವರಿಸಿ, ವಿರೋಽಸಿ ಘೋಷಣೆ ಕೂಗಿ ಮೆರವಣಿಗೆ ಮೂಲಕ ತಹಶೀಲ್ದಾರ ಕಚೇರಿಯವರೆಗೆ ಆಗಮಿಸಿ ಮನವಿ ಸಲ್ಲಿಸಿದರು. ಸಾರ್ವಜನಿಕ ಹಿತದೃಷ್ಟಿಯಿಂದ, ಟಾಟಾ ಪವರ್ ಕಂಪನಿ ಸೇರಿದಂತೆ ಯಾವುದೇ ಖಾಸಗಿ ಕಂಪನಿಗಳಿಗೆ ವಿದ್ಯುತ್ ವಿತರಣಾ ಪರವಾನಗಿಗಳನ್ನು ನೀಡುವುದನ್ನು ತಡೆಯಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ರೈತರ ಕೃಷಿ ಭೂಮಿಗೆ ಉಚಿತ ವಿದ್ಯುತ್ ಸೇರಿದಂತೆ ಗೃಹ ಜ್ಯೋತಿಯ ವಿವಿಧ ಸರ್ಕಾರಿ ಯೋಜನೆಗಳ ಫಲಾನುಭವಿಗಳಿಗೆ ಉಚಿತ ವಿದ್ಯುತ್ ಒದಗಿಸುವ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸುತ್ತಿದೆ.ಯಾವುದೇ ಕಾರ್ಯಗಳನ್ನು ಖಾಸಗಿಯವರಿಗೆ ವಹಿಸಬಾರದು ಎಂದು ಒತ್ತಾಯಿಸಿದರು. ಹೊನ್ನಾವರ ಉಳಿಸಿ ಬೆಳಿಸಿ ಸಂಘಟನೆಯ ಅಧ್ಯಕ್ಷ ಜಿ.ಎನ್. ಗೌಡ, ದೇವರಾಜ ಅರಸು ವೇದಿಕೆ ಅಧ್ಯಕ್ಷ ಅನಂತ ನಾಯ್ಕ ಹೆಗ್ಗಾರ,ಯುವ ಒಕ್ಕೂಟದ ಅಧ್ಯಕ್ಷ ವಿನಾಯಕ ನಾಯ್ಕ ಮೂಡ್ಕಣಿ, ಭಾರತೀಯ ಕಿಸಾನ್ ಸಂಘದ ಪ್ರಮುಖ ಎಂ.ಆರ್.ಹೆಗಡೆ, ಕರ್ನಾಟಕ ರಕ್ಷಣಾ ವೇದಿಕೆ ಕನ್ನಡ ಸೇನೆಯ ಜಿಲ್ಲಾಧ್ಯಕ್ಷ ನಸರುಲ್ಲಾ, ಎಸ್.ಎಮ್. ನಾಯ್ಕ, ಎಸ್.ಕೆ.ಶೆಟ್ಟಿ, ಹರಿಶ್ಚಂದ್ರ ನಾಯ್ಕ, ಕರವೇ ಅಧ್ಯಕ್ಷ ಮಂಜುನಾಥ ಗೌಡ, ರೈತ ಸಂಘದ ಪ್ರಮುಖರಾದ ಗಣಪತಿ ಹೆಗಡೆ ಮತ್ತಿತರು ಉಪಸ್ಥಿತರಿದ್ದರು.



ನಾಳೆ ಅಕ್ಷರದಿಂದ ಆತ್ಮಜಾಗೃತಿ

ಕುಮಟಾ: ಸತ್ವಾಧಾರ ಫೌಂಡೇಶನ್ ಸುಕೊಳ್ಳಿ, ಹಳದೀಪುರ ಇದರ ವತಿಯಿಂದ ಅಕ್ಷರದಿಂದ ಆತ್ಮಜಾಗೃತಿ ಎಂಬ ವಿನೂತನ ಸಾಮಾಜಿಕ ಚಿಂತನ ಕಾರ್ಯಕ್ರಮ ಜೂನ್ 28 ಭಾನುವಾರ ಸಂಜೆ 5 ಗಂಟೆಗೆ ಕುಮಟಾ ತಾಲೂಕಿನ ಹೆಗಡೆಯಲ್ಲಿರುವ ಆಯಿ ಪುಸ್ತಕ ಮನೆ ಆವರಣದಲ್ಲಿ ನಡೆಯಲಿದೆ. ಕಾರ್ಯಕ್ರಮದಲ್ಲಿ ಸಂಸ್ಕೃತ ಪ್ರಾಧ್ಯಾಪಕರು ಹಾಗೂ ಖ್ಯಾತ ವಾಗ್ಮಿಗಳಾದ ಡಾ. ಕೇಶವ ಕಿರಣ ಅವರು ಅಕ್ಷರ ಆರಾಧನೆಯ ಮಹತ್ವ ಮತ್ತು ಆತ್ಮಜಾಗೃತಿ ಕುರಿತು ದಿಕ್ಸೂಚಿ ಮಾತುಗಳನ್ನಾಡಲಿದ್ದಾರೆ. ಖ್ಯಾತ ನಿರೂಪಕರು ಹಾಗೂ ಪ್ರಶಸ್ತಿ ವಿಜೇತ ಶಿಕ್ಷಕ ರವೀಂದ್ರ ಭಟ್ಟ ಸೂರಿ ಅವರ ಲೇಖನಿಯಿಂದ ಮೂಡಿಬಂದ ಹನಿ ಹನಿ ಇಬ್ಬನಿ ಹನಿಗವನಗಳ ಕೃತಿಯನ್ನು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಖ್ಯಾತ ಯಕ್ಷಗಾನ ಕಲಾವಿದ ಕೃಷ್ಣ ಯಾಜಿ ಬಳ್ಕೂರು ಅವರು ಲೋಕಾರ್ಪಣೆ ಮಾಡಲಿದ್ದಾರೆ.

ಕಿರುಸುದ್ದಿ

ಇಂದು ಪೂರ್ವಭಾವಿ ಸಭೆ

ಹಾವೇರಿ: ಅನುದಾನಿತ ಶಾಲಾ ಕಾಲೇಜುಗಳ ಬಹು ದಿನಗಳ ಬೇಡಿಕೆಯಾದ ಹಳೆ ಪಿಂಚಣಿ ಮತ್ತು ಹೊಸ ಪಿಂಚಣಿ ಪಡೆಯಲು ಬೃಹತ್ ಪ್ರತಿಭಟನೆಯನ್ನು ಜಿಲ್ಲಾ ಹಾಗೂ ತಾಲೂಕ ಹಂತದಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಇದರ ಅಂಗವಾಗಿ ಜೂನ್ 27ರಂದು ಮಧ್ಯಾಹ್ನ 2 ಗಂಟೆಗೆ ಜಿಲ್ಲಾ ಗುರುಭವನದಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ. ಈ ಸಭೆಗೆ ಹಾವೇರಿ ಜಿಲ್ಲೆಯ ಎಲ್ಲಾ ಅನುದಾನಿತ ಶಾಲಾ ಕಾಲೇಜುಗಳ ಮುಖ್ಯಸ್ಥರು ಹಾಗೂ ಎಲ್ಲಾ ಸಂಘಟನೆಗಳ ಅಧ್ಯಕ್ಷರು, ಕಾರ್ಯದರ್ಶಿಗಳು, ಪದಾಕಾರಿಗಳು, ಸಹಶಿಕ್ಷಕರು ಆಗಮಿಸಿ ಸಲಹೆ ಸೂಚನೆಗಳನ್ನು ನೀಡಬೇಕೆಂದು ಕಾರ್ಯದರ್ಶಿ ಎನ್.ಎನ್. ಕುಂದೂರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ಆತ್ಮಹತ್ಯೆ

ಹಾವೇರಿ: ರಾಣೇಬೆನ್ನೂರ ತಾಲೂಕು ಹನುಮನಮಟ್ಟಿ ಕೃಷಿ ವಿಶ್ವವಿದ್ಯಾಲಯಕ್ಕೆ ಸಂಬಂಸಿದ ಜಾಗೆಯಲ್ಲಿ ಲಾರಿ ಚಾಲಕರೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕು ನಾಗನೂರು ಗ್ರಾಮದ ಸಂತೋಷ ಬಸಪ್ಪ ಗುಡಿಹಾಳ (24) ನೇಣಿಗೆ ಶರಣಾದ ಚಾಲಕ. ಈತ ಬೆಂಗಳೂರು ಕಡೆಯಿಂದ ಪೂನಾಕ್ಕೆ ಹೋಗುತ್ತಿರುವಾಗ ರಾಷ್ಟ್ರೀಯ ಹೆದ್ದಾರಿ ಸರ್ವೀಸ್ ರಸ್ತೆಯಲ್ಲಿ ಲಾರಿ ನಿಲ್ಲಿಸಿ, ಹನುಮನಮಟ್ಟಿ ಕೃಷಿ ವಿಶ್ವವಿದ್ಯಾಲಯಕ್ಕೆ ಸಂಬಂಸಿದ ಜಾಗೆಯಲ್ಲಿ ತನ್ನಷ್ಟಕ್ಕೆ ತಾನೇ ನೇಣು ಹಾಕಿಕೊಂಡು ಮೃತಪಟ್ಟಿದ್ದಾರೆ ಎಂದು ಮೃತರ ಸಹೋದರ ಫಕ್ಕಿರೇಶ ಗುಡಿಹಾಳ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ರಾಣೇಬೆನ್ನೂರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯಕ್ತಿ ಆತ್ಮಹತ್ಯೆ

ಹಾವೇರಿ: ವ್ಯಕ್ತಿಯೊಬ್ಬರು ಮನೆಯಲ್ಲಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ರಾಣೇಬೆನ್ನೂರು ತಾಲೂಕು ತೆರೆದಹಳ್ಳಿ ಗ್ರಾಮದಲ್ಲಿ ನಡೆದಿದೆ. ತೆರೆದಹಳ್ಳಿ ಗ್ರಾಮದ ಶ್ರೀಕಾಂತ ಕರಿಯಪ್ಪ ಎಲಿಗಾರ (35) ಮೃತಪಟ್ಟ ವ್ಯಕ್ತಿ. ಈತ ಮದ್ಯ ವ್ಯಸನಿಯಾಗಿದ್ದು, ಕುಡಿದ ಅಮಲಿನಲ್ಲಿ ವಿಷ ಸೇವಿಸಿ ಅಸ್ವಸ್ಥಗೊಂಡಿದ್ದಾನೆ. ಚಿಕಿತ್ಸೆಗಾಗಿ ದಾವಣಗೇರಿ ಆಸ್ಪತ್ರೆಗೆ ದಾಖಲಿಸಿದ್ದಾಗ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ ಎಂದು ಮೃತರ ಸಹೋದರ ಜಗದೀಶ ಎಲಿಗಾರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಲಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಯಿಯ ನಿಧನದ ಆಘಾತದಿಂದ ಮಗನೂ ನೇಣಿಗೆ ಶರಣು

ಹಾವೇರಿ: ಮೂರು ತಿಂಗಳು ಹಿಂದೆ ಮೃತಪಟ್ಟ ತಾಯಿ ನೆನಪಲ್ಲಿ ಮಗನು ಕೂಡ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಶಿಗ್ಗಾವಿ ತಾಲೂಕು ಬಂಕಾಪುರದ ಮಂಜುನಾಥನಗರದಲ್ಲಿ ನಡೆದಿದೆ. ಮಹೇಶ ಕೊಟ್ಟಪ್ಪ ಗೌಡರ (27) ಮೃತಪಟ್ಟ ಯುವಕ. ಈತ ಗಾರ್ಮೆಂಟ್ ಕೆಲಸಕ್ಕೆ ಹೋಗುತ್ತಿದ್ದು, ಕಳೆದ ಮೂರು ತಿಂಗಳು ಹಿಂದೆಯಷ್ಟೆ ತಾಯಿ ಮೃತಪಟ್ಟಿದ್ದರಿಂದ ಇದನ್ನೇ ಮನಸ್ಸಿಗೆ ಹಚ್ಚಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಬಂಕಾಪುರದ ಮಂಜುನಾಥ ನಗರದಲ್ಲಿರುವ ಬಾಡಿಗೆ ಮನೆಯೊಂದರಲ್ಲಿ ತನ್ನಷ್ಟಕ್ಕೆ ತಾನೇ ಸೀರೆಯಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದೆ. ಬಂಕಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಷ ಸೇವಿಸಿ ಅಸ್ವಸ್ಥಗೊಂಡು ಸಾವು

ಹಾವೇರಿ: ವ್ಯಕ್ತಿಯೊಬ್ಬರು ಜಮೀನಿನಲ್ಲಿ ವಿಷ ಸೇವಿಸಿ ಅಸ್ವಸ್ಥಗೊಂಡಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದಾಗ ಉಪಚಾರ ಫಲಿಸದೆ ಮೃತಪಟ್ಟಿರುವ ಘಟನೆ ಸವಣೂರ ತಾಲೂಕು ಮಾವೂರು ಗ್ರಾಮದಲ್ಲಿ ನಡೆದಿದೆ. ಹಾನಗಲ್ ತಾಲೂಕು ಕಂಚಿನೆಗಳೂರು ಗ್ರಾಮದ ಕರಬಸಪ್ಪ ಶಂಭುಲಿಂಗಪ್ಪ ಹರವಿ (26) ಮೃತ ದುರ್ದೈವಿ. ಇತ್ತೀಚೆಗೆ ವಿಪರೀತ ಕುಡಿತದ ಚಟಕ್ಕೆ ಅಂಟಿಕೊಂಡಿದ್ದು, ಮದ್ಯ ಸೇವನೆಯ ಅಮಲಿನಲ್ಲಿ ತನ್ನಷ್ಟಕ್ಕೆ ತಾನೇ ವಿಷ ಸೇವಿಸಿ ಅಸ್ವಸ್ಥಗೊಂಡಿದ್ದರು. ಕೂಡಲೇ ಚಿಕಿತ್ಸೆಗೆಂದು ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ದಾಖಲಿಸಿದಾಗ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ ಎಂದು ಮೃತರ ತಂದೆ ಶಂಭಲಿಂಗಪ್ಪ ಹರವಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಸವಣೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಗದಗ: ತಾಲೂಕಿನ ಮುಳಗುಂದದ ಗಾಂಧಿ ಕಟ್ಟೆಬಳಿ ಮೊಹರಂ ಅಂಗವಾಗಿ ಶುಕ್ರವಾರ ಶರಬತ್ತ ವಿತರಿಸಲಾಯಿತು. ಅಂಜುಮನ್ ಕಮಿಟಿ ಅಧ್ಯಕ್ಷ ತಾಜುದ್ದಿನ ಕಿಂಡ್ರಿ, ಧರ್ಮಗುರು ಲಾಲಷಾಪೀರ ಮಕಾಂದಾರ, ಅಬ್ದುಲ್ ಜಾಪರ್, ಅಂಜುಮನ್ ಕಮಿಟಿ ಉಪಾಧ್ಯಕ್ಷ ಎ.ಡಿ.ಮುಜಾವರ, ಹೈದರಲಿ ಖವಾಸ, ಮಾಬೂಬಲಿ ದುರ್ಗಿಗುಡಿ, ರಾಜೇಸಾಬ ಸೈಯದಬಡೆ ಮೊದಲಾದವರಿದ್ದರು.

ಏಕಾಗ್ರತೆಗೆ ಚಿತ್ರಕಲೆ ಸ್ಪರ್ಧೆ ಸಹಕಾರಿ

ರಾಣೇಬೆನ್ನೂರ: ವಿದ್ಯಾರ್ಥಿಗಳಲ್ಲಿನ ಸೃಜನಶೀಲತೆ, ಏಕಾಗ್ರತೆ ಹಾಗೂ ಸಾಮಾಜಿಕ ಜಾಗೃತಿಯನ್ನು ಬೆಳೆಸುವ ಉದ್ದೇಶದಿಂದ ತಾಲೂಕಿನ ಕುಮಾರಪಟ್ಟಣಂ ಗ್ರಾಮದ ಅಮೃತ ವರ್ಷಿಣಿ ವಿದ್ಯಾಲಯದಲ್ಲಿ ಚಿತ್ರಕಲೆ ಹಾಗೂ ಬಣ್ಣ ಹಚ್ಚುವ ಸ್ಪರ್ಧೆ ನಡೆಯಿತು. 4ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಸ್ಪರ್ಧೆಯಲ್ಲಿ ಕನಸಿನ ಮನೆ, ಪರಿಸರ ಸಂರಕ್ಷಣೆ ಮತ್ತು ಸಾಮಾಜಿಕ ಕಾಳಜಿ ವಿಷಯಗಳನ್ನು ನೀಡಲಾಗಿತ್ತು. ವಿದ್ಯಾರ್ಥಿಗಳು ತಮ್ಮ ಕಲ್ಪನಾ ಶಕ್ತಿ ಹಾಗೂ ಕಲಾತ್ಮಕ ಪ್ರತಿಭೆಯನ್ನು ಚಿತ್ರಗಳ ಮೂಲಕ ಅನಾವರಣಗೊಳಿಸಿದರು. ಕಿರಿಯ ವಿದ್ಯಾರ್ಥಿಗಳು ಕನಸಿನ ಮನೆಯ ಚಿತ್ರಗಳನ್ನು ಬಿಡಿಸಿದರೆ, ಹಿರಿಯ ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆ, ಪ್ಲಾಸ್ಟಿಕ್ ಬಳಕೆ ನಿಯಂತ್ರಣ, ಭೂಮಿಯ ರಕ್ಷಣೆ ಮತ್ತು ಸಾಮಾಜಿಕ ಕಳಕಳಿಗೆ ಸಂಬಂಧಿಸಿದ ಚಿತ್ರಗಳನ್ನು ರಚಿಸಿ ಗಮನ ಸೆಳೆದರು. ಕೆಲ ವಿದ್ಯಾರ್ಥಿಗಳು ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ, ಸಮಾನತೆ, ಸಹಕಾರ ಹಾಗೂ ಶಿಕ್ಷಣದ ಮಹತ್ವವನ್ನು ತಮ್ಮ ಚಿತ್ರಗಳಲ್ಲಿ ಪರಿಣಾಮಕಾರಿಯಾಗಿ ಮೂಡಿಸಿದರು. ಇಂತಹ ಸ್ಪರ್ಧೆಗಳು ಮಕ್ಕಳ ಕೈಚಳಕವನ್ನು ವೃದ್ಧಿಸುವುದರ ಜತೆಗೆ ಏಕಾಗ್ರತೆ ಹೆಚ್ಚಿಸಲು, ಒತ್ತಡ ನಿವಾರಣೆಗೆ ಹಾಗೂ ಸೌಂದರ್ಯ ಪ್ರಜ್ಞೆ ಬೆಳೆಸಲು ಸಹಕಾರಿಯಾಗುತ್ತವೆ ಎಂದು ಮುಖ್ಯಶಿಕ್ಷಕ ಪಿ.ಕೆ. ಪ್ರಕಾಶರಾವ್ ಹೇಳಿದರು. ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡಿದ್ದು, ಶಿಕ್ಷಕರು ಹಾಗೂ ಶಾಲಾ ಆಡಳಿತ ಮಂಡಳಿ ಮತ್ತಿತರರು ಇದ್ದರು.



ರಾಣೇಬೆನ್ನೂರ: ವಿದ್ಯಾರ್ಥಿಗಳಲ್ಲಿನ ಸೃಜನಶೀಲತೆ, ಏಕಾಗ್ರತೆ ಹಾಗೂ ಸಾಮಾಜಿಕ ಜಾಗೃತಿಯನ್ನು ಬೆಳೆಸುವ ಉದ್ದೇಶದಿಂದ ತಾಲೂಕಿನ ಕುಮಾರಪಟ್ಟಣಂ ಗ್ರಾಮದ ಅಮೃತ ವರ್ಷಿಣಿ ವಿದ್ಯಾಲಯದಲ್ಲಿ ಚಿತ್ರಕಲೆ ಹಾಗೂ ಬಣ್ಣ ಹಚ್ಚುವ ಸ್ಪರ್ಧೆ ನಡೆಯಿತು.

51ನೇ ತುರ್ತು ಪರಿಸ್ಥಿತಿ ಕರಾಳ ದಿನಾಚರಣೆ

ಹಾವೇರಿ : 1975ರ ತುರ್ತು ಪರಿಸ್ಥಿತಿಯ ದಿನದಲ್ಲಿ ಇಂದಿರಾಗಾಂಧಿ ನೇತೃತ್ವದ ಅಂದಿನ ಕೇಂದ್ರ ಸರ್ಕಾರ ಸಾರ್ವಜನಿಕರಿಗೆ, ಮುಖಂಡರಿಗೆ, ಮಾಧ್ಯಮಗಳಿಗೆ ನಿರ್ಬಂಧ ಹೇರಿದ್ದಲ್ಲದೇ, ಕಾರಣವಿಲ್ಲದೇ ವಿಪಕ್ಷಗಳ ಮುಖಂಡರನ್ನು ಬಂಧಿಸಿ ಕಾರಾಗೃಹಕ್ಕೆ ಕಳುಹಿಸಲಾಗುತ್ತಿತ್ತು. ಸ್ವತಃ ಬಂಧೀಖಾನೆಯಲ್ಲಿ ಅನುಭವಿಸಿದ ಶಿಕ್ಷೆಗಳನ್ನು, ಚಿತ್ರಹಿಂಸೆಗಳನ್ನು ಹೇಳಲು ಅಸಾಧ್ಯವಾದ ರೀತಿ ಕೊಡುತ್ತಿದ್ದರೆಂದು ಹಿರಿಯ ಮುಖಂಡ ರವೀಶ ಕರ್ನೂರ ವಿವರಿಸಿದರು.

ನಗರದ ಕಾಗಿನೆಲೆ ರಸ್ತೆಯಲ್ಲಿರುವ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಶುಕ್ರವಾರ 51ನೇ ತುರ್ತು ಪರಿಸ್ಥಿತಿ ಕರಾಳ ದಿನಾಚರಣೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕರಾಳ ತುರ್ತು ಪರಿಸ್ಥಿತಿಯ ಸಂದರ್ಭವನ್ನು ಉಪಯೋಗಿಕೊಂಡು ಕಾಂಗ್ರೆಸ್ಸೇತರ ರಾಜಕೀಯ ಪಕ್ಷಗಳು ತಲೆ ಎತ್ತಿದ್ದವು, ಈ ತುರ್ತು ಪರಿಸ್ಥಿತಿ ಹೇರಿದ ಇಂದಿರಾ ಗಾಂಧಿಯವರಿಗೆ ದೇಶದ ಜನತೆ ತಕ್ಕ ಪಾಠವನ್ನು ಕಲಿಸಿ, ನಂತರದ ದಿನಗಳಲ್ಲಿ ಕಾಂಗ್ರೆಸ್‌ನ್ನು ಹೀನಾಯವಾಗಿ ಸೋಲಿಸಿದರು ಎಂದು ತಿಳಿಸಿದರು.



ಮಾಜಿ ಶಾಸಕ ಶಿವರಾಜ ಸಜ್ಜನರ ಅವರು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ತಾವು ಅನುಭವಿಸಿದ ಅನುಭವವನ್ನು ಕಾರ್ಯಕರ್ತರ ಎದುರು ವ್ಯಕ್ತಪಡಿಸಿದರು. ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯಲ್ಲಿ ರಾಜ್ಯ ಮುಖಂಡ ಮಂಜುನಾಥ ಓಲೇಕಾರ, ಮುಖಂಡ ಗವಿಸಿದ್ದಪ್ಪ ದ್ಯಾಮಣ್ಣವರ, ನಿಕಟಪೂರ್ವ ಜಿಲ್ಲಾಧ್ಯಕ್ಷ ಸಿದ್ದರಾಜ ಕಲಕೋಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ನೀಲಪ್ಪ ಚಾವಡಿ, ಸಂತೋಷ ಆಲದಕಟ್ಟಿ, ಸಿದ್ದಪ್ಪ ಚಿಕ್ಕಬಿದರಿ, ಜಿಲ್ಲಾ ಮಾಧ್ಯಮ ಸಂಚಾಲಕ ವಿಜಯಕುಮಾರ ಚಿನ್ನಿಕಟ್ಟಿ, ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಲತಾ ಬಡ್ನಿಮಠ, ನಗರ ಮೋರ್ಚಾ ಅಧ್ಯಕ್ಷೆ ರೋಹಿಣಿ ಪಾಟೀಲ, ಮಂಜುಳಾ ಕರಬಸಮ್ಮನವರ ಸೇರಿದಂತೆ ಜಿಲ್ಲೆಯ ಬಿಜೆಪಿ ಮುಖಂಡರು, ಕಾರ್ಯಕರ್ತರು ಹಾಗೂ ವಿವಿಧ ಮೋರ್ಚಾದ ಪದಾಕಾರಿಗಳು ಉಪಸ್ಥಿತರಿದ್ದರು.

ಮುಖಂಡರಾದ ಬಸವರಾಜ ಕಳಸೂರ ಸ್ವಾಗತಿಸಿದರು. ಕೊನೆಯಲ್ಲಿ ನಂಜುಂಡೇಶ ಕಳ್ಳೇರ ವಂದಿಸಿದರು.

ನಕಲಿ ನೋಟು ಪತ್ತೆ : ದೂರು ದಾಖಲು

ಹಾವೇರಿ: ಬ್ಯಾಡಗಿ ಪಟ್ಟಣದ ಗುಮ್ಮನಹಳ್ಳಿ ರಸ್ತೆಯಲ್ಲಿರುವ ಕರ್ನಾಟಕ ಬ್ಯಾಂಕಿನಲ್ಲಿ 200 ರೂ.ಮುಖ ಬೆಲೆಯ ಐದು ನಕಲಿ ನೋಟುಗಳು ಪತ್ತೆಯಾಗಿದ್ದು, ನಕಲಿ ನೋಟು ಜಮೆ ಮಾಡಿದ ವ್ಯಕ್ತಿಯ ವಿರುದ್ಧ ಕ್ರಮಕೈಗೊಳ್ಳುವಂತೆ ಬ್ಯಾಂಕಿನ ಮ್ಯಾನೇಜರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಕರ್ನಾಟಕ ಬ್ಯಾಂಕಿನ ಮ್ಯಾನೇಜರ್ ಈರಪ್ಪ ಜಕಾತಿ ಜೂ.24ರಂದು ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಲಾಗಿದೆ. ಬ್ಯಾಡಗಿಯ ಸಂಗಮೇಶ್ವರ ನಗರದಲ್ಲಿರುವ ಬ್ಯಾಂಕಿನಲ್ಲಿ 2025 ಜೂ.30ರಂದು 200 ರೂ.ಮುಖಬೆಲೆಯ 5 ನಕಲಿ ನೋಟುಗಳು ಪತ್ತೆಯಾಗಿದ್ದು, ಈ ನಕಲಿ ನೋಟುಗಳು ಯಾರ ಖಾತೆಗೆ ಜಮೆಯಾಗಿರುವ ಬಗ್ಗೆ ಪರಿಶೀಲಿಸಿದಾಗ ಬ್ಯಾಂಕಿನ ಗ್ರಾಹಕಿ ಸಾವಿತ್ರಮ್ಮ ಬಣಕಾರ ಎಂಬುವವರ ಅಕೌಂಟ್‌ಗೆ ಜಮೆ ಮಾಡಲಾಗಿದೆ. ಜಮೆ ಮಾಡಿದವರು ಯಾರು ಎಂಬುದು ಪತ್ತೆಯಾಗಿಲ್ಲ. ಆದ್ದರಿಂದ ಭಾರತೀಯ ಕರೆನ್ಸಿ ನೋಟುಗಳ ಮುದ್ರಣ ಮತ್ತು ಚಲಾವಣೆಯ ಅಪರಾಧವಾಗಿದ್ದರಿಂದ ನಕಲಿ ನೋಟು ಜಮೆ ಮಾಡಿದವರ ವಿರುದ್ಧ ಕ್ರಮಕೈಗೊಳ್ಳಲು ಒತ್ತಾಯಿಸಲಾಗಿದೆ. ಈ ಸಂಬಂಧ ಬ್ಯಾಡಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಿಬಿರದ ಸದುಪಯೋಗ ಪಡೆದುಕೊಳ್ಳಿ

ಬ್ಯಾಡಗಿ: ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಇದರ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದ ಅಡಿಯಲ್ಲಿ ಬ್ಯಾಡಗಿ ತಾಲೂಕಿನ ಶೀಡೆನೂರ ವಲಯದ ಬನ್ನಿಹಟ್ಟಿ ಗ್ರಾಮದ ಪ್ರಕೃತಿ ಜ್ಞಾನ ವಿಕಾಸ ಕೇಂದ್ರದಲ್ಲಿ ಸ್ಥಳೀಯ ಪ್ರಾಥಮಿಕ ಆರೋಗ್ಯ ಇಲಾಖೆಯವರ ಹಾಗೂ ಎಂ.ಎಂ ಜೋಶಿ ಕಣ್ಣಿನ ಆಸ್ಪತ್ರೆ ಹುಬ್ಬಳ್ಳಿ ಇವರ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರದ ನಡೆಯಿತು ತಾಲೂಕು ಯೋಜನಾಧಿಕಾರಿ ಮಹದೇವ ನಾಯಕ್ ಅವರು ದೀಪ ಬೆಳಗುವ ಮೂಲಕ ಉದ್ಘಾಟನೆ ನಡೆಸಿ ಮಾತನಾಡಿದವರು ಗ್ರಾಮೀಣಾಭಿವೃದ್ಧಿ ಯೋಜನೆಯ ಸದಸ್ಯರ ಜೊತೆಗೆ ಗ್ರಾಮಸ್ಥರ ಆರೋಗ್ಯವನ್ನು ಕಾಪಾಡುವ ದೃಷ್ಟಿಯಿಂದ ಪ್ರತಿ ಗ್ರಾಮ ಗ್ರಾಮಗಳಲ್ಲಿ ಉಚಿತ ಆರೋಗ್ಯ ತಪಾಸಣಾ ಕಾರ್ಯಕ್ರಮಗಳು ಹಾಗೂ ವಾತ್ಸಲ್ಯ ಕಾರ್ಯಕ್ರಮ ಮಾಶಾಸನ ಸಂಪೂರ್ಣ ಸುರಕ್ಷಾ ಸಹಾಯಧನ, ಜನಮಂಗಳ, ವಿಶೇಷ ಅನುದಾನ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಯೋಜನೆ ಕಾರ್ಯಕ್ರಮವಾಗಿ ಮಾಡುತ್ತಿದ್ದು ಗ್ರಾಮಸ್ಥರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಹೇಳಿದರು.

ಕಾರ್ಯಕ್ರಮದಲ್ಲಿ ಬನ್ನಿಹಟ್ಟಿ ಗ್ರಾಮದ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವಿದ್ಯಾವತಿ ಹಳೆಗೌಡರ್ ಮಾತನಾಡಿ, ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಜ್ಞಾನ ವಿಕಾಸ ಕೇಂದ್ರದ ಎಲ್ಲಾ ಕಾರ್ಯಕ್ರಮಗಳು ಮಹಿಳೆಯರ ಸ್ವಾವಲಂಬಿ ಮತ್ತು ಸ್ವಾಭಿಮಾನಿ ಬದುಕಿಗೆ ಸಹಕಾರಿ ಎಂದು ಹೇಳಿದರು.

ಆರೋಗ್ಯ ತಪಾಸಣಾ ಶಿಬಿರದಲ್ಲಿ ಒಟ್ಟು 117 ಜನರು ತಪಾಸಣೆ ನಡೆಸಿ 12 ಜನರಿಗೆ ಶಸ್ತ್ರ ಚಿಕಿಸಿಗೆ ಒಳಗಾಗಿದ್ದಾರೆ ಒಟ್ಟು 34 ಜನರಿಗೆ ಕನ್ನಡ ಕವಿತರಣೆ ಮಾಡಲಾಯಿತು ಮತ್ತು ಸ್ಥಳೀಯ ಆರೋಗ್ಯ ಕೇಂದ್ರದ ಸಿಬ್ಬಂದಿಯವರು ನೂರಾರು ಜನರಿಗೆ ಬಿ.ಪಿ ಶುಗರ್, ಚಿಕಿತ್ಸೆಯನ್ನು ಮಾಡಿದರು.

ಗ್ರಾಪಂ ಸದಸ್ಯರಾದ ಮಂಜುಳಾ ಬಡಿಗೇರ್ ಒಕ್ಕೂಟದ ಅಧ್ಯಕ್ಷರಾದ ಗೌರಮ್ಮ ಹಿರೇಮಠ ಪ್ರಾಥಮಿಕ ಆರೋಗ್ಯ ಕೇಂದ್ರದ ನಿರೀಕ್ಷಣಾಧಿಕಾರಿ ಸರಿತಾ ಹಾವೇರಿ ಹಾಗೂ ಜ್ಞಾನವಿಕಾಸ ಸಮನ್ವಯಾಧಿಕಾರಿ ಮಲ್ಲಮ್ಮ ಅರಹುಣಸಿ ಸೇರಿದಂತೆ ಗ್ರಾಮದ ಹಿರಿಯರು ಜ್ಞಾನವಿಕಾಸ ಸೇವಾ ಪ್ರತಿನಿಧಿ ಕೇಂದ್ರದ ಸದಸ್ಯರು, ಸಂಘದ ಸದಸ್ಯರು. ಜೋಶಿ ಕಣ್ಣಿನ ಆಸ್ಪತ್ರೆ ಸಿಬ್ಬಂದಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ತರಬೇತಿ ಸದುಪಯೋಗಪಡಿಸಿಕೊಳ್ಳಿ: ಸಾಧಿಕಾ ಬಾನು

ರಾಣೇಬೆನ್ನೂರ: ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಯುವಜನರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಕೌಶಲ್ಯಾಭಿವೃದ್ಧಿ ಹಾಗೂ ಪರಿಣಾಮಕಾರಿ ಸಂವಹನ ಕೌಶಲ್ಯಗಳು ಅತ್ಯಗತ್ಯವಾಗಿವೆ ಎಂದು ನಂದಿ ಫೌಂಡೇಶನ್‌ನ ತರಬೇತುಗಾರ್ತಿ ಸಾಧಿಕಾ ಬಾನು ಹೇಳಿದರು.

ನಗರದ ಕೆ.ಎಲ್.ಇ. ಸಂಸ್ಥೆಯ ರಾಜರಾಜೇಶ್ವರಿ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯದಲ್ಲಿ ನಂದಿ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ಕೌಶಲ್ಯಾಭಿವೃದ್ಧಿ ಮತ್ತು ಸಂವಹನ ಸರ್ಟಿಫಿಕೇಟ್ ಕೋರ್ಸ್ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿನಿಯರು ತಮ್ಮ ವಿಚಾರಗಳನ್ನು ಆತ್ಮವಿಶ್ವಾಸದಿಂದ ವ್ಯಕ್ತಪಡಿಸಲು ಸಂವಹನ ಕೌಶಲ್ಯಗಳು ನೆರವಾಗುತ್ತವೆ. ಇಂಗ್ಲಿಷ್ ಭಾಷಾ ಪ್ರಾವೀಣ್ಯತೆ, ವ್ಯಕ್ತಿತ್ವ ವಿಕಸನ ಹಾಗೂ ಉದ್ಯೋಗ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಲು ಅಗತ್ಯವಾದ ವಿವಿಧ ಕೌಶಲ್ಯಗಳನ್ನು ಈ ತರಬೇತಿ ಕಾರ್ಯಕ್ರಮದ ಮೂಲಕ ಬೆಳೆಸಿಕೊಳ್ಳಬಹುದು ಎಂದು ತಿಳಿಸಿದರು.

ಜಾಗತೀಕರಣದ ಈ ಕಾಲಘಟ್ಟದಲ್ಲಿ ಉದ್ಯೋಗದಾತರು ನಿರೀಕ್ಷಿಸುವ ಕೌಶಲ್ಯಗಳನ್ನು ವಿದ್ಯಾರ್ಥಿನಿಯರಲ್ಲಿ ಬೆಳೆಸುವ ಉದ್ದೇಶದಿಂದ ಈ ಕಾರ್ಯಕ್ರಮ ರೂಪಿಸಲಾಗಿದೆ. ಪ್ರಾಯೋಗಿಕ ತರಬೇತಿ, ಚಟುವಟಿಕೆಗಳು ಹಾಗೂ ಯಶೋಗಾಥೆಗಳ ಮೂಲಕ ವಿದ್ಯಾರ್ಥಿನಿಯರನ್ನು ಉದ್ಯೋಗಕ್ಷೇತ್ರಕ್ಕೆ ಸಜ್ಜುಗೊಳಿಸುವ ಕಾರ್ಯ ನಡೆಯಲಿದೆ ಎಂದರು.

ಮಹಾವಿದ್ಯಾಲಯದ ಪ್ರಾ.ಪ್ರೊ. ನಾರಾಯಣ ನಾಯ್ಕ ಅಧ್ಯಕ್ಷತೆವಹಿಸಿ ಮಾತನಾಡಿ, ವಿದ್ಯಾರ್ಥಿನಿಯರು ಇಂತಹ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳ ಸದುಪಯೋಗ ಪಡೆದುಕೊಂಡು ತಮ್ಮ ಭವಿಷ್ಯವನ್ನು ಉತ್ತಮಗೊಳಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ನಂದಿ ಫೌಂಡೇಶನ್‌ನ ಶ್ಯಾಮ್ಯುಲ್, ಕುಸುಮಾ ಪ್ರಸಾದ್, ದಾಮೋದರನ್ ಸೇರಿದಂತೆ ಮಹಾವಿದ್ಯಾಲಯದ ಉಪನ್ಯಾಸಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು. ಕೌಶಲ್ಯಾಭಿವೃದ್ಧಿ ಮತ್ತು ಸಂವಹನ ಕಾರ್ಯಕ್ರಮದ ಸಂಯೋಜಕ ಪ್ರೊ. ವೀರೇಶ ಕುರಹಟ್ಟಿ ಸ್ವಾಗತಿಸಿದರು. ವಿದ್ಯಾರ್ಥಿನಿ ಪೃಥ್ವಿ ಜೆ. ಕಾರ್ಯಕ್ರಮ ನಿರೂಪಿಸಿದರು. ಪ್ರಭಾವತಿ ಹಾಗೂ ಕೃಪಾ ವಂದಿಸಿದರು.



ಶಿಕ್ಷಣ ಇಲಾಖೆ ಅಸ್ತಿತ್ವ ದುರ್ಬಲಗೊಳಿಸುವ ಯತ್ನ

ಹಾವೇರಿ: ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರನ್ನು 9 ಮತ್ತು 10ನೇ ತರಗತಿಗಳ ಬೋಧನೆಗೆ ನಿಯೋಜಿಸುವ ಸಂಬಂಧ ರಾಜ್ಯ ಸರ್ಕಾರ ಹೊರಡಿಸಿರುವ ಕರಡು ನಿಯಮವು ಪದವಿಪೂರ್ವ ಶಿಕ್ಷಣ ಇಲಾಖೆಯ ಅಸ್ತಿತ್ವವನ್ನೇ ದುರ್ಬಲಗೊಳಿಸುವ ಪ್ರಯತ್ನವಾಗಿದೆ. ಸರ್ಕಾರ ಈ ನಿರ್ಧಾರವನ್ನು ತಕ್ಷಣವೇ ಹಿಂಪಡೆಯಬೇಕು ಎಂದು ರಾಜ್ಯ ಪಪೂ ಕಾಲೇಜುಗಳ ಉಪನ್ಯಾಸಕರ ಸಂಘದ ಜಿಲ್ಲಾಧ್ಯಕ್ಷ ಎಸ್.ಎಸ್. ನಿಸ್ಸೀಮಗೌಡ್ರ ಆಗ್ರಹಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜೂ.8ರಂದು ಶಿಕ್ಷಣ ಇಲಾಖೆ ಹೊರಡಿಸಿರುವ ಕರಡು ನಿಯಮದ ಪ್ರಕಾರ ಪದವಿ ಪೂರ್ವ ಉಪನ್ಯಾಸಕರನ್ನು 9 ಮತ್ತು 10ನೇ ತರಗತಿಗಳ ಶಿಕ್ಷಕರಾಗಿ ನಿಯೋಜಿಸಲು ಅವಕಾಶ ಕಲ್ಪಿಸಲಾಗಿದೆ. ಈ ಕ್ರಮವು ಉಪನ್ಯಾಸಕರ ಹುದ್ದೆಯ ಗೌರವ ಹಾಗೂ ಸೇವಾ ಭದ್ರತೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ಆರೋಪಿಸಿದರು.

ಈ ಹಿಂದೆ ಪದವಿ ಪೂರ್ವ ಕಾಲೇಜುಗಳು ಪದವಿ ಕಾಲೇಜುಗಳೊಂದಿಗೆ ಕಾರ್ಯನಿರ್ವಹಿಸುತ್ತಿದ್ದವು. ಬಳಿಕ ಅವುಗಳನ್ನು ಶಾಲಾ ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಯಿತು. ಸರಕಾರ ನಮ್ಮನ್ನು 'ಉಪನ್ಯಾಸಕರು' ಎಂದು ನೇಮಕ ಮಾಡಿಕೊಂಡಿದ್ದು, ಈಗ 'ಶಿಕ್ಷಕರಾಗಿ' ನಿಯೋಜಿಸುವುದು ಹಿಂಬಡ್ತಿ ಮಾಡಿದಂತಾಗಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.



ಪ.ಪೂ ಕಾಲೇಜುಗಳ ಪ್ರಾಚಾರ್ಯರ ಸಂಘದ ಜಿಲ್ಲಾಧ್ಯಕ್ಷ ನಾಗರಾಜ ದ್ಯಾಮನಕೊಪ್ಪ ಮಾತನಾಡಿ, ಸರ್ಕಾರ ಹೊರಡಿಸಿರುವ ಕರಡು ನಿಯಮಾವಳಿ ಪಪೂ ಕಾಲೇಜು ಶಿಕ್ಷಣದ ಅಸ್ತಿತ್ವವನ್ನೇ ಕಸಿದುಕೊಳ್ಳುತ್ತಿರುವ ಹುನ್ನಾರವಾಗಿದೆ. ಮಕ್ಕಳ ಉನ್ನತೀಕರಣಕ್ಕೆ ಸರ್ಕಾರ ಪ್ರೋತ್ಸಾಹ ನೀಡಬೇಕೆ ಹೊರತು, ಕೊಟ್ಟಿರುವ ಹಕ್ಕನ್ನು ಕಿತ್ತುಕೊಳ್ಳಬಾರದು. ಸರ್ಕಾರ ಕರಡು ಆದೇಶವನ್ನು ಹಿಂಪಡೆಯಬೇಕೆಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಅನುದಾನಿತ ಪ.ಪೂ.ಕಾಲೇಜುಗಳ ನೌಕರರ ಸಂಘದ ಜಿಲ್ಲಾಧ್ಯಕ್ಷ ಡಾ.ಪರಶುರಾಮ ಗಚ್ಚಿನಮನಿ, ಸಂಚಾಲಕ ಶೇಖರ ಭಜಂತ್ರಿ, ಶಿವಾನಂದ ಕಡಕೋಳ, ಸತೀಶ ಬೇವಿನಹಳ್ಳಿ ಉಪಸ್ಥಿತರಿದ್ದರು.

ಭಾವೈಕ್ಯತೆಯ ಮೊಹರಂ ಆಚರಣೆ

ಗೋಕರ್ಣ: ಮುಸ್ಲಿಂ ಹಬ್ಬದಲ್ಲಿ ಹಿಂದುಗಳೇ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಭಾವೈಕ್ಯತೆಯಿಂದ ಮೊಹರಂ ಹಬ್ಬವನ್ನ ಹನೇಹಳ್ಳಿಯಲ್ಲಿ ಶುಕ್ರವಾರ ಆಚರಿಸಲಾಯಿತು.

ಹಿಂದಿನ ದಿನ ಇಲ್ಲಿನ ಹನೇಹಳ್ಳಿಯಲ್ಲಿರುವ ಅಲ್ಲಾದೀ ದೇವರ ಸನ್ನಿಧಿಯಲ್ಲಿ ಕೆಂಡ ಹಾಯವುದು ಮತ್ತಿತರ ಕಾರ್ಯ ಜನರುಗಿತು. ಶುಕ್ರವಾರ ದೇವರ ಸನ್ನಿಧಿಯಿಂದ ಮೆರವಣಿಗೆ ಹೊರಟು ಗಂಗಾವಳಿ ಮಾರ್ಗವಾಗಿ ಹಾರೂಮಾಸ್ಕೇರಿ ಗಣಪತಿ ಮಂದಿರದ ಪಕ್ಕದ ಗೌಡರ ಜಾಗಕ್ಕೆ ಆಗಮಿಸಿ ವಿಶೇಷ ಪೂಜೆ ನೆರವೇರಿಸಲಾಯಿತು.



ಈ ವೇಳೆ ಎಲ್ಲಾ ಸಮುದಾಯದವರು ಹಣ್ಣು, ಕಾಯಿ ಸಮರ್ಪಸಿದರು. ಬಳಿಕ ದೇವರ ಸಾನಿಧ್ಯಕ್ಕೆ ಮರಳಿ ಹಬ್ಬ ಸಂಪನ್ನಗೊಂಡಿತು. ಈ ಸಾನಿಧ್ಯದಲ್ಲಿ ಹಬ್ಬದ ದಿನದಂದು ಮಣ್ಣಿನಲ್ಲಿ ಹುಗಿದಿಟ್ಟ ಅಕ್ಕಿಯನ್ನ ಬರುವ ವರ್ಷ ಹಬ್ಬದಂದು ತೆಗೆದು ಅನ್ನದ ರೂಪದ ಪ್ರಸಾದವಾಗಿ ನೀಡುವುದು ವಿಶೇಷವಾಗಿದ್ದು, ಅದರಂತೆ ಈ ವರ್ಷವೂ ಕಳೆದ ವರ್ಷದ ಮಡಿಕೆ ತೆಗೆದು ಪ್ರಸಾದ ನೀಡಲಾಯಿತು. ಹಾಲಕ್ಕಿ ಒಕ್ಕಲಿಗ ಸಮಾಜದವರು ಸೇರಿದಂತೆ ವಿವಿಧ ಪಾಲ್ಗೊಂಡು ದೇವರನ್ನ ಮೆರವಣಿಗೆಯಲ್ಲಿ ಕರೆದುಕೊಂಡು ಹೋಗುತ್ತಾರೆ. ಈ ಹಳ್ಳಿಯಲ್ಲಿ ಎರಡರಿಂದ ಮೂರು ಮುಸ್ಲಿಂ ಕುಟುಂಬಗಳಿದ್ದು, ಇವರ ಜೊತೆ ಊರಿನ ಎಲ್ಲಾ ಸಮುದಾಯದವರು ಜೊತೆಯಾಗಿ ಹಬ್ಬ ಆಚರಿಸುವುದು ವಿಶೇಷವಾಗಿದ್ದು, ಅಲ್ಲಾದೀ ದೇವರಿಗೆ ಹಣ್ಣು ಕಾಯಿ ಸರ್ಮಪಿಸುವುದು ಮತ್ತೊಂದು ವಿಶೇಷವಾಗಿದೆ.

ಪ್ರೊ.ಮಾ ನಾಗರಾಜ ಅಭಿನಂದನಾ ಸಮಾರಂಭ

ಹಾವೇರಿ: ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಶುಕ್ರವಾರ ಬೆಳಗ್ಗೆ ನೂತನವಾಗಿ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾದ ಪ್ರೊ.ಮಾ ನಾಗರಾಜ ಅವರ ಅಭಿನಂದನಾ ಸಮಾರಂಭ ನಡೆಯಿತು.

ಈ ವೇಳೆ ಮುಖಂಡ ಲಿಂಗರಾಜ ಚಪ್ಪರದಳ್ಳಿ, ಶಿವಲಿಂಗಪ್ಪ ತಲ್ಲೂರು ಹಾಗೂ ಸಿದ್ದರಾಜ ಕಲಕೋಟಿ ಮಾತನಾಡಿ, ಮಾ ನಾಗರಾಜ ಅವರು, ಎಬಿವಿಪಿಯಿಂದ ತಮ್ಮ ವಿದ್ಯಾರ್ಥಿ ದೆಸೆಯಿಂದ ಸಂಘಟನೆ ಮತ್ತು ಶಿಸ್ತು ಪಾಲಿಸಿಕೊಂಡು ಬಂದವರು, ಅನೇಕ ಹೋರಾಟಗಳನ್ನು ಮಾಡಿಕೊಂಡು ಸಂಘ ಪರಿವಾರದ ಜೊತೆಗೆ ಎಲ್ಲಾ ಸಮುದಾಯದವರ ಜೊತೆಗೆ ಉತ್ತಮ ಒಡನಾಟ, ಸಂಘದ ಗರಡಿಯಲ್ಲಿ ಶಿಸ್ತಿನ ಸಿಪಾಯಿಯಂತೆ ಸೇವೆ ಮಾಡುತ್ತಾ ಬಂದವರು. ಹಾವೇರಿ ಕಾರ್ಯಾಲಯ ನಿರ್ಮಾಣದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ಇದೀಗ ಅದೇ ಭವನದಲ್ಲಿ ಅವರ ಅಭಿನಂದನಾ ಸಮಾರಂಭವನ್ನು ಮಾಡುತ್ತಿರುವದು ನಮ್ಮೆಲ್ಲರಿಗೂ ಹೆಮ್ಮೆ ತರುವಂತದ್ದು ಎಂದು ಸಂತಸ ವ್ಯಕ್ತ ಪಡಿಸಿದರು.



ಸನ್ಮಾನಿತರಾದ ರಾಜ್ಯಸಭಾ ಸದಸ್ಯ ಪ್ರೊ. ಮಾ.ನಾಗರಾಜ ಮಾತನಾಡಿ, ಇಂದು ನಮ್ಮ ಪ್ರಧಾನಿ ನರೇಂದ್ರ ಮೋದಿಜಿ ಅವರು ಸತತವಾಗಿ 12 ವರ್ಷಗಳ ವಿಶ್ವಾಸ, ಜನಕಲ್ಯಾಣ ಆಡಳಿತವನ್ನು ನೀಡುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆ ಪಡುವಂತ ವಿಷಯ. ಅವರು ಅಕಾರ ವಹಿಸಿಕೊಂಡಾಗಿನಿಂದ ಇಲ್ಲಿಯವರೆಗೆ ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತಂದು ಜನರ ಕಲ್ಯಾಣವನ್ನು ಮಾಡಿದ್ದಾರೆ. ರೈಲ್ವೆ ವಿದ್ಯುದೀಕರಣ ಮಾಡಿ ಇಂಧನದ ಉಳಿತಾಯಕ್ಕೆ ಒತ್ತು, ರಸ್ತೆ ಸಂಪರ್ಕ ಅಭಿವೃದ್ಧಿ, ರಕ್ಷಣಾ ಕ್ಷೇತ್ರದಲ್ಲಿ ಸಮಗ್ರ ಬದಲಾವಣೆ, ರೈತರಿಗೆ ಕಿಸಾನ್ ಸಮ್ಮಾನ, ಆರೋಗ್ಯಕ್ಕಾಗಿ ಆಯುಷ್ಮಾನ್ ಭಾರತ, ಉದ್ಯೋಗಕ್ಕಾಗಿ ವಿಶ್ವಕರ್ಮ ಹೀಗೆ ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡ್ಯೊಯ್ಯುತ್ತಿದ್ದಾರೆ. ನನಗೆ ಇಷ್ಟೊಂದು ಅದ್ಭುತ ಅಭಿನಂದನೆ ಹಮ್ಮಿಕೊಂಡಿರುವುದು ಸಂತಸ ನೀಡಿದೆ. ತಮ್ಮ ಆಯ್ಕೆಗೆ ಶ್ರಮಿಸಿದ ಎಲ್ಲಾ ಬಿಜೆಪಿ ನಾಯಕರಿಗೆ ಹಾಗೂ ಸಂಘ ಪರಿವಾರದ ಪ್ರಮುಖರಿಗೆ ಈ ಗೌರವ ಸಲ್ಲತಕ್ಕದ್ದು ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಬಿಜೆಪಿ ಅಧ್ಯಕ್ಷ ಹಾಗೂ ಮಾಜಿ ಶಾಸಕ ವಿರೂಪಾಕ್ಷಪ್ಪ ಬಳ್ಳಾರಿ ವಹಿಸಿಕೊಂಡಿದ್ದರು. ಈ ವೇಳೆ ಮಾಜಿ ಶಾಸಕ ಶಿವರಾಜ ಸಜ್ಜನರ, ನಂಜುಂಡೇಶ ಕಳ್ಳೇರ, ವಿಜಯಕುಮಾರ ಚಿನ್ನಿಕಟ್ಟಿ, ನಿರಂಜನ ಹೇರೂರು, ಗಂಗಾಧರ ಬಾಣದ, ಕಿರಣ ಕೊಳ್ಳಿ, ಮಾರುತಿ ಗೊರವರ, ಬಸವರಾಜ ಕೋಳಿವಾಡ, ಬಸವರಾಜ ಕಳಸೂರ, ಕಲ್ಯಾಣಕುಮಾರ ಶೆಟ್ಟರ, ಎಲ್ಲಾ ಮೋರ್ಚಾ ಅಧ್ಯಕ್ಷ ಮತ್ತು ಪ್ರಧಾನ ಕಾರ್ಯದರ್ಶಿಗಳು ಲತಾ ಬಡ್ನಿಮಠ, ನಗರ ಮೋರ್ಚಾ ಅಧ್ಯಕ್ಷೆ ರೋಹಿಣಿ ಪಾಟೀಲ, ಮಂಜುಳಾ ಕರಬಸಮ್ಮನವರ ಮತ್ತಿತರರು ಉಪಸ್ಥಿತರಿದ್ದರು.

ಬಿಎಲ್‌ಒ ಕರ್ತವ್ಯಗಳಿಂದ ಮುಕ್ತಿಗೊಳಿಸಿ: ಸುಶೀಲಾ ಚಲವಾದಿ

ಮುಂಡರಗಿ: ಅಂಗನವಾಡಿ ಕಾರ್ಯಕರ್ತೆಯರಿಗೆ ಹೆಚ್ಚುವರಿ ಚುನಾವಣೆ ಕೆಲಸಗಳಿಂದಾಗಿ ದೈಹಿಕ ಮತ್ತು ಮಾನಸಿಕ ಒತ್ತಡಕ್ಕೊಳಗಾಗಿ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಹಾಗೆಯೇ ಅಂಗನವಾಡಿಯಲ್ಲಿ ಮಕ್ಕಳ ಪಾಲನೆ ಮತ್ತು ಸಮರ್ಪಕ ಶಿಕ್ಷಣ ನೀಡಿ ಕಾಳಜಿ ವಹಿಸುವುದಕ್ಕೆ ತೊಂದರೆಯಾಗುತ್ತಿದೆ. ಆದ್ದರಿಂದ ಅಂಗನವಾಡಿ ಕಾರ್ಯಕರ್ತೆಯರನ್ನು ಬಿಎಲ್‌ಒ ಕರ್ತವ್ಯಗಳಿಂದ ಮುಕ್ತಿಗೊಳಿಸಬೇಕು ಎಂದು ತಾಲೂಕು ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ (ಸಿಐಟಿಯು) ಸುಶೀಲಾ ಚಲವಾದಿ ಒತ್ತಾಯಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಎಲ್‌ಒ ಕೆಲಸಗಳಿಂದ ಮುಕ್ತಿ ನೀಡಿ ಕೇವಲ ಅಂಗನವಾಡಿ ಕೆಲಸಗಳಿಗೆ ಮಾತ್ರ ಅವಕಾಶ ನೀಡಬೇಕೆನ್ನುವುದು ಬಹುದಿನದ ಬೇಡಿಕೆಯಾಗಿದೆ. ಸರ್ಕಾರ ಈ ಬಗ್ಗೆ ಗಮನ ಹರಿಸುವ ಕೆಲಸ ಮಾಡಬೇಕು. ಜೂ.25ರಂದು ಇಲ್ಲಿನ ತಹಶೀಲ್ದಾರ್ ಕಾರ್ಯಾಲಯದಲ್ಲಿ ಚುನಾವಣೆ ಮತಪಟ್ಟಿ ಪರಿಷ್ಕರಣೆ ಕುರಿತಾದ ಬಿಎಲ್‌ಒಗಳ ತರಬೇತಿಯಲ್ಲಿ ಕೊರ್ಲಹಳ್ಳಿ ಅನ್ನಕ್ಕ ಹಮ್ಮಿಗಿ ಎಂಬುವವರಿಗೆ ಕೆಲಸದ ಒತ್ತಡದಿಂದ ಬಿಪಿ ಹೆಚ್ಚಾಗಿ ಮೂರ್ಛೆ ಬಿದ್ದಿದ್ದರು. ತಕ್ಷಣವೇ ಸ್ವತಃ ತಹಶೀಲ್ದಾರ್ ಅವರೇ ತಮ್ಮ ವಾಹನದಲ್ಲಿ ತಾಲೂಕು ಆಸ್ಪತ್ರೆಗೆ ದಾಖಲಿಸಿದರು. ಹೆಚ್ಚಿನ ಚಿಕಿತ್ಸೆಗಾಗಿ ಅನ್ನಕ್ಕ ಅವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಈ ಹಿಂದೆಯೂ ಇಂತಹ ಘಟನೆಗಳು ನಡೆದಿವೆ. ಬಿಎಲ್‌ಒ ಕೆಲಸದಿಂದ ಮುಕ್ತಿಗೊಳಿಸಬೇಕು. ಇಲ್ಲದಿದ್ದರೆ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಸಿಐಟಿಯು ತಾಲೂಕು ಅಂಗನವಾಡಿ ನೌಕರರ ಸಂಘದ ಉಪಾಧ್ಯಕ್ಷೆ ಅನ್ನಪೂರ್ಣ ಸಾಲಿಮಠ ಮಾತನಾಡಿ, ಬಿಎಲ್‌ಒ ಕೆಲಸದ ಮೇಲೆಹೋದಾಗ ಅಂಗನವಾಡಿ ಕೆಲಸಗಳು ನಿಲ್ಲುತ್ತವೆ. ಮೇಲಾಧಿಕಾರಿಗಳು ಪರಿಶೀಲನೆಗೆ ಬಂದಾಗ ರಿಜಿಸ್ಟರ್ ಬರೆಯದಿದ್ದರೆ ನೋಟಿಸ್ ನೀಡುತ್ತಾರೆ. ಇದರಿಂದಾಗಿ ಕೆಲಸದ ಒತ್ತಡ ಹೆಚ್ಚಾಗುತ್ತಿದೆ. ಚುನಾವಣೆ ಕಮಿಟಿಯವರು ನೀವು ಬಿಎಲ್‌ಒ ಕೆಲಸ ಮಾಡಬೇಕು. ಮಾಡದಿದ್ದರೆ ಬಿಎಲ್‌ಒ ಮತ್ತು ಅಂಗನವಾಡಿ ಕಾರ್ಯಕರ್ತೆ ಎರಡು ಹುದ್ದೆಗೆ ರಾಜೀನಾಮೆ ಕೊಡಬೇಕು ಎನ್ನುತ್ತಾರೆ. ಹೀಗಾದರೆ ನಾವು ಯಾವ ರೀತಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಎಂದು ಪ್ರಶ್ನಿಸಿದರು. ಸಂಘದ ಕಾರ್ಯದರ್ಶಿ ಕಮಲಾಕ್ಷೀ ಬೀಳಗಿ, ವಿಶಾಲಾಕ್ಷೀ ದೇವರಮನಿ, ಜಯಶ್ರೀ ರಾಮನಗೌಡ, ಶಾಂತಾ ಹಿರೇಮಠ ಇದ್ದರು.



ಶಾಲೆ ಪ್ರಾರಂಭೋತ್ಸವ ಇಂದು

ನರಗುಂದ: ಪಟ್ಟಣದ ಹಳೇ ಎಪಿಎಂಸಿ ಹತ್ತಿರದ ಟಿಎಪಿಸಿಎಂಎಸ್ ಆವರಣದಲ್ಲಿ ಜೂನ್ 27ರ ಬೆಳಗ್ಗೆ 11 ಗಂಟೆಗೆ ಶ್ರೀ ಸಿದ್ದೇಶ್ವರ ವಿದ್ಯಾವರ್ಧಕ ಸಂಘದ ಅಡಿಯಲ್ಲಿನ ವಿಸ್ಡಮ್ ಪಬ್ಲಿಕ್ ಆಂಗ್ಲ ಮಾಧ್ಯಮ ಶಾಲೆಯ ಪ್ರಾರಂಭೋತ್ಸವದ ಉದ್ಘಾಟನೆಯನ್ನು ಶಾಸಕ ಸಿ.ಸಿ. ಪಾಟೀಲ ಅವರು ಮಾಡಲಿದ್ದಾರೆಂದು ಸಂಸ್ಥೆಯ ಕಾರ್ಯದರ್ಶಿ ಎಸ್.ಆರ್. ಪಾಟೀಲ ತಿಳಿಸಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಟಿಎಪಿಸಿಎಂಎಸ್ ಅಧ್ಯಕ್ಷ ಎ.ಎಂ. ಹುಡೇದ ವಹಿಸುವರು. ಅತಿಥಿಗಳಾಗಿ ನಿಂಗಣ್ಣ ಗಾಡಿ, ಕಸಬಾ ಪಿಕೆಪಿಎಸ್ ಉಪಾಧ್ಯಕ್ಷ ವಸಂತ ಭೂಸಾರೆ, ಶಂಕರಗೌಡ ನಾಯ್ಕರ, ಸಂಸ್ಥೆಯ ಅಧ್ಯಕ್ಷ ಎಸ್.ವಿ. ಹೆಗಡಾಳ, ಮುಖ್ಯೋಪಾಧ್ಯಾಯಿನಿ ಅಶ್ವಿನಿ ವಿ.ಜೆ. ಹಾಗೂ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿ ಇರುವರು.

ಕಿರುಸುದ್ದಿ

ನಾಡಪ್ರಭು ಕೆಂಪೇಗೌಡ ಜಯಂತಿ ಇಂದು

ಬೆಳಗಾವಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಬೆಳಗಾವಿ ಮಹಾನಗರ ಪಾಲಿಕೆ ಇವರ ಸಯುಂಕ್ತ ಆಶ್ರಯದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ ಉತ್ಸವ ಕಾರ್ಯಕ್ರಮವನ್ನು ಜ.27ರಂದು ಶನಿವಾರ ಬೆಳಿಗ್ಗೆ 11 ಗಂಟೆಗೆ ನಗರದ ಬಸವರಾಜ ಕಟ್ಟೀಮನಿ ಸಭಾ ಭವನದಲ್ಲಿ ಆಯೋಜಿಸಲಾಗಿದೆ.

ಲೋಕೋಪಯೋಗಿ ಇಲಾಖೆ ಸಚಿವರಾದ ಸತೀಶ ಜಾರಕಿಹೊಳಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಬೆಳಗಾವಿ ಉತ್ತರ (ವಿಧಾನ ಸಭೆ) ಶಾಸಕರಾದ ಆಸೀಫ್ (ರಾಜು) ಸೇಠ್ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಬೆಳಗಾವಿ ಮ.ನ.ರ.ಸಂ. ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಗೀತಾ ದೇಯಣ್ಣವರ ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಸರ್ಕಾರಿ ಮುಖ್ಯ ಸಚೇತಕರಾದ ಅಶೋಕ ಪಟ್ಟಣ, ಕರ್ನಾಟಕ ಸರ್ಕಾರದ ಮಾನ್ಯ ವಿಶೇಷ ಪ್ರತಿನಿಧಿ 2 ನವದೆಹಲಿ ಪ್ರಕಾಶ ಹುಕ್ಕೇರಿ, ವಾಯುವ್ಯ ಸಾರಿಗೆ ನಿಗಮ ನಿಯಮಿತ ಅಧ್ಯಕ್ಷರಾದ ಭರಮಗೌಡ ಕಾಗೆ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಅಧ್ಯಕ್ಷರಾದ ಮಹಾಂತೇಶ ಕೌಜಲಗಿ, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿ. ಅಧ್ಯಕ್ಷ ಭರಮಣ್ಣ ಉಪ್ಪಾರ ಅವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ರಾಜ್ಯ ಸಭೆ ಸಂಸದರಾದ ಈರಣ್ಣ ಕಡಾಡಿ, ಚಿಕ್ಕೋಡಿ ಲೋಕಸಭಾ ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ಜಿಲ್ಲಾ ಲೋಕಸಭಾ ಸಂಸದರಾದ ಜಗದೀಶ್ ಶೆಟ್ಟರ, ಉತ್ತರ ಕನ್ನಡ ಲೋಕಸಭಾ ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರುಗಳು ಗೌರವಾನ್ವಿತ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಜಿಲ್ಲೆಯ ಎಲ್ಲ ಸಂಸದರು, ಶಾಸಕರು, ಪರಿಷತ್ ಸದಸ್ಯರು, ಜನಪ್ರತಿಧಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ

ಮರಾಠಿಯೊಳಗೊಂದು ಕನ್ನಡ ಗತವೈಭವ ಪುಸ್ತಕ ಬಿಡುಗಡೆ ಇಂದು

ಬೆಳಗಾವಿ: ರಂಗಸೃಷ್ಟಿ ಸಾಂಸ್ಕೃತಿಕ ಸಂಘ , ಬೆಳಗಾವಿ ವತಿಯಿಂದ ಡಾ. ಪಿ. ಜಿ. ಕೆಂಪಣ್ಣವರ ಅವರ ಜಿನ ದೀವಿಗೆ'ಹಾಗೂ ಶಿರೀಷ ಜೋಶಿ ಅವರ ಮರಾಠಿಯೊಳಗೊಂದು ಕನ್ನಡ ಗತವೈಭವ' ಕೃತಿಗಳ ಲೋಕಾರ್ಪಣೆ ಸಮಾರಂಭ ಆಯೋಜಿಸಲಾಗಿದೆ.

ಕಾರ್ಯಕ್ರಮ ಜೂನ್ 27 ಶನಿವಾರ ಇಳಿಹೊತ್ತು 4.30 ಕ್ಕೆ ರಾಣಿಚೆನ್ನಮ್ಮ ವೃತ್ತದಲ್ಲಿರುವ ಕನ್ನಡ ಸಾಹಿತ್ಯ ಭವನದಲ್ಲಿ ನಡೆಯಲಿದೆ.

ಹಿರಿಯ ಸಾಹಿತಿಗಳಾದ ಡಾ. ಬಸವರಾಜ ಜಗಜಂಪಿ ಮತ್ತು ಎಲ್. ಎಸ್. ಶಾಸ್ತ್ರಿ ಅವರು ಕೃತಿಗಳನ್ನು ಬಿಡುಗಡೆ ಮಾಡಲಿದ್ದಾರೆ. ಹಿರಿಯ ಲೇಖಕಿ ಡಾ. ಗುರುದೇವಿ ಹುಲೆಪ್ಪನವರಮಠ ಮತ್ತು ಪ್ರಾಧ್ಯಾಪಕರಾದ ಡಾ. ಎಚ್. ಬಿ. ಕೋಲ್ಕಾರ ಅವರು ಕೃತಿಗಳ ಕುರಿತು ಮಾತನಾಡಲಿದ್ದಾರೆ.

ರಂಗಸೃಷ್ಟಿ ಸಾಂಸ್ಕೃತಿಕ ಸಂಘದ ಅಧ್ಯಕ್ಷ ರಮೇಶ ಜಂಗಲ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ.

ಸಾಹಿತ್ಯಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಉಪಾಧ್ಯಕ್ಷರಾದ ಎಂ.ಕೆ.ಹೆಗಡೆ ಹಾಗೂ ಶೈಲಜಾ ಭಿಂಗೆ, ಕೋಶಾಧಿಕಾರಿ ಶಾಂತಾ ಆಚಾರ್ಯ ಮತ್ತು ಕಾರ್ಯದರ್ಶಿ ಶರಣಗೌಡ ಪಾಟೀಲ ಅವರು ಕೋರಿದ್ದಾರೆ.

ಅರ್ಜಿ ಆಹ್ವಾನ

ಬೆಳಗಾವಿ: ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಶಿಶುಪಾಲನಾ ಕೇಂದ್ರದಲ್ಲಿ ಕಾರ್ಯನಿರ್ವಹಿಸಲು ಗೌರವಧನ ಆಧಾರದ ಮೇಲೆ ಶಿಶುಪಾಲನಾ ಶಿಕ್ಷಕಿ 1, ಶಿಶುಪಾಲನಾ ಸಹಾಯಕಿ 2, ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಹುದ್ದೆಗಳ ಅರ್ಹತೆ: ಶಿಶುಪಾಲನಾ ಶಿಕ್ಷಕಿಯ ವಿದ್ಯಾರ್ಹತೆ ಕನಿಷ್ಠ 10ನೇ ತರಗತಿ ಹಾಗೂ ಸಹಾಯಕಿಯ ವಿದ್ಯಾರ್ಹತೆ ಕನಿಷ್ಠ 7ನೇ ತರಗತಿ ಹೊಂದಿರತಕ್ಕದ್ದು. ಶಿಶುಪಾಲನಾ ಶಿಕ್ಷಕಿಯ ಹುದ್ದೆಗೆ ಶಾಲಾ ಪೂರ್ವ ಶಿಕ್ಷಣ ತರಬೇತಿಯನ್ನು ಪಡೆದಿರಬೇಕು, ಶಿಶುಪಾಲನಾ ಶಿಕ್ಷಕಿ ಹಾಗೂ ಸಹಾಯಕಿಯರ ಹುದ್ದೆಗಳಿಗೆ ವಯೋಮಿತಿ 20-40 ವರ್ಷದೊಳಗಿರಬೇಕು, ಶಿಶುಪಾಲನಾ ಶಿಕ್ಷಕಿ ಹಾಗೂ ಸಹಾಯಕಿಯರು ಶಿಶುಪಾಲನಾ ಕೇಂದ್ರದ ಹತ್ತಿರದಲ್ಲಿ ವಾಸವಾಗಿರಬೇಕು.

ಪ್ರಕಟಣೆಯ ದಿನದಿಂದ 15 ದಿನಗಳೊಳಗಾಗಿ ಶಿಶುಪಾಲನಾ ಶಿಕ್ಷಕಿ ಹಾಗೂ ಸಹಾಯಕಿಯರ ಹುದ್ದೆಗೆ ಆಯ್ಕೆಯಾಗಲು ಇಚ್ಚಿಸುವ ಅಭ್ಯರ್ಥಿಗಳು ಬೆಳಗಾವಿ ಮಹಾನಗರ ಪಾಲಿಕೆ ಆಯುಕ್ತರು ಇವರಿಗೆ ಎಲ್ಲ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು ಎಂದು ಬೆಳಗಾವಿ ಮಹಾನಗರ ಪಾಲಿಕೆ ಉಪ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಲ್ಯಾಳ : ಗ್ರಾಮದಲ್ಲಿ ಮೊಹರಂ ಅಂಗವಾಗಿ ಗ್ರಾಮದ ವಿವಿಧ ಭಾಗಗಳಲ್ಲಿ ತಾಜಿಯಾ ಮೆರವಣಿಗೆಗಳು ನಡೆದವು. ಮೆರವಣಿಗೆಯಲ್ಲಿ ಸಾವಿರಾರು ಭಕ್ತರು ಭಾಗವಹಿಸಿ ಶ್ರದ್ಧಾಭಕ್ತಿಯಿಂದ ಆಚರಣೆಯಲ್ಲಿ ತೊಡಗಿದರು. ಸ್ಥಳೀಯರು ಮೆರವಣಿಗೆಗೆ ನೀರು, ಪಾನೀಯ ಹಾಗೂ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಮೂಲಕ ಮಾನವೀಯತೆ ಮೆರೆದರು.

ಮಕ್ಕಳಿಗೆ ಅಗತ್ಯ ವಸ್ತುಗಳ ವಿತರಣೆ

ಬೆಳಗಾವಿ : ಸಮಾಜಸೇವೆಯ ಉದ್ದೇಶದಿಂದ ಕಾರ್ಯನಿರ್ವಹಿಸುತ್ತಿರುವ ಪ್ರಯತ್ನ ಸಂಸ್ಥೆ ವತಿಯಿಂದ ಬೆಳಗಾವಿ ತಾಲೂಕಿನ ಬಿ.ಕೆ. ಕಂಗ್ರಾಳಿ ಗ್ರಾಮದ ಸಮೃದ್ಧ ಫೌಂಡೇಶನ್ ಮಕ್ಕಳ ಅನಾಥಾಶ್ರಮಕ್ಕೆ ಭೇಟಿ ನೀಡಿ ವಿವಿಧ ಅಗತ್ಯ ವಸ್ತುಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಅನಾಥಾಶ್ರಮದ ಮಕ್ಕಳಿಗೆ ಶಾಲಾ ಪುಸ್ತಕಗಳು, ನೋಟ್ ಬುಕ್ ಗಳು, ಲೇಖನ ಸಾಮಗ್ರಿಗಳು, ದಿನಸಿ ಸಾಮಗ್ರಿಗಳು, ಬಿಸ್ಕತ್ ಹಾಗೂ ವಿವಿಧ ತಿಂಡಿಗಳನ್ನು ವಿತರಿಸಿ, ಮಕ್ಕಳೊಂದಿಗೆ ಆತ್ಮೀಯವಾಗಿ ಸಮಯ ಕಳೆಯಲಾಯಿತು.

ಶಾಲಾ ಪುಸ್ತಕಗಳನ್ನು ಉದಾರವಾಗಿ ಕೊಡುಗೆಯಾಗಿ ನೀಡಿದ ಸಂಸ್ಥೆಯ ಸದಸ್ಯೆ ಅರುಣಾ ಚೌಧರಿ ಅವರ ಸೇವಾ ಮನೋಭಾವವನ್ನು ಸಂಸ್ಥೆಯು ವಿಶೇಷವಾಗಿ ಶ್ಲಾಘಿಸಿತು. ಅವರ ಕೊಡುಗೆಯು ಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡುವುದರೊಂದಿಗೆ, ಅವರ ಭವಿಷ್ಯದ ಕನಸುಗಳಿಗೆ ಹೊಸ ಚೈತನ್ಯ ತುಂಬಲಿದೆ ಎಂದು ಸಂಸ್ಥೆಯ ಅಧ್ಯಕ್ಷೆ ಶಾಂತಾ ಆಚಾರ್ಯ ತಿಳಿಸಿದರು. ಈ ಸೇವಾ ಕಾರ್ಯ ಯಶಸ್ವಿಯಾಗಲು ಸಹಕರಿಸಿದ ಸಂಸ್ಥೆಯ ಎಲ್ಲ ಸದಸ್ಯರು ಹಾಗೂ ಹಿತೈಷಿಗಳಿಗೆ ಪ್ರಯತ್ನ ಸಂಸ್ಥೆ ಕೃತಜ್ಞತೆ ಸಲ್ಲಿಸಿದೆ. ಸಮಾಜದ ಸಹಕಾರದೊಂದಿಗೆ ಇಂತಹ ಸೇವಾ ಚಟುವಟಿಕೆಗಳನ್ನು ಮುಂದುವರಿಸಿ, ಅಗತ್ಯವಿರುವ ಮಕ್ಕಳ ಬದುಕಿನಲ್ಲಿ ಸಂತೋಷ, ಆಶಾಭಾವನೆ ಮತ್ತು ಆತ್ಮವಿಶ್ವಾಸ ಮೂಡಿಸುವ ಕಾರ್ಯವನ್ನು ನಿರಂತರವಾಗಿ ನಡೆಸಲಾಗುವುದು ಎಂದು ಸಂಸ್ಥೆ ತಿಳಿಸಿದೆ. ಈ ವೇಳೆ ಕಾರ್ಯಕ್ರಮದಲ್ಲಿ ಪ್ರಯತ್ನ ಸಂಸ್ಥೆಯ ಎಲ್ಲಾ ಸದಸ್ಯರು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.



ಬೆಳಗಾವಿ : ಸಮಾಜಸೇವೆಯ ಉದ್ದೇಶದಿಂದ ಕಾರ್ಯನಿರ್ವಹಿಸುತ್ತಿರುವ ಪ್ರಯತ್ನ ಸಂಸ್ಥೆ ವತಿಯಿಂದ ಬೆಳಗಾವಿ ತಾಲೂಕಿನ ಬಿ.ಕೆ. ಕಂಗ್ರಾಳಿ ಗ್ರಾಮದ ಸಮೃದ್ಧ ಫೌಂಡೇಶನ್ ಮಕ್ಕಳ ಅನಾಥಾಶ್ರಮಕ್ಕೆ ಭೇಟಿ ನೀಡಿ ವಿವಿಧ ಅಗತ್ಯ ವಸ್ತುಗಳನ್ನು ವಿತರಿಸಲಾಯಿತು.

ಶೂನ್ಯ ಹಾನಿಯಲ್ಲಿ ಅಕ್ಕಿ ಸಂಗ್ರಹಣೆ । ಈರಣ್ಣ ಕಡಾಡಿ ಹೇಳಿಕೆ

ದಕ್ಷಿಣದಲ್ಲೇ ಬೆನಕನಹಳ್ಳಿ ಬೆಸ್ಟ್

ಬೆಳಗಾವಿ: ಬೆಳಗಾವಿಯ ಬೆನಕನಹಳ್ಳಿಯಲ್ಲಿರುವ ಅಕ್ಕಿ ಸಂಗ್ರಹಣೆಯ ಡಿಪೋ ದಕ್ಷಿಣ ಭಾರತದಲ್ಲಿಯೇ ಅತ್ಯುತ್ತಮವಾಗಿದೆ ಎಂದು ಪ್ರಶಸ್ತಿ ಪಡೆದುಕೊಂಡಿದೆ, ನನ್ನ ಅವಧಿಯಲ್ಲಿ ಉತ್ತಮವಾಗಿ ಆಡಳಿತವನ್ನು ಮಾಡಿದ್ದೇನೆ ಹಾಗೂ ಶೂನ್ಯ ಹಾನಿಯಲ್ಲಿ ಅಕ್ಕಿಸಂಗ್ರ ಮಾಡಲಾಗಿದೆ ಎಂದು ಭಾರತೀಯ ಆಹಾರ ನಿಗಮದ ರಾಜ್ಯ ಮಟ್ಟದ ಸಲಹಾ ಸಮಿತಿ ಅಧ್ಯಕ್ಷ ಹಾಗೂ ಮಾಜಿ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಹೇಳಿದರು.

ಶುಕ್ರವಾರ ನಗರದ ಸರ್ಕಿಟ್ ಹೌಸ್ ನಲ್ಲಿ ಪತ್ರಿಕಾಗೋಷ್ಠಿ ಮಾತನಾಡಿದ ಅವರು, ವಿವಿಧ ರಾಜ್ಯಗಳಿಂದ ಕರ್ನಾಟಕಕ್ಕೆ ತರಲಾದ 54.54 ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯಗಳ ಸುರಕ್ಷಿತ ಸಾಗಣೆ, ಶೂನ್ಯ ಹಾನಿ ಸಾಧನೆ ಹಾಗೂ ಅತ್ಯಂತ ಕಡಿಮೆ ಸಂಗ್ರಹಣಾ ಮತ್ತು ಸಾಗಾಣಿಕೆ ನಷ್ಟ ದಾಖಲಿಸಿರುವ ಹಿನ್ನೆಲೆಯಲ್ಲಿ ಭಾರತೀಯ ಆಹಾರ ನಿಗಮದ (ಎಫ್ಸಿಐ) ಕರ್ನಾಟಕ ಪ್ರದೇಶದ ಕಾರ್ಯನಿರ್ವಹಣೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ರಾಜ್ಯ ಮಟ್ಟದ ಸಲಹಾ ಸಮಿತಿ ಸಭೆಯಲ್ಲಿ ಎಫ್ಸಿಐ ಕರ್ನಾಟಕ ಪ್ರದೇಶದ 2025-26ನೇ ಸಾಲಿನ ಕಾರ್ಯಚಟುವಟಿಕೆಗಳ ಪರಿಶೀಲನೆ ನಡೆಸಲಾಗಿದೆ. ಆಹಾರ ಧಾನ್ಯಗಳ ಸಂಗ್ರಹಣೆ, ಸಾಗಣೆ ಹಾಗೂ ಗುಣಮಟ್ಟ ನಿರ್ವಹಣೆಯಲ್ಲಿ ಕರ್ನಾಟಕ ಪ್ರದೇಶವು ಕೇಂದ್ರ ಕಚೇರಿ ಹಾಗೂ ಆಹಾರ ಮತ್ತು ಸಾರ್ವಜನಿಕ ವಿತರಣೆ ಇಲಾಖೆಯ ನಿಗದಿತ ಮಾನದಂಡಗಳನ್ನು ಸಮರ್ಪಕವಾಗಿ ಪಾಲಿಸಿದೆ ಎಂದು ಹೇಳಿದರು.

ರಾಜ್ಯದ ಅಗತ್ಯತೆಗಳನ್ನು ಪೂರೈಸಲು ಹೆಚ್ಚುವರಿ ಉತ್ಪಾದನಾ ರಾಜ್ಯಗಳಿಂದ 54,53 ಮೆಟ್ರಿಕ್ ಟನ್ ಅಕ್ಕಿ ಮತ್ತು ಗೋಧಿಯನ್ನು ರೈಲ್ವೆ ಮೂಲಕ ಕರ್ನಾಟಕಕ್ಕೆ ತರಿಸಿ ಯಶಸ್ವಿಯಾಗಿ ಎಂದು ಹೇಳಿದರು.

ರಾಜ್ಯದಲ್ಲಿ ಎಫ್ಸಿಐ 61 ಗೋದಾಮುಗಳ ಮೂಲಕ 10.68 ಲಕ್ಷ ಮೆಟ್ರಿಕ್ ಟನ್ ಸಂಗ್ರಹಣಾ ಸಾಮರ್ಥ್ಯ ಹೊಂದಿದ್ದು, ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ 2.45 ಲಕ್ಷ ಮೆಟ್ರಿಕ್ ಟನ್ ಸಾಮರ್ಥ್ಯದ ಹೆಚ್ಚುವರಿ ಗೋದಾಮುಗಳ ನಿರ್ಮಾಣ ಪ್ರಗತಿಯಲ್ಲಿದೆ ಎಂದರು.

ಈ ವೇಳೆ ರಾಜ್ಯ ಮಟ್ಟದ ಸಲಹಾ ಸಮಿತಿಯ ಸದಸ್ಯರು, ಭಾರತೀಯ ಆಹಾರ ನಿಗಮದ ಕರ್ನಾಟಕ ಪ್ರದೇಶದ ಮಹಾಪ್ರಬಂಧಕರು, ಉಪ ಮಹಾಪ್ರಬಂಧಕರು, ವಿಭಾಗೀಯ ವ್ಯವಸ್ಥಾಪಕರು, ರಾಜ್ಯ ಸರ್ಕಾರದ ಆಹಾರ ಇಲಾಖೆಯ ಪ್ರತಿನಿಧಿಗಳು ಹಾಗೂ ಕೇಂದ್ರ ಉಗ್ರಾಣ ನಿಗಮದ ಅಧಿಕಾರಿಗಳು ಸೇರಿದಂತೆ ಇತರರು ಇದ್ದರು.



ಬೆಳೆ ಹಾನಿ ನೀಡಿ

ಈ ಬಾರಿ ರಾಜ್ಯದಲ್ಲಿ ಮಳೆಯ ಪ್ರಮಾಣ ಕಡಿಮೆ ಇದ್ದು, ಬೆಳೆದ ಕೆಲ ಬೆಳೆಗಳು ನಾಶವಾಗಿವೆ. ಇನ್ನು ಕೆಲವು ನಾಶವಾಗುವ ಹಂತಕ್ಕೆ ಬಂದಿದೆ ಕೂಡಲೇ ರಾಜ್ಯ ಸರ್ಕಾರ ಬೆಳೆ ಹಾನಿ ಪರಿಹಾರ ನೀಡಲಿ ಎಂದು ಭಾರತೀಯ ಆಹಾರ ನಿಗಮದ ರಾಜ್ಯ ಮಟ್ಟದ ಸಲಹಾ ಸಮಿತಿ ಅಧ್ಯಕ್ಷ ಹಾಗೂ ಮಾಜಿ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ

- 52,90,737 ಮೆಟ್ರಿಕ್ ಟನ್ ಆಹಾರ ಧಾನ್ಯ ವಿತರಣೆ
- ಹೆಚ್ಚುವರಿ ಗೋದಾಮುಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿ

ಕಾರ್ಮಿಕರು ಕೈಗಾರಿಕೆಯ ಬೆನ್ನೆಲುಬು

ಚನ್ನಮ್ಮನ ಕಿತ್ತೂರು: ಕಾರ್ಮಿಕರು ಕೈಗಾರಿಕೆಯ ಬೆನ್ನೆಲುಬು. ಅವರ ಆರೋಗ್ಯ ಮತ್ತು ಮೂಲಭೂತ ಸೌಲಭ್ಯಗಳ ಕಡೆ ವಿಶೇಷ ಗಮನ ಹರಿಸುವುದು ನಮ್ಮ ಕರ್ತವ್ಯವೆಂದು ಕಾರ್ಖಾನೆ ಅಧ್ಯಕ್ಷ ಮತ್ತು ವಿಧಾನಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಹೇಳಿದರು.

ಸಮೀಪದ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಶುಕ್ರವಾರ ತಮ್ಮ ವಿಧಾನ ಪರಿಷತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಡಿ ಸುಮಾರು 5 ಲಕ್ಷ ರೂ. ವೆಚ್ಚದಲ್ಲಿ ಸ್ಥಾಪಿಸಲಾದ ಎರಡು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಉದ್ಘಾಟಿಸಿ ಮಾತನಾಡಿ ಕಾರ್ಮಿಕರ ಆರೋಗ್ಯ ಸುರಕ್ಷತೆಗೆ ಶುದ್ಧ ಕುಡಿಯುವ ನೀರು ದೊರೆಯಬೇಕೆಂಬ ಉದ್ದೇಶದಿಂದ ಕಾರ್ಖಾನೆಯಲ್ಲಿ ಎರಡು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದ್ದು

ಕಾರ್ಮಿಕರ ಆರೋಗ್ಯ ಮತ್ತು ಕಲ್ಯಾಣಕ್ಕೆ ಒತ್ತು ನೀಡುವ ಇಂತಹ ಕಾರ್ಯಗಳು ಮುಂದೆಯೂ ಮುಂದುವರಿಯಲಿವೆ ಎಂದು ತಿಳಿಸಿದರು.

ನಿರ್ದೇಶಕರಾದ ಫಕ್ಕೀರಪ್ಪ ಸಕ್ರೆನ್ನವರ, ಶಂಕ್ರೆಪ್ಪ ಹೊಳಿ, ಶಂಕರ ಕಿಲ್ಲೇದಾರ, ರಾಮನಗೌಡ ಪಾಟೀಲ, ರಘು ಪಾಟೀಲ, ಶ್ರೀಶೈಲ ತುರಮರಿ, ಲಲಿತಾ ಪಾಟೀಲ, ಭರಮಪ್ಪ ಶಿಗೆಹಳ್ಳಿ, ಬಾಳಪ್ಪ ಪೂಜಾರ, ಮುದಕಪ್ಪ ಮರಡಿ, ಮಹಾಂತೇಶ ಲಂಗೊಟಿ, ಕಾರ್ಖಾನೆ ಕಚೇರಿ ಅಧೀಕ್ಷಕ ಎಸ್.ಜಿ. ಹೆಗಡೆ ಹಾಗೂ ಕಾರ್ಖಾನೆ ನೌಕರರು, ಕಾರ್ಮಿಕರು ಇದ್ದರು.



ಚನ್ನಮ್ಮನ ಕಿತ್ತೂರು: ಸಮೀಪದ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಶುಕ್ರವಾರ ತಮ್ಮ ವಿಧಾನ ಪರಿಷತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಡಿ ಸುಮಾರು 5 ಲಕ್ಷ ರೂ. ವೆಚ್ಚದಲ್ಲಿ ಸ್ಥಾಪಿಸಲಾದ ಎರಡು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ವಿಧಾನಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಉದ್ಘಾಟಿಸಿದರು.

ವಿವಿಧ ಪೊಲೀಸ್ ಠಾಣೆಗಳಲ್ಲಿ 23 ಪ್ರಕರಣ

22.5 ಕೆಜಿ ಮಾದಕ ವಸ್ತು ವಿಲೇವಾರಿ!

ಬೆಳಗಾವಿ : ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಎನ್ಡಿಪಿಎಸ್ ಕಾಯ್ದೆಯಡಿ ದಾಖಲಾಗಿದ್ದ 23 ಪ್ರಕರಣಗಳಲ್ಲಿ ವಶಪಡಿಸಿಕೊಂಡಿದ್ದ ಸುಮಾರು 22 ಕೆಜಿ 500 ಗ್ರಾಂ ಮಾದಕ ವಸ್ತುಗಳನ್ನು ಜಿಲ್ಲಾ ಡ್ರಗ್ಸ್ ಡಿಸ್ಪೋಸಲ್ ಸಮಿತಿಯ ವತಿಯಿಂದ ನಿಯಮಾನುಸಾರ ನಿಷ್ಕ್ರಿಯಗೊಳಿಸಲಾಯಿತು.

ಜಿಲ್ಲೆಯ 14 ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 10,41,500 ಮೌಲ್ಯದ ಮಾದಕ ವಸ್ತುಗಳನ್ನು ನ್ಯಾಯಾಲಯ ಹಾಗೂ ಸಂಬಂಧಿತ ಅಧಿಕಾರಿಗಳ ಅನುಮತಿ ಪಡೆದು ವಿಲೇವಾರಿ ಮಾಡಲಾಯಿತು.

ಜೂನ್ 25ರಂದು ಸಂಜೆ 4.30ಕ್ಕೆ ಸವದತ್ತಿ ತಾಲ್ಲೂಕಿನ ಮುರುಗೋಡ ಪೊಲೀಸ್ ಠಾಣೆ ವ್ಯಾಪ್ತಿಯ ಹಾರುಗೊಪ್ಪ ಗ್ರಾಮದ



ದಿ ಬೆಳಗಾಂ ಗ್ರೀನ್ ಎನ್ವಿರಾನ್ಮೆಂಟ್ ಮ್ಯಾನೇಜ್ಮೆಂಟ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಲ್ಲಿ ಪರಿಸರ ನಿಯಮಗಳನ್ನು ಪಾಲಿಸಿ ಮಾದಕ ವಸ್ತುಗಳನ್ನು ತಯಾರಿಸುತ್ತಿದ್ದ ವೇಳೆ ದಾಳಿ ಮಾಡಿ ನಿಷ್ಕ್ರಿಯಗೊಳಿಸಿ ಅಕ್ರಮವಾಗಿ ಇಂತಹ ಚಟುವಟಿಕೆಗಳನ್ನು ಮಾಡುವವರಿಗೆ ಖಡಕ್ ಎಚ್ಚರಿಕೆಯನ್ನು ಜಿಲ್ಲಾ ಪೊಲೀಸ್ ಇಲಾಖೆ ನೀಡಿದೆ.

ಈ ವೇಳೆ ಜಿಲ್ಲಾ ಪೊಲೀಸ್ ಅಧೀಕ್ಷಕರು ಹಾಗೂ ಜಿಲ್ಲಾ ಡ್ರಗ್ಸ್ ಡಿಸ್ಪೋಸಲ್ ಸಮಿತಿಯ ಅಧ್ಯಕ್ಷರು ಸಮಿತಿಯ ಸದಸ್ಯರು ಪಾಲ್ಗೊಂಡಿದ್ದರು.

ಇಂದು ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಅಡಿಗಲ್ಲು

ಯರಗಟ್ಟಿ : ಪಟ್ಟಣದಲ್ಲಿ ಜೂ.27ರಂದು ಮಧ್ಯಾಹ್ನ 12ಗಂಟೆಗೆ ಪ್ರಜಾಸೌಧ ಕಟ್ಟಡದ ಅಡಿಗಲ್ಲು ಸಮಾರಂಭ (ಶಂಕು ಸ್ಥಾಪನೆ) ಹಾಗೂ ತಾಲೂಕಾ ಪಂಚಾಯತಿ ಕಚೇರಿಯ ಉದ್ಘಾಟನೆ ಕಾರ್ಯಕ್ರಮದ ನಿಮಿತ್ತ ಎಪಿಎಂಸಿ ಆವರಣದಲ್ಲಿ ಶನಿವಾರ ಜರುಗಲಿರುವ ಜಾನುವಾರ ಸಂತೆಯನ್ನು ಗೋಕಾಕ ರಸ್ತೆಯ ಜಕಾತಿ ಕಾಲೇಜಿನ ಪಕ್ಕದಲ್ಲಿ ಇರುವ ಉಪ್ಪಿನ ಅವರ ಜಾಗದಲ್ಲಿ ಸ್ಥಳಾಂತರಿಸಲಾಗಿದೆ ಎಂದು ತಹಶೀಲ್ದಾರ ಎಮ್ ವ್ಹಿ. ಗುಂಡಪ್ಪಗೋಳ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಉದ್ಘಾಟಕರಾಗಿ ಲೋಕೋಪಯೋಗಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಸತೀಶ ಜಾರಕಿಹೊಳಿ, ಶಾಸಕರು ಹಾಗೂ ಬಿ.ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕ ವಿಶ್ವಾಸ ವೈದ್ಯ ಹಾಗೂ ರಾಜಕೀಯ ಮುಖಂಡರು, ಗಣ್ಯ ಮಾನ್ಯರು ಆಗಮಿಸಲಿದ್ದಾರೆ ಎಂದರು.ಈ ವೇಳೆ ತಹಸೀಲ್ದಾರ ಎಮ್. ವ್ಹಿ. ಗುಂಡಪ್ಪಗೋಳ, ತಾಲೂಕಾ ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ ಆನಂದ ಬಡಕುಂದ್ರಿ, ಸಿ ಪಿ.ಐ ಆಯ.ಎಮ್. ಮಠಪತಿ, ಪುರಸಭೆ ಅಧಿಕಾರಿ ಮಹೇಶ ಕೋಳಿ,ಎ.ಪಿ.ಎಮ್.ಸಿ ಅಧ್ಯಕ್ಷ ಶ್ರೀ ನೀಲಕಂಠ ಶಿದಬಸಣ್ಣವರ ಹಾಜರ ಇದ್ದರು.



ಜುಲೈ 3ರಂದು ಬೆಂಗಳೂರಿನಲ್ಲಿ ದಲಿತ ಜನಾಗ್ರಹ ಸಮಾವೇಶ

ಬೆಳಗಾವಿ: ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಮಿತಿಯು ಜು.3ರಂದು ಮಧ್ಯಾಹ್ನ 12 ಗಂಟೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ದಲಿತ ಜನಾಗ್ರಹ ಸಮಾವೇಶವನ್ನು ಹಮ್ಮಿಕೊಂಡಿದ್ದು, ಬೆಳಗಾವಿ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಜಿಲ್ಲಾ ಸಮಿತಿಯು ಮನವಿ ಮಾಡಿಕೊಂಡಿದೆ.

ಶುಕ್ರವಾರ ಜಿಲ್ಲಾ ಸಮಿತಿಯು ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿ ಭೂಮಿ, ವಸತಿ, ಬ್ಯಾಕ್ಲಾಗ್ ಹುದ್ದೆಗಳ ಭರ್ತಿ, ಉದ್ಯೋಗ ನೇಮಕಾತಿ, ವಿಶೇಷ ಘಟಕ ಯೋಜನೆ ಹಾಗೂ ಏಕಗವಾಕ್ಷಿ ನೀತಿ ಜಾರಿಗೆ ಒತ್ತಾಯಿಸಿ ಈ ಹಕ್ಕೊತ್ತಾಯ ಸಮಾವೇಶವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದೆ.

ಸಮಾಜದ ವಿವಿಧ ವರ್ಗಗಳ ಜನರು ಹಾಗೂ ಸಂಘಟನೆಯ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಮಾವೇಶವನ್ನು ಯಶಸ್ವಿಗೊಳಿಸುವಂತೆ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ಬೆಳಗಾವಿ ಜಿಲ್ಲಾ ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದೆ.

ರಸ್ತೆ ಸುಧಾರಣೆ ಕಾಮಗಾರಿಗೆ ಚಾಲನೆ

ರಾಯಬಾಗ: ನಾಗರಮುನ್ನೋಳಿ ಮುಖ್ಯ ರಸ್ತೆಯಿಂದ ಕುದುರೆ ಜನವಸತಿ ಪ್ರದೇಶದವರೆಗೆ ರಸ್ತೆ ಸುಧಾರಣೆ ಮಾಡುವ 20 ಲಕ್ಷ ರೂ. ವೆಚ್ಚದ ಕಾಮಗಾರಿಗೆ ರಾಯಬಾಗ ವಿಧಾನಸಭಾ ಕ್ಷೇತ್ರದ ಮೇಖಳಿ ಗ್ರಾಮದಲ್ಲಿ ಶಾಸಕ ದುರ್ಯೋಧನ ಐಹೊಳೆ ಅವರು ಭೂಮಿ ಪೂಜೆ ಕೈಗೊಂಡು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಸದಾಶಿವ ಘೋರ್ಪಡೆ, ಸದಾನಂದ ಹಳಿಂಗಳಿ, ಬಸು ನಾಯಿಕ, ಪಿ.ಎ. ನಾಯಿಕ, ಸಂಜು ನಾಯಿಕ, ಸಂಗಣ್ಣ ದತ್ತವಾಡೆ, ಸಂಜು ಒಡೆಯ‌ರ್, ಸೋಮು ಒಡೆಯರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಕಲಾವಿದರಿಗೆ ಸಾಧನ ತಪಸ್ವಿ ಗೌರವ



ಗೋಕಾಕ: ಸ್ವರ ಸಾಧನ ಕಲಾನಿಕೇತನ (ರಿ) ಗೋಕಾಕ ಫಾಲ್ಸ್, ಸ್ವರ ಸಾಧನ ಸಂಗೀತ ವಿದ್ಯಾಲಯ ಗೋಕಾಕ ಇವರ ಆಶ್ರಯದಲ್ಲಿ ರೋಟರಿ ರಕ್ತ ಭಂಡಾರದಲ್ಲಿ ವಿಶ್ವ ಸಂಗೀತ ದಿನಾಚರಣೆ ಅಂಗವಾಗಿ ಹಾಗೂ ಪಂಡಿತ್ ಪಂಚಾಕ್ಷರಿ ಗವಾಯಿಗಳ ಮತ್ತು ಪಂಡಿತ್ ಪುಟ್ಟರಾಜ ಕವಿ ಗವಾಯಿಗಳ ಪುಣ್ಯ ಸ್ಮರಣೋತ್ಸವ ಸ್ವರಾಭಿಷೇಕ ಸಮಾರಂಭದಲ್ಲಿ 30 ವರ್ಷಗಳಿಗಿತ ಅಧಿಕ ಸಂಗೀತ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದಿರುವ ಕಲಾವಿದರಿಗೆ ಸಾಧನ ತಪಸ್ವಿ ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು ಈ ಸಂದರ್ಭದಲ್ಲಿ ಕಪ್ಪರಟ್ಟಿ ಕಳ್ಳಿಗುದ್ದಿಯ ಬಸವರಾಜ ಸ್ವಾಮಿಗಳು, ಶ್ರೀ ಉದ್ದಮ್ಮ ದೇವಿ ತದ್ರೂಪಿ ರಂಗಮ್ಮ ಮಾತಾಜಿ, ಮಲ್ಲಿಕಾರ್ಜುನ ಕಲ್ಲೋಳಿ. ಸೋಮಶೇಖರ ಮಗದುಮ. ಬಸವರಾಜ್ ಖಾನಪ್ಪನವರ. ರಿಯಾಜ ಚೌಗಲಾ. ನಿರಂಜನ ಬಡಿಗೇರ. ಇಸ್ಮೈಲ್ ನದಾಫ ಡಾ. ಭುವನೇಶ್ವರಿ ಬೋವಿ ಉಪಸ್ಥಿತರಿದ್ದರು.

ಸಾವಳಗಿಯಲ್ಲಿ ಮೊಹರಂ ಆಚರಣೆ



ಸಾವಳಗಿ: ಗ್ರಾಮದಲ್ಲಿ ಮೊಹರಂ ಹಬ್ಬವನ್ನು ಹಿಂದೂ ಮುಸ್ಲಿಂ ಭಾವೈಕ್ಯತೆ ಮತ್ತು ಸೌಹಾರ್ದತೆಯ ಸಂಕೇತವಾಗಿ ಆಚರಿಸಲಾಯಿತು.

ಗ್ರಾಮದ ಹಿಂದೂ ಮತ್ತು ಮುಸ್ಲಿಂ ಸಮುದಾಯದ ಜನರು ಒಗ್ಗಟ್ಟಿನಿಂದ ಹಬ್ಬದ ಆಚರಣೆಯಲ್ಲಿ ಪಾಲ್ಗೊಂಡು, ಪರಸ್ಪರ ಸಹಕಾರ ಮತ್ತು ಸಹೋದರತ್ವದ ಸಂದೇಶ ಸಾರಿದರು.

ಗ್ರಾಮದ ಹಿರಿಯರು ಮತ್ತು ಮುಖಂಡರು, ಮುಹರಂ ಹಬ್ಬವು ತ್ಯಾಗ, ನ್ಯಾಯ, ಮಾನವೀಯತೆ ಮತ್ತು ಸಾಮರಸ್ಯದ ಸಂದೇಶವನ್ನು ಸಾರುವ ಪವಿತ್ರ ಆಚರಣೆಯಾಗಿದ್ದು, ಧರ್ಮಗಳ ನಡುವೆ ಪ್ರೀತಿ, ವಿಶ್ವಾಸ ಮತ್ತು ಭಾವೈಕ್ಯತೆಯನ್ನು ಮತ್ತಷ್ಟು ಬಲಪಡಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಸಾವಳಗಿ ಗ್ರಾಮದಲ್ಲಿ ನಡೆಯುತ್ತಿರುವ ಈ ಆಚರಣೆಯು ಸರ್ವಧರ್ಮ ಸಮಭಾವ ಮತ್ತು ಸಾಮಾಜಿಕ ಸಾಮರಸ್ಯಕ್ಕೆ ಮಾದರಿ ಎಂಬ ಮೆಚ್ಚುಗೆಗೆ ಪಾತ್ರವಾಗಿದೆ.

ಮೊರಬದಲ್ಲಿ ಸೈಕ್ಲೋಥಾನ್‌ಗೆ ಚಾಲನೆ

ರಾಯಬಾಗ : ತಾಲೂಕಿನ ಮೊರಬ ಗ್ರಾಮದಲ್ಲಿ ಮೊಹರಂ ಹಬ್ಬದ ನಿಮಿತ್ತ ಸೈಕ್ಲೋಥಾನ ಸ್ಪರ್ಧೆ ನಡೆಯಿತು. ಮೊಹರಂ ಉತ್ಸವ ಸೇವಾ ಸಮಿತಿ ಹಾಗೂ ರಾಯಬಾಗ ಸೈಕಲ್ ಕ್ಲಬ್ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿತ್ತು. ಮಾರುತಿ ನಾಯಿಕ , ಸಂಜೀವಕುಮಾರ ಬಾನೆ,ಸಂಬಾಜಿ ಶಿಂದೆ, ಸಾಗರ ಸಿತ್ರೆ, ಹಣಮಂತ ಪಾಟೀಲ, ಬಾಬು ಪಾಟೀಲ, ರಾಜೀವ ಕಾಂಬಳೆ, ರಾಜು ದುವಾಳೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

- ಸೈಕಲ್ ಸ್ಪರ್ಧೆಯಲ್ಲಿ ಮಹಾರಾಷ್ಟ್ರದ ಕಾಗಲ್ ಹಾಗೂ ಬೆಳಗಾವಿ ಜಿಲ್ಲೆಗಳಿಂದ ಸೈಕಲ್ ಪಟಗಳು ಭಾಗವಹಿಸಿದ್ದು ವಿಶೇಷವಾಗಿತ್ತು

ಭಾವೈಕ್ಯತೆಯ ಸವಾರಿ ಆರೋಗ್ಯದ ರುವಾರಿ ಎಂಬ ಘೋಷಣೆಯೊಂದಿಗೆ ಪ್ರಾರಂಭವಾದ ಸೈಕಲ್ ಜಾಥಾ ಗ್ರಾಮದ ಭಗೀರಥ ವೃತ ಕನಕದಾಸ ಸರ್ಕಲ್ ದಿಂದ ಚಿಂಚಲಿ ರೈಲ್ವೆ ಸ್ಟೇಷನ್ ವರೆಗೆ ಹೋಗಿ ಬಂತು. ಈ ಸೈಕಲ್ ಜಾಥಾದಲ್ಲಿ ಸುಮಾರು ಬೇರೆ ಬೇರೆ ಗ್ರಾಮಗಳಿಂದ ನೂರು ಸೈಕಲ ಪಟುಗಳು ಭಾಗವಹಿಸಿದ್ದರು. ವಿಜಯ ಕಾಂಬಳೆ, ವಿಠ್ಠಲ ಮಾನೆ, ಬೀಮಾ ಹನಗಂಡೆ, ರುದ್ರೇಶ ಅಸೂದೆ, ನಿಂಗಪ್ಪ ಪಾಟೀಲ, ಜಗದೀಶ ಅಸೂದೆ, ಸೂರಜ ಕೊಡತೆ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.



ಐಗಳಿಯಲ್ಲಿ ಮೊಹರಂ ಆಚರಣೆ



ಐಗಳಿ: ಗ್ರಾಮದಲ್ಲಿ ಹಿಂದೂ-ಮುಸ್ಲಿಂ ಭಾವೈಕ್ಯದ ಸಂಕೇತವಾದ ಮೊಹರಂ ಹಬ್ಬವನ್ನು ಭಕ್ತಿಭಾವದಿಂದ ಆಚರಿಸಲಾಯಿತು.

ಹಬ್ಬದ ಅಂಗವಾಗಿ ವಿವಿಧ ವಾದ್ಯ ಮೇಳಗಳೊಂದಿಗೆ ಮೆರವಣಿಗೆ ನಡೆಯಿತು. ಹಲಗೆಯ ಸದ್ದಿಗೆ ಗ್ರಾಮಸ್ಥರು ಉತ್ಸಾಹದಿಂದ ಹೆಜ್ಜೆ ಹಾಕಿದರು. ವಿಶೇಷವಾಗಿ ಹಲಗಿ ವಾದನ ಜನಮನ ಸೆಳೆಯಿತು. ಯುವಕರು ಸಂಗೀತ ಮತ್ತು ಡೊಳ್ಳಿನ ತಾಳಕ್ಕೆ ಕುಣಿದು ಕುಪ್ಪಳಿಸಿ ಹಬ್ಬದ ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸಿದರು. ಈ ಸಂದರ್ಭದಲ್ಲಿ ಹಿರಿಯರು ಕರಬಲ ಹಾಡುಗಳನ್ನು ಹಾಡಿ, ಮೊಹರಂ ಹಬ್ಬದ ಇತಿಹಾಸ ಹಾಗೂ ತ್ಯಾಗದ ಸಂದೇಶವನ್ನು ಸ್ಮರಿಸಿದರು. ಗ್ರಾಮದ ಹಿಂದೂ ಮತ್ತು ಮುಸ್ಲಿಂ ಸಮುದಾಯದ ಜನರು ಪರಸ್ಪರ ಸಹೋದರತ್ವ, ಸೌಹಾರ್ದತೆ ಮತ್ತು ಭಾವೈಕ್ಯತೆಯನ್ನು ಸಾರುವ ರೀತಿಯಲ್ಲಿ ಹಬ್ಬದಲ್ಲಿ ಭಾಗವಹಿಸಿ ಸಾಮರಸ್ಯದ ಸಂದೇಶ ನೀಡಿದರು.ಹಬ್ಬವು ಶಾಂತಿಯುತವಾಗಿ ಮತ್ತು ವಿಜೃಂಭಣೆಯಿಂದ ಜರುಗಿದ್ದು, ಗ್ರಾಮದಲ್ಲಿ ಹಬ್ಬದ ವಾತಾವರಣ ಮನೆ ಮಾಡಿತ್ತು.

ಜ್ಞಾನ ವಿಕಾಸ ಸಂಯೋಜಕಿಯರ ಕ್ರಿಯಾ ಯೋಜನೆ ಸಭೆ

ಖಾನಾಪುರ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನವಿಕಾಸ ಸಂಯೋಜಕಿಯರ ಕ್ರಿಯಾ ಯೋಜನೆ ಸಭೆ ಪಟ್ಟಣದ ಶಿವಸ್ಮಾರಕ ಸಭಾಗೃಹದಲ್ಲಿ ಶುಕ್ರವಾರ ಜರುಗಿತು.

ಸಭೆಯನ್ನು ಯೋಜನೆಯ ಜಿಲ್ಲಾ ನಿರ್ದೇಶಕ ಸತೀಶ ನಾಯ್ಕ ಉದ್ಘಾಟಿಸಿದರು. ಸಭೆಯಲ್ಲಿ ಭಾಗವಹಿಸಿದ್ದ ಸಂಪನ್ಮೂಲ ವ್ಯಕ್ತಿಗಳಾದ ಧರ್ಮಸ್ಥಳ ಯೋಜನೆಯ ಖಾನಾಪುರ ತಾಲೂಕು ಯೋಜನಾಧಿಕಾರಿ ಗಣಪತಿ ನಾಯ್ಕ. ವಿಮಾ ಸಮನ್ವಯಾಧಿಕಾರಿ ಧನಂಜಯ ಮತ್ತು ಜಿಲ್ಲಾ ಜ್ಞಾನ ವಿಕಾಸ ಸಮನ್ವಯಾಧಿಕಾರಿ ಶೈಲಾ ಮಾತನಾಡಿ, ಜ್ಞಾನ ವಿಕಾಸ ಕಾರ್ಯಕ್ರಮದ ರೂಪುರೇಷೆಗಳು, ಮಹಿಳೆಯರ ಸಬಲೀಕರಣ, ವಾತ್ಸಲ್ಯ ಕಾರ್ಯಕ್ರಮ, ಮಾಶಾಸನಕ್ಕೆ ಫಲಾನುಭವಿ ಆಯ್ಕೆ, ಜನ ಮಂಗಳ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಹಾಗೂ ಮಾರ್ಗದರ್ಶನ ನೀಡಿದರು. ಸಭೆಯಲ್ಲಿ ಜ್ಞಾನ ವಿಕಾಸ ಸಂಯೋಜಕರು, ಧರ್ಮಸ್ಥಳ ಯೋಜನೆಯ ಅಧಿಕಾರಿಗಳು, ಸಿಬ್ಬಂದಿ ಇದ್ದರು.



ಕಿರುಸುದ್ದಿ

ನಾಳೆ ಹೊನ್ನುಗ್ಗಿ



ರಾಯಬಾಗ: ಕಾರಹುಣ್ಣಿಮೆ ನಿಮಿತ್ತ ಜೂ.28ರಂದು ರಾತ್ರಿ ತಾಲೂಕಿನ ಚಿಂಚಲಿ ಶ್ರೀ ಮಾಯಕ್ಕದೇವಿಯ ಹೊನ್ನುಗ್ಗಿ (ಜಾಗರಣೆ) ಕಾರ್ಯಕ್ರಮ ನಡೆಯಲಿದೆ. ಜೂ.29ರಂದು ಎತ್ತುಗಳಿಂದ ಕಾರಹುಣ್ಣಿಮೆಯ ಕರಿ ಹರಿಯುವ ಕಾರ್ಯಕ್ರಮ ನಡೆಯಲಿದೆ.ಜು.3ರಂದು ಮಾಯಕ್ಕದೇವಿಯ ಗುಡಿ ತೊಳೆಯುವುದು ಮತ್ತು ಸಂಜೆ ಮಾವಿನ ಹಣ್ಣಿನ ರಸದಿಂದ ಶ್ರೀ ಮಾಯಕ್ಕದೇವಿಗೆ ಮಹಾ ಅಭಿಷೇಕ ನಡೆಯಲಿದೆ.

ಅರ್ಜಿ ಆಹ್ವಾನ

ಬೆಳಗಾವಿ: 2026–27ನೇ ಸಾಲಿನಲ್ಲಿ ಜಿಲ್ಲೆಯ ಹಿಂದುಳಿದ ವರ್ಗಗಳ ಕಾನೂನು ಪದವಿದರರಿಗೆ ಪ್ರತಿ ವರ್ಷದಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಕಾನೂನು ತರಬೇತಿ ಭತ್ಯೆ ನೀಡಲಾಗುತ್ತಿದೆ. ಕಾನೂನು ತರಬೇತಿ ಭತ್ಯೆ ಪಡೆಯಲು ಆಸಕ್ತ ಹಾಗೂ ಹಿಂದುಳಿದ ಕಾನೂನು ಪದವೀಧರರಿಂದ ಅರ್ಜಿ ಆಹ್ವಾನಿಸಲಾಗಿದೆ. ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲನೆ ಮಾಡಿ ಅಪೂರ್ಣಗೊಂಡಿರುವ ಹಾಗೂ ಕೇಳಿರುವ ಮಾಹಿತಿ ಅರ್ಜಿಯೊಂದಿಗೆ ಒದಗಿಸಲು ವಿಫಲರಾದ ಮತ್ತು ಅವಧಿ ಮೀರಿ ಬಂದ ಅರ್ಜಿಗಳನ್ನು ಕಾರಣ ನೀಡದೇ ತಿರಸ್ಕರಿಸಲಾಗುವುದು. ಜುಲೈ 24 ಅರ್ಜಿ ಸಲ್ಲಿಸಲು ಕೊನೆ ದಿನವಾಗಿರುತ್ತದೆ. ಭರ್ತಿ ಮಾಡಿದ ಅರ್ಜಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಬೆಳಗಾವಿ ಇವರಿಗೆ ತಲಪುವಂತೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಮತ್ತು ಅರ್ಜಿ ನಮೂನೆಗಳಿಗಾಗಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಸಂ:204, 206 2ನೇ ಮಹಡಿ, ಸುವರ್ಣಸೌಧ ಬೆಳಗಾವಿ ಇಲ್ಲಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಾರಂಭ ಇಂದು

ಹುಬ್ಬಳ್ಳಿ: ಅಖಿಲ ಭಾರತ ಗಾಣಿಗರ ಸಂಘ ಕೇಂದ್ರ ಘಟಕ ವಾರ್ಷಿಕ ಮಹಾಸಭೆ–2026 ಕೇಂದ್ರ ಸಮಿತಿ ಪದಾಧಿಕಾರಿಗಳ ಆಯ್ಕೆ ಹಾಗೂ ಧಾರವಾಡ ಜಿಲ್ಲಾ ಗಾಣಿಗ ಸಂಘದ ಪದಾಧಿಕಾರಿಗಳ ಆಯ್ಕೆ ಸಮಾರಂಭ ಜೂ.27ರಂದು ಬೆಳಗ್ಗೆ 10 ಗಂಟೆಗೆ ದೇಶಪಾಂಡೆ ನಗರದ ಸವಾಯಿ ಗಂಧರ್ವ ಭವನದಲ್ಲಿ ನಡೆಯಲಿದೆ. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಚಾಲನೆ ನೀಡಲಿದ್ದಾರೆ. ಅಧ್ಯಕ್ಷತೆ ಸಂಘದ ಗೌರವಾಧ್ಯಕ್ಷ ಡಾ. ಶೇಖರ ಸಜ್ಜನ ಭಾಗವಹಿಸಲಿದ್ದಾರೆ.

ಪದಗ್ರಹಣ ನಾಳೆ

ಧಾರವಾಡ: ಕರ್ನಾಟಕ ರಾಜ್ಯ ಗ್ರಂಥಪಾಲಕರ ಸಂಘದ ನೂತನ ಸಂಘ ಅಸ್ತಿತ್ವಕ್ಕೆ ಬಂದಿದ್ದು, ಧಾರವಾಡ ಜಿಲ್ಲಾ ಘಟಕದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಜೂ.28ರಂದು ಸಂಜೆ 5 ಗಂಟೆಗೆ ರಂಗಾಯಣದ ಸಾಂಸ್ಕೃತಿಕ ಸಮುಚ್ಚಯದಲ್ಲಿ ಹಮ್ಮಿಕೊಂಡಿದೆ ಎಂದು ಜಿಲ್ಲಾಧ್ಯಕ್ಷ ಡಾ.ರಾಜೇಶ್ ತರಮರಿ ಹೇಳಿದರು. ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಘಟಕಕ್ಕೆ ನೇಮಕವಾದ ನೂತನ ಗೌರವಾಧ್ಯಕ್ಷ ಡಾ.ಮಹೇಶ ಹೊರಕೇರಿ, ಉಪಾಧ್ಯಕ್ಷರಾದ ಈರಪ್ಪ ಪತ್ತಾರ, ಡಾ. ರುದ್ರಮುನಿ ಹಿರೇಮಠ, ಕಾರ್ಯದರ್ಶಿ ಅಶೋಕ ಆಲದಕಟ್ಟಿ, ಉಪಕಾರ್ಯದರ್ಶಿ ಎನ್. ಎನ್. ಹಂಚಿನಾಳಮಠ, ಖಜಾಂಚಿ ನಾಗೇಶ ಕುಸುಗಲ್ ಅವರ ಪದಗ್ರಹಣ ಸಮಾರಂಭ ನಡೆಯಲಿದೆ ಎಂದರು. ಸಂಘದ ಅಧ್ಯಕ್ಷ ಡಾ. ಎಸ್.ಎಲ್.ಕಾಡದೇವರಮಠ ಅಧ್ಯಕ್ಷತೆ ವಹಿಸುವರು. ವಿಧಾನ ಪರಿಷತ್ ಸದಸ್ಯ ಪ್ರೊ. ಎಸ್.ವಿ.ಸಂಕನೂರು, ಎಲ್‌ಐಎಸ್ ಅಕಾಡಮಿ ಅಧ್ಯಕ್ಷ ಪ್ರೊ. ಪಿ.ವಿ. ಕೊಣ್ಣೂರು, ಅತಿಥಿಯಾಗಿ ಜಿಲ್ಲಾ ಘಟಕದ ಸಲಹೆಗಾರ ಸಿ. ಕೃಷ್ಣಮೂರ್ತಿ, ಡಾ.ನಾಗಪ್ಪ ಬಕ್ಕನ್ನವರ ಆಗಮಿಸುವರು ಎಂದರು. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಪದಾಧಿಕಾರಿಗಳನ್ನು ನೇಮಿಸಿ ಸಂಘವನ್ನು ಪ್ರಭಲ ಮಾಡಲಾಗುತ್ತಿದೆ. ಗ್ರಂಥ ಪಾಲಕರ ಕುಂದು–ಕೊರತೆಗಳನ್ನು ಪರಿಶೀಲಿಸಿ ಸರ್ಕಾರದಿಂದ ಸೂಕ್ತ ನ್ಯಾಯ ಒದಗಿಸುವುದು, ಗ್ರಂಥಪಾಲಕರ ವೃತ್ತಿ ಪ್ರೋತ್ಸಾಹಿಸುವುದು, ಹೊಸ ತಂತ್ರಜ್ಞಾನ ಮತ್ತು ಡಿಜಿಟಲೀಕರಣ ವ್ಯವಸ್ಥೆಗಳನ್ನು ಗ್ರಂಥಾಲಯಕ್ಕೆ ಅಳವಡಿಸಿ ಓದುಗರಿಗೆ ಅನುಕೂಲ ಕಲ್ಪಿಸುವ ಗುರಿ ಹೊಂದಿರುವುದಾಗಿ ತಿಳಿಸಿದರು.

ನಿಧನ ಸುದ್ದಿ

ಪ್ರಕಾಶ ಉಜ್ಜನಕೊಪ್ಪ



ಯರಗಟ್ಟಿ: ಸ್ಥಳೀಯ ಪಟ್ಟಣದ ನಿವಾಸಿ ನಿವೃತ್ತ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಾದ ಪ್ರಕಾಶ ಗುರಸಿದ್ದಪ್ಪ ಉಜ್ಜನಕೊಪ್ಪ (63) ಶುಕ್ರವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಮೂವರು ಪುತ್ರರು, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧುಬಳಗ ಅಗಲಿದ್ದಾರೆ.



ನೇಸರಗಿ: ಗ್ರಾಮದಲ್ಲಿ ಭಾವೈಕ್ಯತೆಯ ಮೊಹರಂ ಹಬ್ಬವನ್ನು ಹಿಂದೂ ಮುಸ್ಲಿಂ ಸಹೋದರರು ಆಚರಿಸಿದರು.

ನಾಗಶ್ರೀ ನಂದಗಾವಿಗೆ ನಂಬಿಯಾರ್ ಚಿನ್ನದ ಪದಕ

ಬೆಳಗಾವಿ : ನಗರದ ಕೆಎಲ್ಎಸ್ ರಾಜಾ ಲಖಮಗೌಡ ಕಾನೂನು ಮಹಾವಿದ್ಯಾಲಯದಲ್ಲಿ ನಡೆದ 202526ನೇ ಶೈಕ್ಷಣಿಕ ವರ್ಷದ ಪ್ರತಿಭಾ ಪುರಸ್ಕಾರ ಹಾಗೂ ಜಿಮಖಾನಾ ಸಮಾರೋಪ ಸಮಾರಂಭ ವಿಜೃಂಭಣೆಯಿಂದ ನಡೆಯಿತು. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ನಡೆಸಿದ ಭಾರತೀಯ ಸಂವಿಧಾನ ವಿಷಯದಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿನಿ ನಾಗಶ್ರೀ ನಂದಗಾವಿ ಅವರಿಗೆ ಭಾರತದ ಮಾಜಿ ಅಟಾರ್ನಿ ಜನರಲ್ ಹಾಗೂ ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತ ಕೆ.ಕೆ. ವೇಣುಗೋಪಾಲ್ ಪ್ರಾಯೋಜಿತ ಎಂ.ಕೆ. ನಂಬಿಯಾರ್ ಚಿನ್ನದ ಪದಕವನ್ನು ಪ್ರದಾನಿಸಲಾಯಿತು. ಭಾರತೀಯ ಸೇನೆಯ ನಿಯೋಜಿತ ಅಧಿಕಾರಿ ಲೆಫ್ಟಿನೆಂಟ್ ಕರ್ನಲ್ ಪಂಕಜಾ ಎ. ಕುಗಜಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.ಮಹಾವಿದ್ಯಾಲಯದ ಆಡಳಿತ ಮಂಡಳಿಯ ಅಧ್ಯಕ್ಷ ಹಾಗೂ ಹಿರಿಯ ನ್ಯಾಯವಾದಿ ಆರ್.ಎಸ್. ಮುತಾಲಿಕ್ ಮಾತನಾಡಿದರು. ಈ ಸಂದರ್ಭದಲ್ಲಿ ಸುಮಾರು 40 ದತ್ತಿ ಪ್ರಶಸ್ತಿಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಿ ಗೌರವಿಸಲಾಯಿತು. ಡಾ. ಡಿ. ಪ್ರಸನ್ನಕುಮಾರ ಸ್ವಾಗತಿಸಿದರು. ತನ್ಮಯಿ ಸಾರಾಫ್, ಚಂದ್ರಲೇಖಾ ಪಾಟೀಲ, ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಎ.ಎಚ್. ಹಾವಳದಾರ, ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕ ಅಮಿತ್ ಜಾಧವ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಬೆಳಗಾವಿ : ಕೆಎಲ್ಎಸ್ ರಾಜಾ ಲಖಮಗೌಡ ಕಾನೂನು ಮಹಾವಿದ್ಯಾಲಯದಲ್ಲಿ 202526ನೇ ಶೈಕ್ಷಣಿಕ ವರ್ಷದ ಪ್ರತಿಭಾ ಪುರಸ್ಕಾರ ಹಾಗೂ ಜಿಮಖಾನಾ ಸಮಾರೋಪ ಸಮಾರಂಭ ನಡೆಯಿತು.

ಮಾದಕ ವಸ್ತು ದುರ್ಬಳಕೆ ವಿರೋಧಿ ದಿನ | ಡಿವೈಎಸ್ಪಿ ಪ್ರಶಾಂತ ಹೇಳಿಕೆ

ಡ್ರಗ್ಸ್ ಜಾಲ ಮಟ್ಟ ಹಾಕೋಣ



ಅಥಣಿ: ಮಾದಕ ದ್ರವ್ಯಗಳನ್ನು ವಿತರಿಸುವ ಜಾಲವನ್ನೂ ಮಟ್ಟಹಾಕಲು ಕಾನೂನು ಹಾಗೂ ಪೊಲೀಸ್ ಇಲಾಖೆಯೊಂದಿಗೆ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಸಹಕರಿಸಬೇಕು ಎಂದು ಅಥಣಿ ವಲಯದ ಡಿವೈಎಸ್ಪಿ ಪ್ರಶಾಂತ್ ಮುನ್ನೋಳಿ ಹೇಳಿದರು.

ಅವರು ಇಲ್ಲಿನ ಆರ್ ಎಚ್ ಕುಲಕರ್ಣಿ ಸಭಾಂಗಣದಲ್ಲಿ ಅಥಣಿ ಪೊಲೀಸ್ ಠಾಣೆ, ಅಬಕಾರಿ ಇಲಾಖೆ ಹಾಗೂ ಆರೋಗ್ಯ ಇಲಾಖೆಯ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಮಾದಕ ವಸ್ತುಗಳ ದುರ್ಬಳಕೆ ಹಾಗೂ ಅಕ್ರಮ ಸಾಗಾಟ ಮತ್ತು ಮಾರಾಟ ವಿರೋಧಿ ದಿನದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಜನ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ಯುವ ಜನಾಂಗ ಮಾದಕ ದ್ರವ್ಯಗಳನ್ನು ಸೇವನೆ ಮಾಡುವ ಮೂಲಕ ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಒಳ್ಳೆಯ ಭವಿಷ್ಯ ಕಟ್ಟಿಕೊಳ್ಳಬೇಕಾದ ಕಾಲೇಜು ದಿನಗಳಲ್ಲಿ ಓದುವುದರ ಕಡೆಗೆ ಗಮನ ನೀಡಬೇಕು.ಮಾದಕ ವಸ್ತುಗಳನ್ನು ಬಳಸುತ್ತಿರುವವರಿಗೆ ಅವುಗಳ ಮಾರಕ ಪರಿಣಾಮದ ಕುರಿತು ತಿಳವಳಿಕೆ ನೀಡಿ ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ವಿದ್ಯಾರ್ಥಿಗಳು ಹಾಗೂ ಯುವ ಜನತೆ ಮುಂದಾಗಬೇಕು ಎಂದರು.

ತಾಲೂಕು ವೈದ್ಯಾಧಿಕಾರಿ ಡಾ.ಬಸಗೌಡ ಕಾಗೆ ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಾದವಜಿ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಮಹಾಲಿಂಗ ಮೇತ್ರಿ ಮಾತನಾಡಿದರು.

ಈ ಸಂದರ್ಭದಲ್ಲಿ ಸಿಪಿಐ ಸಂತೋಷ ಹಳ್ಳೂರು, ಪಿಎಸ್ಐ ಗಿರಿಮಲ್ಲಪ್ಪ ಉಪ್ಪಾರ, ಡಾ. ಮಹೇಶ್ ಕಾಪಸೆ, ಡಾ.ರಾಹುಲ ಬೋಸಲೆ, ಡಾ. ಆನಂದ ಗುಂಜಿಗಾವಿ, ಪ್ರಾಚಾರ್ಯ ಎಂ. ಪಿ. ಮೇತ್ರಿ, ಶಿವಾನಂದ ಮಗದುಮ್ಮ, ರವಿ ಪಾಲಬಾವಿ, ರವೀಂದ್ರ ಕಲಾಜ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪಿಡುಗು ನಿವಾರಿಸಿ

ಮಾದಕ ದ್ರವ್ಯ ಅಥವಾ ಡ್ರಗ್ಸ್ ಪಿಡುಗು ಇಂದು ಇಡೀ ಜಗತ್ತನ್ನು ಕಾಡುತ್ತಿರುವ ಗಂಭೀರ ಸಮಸ್ಯೆಯಾಗಿದೆ. ಯುವ ಸಮೂಹ, ಅದರಲ್ಲೂ ವಿಶೇಷವಾಗಿ ವಿದ್ಯಾರ್ಥಿಗಳು ಈ ಜಾಲಕ್ಕೆ ಬೇಗನೆ ಬಲಿಯಾಗುತ್ತಿದ್ದಾರೆ. ದೇಶದ ಭವಿಷ್ಯವಾಗಿರುವ ವಿದ್ಯಾರ್ಥಿಗಳು ಮಾದಕ ವ್ಯಸನದಿಂದ ದೂರವಿದ್ದು, ಆರೋಗ್ಯಕರ ಹಾಗೂ ಮಾದಕ ದ್ರವ್ಯ ಮುಕ್ತ ಸಮಾಜವನ್ನು ಕಟ್ಟಲು ಪ್ರತಿಯೊಬ್ಬರು ಕೈಜೋಡಿಸಬೇಕು. ಜೂನ್ 26ರಂದು ಆಚರಿಸಲಾಗುವ ಮಾದಕ ವಸ್ತುಗಳ ವಿರೋಧಿ ದಿನದ ಅಂಗವಾಗಿ ವಿವಿಧ ಶಾಲಾ ಕಾಲೇಜುಗಳಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.ಕಾನೂನು ಮತ್ತು ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಿ ಎಂದು ಡಿವೈಎಸ್ಪಿ ಪ್ರಶಾಂತ್ ಮುನ್ನೊಳ್ಳಿ ಹೇಳಿದರು.

> ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ವಿದ್ಯಾರ್ಥಿಗಳು ಹಾಗೂ ಯುವ ಜನತೆ ಮುಂದಾಗಬೇಕು.
> ■ **ಡಾ.ಬಸಗೌಡ ಕಾಗೆ,** ತಾಲೂಕು ವೈದ್ಯಾಧಿಕಾರಿ

ಜನಜಾಗೃತಿ ಅಭಿಯಾನ

ಜೂನ್ 26ರಂದು ಎಲ್ಲಡೆ ಆಚರಿಸಲಾಗುವ ಜಾಗತಿಕ ಮಾದಕ ವಸ್ತುಗಳ ವಿರೋಧಿ ದಿನಾಚರಣೆಯ ಅಂಗವಾಗಿ ವಿವಿಧ ಶಾಲಾ ಕಾಲೇಜುಗಳಿಂದ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ಭಾಗವಹಿಸಿದ್ದ ಜನಜಾಗೃತಿ ಅಭಿಯಾನಕ್ಕೆ ಕಾರ್ಯಕ್ರಮಕ್ಕೆ ಡಿವೈಎಸ್ಪಿ ಪ್ರಶಾಂತ್ ಮುನ್ನೊಳ್ಳಿ ಚಾಲನೆ ನೀಡಿದರು. ಭೋಜರಾಜ ಕ್ರೀಡಾಂಗಣದಲ್ಲಿ ಅಭಿಯಾನದ ಮೆರವಣಿಗೆ ಸಮಾರೋಪಗೊಂಡಿತು. ಈ ಅಭಿಯಾನದಲ್ಲಿ ಅಥಣಿ ಪಟ್ಟಣದ ವಿವಿಧ ಪದವಿ ಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

4.71 ಲಕ್ಷ ಮಕ್ಕಳಿಗೆ ಲಸಿಕೆ ನೀಡುವ ಗುರಿ



» ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನ ಇಂದು

ಬೆಳಗಾವಿ: ಭಾರತವು ಪೋಲಿಯೋ ಮುಕ್ತ ರಾಷ್ಟ್ರವಾಗಿ 15ಕ್ಕೂ ಹೆಚ್ಚು ವರ್ಷಗಳನ್ನು ಪೂರೈಸಿದ್ದರೂ, ಮುಂಜಾಗ್ರತಾ ಕ್ರಮವಾಗಿ ಜೂನ್ 28ರಂದು ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ದಿನವನ್ನು ದೇಶಾದ್ಯಂತ ಆಚರಿಸಲಾಗುತ್ತಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಐ.ಪಿ. ಗಡಾದ್ ತಿಳಿಸಿದರು.

ಪಾಕಿಸ್ತಾನ ಹಾಗೂ ಅಫ್ಘಾನಿಸ್ತಾನ ದೇಶಗಳಲ್ಲಿ ಇತ್ತೀಚೆಗೆ ವೈಲ್ಡ್ ಪೋಲಿಯೋ ವೈರಸ್ ಪ್ರಕರಣಗಳು ವರದಿಯಾಗಿರುವ ಹಿನ್ನೆಲೆಯಲ್ಲಿ, ಸೋಂಕು ಹರಡುವ ಸಾಧ್ಯತೆಯನ್ನು ತಡೆಯುವ ಉದ್ದೇಶದಿಂದ ಈ ಬಾರಿಯೂ ಪಲ್ಸ್ ಪೋಲಿಯೋ ಅಭಿಯಾನವನ್ನು ಮುಂದುವರಿಸಲಾಗಿದೆ. ಈ ಅಭಿಯಾನದಡಿ 0 ರಿಂದ 5 ವರ್ಷದೊಳಗಿನ ಮಕ್ಕಳಿಗೆ ಬಾಯಿಯ ಮೂಲಕ ಎರಡು ಹನಿ ಪೋಲಿಯೋ ಲಸಿಕೆ ನೀಡಲಾಗುತ್ತದೆ.

ಜೂನ್ 28ರಂದು ಜಿಲ್ಲೆಯಾದ್ಯಂತ ಸ್ಥಾಪಿಸಲಾದ ಪೋಲಿಯೋ ಲಸಿಕಾ ಕೇಂದ್ರಗಳಲ್ಲಿ ಮಕ್ಕಳಿಗೆ ಲಸಿಕೆ ನೀಡಲಾಗುವುದು. ನಂತರದ ಎರಡು ರಿಂದ ಮೂರು ದಿನಗಳ ಕಾಲ ಆರೋಗ್ಯ ಇಲಾಖೆಯ ಸಿಬ್ಬಂದಿ ಮನೆ–ಮನೆಗೆ ಭೇಟಿ ನೀಡಿ ಲಸಿಕೆ ಪಡೆಯದ ಮಕ್ಕಳಿಗೆ ಲಸಿಕೆ ನೀಡಲಿದ್ದಾರೆ.

ವಿಶೇಷವಾಗಿ ವಲಸೆ ಕಾರ್ಮಿಕರ ಕುಟುಂಬಗಳ ಮಕ್ಕಳು, ಹೆಚ್ಚಿನ ಅಪಾಯದ ಪ್ರದೇಶಗಳ ನಿವಾಸಿಗಳು ಹಾಗೂ ನಗರಗಳ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಮಕ್ಕಳಿಗೆ ಆದ್ಯತೆ ನೀಡಲಾಗುವುದು. ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 4.71 ಲಕ್ಷ ಮಕ್ಕಳಿಗೆ ಪೋಲಿಯೋ ಲಸಿಕೆ ನೀಡುವ ಗುರಿ ನಿಗದಿಪಡಿಸಲಾಗಿದೆ.

ಜಿಲ್ಲೆಯ ಎಲ್ಲಾ ಸರ್ಕಾರಿ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಅಂಗನವಾಡಿ ಕೇಂದ್ರಗಳು, ಗುಡ್ಡಗಾಡು ಪ್ರದೇಶಗಳು, ಇಟ್ಟಿಗೆ ಭಟ್ಟಿಗಳು, ಕಟ್ಟಡ ಕಾಮಗಾರಿ ಸ್ಥಳಗಳು, ತೋಟದ ಮನೆಗಳು, ವಲಸೆ ಪ್ರದೇಶಗಳು, ರೈಲ್ವೆ ನಿಲ್ದಾಣ, ವಿಮಾನ ನಿಲ್ದಾಣ ಹಾಗೂ ಕೊಳಚೆ ಪ್ರದೇಶಗಳಲ್ಲಿ ಲಸಿಕೆ ನೀಡಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ.

ಈ ಕುರಿತು ಜಿಲ್ಲಾಧಿಕಾರಿಗಳು ಹಾಗೂ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ಸಮನ್ವಯ ಸಭೆಗಳನ್ನು ನಡೆಸಿ ಅಗತ್ಯ ಪೂರ್ವಸಿದ್ಧತೆಗಳನ್ನು ಪೂರ್ಣಗೊಳಿಸಲಾಗಿದೆ ಎಂದು ಡಾ. ಗಡಾದ್ ತಿಳಿಸಿದ್ದಾರೆ.

ಜಿಲ್ಲೆಯ ಎಲ್ಲಾ ಪೋಷಕರು ತಮ್ಮ 0 ರಿಂದ 5 ವರ್ಷದೊಳಗಿನ ಮಕ್ಕಳಿಗೆ ಜೂನ್ 28ರಂದು ತಪ್ಪದೇ ಪೋಲಿಯೋ ಲಸಿಕೆ ಹಾಕಿಸಿ, ಪೋಲಿಯೋ ಮುಕ್ತ ಭಾರತದ ಸಂಕಲ್ಪವನ್ನು ಮತ್ತಷ್ಟು ಬಲಪಡಿಸುವಂತೆ ಆರೋಗ್ಯ ಇಲಾಖೆ ಮನವಿ ಮಾಡಿಕೊಂಡಿದ್ದಾರೆ.

ಕಾದಂಬರಿ ಲೋಕಕ್ಕೆ ಕಟ್ಟೀಮನಿಯವರ ಕೊಡುಗೆ ಅಪಾರ: ಸಾಹಿತಿ ಕೆಂಪಣ್ಣವರ



ಚಿಕ್ಕೋಡಿ: ಭಾರತದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ತಮ್ಮ ಕರುಳ ಕುಡಿಗಳಲ್ಲಿ ಸ್ವಾತಂತ್ರ್ಯ ಕಿಚ್ಚು ಹೊತ್ತಿಸುವ ದೊಡ್ಡ ಸ್ತ್ರೀ ಸಮೂಹವೇ ನಾಡಿನೊಳಗಿತ್ತು. ಸ್ವಾತಂತ್ರ್ಯ ಬರುವುದಾದರೆ ಅದು ಈ ನಾಡಿನ ತಾಯಂದಿರಿಂದಲೇ ಎಂದು ಕಾದಂಬರಿಕಾರ ಬಸವರಾಜ ಕಟ್ಟೀಮನಿ ನಂಬಿದ್ದರು ಎಂದು ಹಿರಿಯ ಸಾಹಿತಿ ಪಿ.ಜಿ. ಕೆಂಪಣ್ಣವರ ಹೇಳಿದರು.

ಪಟ್ಟಣದ ಸಿಎಲ್ಇ ಸಂಸ್ಥೆಯ ಬಿ ಸಿ ಗಂಗಾಲ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬೆಳಗಾವಿಯ ಬಸವರಾಜ ಕಟ್ಟೀಮನಿ ಪ್ರತಿಷ್ಠಾನ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಮಾಡಿ ಮಡಿದವರು ಕಾದಂಬರಿ ಕುರಿತ ವಿಶೇಷ ಉಪನ್ಯಾಸ ನೀಡಿ ಮಾತನಾಡಿ, ಸ್ವಾತಂತ್ರ್ಯ ಹೋರಾಟ ಕುರಿತ ಕಾದಂಬರಿಗಳಲ್ಲಿ ಬಸವರಾಜ ಕಟ್ಟೀಮನಿಯವರ 'ಮಾಡಿ ಮಡಿದವರು ಶ್ರೇಷ್ಠ ಕಾದಂಬರಿಯಾಗಿದೆ. ಅಂದಿನ ಯುವಜನತೆಯ ತುಮುಲಗಳನ್ನು ಚಾರಿತ್ರಿಕವಾಗಿ ಕಾದಂಬರಿಯಲ್ಲಿ ದಾಖಲಿಸಿ ಬಸವರಾಜ ಕಟ್ಟೀಮನಿಯವರು ಕಾದಂಬರಿ ಲೋಕಕ್ಕೆ ಬಹುದೊಡ್ಡ ಕಾಣಿಕೆ ನೀಡಿದ್ದಾರೆ ಎಂದು ಹೆಮ್ಮೆಪಟ್ಟರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಬಸವರಾಜ ಕಟ್ಟೀಮನಿ ಪ್ರತಿಷ್ಠಾನ ಅಧ್ಯಕ್ಷ ಯಲ್ಲಪ್ಪ ಹಿಮ್ಮಡಿ ಮಾತನಾಡಿದರು.

ಬಿ. ಸಿ. ಗಂಗಾಲ ಶಿಕ್ಷಣ ಮಹಾವಿದ್ಯಾಲಯ ಪ್ರಾಚಾರ್ಯ ಸುರೇಶ ಉಕ್ಕಲಿ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಸವರಾಜ ಕಟ್ಟೀಮನಿ ಪ್ರತಿಷ್ಠಾನ ಸದಸ್ಯೆ ಹಮೀದಾಬೇಗಂ ದೇಸಾಯಿ, ಸಾಹಿತಿ ದಯಾನಂದ ನೂಲಿ, ಶ್ರೀಪಾದ ಕುಂಬಾರ, ಶಿವರಾಜ ಅರಳಿ, ವಿಜಯಲಕ್ಷ್ಮೀ ಈರೇಶನವರ ಇತರರು ಇದ್ದರು. ಸಂಗೀತಾ ಉಪ್ಪಾರ ಸ್ವಾಗತಿಸಿ, ಭಾವನಾ ಎಕ್ಕೇರಿಮಠ ನಿರೂಪಿಸಿ, ವಿಠ್ಠಲ ಬಂತೆ ವಂದಿಸಿದರು.

ವಿಶ್ವ ಪರಿಸರ ದಿನಾಚರಣೆ



ಚಿಕ್ಕೋಡಿ: ಪಟ್ಟಣದ ಕೆಎಲ್ಇ ಸಂಸ್ಥೆಯ ಸಿ ಬಿ ಕೋರೆ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಚಿಕ್ಕೋಡಿ ಪ್ರಾದೇಶಿಕ ಕಚೇರಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಚಿಕ್ಕೋಡಿ, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಚಿಕ್ಕೋಡಿ ಘಟಕ, ಅರಣ್ಯ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿತ್ತು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮಾಧ್ಯಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಚಿತ್ರಕಲೆ ಹಾಗೂ ಪ್ರಬಂಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನು ಗಣ್ಯರು ವಿತರಣೆ ಮಾಡಿದರು. ಕಾಲೇಜು ಆವರಣದಲ್ಲಿ ವೃಕ್ಷಾರೋಪಣ ನಡೆಸಿ ಪರಿಸರ ರಕ್ಷಣೆಯ ಮಹತ್ವ ಕುರಿತು ಸಂಕಲ್ಪ ಕೈಗೊಳ್ಳಲಾಯಿತು.

ಚಿಕ್ಕೋಡಿಯ 7ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ವಿಜಯಕುಮಾರ ಅವರು ಸಸಿಗೆ ನೀರು ಎರೆಯುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಬೆಳಗಾವಿಯ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತ ಗಜಾನನ ಮನ್ನಿಕೇರಿ, ಡಿಡಿಪಿಐ ಆರ್ ಎಸ್ ಸೀತಾರಾಮು, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಘಟಕ ಎನ್. ಜಿ .ಪಾಟೀಲ ಇತರರು ಇದ್ದರು.

ಗೋಕಾಕನಲ್ಲಿ ಹಳೆ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ



ಬೆಳಗಾವಿ: ಗೋಕಾಕ ನಗರದ ಮುನಸಿಪಲ್ ಪ್ರೌಢಶಾಲೆಯ 10 ನೇ ತರಗತಿಯ ವಿದ್ಯಾರ್ಥಿಗಳು ಇತ್ತೀಚೆಗೆ ಹಳೆ ವಿದ್ಯಾರ್ಥಿಗಳಿಂದ ಸ್ನೇಹ ಸಮ್ಮಿಲನ ಕಾರ್ಯಕ್ರಮ ಜರುಗಿತು.

1969–70ನೇ ಸಾಲಿನ 10ನೇ ತರಗತಿಯ ಮುನಸಿಪಲ್ ಪ್ರೌಢಶಾಲೆ ಹಳೆಯ ವಿದ್ಯಾರ್ಥಿಗಳು ಸುಮಾರು 55 ವರ್ಷಗಳ ನಂತರ ಬೆಳಗಾವಿಯ ಸಭಾಭವನದಲ್ಲಿ ಒಂದೆಡೆ ಸೇರಿ ಸಂಭ್ರಮಿಸಿದರು. ಕೇಕ್ ಕತ್ತರಿಸುವ ಮೂಲಕ ಸ್ನೇಹ ಸಮ್ಮಿಲನ ಕಾರ್ಯಕ್ರಮವನ್ನು ಉದ್ಘಾಟಿಸಿ ವಿದ್ಯಾರ್ಥಿ ಜೀವನದ ಸಿಹಿ–ಕಹಿ ನೆನಪುಗಳನ್ನು ಮೆಲುಕು ಹಾಕಿದರು.

ಬಳಿಕ , ವಿದ್ಯೆ ಕಲಿಸಿದ ಗುರುಗಳ ಬಗ್ಗೆ ಮನದಾಳದ ಮಾತುಗಳನ್ನು ಹಂಚಿಕೊಂಡ ಶಿಷ್ಯರು : ಗುರು–ಶಿಷ್ಯರ ಸಂಬಂಧ ಶಿಕ್ಷಕ ಮತ್ತು ವಿದ್ಯಾರ್ಥಿಯ ನಡುವಿನ ಪವಿತ್ರ ಬಂಧವಾಗಿದೆ. ಇದು ಜ್ಞಾನ, ಮಾರ್ಗದರ್ಶನ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಪೂರಕ' ಎಂದು ಹೇಳಿದರು.

55 ವರ್ಷಗಳ ಹಿಂದೆ ಕಲಿತ ವಿದ್ಯಾರ್ಥಿಗಳು ಇಂದು ಒಂದೆಡೆ ಸೇರಿ, ಅಭೂತಪೂರ್ವ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸಂತಸ ತಂದಿದೆ. ವಿದ್ಯಾರ್ಥಿಗಳು ಉತ್ತಮ ಶಿಕ್ಷಣದ ಜತೆಗೆ ಸಂಸ್ಕಾರ ಪಡೆದು ಉನ್ನತ ಸ್ಥಾನದಲ್ಲಿದ್ದೇವೆ ಎಂದು ಹೇಳಿದರು.

ನಮ್ಮ ಶಿಕ್ಷಕರು ಕೇವಲ ಪಠ್ಯ ಬೋಧಿಸಲಿಲ್ಲ, ಜೀವನದಲ್ಲಿ ಎದುರಾಗಬಹುದಾದ ಕಷ್ಟ ಹೇಗೆ ಎದುರಿಸಬೇಕು ಎಂಬುದನ್ನು ಕಲಿಸಿದರು. ಮಾದರಿಯಾಗಿ ನಮ್ಮ ಬದುಕು ರೂಪಿಸಿದರು ಎಂದು ಸ್ಮರಿಸಿದರು.

ಈ ವೇಳೆ ಕಾರ್ಯಕ್ರಮದ ಆಯೋಜಕರಾದ ಡಾ. ಅಶೋಕ ಮುರುಗೋಡ, ಶಶಿಕಾಂತ ಚುನಮರಿ ಮಧುಕರ, ಜಯಶ್ರೀ , ಶೋಭಾ ,ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಶ್ರೀ ಮರುತಿ ನಗರಕ್ಕೆ ಮೂಲ ಸೌಲಭ್ಯ ಒದಗಿಸಲು ಆಗ್ರಹ



ಬೆಳಗಾವಿ: ಇಲ್ಲಿನ ಶ್ರೀ ಮಾರುತಿ ನಗರ ಎರಡನೇ ಹಂತದ ನಿವಾಸಿಗಳಿಗೆ ಕುಡಿಯುವ ನೀರು, ಸ್ವಚ್ಛತೆ, ರಸ್ತೆ ಹಾಗೂ ಬೀದಿದೀಪಗಳು ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ತುರ್ತಾಗಿ ಒದಗಿಸುವಂತೆ ಶ್ರೀ ಮಾರುತಿ ನಗರ ಎರಡನೇ ಹಂತ ರಹವಾಸಿಗಳ ಅಭಿವೃದ್ಧಿಯ ಸಂಘದಿಂದ ಮಹಾನಗರ ಪಾಲಿಕೆ ಆಯುಕ್ತ ಕಾರ್ತೀಕ ಎಂ, ಅವರಿಗೆ ಬುಧವಾರ ಮನವಿ ಸಲ್ಲಿಸಿದರು.

ಶ್ರೀ ಮಾರುತಿ ನಗರ ಎರಡನೇ ಹಂತದಲ್ಲಿ ನೂರಾರು ಕುಟುಂಬಗಳು ಕಳೆದ 6–7 ವರ್ಷಗಳಿಂದ ಈ ವಾಸಿಸುತ್ತಿದ್ದೇವೆ. ಆದರೆ, ನಗರದ ನಿವಾಸಿಗಳಿಗೆ ಮಹಾನಗರ ಪಾಲಿಕೆಯಿಂದ ಯಾವುದೇ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಲ್ಲ, ಮಳೆ ಸಂದರ್ಭದಲ್ಲಿ ನಿತ್ಯವೂ ನರಕಯಾತನೆ ಅನುಭವಿಸುತ್ತಿದ್ದಾರೆ. ಮಹಿಳೆಯರು, ವಯಸ್ಕರರು ದಿವ್ಯಾಂಗರು ಮತ್ತು ಕೂಲಿಕಾರರು ಮತ್ತು ಮಧ್ಯಮ ವರ್ಗದ ಕುಟಂಬದವರು ವಾಸಿಸುವ ನಗರವಾಗಿದೆ. ಹೀಗಾಗಿ ಅಧಿಕಾರಿಗಳು ಈ ನಗರಕ್ಕೆ ಶೀಘ್ರವೇ ಮೂಲ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಮನವಿ ಮಾಡಿಕೊಂಡರು.

ಅಗತ್ಯವಿರುವ ಮೂಲಭೂತ ಸೌಲಭ್ಯಗಳ ಬೇಡಿಕೆ: ಶುದ್ಧ ಕುಡಿಯುವ ನೀರು ಪೂರೈಕೆ ಸಲುವಾಗಿ ಸಂಪರ್ಕ ಪೈಪಲೈನ ಹಾಕಿ 247 ಕುಡಿಯುವ ನೀರಿನ ಸೌಲಭ್ಯ ಒದಗಿಸಬೇಕು. ಶ್ರೀ ಮಾರುತಿ ನಗರ ಎರಡನೇ ಹಂತ ರಹವಾಸಿಗಳ ಅಭಿವೃದ್ಧಿಯ ಸಂಘ ಸಾಂಬ್ರಾ ರಸ್ತೆ ಬೆಳಗಾವಿ ನಗರಕ್ಕೆ ಸಾರ್ವಜನಿಕರು ಸಂಚರಿಸಲು ನೇರವಾಗಿ ಹೈವೇ ರಸ್ತೆಗೆ ಜೋಡಣೆ ಮಾಡಿ ಎರಡು ಸುಸಜ್ಜಿತವಾದ ಸಂಪರ್ಕ ರಸ್ತೆ ನಿರ್ಮಾಣ ಮಾಡಬೇಕು. ಹಾಗೂ ಇಲ್ಲಿನ ಒಳರಸ್ತೆಗಳನ್ನು ಅಗಲೀಕರಣದೊಂದಿಗೆ ಡಾಂಬರೀಕರಣ ಮಾಡಿ ದುರಸ್ತಿ ಮಾಡಬೇಕು. ನಗರದಲ್ಲಿ ವಾಸಿಸುವ ಎಲ್ಲಾ ಕುಟುಂಬಗಳ ಮನೆಗಳಿಗೆ ಒಳಚರಂಡಿ ಪೈಪಲೈನ ಹಾಕಿಸಿ ಶೇಪ್ಟಿ ಟ್ಯಾಂಕ್ಗೆ ಜೋಡಣೆ ಮಾಡಿ ಒಳಚರಂಡಿ ವ್ಯವಸ್ಥೆ ಶೀಘ್ರವೇ ಸುಧಾರಣೆ ಮಾಡಬೇಕಿದೆ. ರಸ್ತೆಗಳು ಮತ್ತು ಸರ್ಕಲ್ಗಳಿಗೆ ವಿದ್ಯುತ ಕಂಬಗಳು ಮತ್ತು ವಿದ್ಯುತ್ ಬಲ್ಬಗಳನ್ನು ಅಳವಡಿಸುವುದು ಹಾಗೂ ರಸ್ತೆಯ ಪ್ರಮುಖ ಸರ್ಕಲ್ಗಳಿಗೆ ದೊಡ್ಡಗಾತ್ರದ ಬಲ್ಬಗಳನ್ನು ಹಾಕಬೇಕು. ಕಸ ವಿಲೇವಾರಿ ನಿರ್ವಹಣೆಯನ್ನು ಪ್ರತಿನಿತ್ಯ ಮಾಡುವಂತೆ ಕ್ರಮಕೈಗೊಳ್ಳಬೇಕು.

ಇಲ್ಲಿನ ರಹವಾಸಿಗಳಿಗೆ ಅನುಕೂಲಕರ, ಸ್ವಚ್ಛ ಮತ್ತು ನಗರವನ್ನು ಸುಂದರವಾಗಿಸಲು ಹಾಗೂ ಇಲ್ಲಿನ ಜನಸಾಮಾನ್ಯರ ಕುಟಂಬಗಳು ನೆಲಸುವಂತೆ ಮಾಡಲು ನಿಮ್ಮ ಸಹಕಾರ ಅತ್ಯಂತ ಅವಶ್ಯವಾಗಿದ್ದು ಸರ್ಕಾರಕ್ಕೆ ತೆರಿಗೆ ಪಾವತಿ ಮಾಡುತ್ತಿರುವ ಇಲ್ಲಿನ ಜನರ ಹಿತದೃಷಿಯಿಂದ ಹೊರವಲಯದಲ್ಲಿ ವಾಸಿಸುತ್ತಿರುವ ಎಲ್ಲಾ ರಹವಾಸಿಗಳಿಗೆ ನಿಯಮಾನುಸಾರವಾಗಿ ಮಹಾನಗರ ಪಾಲಿಕೆ ಮತ್ತು ಸರ್ಕಾರದಿಂದ ನೀಡಬಹುದಾದ ಮೂಲಭೂತ ಸೌಲಭ್ಯಗಳಾದ ರಸ್ತೆಗಳು, ಕುಡಿಯುವ ನೀರು ಸೌಕರ್ಯ, ವಿದ್ಯುತ್ ದೀಪಗಳು ಮತ್ತು ವಿವಿಧ ಎಲ್ಲಾ ಸೌಕರ್ಯಗಳನ್ನು ಒದಗಿಸಿ ಇಲ್ಲಿನ ಜನರನ್ನು ರಕ್ಷಣೆ ಮಾಡಿ ಶ್ರೀ ಮಾರುತಿ ನಗರ ಎರಡನೇ ಹಂತ ರಹವಾಸಿಗಳ ಬಡಾವಣೆಯನ್ನು ಅಭಿವೃದ್ಧಿಪಡಿಸಬೇಕೆಂದು ಪಾಲಿಕೆ ಆಯುಕ್ತರಿಗೆ ಮನವಿ ಮೂಲಕ ತಿಳಿಸಿದರು.

ಈ ವೇಳೆ ಸಂಘದ ಅಧ್ಯಕ್ಷ ಅಶೋಕ ನಿಂಗಪ್ಪ ಅಣ್ಣಿಗೇರಿ, ಉಪಾಧ್ಯಕ್ಷರಾದ ರಮೇಶ ಮಗದುಮ್ಮ, ಸದಸ್ಯರಾದ ಅರುಣ ಮಾನೆ, ಶಿವಾಜಿ ಅಡಿಮನಿ, ಬಸವರಾಜ ಹಂಡಗಿ, ಕಮಲಾಪೂರಿ, ಕಿರಣ ಅಂಗಡಿ, ಪ್ರಕಾಶ ಶಿವಯೋಗಿ,ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಜನರ ಗೋಳು

ಅಪೂರ್ಣ ಕಾಮಗಾರಿ ಪೂರ್ಣಗೊಳಿಸಿ

ಬೆಳಗಾವಿ: ತಾಲೂಕಿನ ಶ್ರೀರಾಮ್ ಕಾಲೋನಿ, ಸಾಯಿ ನಗರ, ಗೋಕುಲ್ ನಗರ ಹಾಗೂ ವಿನಾಯಕ್ ನಗರ ವ್ಯಾಪ್ತಿಯಲ್ಲಿ ಕಳೆದ 20 ವರ್ಷಗಳಿಂದ ಅಪೂರ್ಣವಾಗಿರುವ ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ತಕ್ಷಣ ವಿಶೇಷ ಅನುದಾನ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ, ಗ್ರಾಮ ಪಂಚಾಯತ್ ಸದಸ್ಯ ರವಿ ಕೋಟಬಾಗಿ ನೇತೃತ್ವದಲ್ಲಿ ನಿವಾಸಿಗಳು ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಈ ನಾಲ್ಕು ಕಾಲೋನಿಗಳ ನಿವಾಸಿಗಳು ಕಳೆದ ಎರಡು ದಶಕಗಳಿಂದ ಮೂಲಭೂತ ಸೌಕರ್ಯಗಳ ಕೊರತೆಯಿಂದ ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದರು.

ಕಳೆದ 20 ವರ್ಷಗಳಿಂದ ತೆರಿಗೆ ಪಾವತಿಸುತ್ತಿದ್ದರೂ ಸಮರ್ಪಕ ಸೌಲಭ್ಯಗಳು ದೊರೆಯುತ್ತಿಲ್ಲ. ಗ್ರಾಮ ಪಂಚಾಯತ್ ಮಟ್ಟದಲ್ಲಿ ಹಲವು ಬಾರಿ ಚರ್ಚೆ ನಡೆದಿದ್ದರೂ ಅನುದಾನದ ಕೊರತೆಯಿಂದ ಕಾಮಗಾರಿಗಳು ಪೂರ್ಣಗೊಂಡಿಲ್ಲ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ. ಆದ್ದರಿಂದ ಸರ್ಕಾರವು ತಕ್ಷಣ ವಿಶೇಷ ಅನುದಾನ ಬಿಡುಗಡೆ ಮಾಡಿ ರಸ್ತೆ ಹಾಗೂ ಚರಂಡಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. ಜೊತೆಗೆ ಪ್ರತಿದಿನ ಕಸ ವಿಲೇವಾರಿ ವ್ಯವಸ್ಥೆ ಜಾರಿಗೊಳಿಸಲು ಗ್ರಾಮ ಪಂಚಾಯತ್ ಮತ್ತು ತಾ.ಪಂ. ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಬೇಕು ಎಂದು ಆಗ್ರಹಿಸಲಾಯಿತು.

ಈ ವೇಳೆ ರವಿ ಕೋಟಬಾಗಿ, ವಿನೋದ ಕರ್ಲಾ, ರಮೇಶ ದೇಶಪಾಂಡೆ, ಪ್ರಕಾಶ ಹರದಿ, ಕುಂಬಾರ ಗೌಡರ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಕಿರುಸುದ್ದಿ

ವಿದ್ಯುತ್ ವ್ಯತ್ಯಯ ಇಂದು

• **ಬಾಗಲಕೋಟೆ:** ಬಾಗಲಕೋಟೆ ವಿದ್ಯಾಗಿರಿಯ ಹೆಸ್ಕಾಂ ಕಾರ್ಯ ಮತ್ತು ಪಾಲನೆ ಶಾಖೆಯ 110 ಕೆವಿ ಉಪಕೇಂದ್ರ ವ್ಯಾಪ್ತಿಯಲ್ಲಿ ನಿಯಮಿತ ಕಾಮಗಾರಿ ಅತಿ ವಿದ್ಯುತ್ ಪರಿವರ್ತಕ ಅಳವಡಿಕೆ ಕಾಮಗಾರಿ ಪ್ರಯುಕ್ತ ಜೂನ್ 27 ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ವಿದ್ಯಾಗಿರಿ 110 ಕೆವಿ ಉಪಕೇಂದ್ರದ ವ್ಯಾಪ್ತಿಗೆ ಒಳಪಡುವ ನೇತಾಜಿ ಹಾಸ್ಟೆಲ್, 3ನೇ ಕ್ರಾಸ್ ಅರ್ಧ ಕಲಾದಗಿ ರೋಡವರೆಗೆ, 4ನೇ ಕ್ರಾಸ್, 6ನೇ ಕ್ರಾಸ್, ಪಂಜಾಬ ಬ್ಯಾಂಕ್ ಹತ್ತಿರ ಟಿಸಿ ನಂಬರ 84, 85, 86 ಪರಿವರ್ತಕಗಳ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಬಾಗಲಕೋಟೆ ಹೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಅತ್ಯುತ್ತಮ ಸಾಧನೆ





• **ಬಾಗಲಕೋಟೆ:** ಬಾಗಲಕೋಟೆ ವಿಶ್ವವಿದ್ಯಾಲಯ ಡಿಸೆಂಬರ್ ಮತ್ತು ಜನವರಿಯಲ್ಲಿ ನಡೆಸಿದ 6ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಬಿವಿವಿ ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆಗೈದಿದ್ದಾರೆ.

ಕಾಲೇಜಿನ ಗಂಗಾ ಅಮಾತೆಪ್ಪನವರ ಜಾಹೀರಾತು ಮತ್ತು ಸಾಂಸ್ಥಿಕ ಸಂವಹನ ವಿಷಯಕ್ಕೆ 100ಕ್ಕೆ 100 ಮತ್ತು ಡಿಜಿಟಲ್ ಮಾಧ್ಯಮದ ಪರಿಚಯ ಪತ್ರಿಕೆಗೆ 98 ಅಂಕ ಪಡೆದರೆ, ಶಾಂತಾ ಪಾಟೀಲ ಪ್ರಥಮ ಪತ್ರಿಕೆಗೆ 80, ದ್ವಿತೀಯ ಪತ್ರಿಕೆಗೆ 89 ಹಾಗ ದೀಪಾ ಮುರನಾಳ ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ವಿಷಯಗಳಿಗೆ 75,84 ಅಂಕಗಳನ್ನು ಪಡೆದಿದ್ದಾರೆ. ಅಲ್ಲದೆ ಪರೀಕ್ಷೆಗೆ ಹಾಜರಾದ 11 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಮಹಾವಿದ್ಯಾಲಯದ ಕೀರ್ತಿ ಹೆಚ್ಚಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಬಿವಿವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ, ಗೌರವ ಕಾರ್ಯದರ್ಶಿ ಮಹೇಶ ಎನ್.ಅಥಣಿ, ಕಾಲೇಜುಗಳ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ, ಪ್ರಾಚಾರ್ಯ ಎಸ್.ಆರ್.ಮುಗನೂರಮಠ, ವಿಭಾಗದ ಮುಖ್ಯಸ್ಥ ಐ.ಬಿ.ಚಿಕ್ಕಮಠ, ಪ್ರಾಧ್ಯಾಪಕ ಎಂ.ಪಿ.ದೊಡವಾಡ ಸೇರಿದಂತೆ ಸಿಬ್ಬಂದಿ ಅಭಿನಂದಿಸಿದ್ದಾರೆ.

ಜಿ.ಟಿ.ಪಾಟೀಲಗೆ ಸಚಿವ ಸ್ಥಾನ ನೀಡಿ

• **ಗಲಗಲಿ:** ಶಾಸಕ ಜೆ.ಟಿ.ಪಾಟೀಲ್ ಅವರಿಗೆ ಸಚಿವ ಸ್ಥಾನ ನೀಡುವಂತೆ ಸ್ಥಳೀಯ ಕಾಂಗ್ರೆಸ್ ಪಕ್ಷದ ಯುವ ಮುಖಂಡ ಹಾಗೂ ಬಾಗಲಕೋಟೆ ಜಿಲ್ಲಾ ಸಹಕಾರಿ ಯೂನಿಯನ್‌ನ ನಿರ್ದೇಶಕ ರಾಜು ಹಿರೇಮಠ ಕಾಂಗ್ರೆಸ್ ಪಕ್ಷದ ಮುಖಂಡರಿಗೆ ಒತ್ತಾಯಿಸಿದ್ದಾರೆ. ಜೆ.ಟಿ.ಪಾಟೀಲ ಅವರು ಮಂತ್ರಿಯಾಗಿ



ಕಾರ್ಯನಿರ್ವಹಿಸಲು ಅತ್ಯಂತ ಸಮರ್ಥ ವ್ಯಕ್ತಿಯಾಗಿದ್ದಾರೆ. ವಿಧಾನಸಭೆಗೆ ನಾಲ್ಕು ಬಾರಿ ಆಯ್ಕೆಯಾಗಿ ಪಕ್ಷದ ಅತ್ಯಂತ ನಿಷ್ಠಾವಂತ ಹಿರಿಯ ಶಾಸಕರಾಗಿದ್ದಾರೆ. ಬೀಳಗಿ ಕ್ಷೇತ್ರದಲ್ಲಿ ಉತ್ತಮ ಕಾರ್ಯಗಳನ್ನು ಮಾಡಿ ಕ್ಷೇತ್ರವನ್ನು ಅಭಿವೃದ್ಧಿಯತ್ತ ಮುನ್ನಡೆಸಿದ್ದಾರೆ. ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಅವರು ಉತ್ತಮ ಕಾರ್ಯ ಮಾಡಲು ಸಮರ್ಥರಾಗಿದ್ದಾರೆ. ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ರಾಜು ಹಿರೇಮಠ ಮನವಿ ಮಾಡಿದ್ದಾರೆ.

ನಿಧನ ಸುದ್ದಿ

ಎಂ.ಎಂ.ಹೊಂಬಳ

• **ಬಾದಾಮಿ:** ತಾಲೂಕಿನ ಚೊಳಚಗುಡ್ಡ ಗ್ರಾಮದ ಹಿರಿಯ ನ್ಯಾಯವಾದಿ ಮೌಲಾಲಿ ಮೋದಿನಸಾಬ ಹೊಂಬಳ(52) ಬುಧವಾರ ನಿಧನರಾದರು. ಮೃತರಿಗೆ ಓರ್ವ ಪುತ್ರಿ, ಪತ್ನಿ, ಸಹೋದರ, ಅಪಾರ ಬಂಧು ಬಳಗ ಇದ್ದಾರೆ.



ಸಂತಾಪ: ಮೃತ ಹಿರಿಯ ನ್ಯಾಯವಾದಿ ಎಂ.ಎಂ. ಹೊಂಬಳ ಇವರ ನಿಧನಕ್ಕೆ ಹಿರಿಯ ದಿವಾಣಿ ನ್ಯಾಯಾಧೀಶ ಚಂದ್ರಶೇಖರ ಬಣಕಾರ, ಪ್ರಧಾನ ದಿವಾಣಿ ನ್ಯಾಯಾಧೀಶ ಹರೀಶ ಜಾಧವ, ವಕೀಲರ ಸಂಘದ ತಾಲೂಕು ಅಧ್ಯಕ್ಷ ಪ್ರಕಾಶ ಕಲಾಲ, ಹಿರಿಯ ನ್ಯಾಯವಾದಿ ಎನ್.ಬಿ.ಹೊಸಮನಿ, ಪಿ.ಎನ್. ಹೊಸಕೇರಿ, ಜಿ.ಕೆ.ಶಿವಪ್ಪಯ್ಯನಮಠ, ಸೇರಿದಂತೆ ಸಂಘದ ಪದಾಧಿಕಾರಿಗಳು ಸಂತಾಪ ಸಲ್ಲಿಸಿದ್ದಾರೆ.



ಗುಳೇದಗುಡ್ಡ: ತ್ಯಾಗ ಬಲಿದಾನದ ಹಬ್ಬವಾದ ಮೊಹರಂ ಹಬ್ಬವನ್ನು ಪಟ್ಟಣದಲ್ಲಿ ಶುಕ್ರವಾರ ಹಿಂದೂ ಮುಸ್ಲಿಂರು ಶ್ರದ್ಧಾ ಭಕ್ತಿಯಿಂದ ಆಚರಿಸಿದರು. ಸ್ಥಳೀಯ ಪುರಸಭೆ ಹತ್ತಿರವಿರುವ ಹಿರೇಮಸೀದಿ ಬಳಿ ಪಟ್ಟಣ ಸೇರಿದಂತೆ ಮುರುಡಿ, ಕೋಟೆಕಲ್ಲ, ಪರ್ವತಿ, ಹುಲ್ಲಿಕೇರಿ ಮತ್ತಿತರ ಗ್ರಾಮಗಳಿಂದ ಆಗಮಿಸಿದ ದೇವರನ್ನು ಹೊತ್ತ ಡೋಲಿಗಳು ಭೇಟಿ ನೀಡಿ ತಮ್ಮ ಗ್ರಾಮಗಳಿಗೆ ತೆರಳಿದವು.

ಅಗ್ನಿವೀರರಾಗಿ ಆಯ್ಕೆ: ಸನ್ಮಾನ

• **ಕಲಾದಗಿ:** ಗ್ರಾಮದ 4 ಜನ ಯುವಕರು ಭಾರತೀಯ ಸೇನೆಯ ಅಗ್ನಿವೀರರಾಗಿ ಆಯ್ಕೆಯಾಗಿರುವುದು ಅವರ ತಂದೆ ತಾಯಿ ಹಾಗೂ ಕಲಾದಗಿ ಗ್ರಾಮ ಹೆಮ್ಮೆ ಪಡುವ ಸಂಗತಿಯಾಗಿದೆ ಎಂದು ನಿವೃತ್ತ ಮುಖ್ಯಶಿಕ್ಷಕ ಸಿ.ಎಲ್.ಹೂಗಾರ ಹೇಳಿದರು.

ಗ್ರಾಮದ ಶಿವ ಚಿದಂಬರ ಸಭಾ ಭವನದಲ್ಲಿ ಭಾರತೀಯ ಸೇನೆಯ ಅಗ್ನಿವೀರರಾಗಿ ಆಯ್ಕೆಯಾಗಿರುವ ಹಾಗೂ 3 ಜನ ಶಿಕ್ಷಕರುಗಳು ಸೇವಾ ನಿವೃತ್ತಿ ಹೊಂದಿರುವ ನಿಮಿತ್ತ ಸನಾತನ ಉತ್ಸವಗಳ ಆಚರಣಾ ಸಮಿತಿಯವರು ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು. ನಿವೃತ್ತ ಶಿಕ್ಷಕ ಬಿ.ಟಿ.ಮಡ್ಡಿ ಮಾತನಾಡಿ, ಯುವಕರು ಏನಾದರೂ ಸಾಧನೆ ಮಾಡಬೇಕಾದರೆ ಮೊದಲು ಮೊಬೈಲ್‌ನ್ನು ಬಿಟ್ಟು ನಿತ್ಯ ಪುಸ್ತಕ ಓದುವ ಜೊತೆಗೆ ಮೈದಾನದಲ್ಲಿ ದೇಹವನ್ನು ಸದೃಢಗೊಳಿಸಲು ಸಮಯವನ್ನು ಕಳೆಯಬೇಕು. ಛಲ ಬಿಡದೇ ಗುರಿಯ ಕಡೆ ಸಾಗಲು ಸತತ ಪ್ರಯತ್ನದ ಅವಶ್ಯವಿದೆ ಎಂದು ಹೇಳಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಅಗ್ನಿವೀರರಾಗಿರುವ ಸಚಿನ ಮಾದರ, ರಾಜಶೇಖರ ಹಂಜಿ, ಕಾಡಪ್ಪ ಕೊಲಾರ, ಕಾರ್ತಿಕ ಪಾಣಿಶೆಟ್ಟಿ ಹೆತ್ತ ತಂದೆ ತಾಯಿ, ಭಾರತ ಮಾತೆಗೆ ಹಾಗೂ ಗ್ರಾಮಕ್ಕೆ ಗೌರವ ತರುವುದಾಗಿ ಹೇಳಿದರು. ಇತ್ತೀಚೆಗೆ ಸೇವಾ ನಿವೃತ್ತಿ ಹೊಂದಿರುವ ಶಿಕ್ಷಕರುಗಳಾದ ಸಿ.ಎಲ್.ಹೂಗಾರ, ಬಿ.ಟಿ.ಮಡ್ಡಿ ಹಾಗೂ ಕೆ.ಆರ್.ಸುನಗಾರ ಅವರನ್ನು ಸನಾತನ ಉತ್ಸವಗಳ ಆಚರಣಾ ಸಮಿತಿ ವತಿಯಿಂದ ಸನ್ಮಾನಿಸಲಾಯಿತು. ಬಸಪ್ಪ ಪಾಣಿಶೆಟ್ಟಿ ದಿಲೀಪ ಮಮದಾಪೂರ ಇದ್ದರು.



ಕಲಾದಗಿ: ಗ್ರಾಮದ ಶಿವ ಚಿದಂಬರ ಸಭಾ ಭವನದಲ್ಲಿ ಭಾರತೀಯ ಸೇನೆಯ ಅಗ್ನಿವೀರರಾಗಿ ಆಯ್ಕೆಯಾಗಿರುವ ಹಾಗೂ 3 ಜನ ಶಿಕ್ಷಕರುಗಳು ಸೇವಾ ನಿವೃತ್ತಿ ಹೊಂದಿರುವ ನಿಮಿತ್ತ ಸನಾತನ ಉತ್ಸವಗಳ ಆಚರಣಾ ಸಮಿತಿಯವರು ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭ ನಡೆಯಿತು. ಗ್ರಾಪಂ ಮಾಜಿ ಸದಸ್ಯ ಅಜಯ ಕುಲಕರ್ಣಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಮಾರುತಿ ಬಾರಕೇರ ನಿರೂಪಿಸಿದರು. ಹೊಳಬಸು ಪಾಣಿಶೆಟ್ಟಿ, ನಿತೀಶ ಪಾಟೀಲ, ಮಲ್ಲು ಅಂಗಡಿ, ಸಾಯಿರಾಮ ಮುಳಗುಂದ, ಶಿವಾಜಿ ಚವಾಣ, ಪ್ರಜ್ವಲ ಗಣಾಚಾರಿ, ಹರೀಶ ಆಸಂಗಿ, ಶಿವು ಗಾಣಿಗೇರ ಇತರರಿದ್ದರು.

ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಹೇಳಿಕೆ

ತುರ್ತು ಪರಿಸ್ಥಿತಿ ಪ್ರಜಾಪ್ರಭುತ್ವದ ಕಗ್ಗೊಲೆ

• **ಬಾಗಲಕೋಟೆ:** 1975 ಜೂ.25ರಂದು ದೇಶದ ಪ್ರಜಾಪ್ರಭುತ್ವದ ಇತಿಹಾಸದ ಅತ್ಯಂತ ಕರಾಳ ಅಧ್ಯಾಯವಾಗಿರುವ ತುರ್ತುಪರಿಸ್ಥಿತಿ ಹೇರಿದ ದಿನ. ತಮ್ಮ ಸ್ವಾರ್ಥ ಅಧಿಕಾರದ ಹಪಾಹಪಿಗೆ ಅಂದಿನ ಕಾಂಗ್ರೆಸ್ ಸರ್ಕಾರ ಸಂವಿಧಾನಕ್ಕೆ ಅಪಚಾರ ಬಗೆದು, ಪ್ರಜಾಪ್ರಭುತ್ವದ ಕಗ್ಗೊಲೆ ನಡೆಸಿತು ಎಂದು ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಹೇಳಿದರು.



ನಗರದ ಶಿವಾನಂದ ಜಿನ್‌ದಲ್ಲಿರುವ ಬಿಜೆಪಿ ಕಾರ್ಯಾಲಯದಲ್ಲಿ ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕ್ಷೇತ್ರದಿಂದ ಹಮ್ಮಿಕೊಂಡ ತುರ್ತುಪರಿಸ್ಥಿತಿಯ ಕರಾಳ ದಿನಾಆಚರಣೆಯಲ್ಲಿ ತುರ್ತು ಪರಿಸ್ಥಿತಿಯಲ್ಲಿ ಸೆರೆವಾಸ ಅನುಭವಿಸಿದ ಹಿರಿಯರಿಗೆ ಗೌರವ ಸನ್ಮಾನ ನೆರವೇರಿಸಿ ಮಾತನಾಡಿದ ಅವರು, ಪ್ರಧಾನಿ ಇಂದಿರಾ ಗಾಂಧಿಯವರ ಸಲಹೆಯ ಮೇರೆಗೆ ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹ್ಮದ್ ಅವರು ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದರು. ಆಂತರಿಕ ಭದ್ರತೆಯ ನೆಪದಲ್ಲಿ ಹೇರಲಾದ ಈ ತುರ್ತು ಪರಿಸ್ಥಿತಿಯು ಸುಮಾರು 21 ತಿಂಗಳ ಕಾಲ ಮುಂದುವರೆಯಿತು ಎಂದು ತಿಳಿಸಿದರು.

ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿ, ಒಂದು ಕೋಟಿಗೂ ಅಧಿಕ ಜನರ ಮೇಲೆ ಬಲವಂತದ ಸಂತಾನಹರಣ ಶಸ್ತ್ರ ಚಿಕಿತ್ಸೆ, ಲಕ್ಷಕ್ಕೂ ಹೆಚ್ಚು ರಾಜಕೀಯ ಮುಖಂಡರು ಹಾಗೂ ಕಾರ್ಯಕರ್ತರ ಬಂಧನ ಮತ್ತು ಪತ್ರಿಕಾಸ್ವಾತಂತ್ರ್ಯದ ಹರಣದಂತಹ ಭಯಾನಕ ದೌರ್ಜನ್ಯಗಳನ್ನು ಇತಿಹಾಸ ಎಂದಿಗೂ ಮರೆಯುವುದಿಲ್ಲ. ದೇಶದ ಜನತೆ ಈ ಪ್ರಮಾದ ಎಂದಿಗೂ ಕ್ಷಮಿಸುವುದಿಲ್ಲ. ಭಾರತೀಯ ಜನತಾ ಪಕ್ಷದವರು ನಿಜವಾದ ಸಂವಿಧಾನ ರಕ್ಷಕರು ಎಂದರು.

ತುರ್ತು ಪರಿಸ್ಥಿತಿಯಲ್ಲಿ ಸೆರೆವಾಸ ಅನುಭವಿಸಿದ ಬಾಗಲಕೋಟೆಯ ಹಿರಿಯರಾದ ಕಲ್ಲಪ್ಪ ಡಂಗೆ, ರಾಮಣ್ಣ ಬಾರಕೇರ, ವಿಠ್ಠಲ್ ಸಾಳುಂಕೆ, ಗುಂಡುರಾವ ಶಿಂಧೆ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸೆರೆವಾಸ ಅನುಭವಿಸಿದ ಗುಂಡು ಶಿಂಧೆ ಮಾತನಾಡಿದರು.

ಮಹೇಶ ಅಥಣಿ, ಬಸವರಾಜ ಯಂಕಂಚಿ, ಡಾ.ಎಂ.ಎಸ್.ದಡ್ಡೆನ್ನವರ, ಮುತ್ತಣ್ಣ ಬೇಣ್ಣೂರ, ಬಸವರಾಜ ಹುನಗುಂದ, ಸತ್ಯನಾರಾಯಣ ಹೇಮಾದ್ರಿ, ಶಿವಾನಂದ ಟವಳಿ, ದುಂಡಪ್ಪ ಏಳಮ್ಮಿ, ಸುರೇಶ ಮಜ್ಜಿಗಿ, ಶಶಿಕಲಾ ಮಜ್ಜಗಿ, ಶಿವಲೀಲಾ ಸಂಬಣ್ಣವರ, ಜ್ಯೋತಿ ಚವ್ಹಾಣ, ನಾಗರತ್ನ ಹಡಗಲಿ, ವಿಜಯಲಕ್ಷ್ಮಿ ಭದ್ರಶೆಟ್ಟಿ, ರವಿ ಧಾಮುಜಿ, ಶ್ರೀಧರ ನಾಗರಬೆಟ್ಟ, ಗಿರೀಶ ಬಾಂಡಗೆ, ರಾಜು ತಾಳಿಕೋಟಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಕಣ್ಣಿನ ಆರೋಗ್ಯ ಕಾಪಾಡಿಕೊಳ್ಳುವುದು ಮುಖ್ಯ

• **ಮಹಾಲಿಂಗಪುರ:** ಶರೀರದ ಎಲ್ಲ ಅವಯವಗಳಲ್ಲಿ ಕಣ್ಣಿಗೆ ಅತ್ಯಂತ ಹೆಚ್ಚಿನ ಪ್ರಾಶಸ್ತ್ಯವಿದ್ದು, ಅದರ ಆರೋಗ್ಯ ಕಾಪಾಡಿಕೊಂಡು ಹೋಗುವುದು ಪ್ರತಿಯೊಬ್ಬರ ಕರ್ತವ್ಯ ಎಂದು ತೇರದಾಳ ಶಾಸಕ ಸಿದ್ದು ಸವದಿ ಹೇಳಿದರು.

ಪಟ್ಟಣದ ವೆಂಕಟೇಶ (ಕನಕರೆಡ್ಡಿ) ಆಸ್ಪತ್ರೆ ಆವರಣದಲ್ಲಿ ಗುರುವಾರ ನಡೆದ ಐಸಿರಿ ನೇತ್ರ ಚಿಕಿತ್ಸಾಲಯದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಶರೀರದ ಇತರ ಅವಯವಗಳಲ್ಲಿ ಏನಾದರೂ ತೊಂದರೆಯಾದರೆ ಅದನ್ನು ಸರಿಪಡಿಸಿಕೊಳ್ಳಬಹುದು. ಕಣ್ಣಿನ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಕಣ್ಣಿನ ತೊಂದರೆಗಳಿಂದ ಬಳಲುವವರಿಗೆ ಚಿಕಿತ್ಸೆ ನೀಡಿ ಹೊಸ ಬೆಳಕನ್ನು ನೀಡುವ ವೈದ್ಯರ ಸೇವೆ ಅತ್ಯಂತ ಶ್ರೇಷ್ಠವಾದುದು ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಮಾತನಾಡಿ, ಈವರೆಗೆ ನೇತ್ರ ಚಿಕಿತ್ಸೆಗೆ ಸಂಬಂಧಿಸಿದ ಗಂಭೀರ ಸಮಸ್ಯೆಗಳಿಗಾಗಿ ಸ್ಥಳೀಯರು ದೊಡ್ಡ ನಗರಗಳಿಗೆ ತೆರಳಬೇಕಾಗುತ್ತಿತ್ತು. ಈಗ ಮಹಾಲಿಂಗಪುರದಲ್ಲೇ ಆಧುನಿಕ ಸೌಲಭ್ಯಗಳೊಂದಿಗೆ ನೇತ್ರ ಚಿಕಿತ್ಸಾ ಕೇಂದ್ರ ಆರಂಭಗೊಂಡಿರುವುದು ಜನತೆಗೆ ಅನುಕೂಲಕರವಾಗಿದೆ. ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಜನರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ನಿಶಾಂತ ಶ್ರೀಗಳು ಆಶೀರ್ವಚನ ನೀಡಿ, ದೇವರು ನೀಡಿರುವ ಪ್ರತಿಯೊಂದು ಅಂಗವೂ ಅಮೂಲ್ಯ. ಅವುಗಳ ಆರೋಗ್ಯವನ್ನು ಕಾಪಾಡಿಕೊಳ್ಳುವುದು ನಮ್ಮ ಜವಾಬ್ದಾರಿ. ಕಣ್ಣು ಎಂಬ ಜ್ಯೋತಿಯಿಂದಲೇ ನಾವು ಪ್ರಪಂಚದ ಸೌಂದರ್ಯವನ್ನು ಕಾಣುತ್ತೇವೆ ಎಂದು ಹೇಳಿದರು.

ವೆಂಕಟೇಶ ಆಸ್ಪತ್ರೆ ಚೇರ್ಮನ್ ಡಾ.ಅಜೀತ್ ಕನಕರೆಡ್ಡಿ ಪ್ರಾಸ್ತಾವಿಕವಾಗಿ ಮಾತನಾಡಿ, ನಮ್ಮ ಪಾಲಕರ ಕನಸಿನಂತೆ ಆರೋಗ್ಯ ಸೇವೆಯ ಎಲ್ಲ ವಿಭಾಗಗಳನ್ನು ಮಹಾಲಿಂಗಪುರದಲ್ಲೇ ಲಭ್ಯವಾಗಿಸುವ ಉದ್ದೇಶದಿಂದ ಆಸ್ಪತ್ರೆ ಅಭಿವೃದ್ಧಿಪಡಿಸುತ್ತಿದ್ದೇವೆ. ಸ್ಥಳೀಯರಿಗೆ ದೂರದ ನಗರಗಳಿಗೆ ತೆರಳಿ ಚಿಕಿತ್ಸೆ ಪಡೆಯುವ ಅನಿವಾರ್ಯತೆಯನ್ನು ತಪ್ಪಿಸಲು ಐಸಿರಿ ನೇತ್ರ ಚಿಕಿತ್ಸಾ ವಿಭಾಗ ಆರಂಭಿಸಲಾಗಿದೆ ಎಂದು ತಿಳಿಸಿದರು. ನೇತ್ರ ತಜ್ಞರಾದ ಡಾ.ಬಾಹುಬಲಿ ಎನ್.ಶೆಟ್ಟಿ, ಡಾ.ಧರೆಪ್ಪ ಚೌಗಲಾ ಹಾಗೂ ಡಾ. ಗಿರೀಶ ನರಗೊಂಡ ಮಾತನಾಡಿ, ಉತ್ತರ ಕರ್ನಾಟಕ ಭಾಗದ ಜನತೆಗೆ ಗುಣಮಟ್ಟದ ನೇತ್ರ ಚಿಕಿತ್ಸೆ ಒದಗಿಸುವ ಉದ್ದೇಶದಿಂದ ಈ ಕೇಂದ್ರವನ್ನು ಆರಂಭಿಸಲಾಗಿದೆ ಎಂದು ಹೇಳಿದರು. ಮಲ್ಲಪ್ಪ ಹುಕ್ಕೇರಿ, ವಿಶ್ವನಾಥ ಗುಂಡಾ ಉಪಸ್ಥಿತರಿದ್ದರು. ಡಾ.ಅಜೀತ್ ಕನಕರೆಡ್ಡಿ ಅಧ್ಯಕ್ಷತೆ ವಹಿಸಿದ್ದರು. ಶೈಲಾ ರವಿ ಕೋಕರಿ, ವಿವೇಕ್ ಥಪಳಾಪೂರ ಇದ್ದರು.



ಭಾವೈಕ್ಯತೆಯ ಮೊಹರಂ

• **ಕಮತಗಿ:** ಪಟ್ಟಣದಲ್ಲಿ ನಾವೆಲ್ಲರೂ ವಂದೇ ಮನುಕುಲದವರು ಎಂದು ಭಾವೈಕ್ಯತೆಯಿಂದ ಕಮತಗಿ ಪಟ್ಟಣದಲ್ಲಿ ಹಿಂದೂ ಮುಸ್ಲಿಂ ಬಾಂಧವರು ಕೂಡಿಕೊಂಡು ಶಾಂತಿ ಸೌಹಾರ್ತೆಯಿಂದ ಮೊಹರಂ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ಅಲಾಯಿ ದೇವರನ್ನು ಹೊತ್ತಿದ ನಾಗರೀಕರು ಪಟ್ಟಣದ ಹರಕೆ ಮನೆ,ಮನೆಗಳಿಗೆ ಭೇಟಿ ಕೊಟ್ಟು,ನಂತರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ನಡೆದಾಡಿ ಹೊಳೆಗೆ ಹೋಗಿ ಮುಖವನ್ನು ತೊಳೆದುಕೊಂಡು ಪುನಃ ಮಸಿದಿಗೆ ಬಂದು ನೆಲೆಸಿದರು. ಸಂಜೆ ಡೋಲೆಯನ್ನು ಹೊತ್ತುಕೊಂಡು, ಹಿರಿಯರು ಮತ್ತು ಯುವಕರು ಹಲಗೆಯ ನಾದದೊಂದಿಗೆ ಹೆಜ್ಜೆಯ ಕುಣಿತವನ್ನು ಹಾಕುತ್ತಾ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದರು. ಪಟ್ಟಣದ ಮುಸ್ಲಿಂ ಸಮುದಾಯದ ಗುರುಹಿರಿಯರು ಪಾಲ್ಗೊಂಡಿದ್ದರು .



ಹಿಂದೂಗಳ ನೇತೃತ್ವದಲ್ಲಿ ಮೊಹರಂ ಆಚರಣೆ

• **ಕಲಾದಗಿ:** ಹಿಂದೂ ಮುಸ್ಲಿಂ ಭಾವೈಕ್ಯದ ಹಬ್ಬವಾದ ಮೊಹರಂ ಹಬ್ಬವನ್ನು ಹಿರೇಶೆಲ್ಲಿಕೇರಿ, ಗೋವಿಂದಕೊಪ್ಪ ಹಾಗೂ ಕಲಾದಗಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸಂಭ್ರಮದಿಂದ ಆಚರಿಸಲಾಯಿತು.

ಮುಸ್ಲಿಂ ಸಮುದಾಯವೇ ಇಲ್ಲದಿರುವ ಕಲಾದಗಿ ಸಮೀಪದ ಗ್ರಾಮಗಳಾದ ಹಿರೇಶೆಲ್ಲಿಕೇರಿ, ಗೋವಿಂದಕೊಪ್ಪ, ಅಂಕಲಗಿ, ಚಿಕ್ಕಸಂಶಿ, ಹಿರೇಸಂಶಿ ಗ್ರಾಮದಲ್ಲಿ ಭಾವೈಕ್ಯತೆಯಿಂದ ಪ್ರತಿಷ್ಠಾಪಿಸಲಾಗಿದ್ದ ಅಲಾಯಿ ದೇವರುಗಳನ್ನು ಹಿಂದೂಗಳೆ ಶ್ರದ್ಧೆಯಿಂದ ಪೂಜೆ ಪುನಸ್ಕಾರ ನೆರವೇರಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ದೇವರುಗಳನ್ನು ಮೆರವಣಿಗೆ ಮಾಡುವುದು ಹಲವಾರು ತಲೆಮಾರುಗಳಿಂದ ನಡೆದುಕೊಂಡು ಬರುತ್ತಿದೆ.

ಹಿರೇಶೆಲ್ಲಿಕೇರಿ ಗ್ರಾಮಸ್ಥ ಫಕೀರಪ್ಪ ಮಾದರ ಮಾತನಾಡಿ, ಹಿರೇಶೆಲ್ಲಿಕೇರಿ ಗ್ರಾಮದಲ್ಲಿ ಹಿಂದೂಗಳೆ ಅನೇಕ ತಲೆಮಾರುಗಳಿಂದ ಅಲಾಯಿ ದೇವರುಗಳನ್ನು ಕೂಡಿಸಿ ಶ್ರದ್ಧಾ ಭಕ್ತಿಯಿಂದ ಪೂಜೆ ಗೈಯುವ ಸಂಪ್ರದಾಯವಿದೆ. ಬೆಳಗಿನಿಂದ ರಾತ್ರಿವರೆಗೂ ಎಲ್ಲರ ಮನೆಯಲ್ಲೂ ಸಿಹಿ ಅಡಿಗೆ ಮಾಡಿ ದೇವರಿಗೆ ನೈವೇದ್ಯ ಕೊಟ್ಟು ಫಕೀರಗಳಾಗಿ ಸಂಭ್ರಮದಿಂದ ಮೋಹರಂ ಆಚರಿಸುತ್ತಾ ನಮ್ಮೂರು ಭಾವೈಕ್ಯತೆ ಸಾಕ್ಷಿಯಾಗಿದೆ.



ಮೊಹರಂ ಆಚರಣೆ

• **ಲೋಕಾಪುರ:** ಪಟ್ಟಣದಲ್ಲಿ ಮೊಹರಂ ಹಬ್ಬವನ್ನು ಹಿಂದೂ-ಮುಸ್ಲಿಂ ಬಾಂಧವರು ಶುಕ್ರವಾರ ಲೇ ಝಿಮ್, ಡೋಲಿ ಮೆರವಣಿಗೆ ವಿವಿಧ ತಾಳ ವೇದಗಳೊಂದಿಗೆ ಅದ್ದೂರಿಯಾಗಿ ಜರುಗಿತು.

ಜ್ಞಾನೇಶ್ವರ ಮಠದ ಶ್ರೀಗಳಾದ ಬ್ರಹ್ಮಾನಂದ ಶ್ರೀಗಳು ಅಲಾಯಿ ದೇವರಿಗೆ ನೈವಿದ್ಯ ಅರ್ಪಣೆ ಮಾಡಿ ಪೂಜೆ ನೇರವೇರಿಸಿದರು. ಎಲ್ಲಾ ದೇವರಿಗೆ ವಿಶೇಷ ಪೂಜೆ ನೇರವೇರಿಸಿ ಮೊಹರಂ ಹಬ್ಬವನ್ನು ಎಲ್ಲರೂ ಶಾಂತಿ ಸೌಹಾರ್ದತೆಯಿಂದ ಆಚರಿಸಲು ಸಲಹೆ ನೀಡಿದರು.ಹಬ್ಬದ ಕೊನೆಯ ದಿನವಾದ ಶುಕ್ರವಾರ ದೇವರನ್ನು ವಿಸರ್ಜಿಸಲು ಹೊಳೆಗೆ ಹೋಗುವ ಮುಂಚೆ ನಡೆಯುವ ಡೋಲಿ ಉತ್ಸವದಲ್ಲಿ ಸಾವಿರಾರು ಹಿಂದೂ-ಮುಸ್ಲಿಂ ಭಾಂಧವರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು, ಅಲಾಯಿ ಭಕ್ತರು ದೇವರುಗಳಿಗೆ ಬೆಂಡು, ಬೆತ್ತಾಸು, ಖಾರಿಕ ಬಾಳೆಹಣ್ಣು ಅರ್ಪಿಸುವುದರ ಮೂಲಕ ಹರಕೆ ತೀರಿಸಿದರು.

ಪಟ್ಟಣದ ನಾಲ್ಕು ಮಸೀದಿಗಳಲ್ಲಿ ಐದು ದಿನ ಸಂಪ್ರದಾಯದಂತೆ ಡೋಲಿಗಳು, ಹಸನ್-ಹುಸೇನ, ಲಾಲಸಾಬ ಅಲಿ ದೇವರುಗಳನ್ನು ಸ್ಥಾಪಿಸಲಾಗಿತ್ತು. ಡೋಲಿಗೆ ಗಂಧ ರಾತ್ರಿ ಹಾಗೂ ಕತಲ್ ರಾತ್ರಿ ದಿನ ಮುಸ್ಲಿಂ ಹಿಂದು ಭಾಂದವರು ಸೇರಿದಂತೆ ಎಲ್ಲರೂ ಜಾತಿಭೇದ ಮರೆತು ಒಟ್ಟಾಗಿ ಹರಕೆ ಸಲ್ಲಿಸಿದರು. ಸಂಪ್ರದಾಯದಂತೆ ಡೋಲಿಗಳನ್ನು ಹೊಳೆಗೆ ಕಳಿಸುವ ಮೂಲಕ ಮೊಹರಂ ಹಬ್ಬಕ್ಕೆ ತೆರೆ ಎಳೆಯಲಾಯಿತು.

ಸಾಧನೆ ಮಾಡುವ ಗುರಿ ಬೆಳೆಯಲಿ: ಆನಂದ ನ್ಯಾಮಗೌಡ

• **ಜಮಖಂಡಿ:** ಸಮಾಜ ಶೈಕ್ಷಣಿಕದತ್ತ ಸಾಧನೆ ಮಾಡಿದೆ ಎಂದು ಮಕ್ಕಳಿಂದ ತಿಳಿದು ಬರುತ್ತದೆ. ಮುಂದಿನ ದಿನ ಹೆಚ್ಚು ಸಾಧನೆ ಮಾಡಬೇಕು. ಸ್ಪರ್ಧಾತ್ಮಕ ದಿನದಲ್ಲಿ ಇನ್ನು ಹೆಚ್ಚು ಸ್ಪರ್ಧೆಗೆ ಒಗ್ಗೂಡಬೇಕು ಎಂದು ಮಾಜಿ ಶಾಸಕ ಆನಂದ ನ್ಯಾಮಗೌಡ ಹೇಳಿದರು.

ನಗರದ ನಂದಿಕೇಶ್ವರ ಕಲ್ಯಾಣ ಮಂದಿರದ ಆವರಣದಲ್ಲಿ ತಾಲೂಕು ಗಾಣಿಗ ಸಮಾಜದ ಸಹಯೋಗದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಮತ್ತು ನಿವೃತ್ತ ನೌಕರರ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಅಚಲ ವಿಶ್ವಾಸ ಗುರಿ ಮುಟ್ಟುವ ತವಕ ನಿಮ್ಮಲ್ಲಿರಬೇಕು. ಸಾಧನೆಗೆ ಕೊನೆಯಿಲ್ಲ; ಕೊನೆಯವರೆಗೂ ಸಾಧನೆ ಮಾಡುತ್ತಲೇ ಇರಬೇಕು. ಅಂಕಗಳು ನೌಕರಿಗೆ ಸೀಮಿತವಾಗದೇ ಉದ್ಯೋಗದತ್ತ ದಾಪುಗಾಲು ಹಾಕಿ ಉದ್ಯಮಿಯಾಗಿ ಉದ್ಯೋಗ ನೀಡುವರದ ಜೊತೆಗೆ ಆರ್ಥಿಕ ಸದೃಢತೆ ನೀಡಬೇಕು ಎಂದರು. ಮಾಜಿ ಶಾಸಕ ಜಿ.ಎಸ್.ನ್ಯಾಮಗೌಡ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಾಧನೆ ಮಾಡಿದವರಿಗೆ ಉತ್ತೇಜನ ನೀಡುವಂತಾಗಬೇಕು. ಕೇವಲ ಅಂಕಗಳಿಗೆ ಸೀಮಿತವಾಗದೇ ಸಂಸ್ಕಾರ ಮುಖ್ಯವಾಗಿರಬೇಕು. ಪಾಲಕರು ತಮಮ ಮಕ್ಕಳ ಚಲನವಲನಗಳ ಬಗ್ಗೆ ನಿಗಾ ವಹಿಸಿರಬೇಕು. ಅದರಿಂದ ಮಕ್ಕಳು ಸರಿ ದಾರಿಯಲ್ಲಿರುತ್ತವೆ ಎಂದರು.ಅರ್ಬನ್ ಬ್ಯಾಂಕ್ ಅಧ್ಯಕ್ಷ ರಾಹುಲ ಕಲೂತಿ ಮಾತನಾಡಿ, ಶಿಕ್ಷಣದ ಜೊತೆಗೆ ದೈಹಿಕ ಸಾಮರ್ಥ್ಯ, ಆತ್ಮಬಲವನ್ನೂ ಮಕ್ಕಳಲ್ಲಿ ಬೆಳೆಸಬೇಕಾಗಿದೆ ಎಂದು ಹೇಳಿದರು.ತಾಲೂಕಾಧ್ಯಕ್ಷ ಕೆ.ಕೆ.ತುಪ್ಪದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಾನ್ನಿಧ್ಯ ವಹಿಸಿದ್ದ ಸಿದ್ಧ ಕ್ಷೇತ್ರದ ಸಿದ್ದಮುತ್ತ್ಯಾ ಆಶೀರ್ವಚನ ನೀಡಿದರು. ಜಗದೇವ ಪಸೋಡಿ, ಸಿದ್ರಾಮ ಜಂಬಗಿ, ಎಂ.ಜಿ.ಲಿಂಗನೂರ, ವೀರೇಂದ್ರ ಕಲೂತಿ, ಶಾಂತಾ ನ್ಯಾಮಗೌಡ, ನಾಗಪ್ಪ ಮುತ್ತಕ್ಕನವರ, ಬಿಇಓ ಸಾವಳಗಿ, ರಾಜಶ್ರೀ ನ್ಯಾಮಗೌಡ, ಎಂ.ಎಸ್.ನ್ಯಾಮಗೌಡ, ಸಂಗಮೇಶ ಗಾಣಿಗೇರ, ಸಿ.ಜಿ.ಕಡಕೋಳ, ಕವಿತಾ ಬಿರಾದಾರ ಇದ್ದರು



ಗುಣಮಟ್ಟದ ಶಿಕ್ಷಣ ನೀಡುತ್ತಿರುವ ಕಾರ್ಯ ಶ್ಲಾಘನೀಯ: ಶ್ರೀಗಳು

• **ಬಾದಾಮಿ:** ಇಂದಿನ ಶಿಕ್ಷಣ ಪದ್ಧತಿ ಬದಲಾವಣೆಯಾದರೂ ಜೀವನ ಮೌಲ್ಯಗಳನ್ನು ಮಕ್ಕಳಿಗೆ ತಿಳಿಸುವದು ಮತ್ತು ಗುಣಮಟ್ಟದ ಶಿಕ್ಷಣ ನೀಡುತ್ತಿರುವುದು ಸಂಸ್ಥೆಗಳ ಜವಾಬ್ದಾರಿಯಾಗಿದ್ದು, ಕಾರ್ಯ ಶ್ಲಾಘನೀಯ ಎಂದು ಹುಬ್ಬಳ್ಳಿ ಮೂರುಸಾವಿರ ಮಠದ ಅಧ್ಯಕ್ಷ ಮ.ನಿರಂಜನ ಗುರುಸಿದ್ಧ ರಾಜಯೋಗೇಂದ್ರ ಶ್ರೀಗಳು ಹೇಳಿದರು.

ಪಟ್ಟಣದ ಹೊರವಲಯದ ಕೆಎಂಪಿ ಬಡಾವಣೆಯಲ್ಲಿ ನೂತನ ಕೆ.ಎಂ.ಪಟ್ಟಣಶೆಟ್ಟಿ ಪಿಯು ಕಾಲೇಜು, ಪದವಿ ಕಾಲೇಜಿನ ನೂತನ ಕಾಲೇಜು ಕಟ್ಟಡ ಉದ್ಘಾಟಿಸಿ ಮಾತನಾಡಿದರು.

ಹಾಳಕೇರಿಯ ಶ್ರೀಗಳು ಮಾತನಾಡಿ, ಮಕಾಲೆ ಶಿಕ್ಷಣ ಪದ್ಧತಿಯಿಂದ ಶಿಕ್ಷಣದ ಗುಣಮಟ್ಟ ಕಡಿಮೆಯಾಗಿರುವ ಕಾರಣ ದೇಶಿಯ ಶಿಕ್ಷಣ ಹಾಳು ಮಾಡುವ ಕಾರ್ಯ ಬ್ರಿಟಿಷರು ಮಾಡಿದರು. ಈಗ ಶಿಕ್ಷಣ ಸಂಸ್ಥೆಗಳ ಮೂಲಕ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದಾರೆ ಎಂದು ಹೇಳಿದರು.



ಮಾಜಿಶಾಸಕ,ಸಂಸ್ಥೆಯ ಅಧ್ಯಕ್ಷ ಎಂ.ಕೆ.ಪಟ್ಟಣಶೆಟ್ಟಿ ಮಾತನಾಡಿ, ನಮ್ಮ ತಂದೆಯವರ ಕಾಲದಿಂದಲೂ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಸಂಸ್ಥೆಯನ್ನು ಪ್ರಾರಂಭಿಸಲಾಗಿದ್ದು, ತೋಂಟದ ಸಿದ್ದಲಿಂಗ ಶ್ರೀಗಳ ಮಾರ್ಗದರ್ಶನದಲ್ಲಿ ಪ್ರಾರಂಭಮಾಡಿದ್ದೇವೆ. ಇದನ್ನು ನಾನು ಮುಂದುವರೆಸಿಕೊಂಡು ಹೋಗುತ್ತಿದ್ದೇನೆ. ಗ್ರಾಮೀಣ, ನಗರ ಪ್ರದೇಶದ ಮಕ್ಕಳು ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಗಣ್ಯ ವರ್ತಕ ಎ.ಸಿ.ಪಟ್ಟಣದ ಮಾತನಾಡಿದರು. ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಯಿತು. ಮಾಜಿ ಪುರಸಭೆ ಅಧ್ಯಕ್ಷೆ ಶಾಂತಾದೇವಿ ಪಟ್ಟಣಶೆಟ್ಟಿ, ಪ್ರಾಚಾರ್ಯ ಎಸ್.ಎಂ.ಮೇಟಿ, ಕೆ.ಎಂ.ಪಿ ಪಿಯು ಕಾಲೇಜು ಪ್ರಾಚಾರ್ಯ ಮಂಜುನಾಥ ಪತ್ತಾರ, ಬಸವೇಶ್ವರ ಪ್ರೌಢಶಾಲೆಯ ಮುಖ್ಯಶಿಕ್ಷಕ ಆರ್.ಐ.ಅರಕೇರಿ, ಮುಖ್ಯಶಿಕ್ಷಕ ಪುಂಡಲೀಕ ಅಸೂಟಿ, ಕೆ.ಎಂ.ಪಿ.ಆಂಗ್ಲ ಮಾಧ್ಯಮ ಶಾಲೆಯ ಮುಖ್ಯಶಿಕ್ಷಕ ಎಸ್ .ಬಿ.ಪಾಟೀಲ, ಮಂಜುನಾಥ ಪತ್ತಾರ, ಕೆ.ಎಚ್. ಮಾದರ ಇದ್ದರು.

ಅನಂತ ಬಬಲೇಶ್ವರಗೆ ಸನ್ಮಾನ



• **ಹುನಗುಂದ:** ರಂಗ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಅನಂತ ಬಬಲೇಶ್ವರ ಅವರು ಒಳ್ಳೆಯ ಸಂಘಟಿಕರು, ರಂಗ ಚಟುವಟಿಕೆಗಳಿಗೆ ಸಹಕಾರ ನೀಡಿದ್ದಾರೆ. ಅಂಥವರು ಇಂದು ಶ್ರೇಷ್ಠ ನಾಟಕಗಾರ ಪಿ.ಬಿ.ಧುತ್ತರಗಿ ಟ್ರಸ್ಟ್‌ನ ವಾರ್ಷಿಕ ಗೌರವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಸುಮಾರು ಆರು ದಶಕಗಳ ಅವರ ಶ್ರಮಕ್ಕೆ ಸಿಕ್ಕ ಗೌರವ ಇದಾಗಿದೆ ಎಂದು ಪಿ.ಬಿ.ದುತ್ತರಗಿ ಟ್ರಸ್ಟ್ ಅಧ್ಯಕ್ಷ ಎಸ್.ಕೆ.ಕೊನೆಸಾಗರ ಹೇಳಿದರು. ನಗರದ ರಾಘವೇಂದ್ರ ಮಠದಲ್ಲಿ ನಡೆದ ರಂಗ ಸಂಘಟನೆಗಳು ಹಮ್ಮಿಕೊಂಡ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.ಅಧ್ಯಕ್ಷತೆ ವಹಿಸಿದ್ದ ನ್ಯಾಯವಾದಿ ಹಾಗೂ ಹವ್ಯಾಸಿ ರಂಗ ಸಂಘಟಿಕ ಹಾಗೂ ಕಲಾವಿದ ಮಹಾಂತೇಶ ಅವಾರಿ ತಾಲೂಕಿನಲ್ಲಿನ ರಂಗಕರ್ಮಿಗಳನ್ನು ಗುರುತಿಸಿ ಗೌರವಿಸುವ ಕಾರ್ಯ ಶ್ಲಾಘನೀಯವಾಗಿದೆ. ರಂಗ ಚಟುವಟಿಕೆಗಳು ಹೀಗೆ ನಿರಂತರವಾಗಿ ಮುಂದುವರಿಯಬೇಕು. ಅಂತಹವಾತಾವರಣ ನಿರ್ಮಿಸುವ ಕಾರ್ಯವಾಗಬೇಕಾಗಿದೆ ಎಂದರು.ಮಹಾಂತೇಶ ಹಳ್ಳೂರ ಹಾಗೂ ವ್ಯಾಸ ತೀರ್ಥ ಜೋಷಿ ಅನಂತ ಅವರ ರಂಗ ಚಟುವಟಿಕೆ ಕುರಿತು ಮಾತನಾಡಿದರು. ಸಂಗು ಮಠ ಹಾಗೂ ವಾದಿರಾಜ ಗುಡ್ಡದ, ವಿಜಯಕುಮಾರ ಕುಲಕರ್ಣಿ, ಮಹಾಂತೇಶ ಹಳ್ಳೂರ ಇದ್ದರು.

ಸಮಸ್ಯೆಗೆ ಸ್ಪಂದಿಸದ ಪಿಡಿಒ: ಆರೋಪ

• **ಗುಳೇದಗುಡ್ಡ** : ಹಳದೂರು ಪಂಚಾಯತಿ ಸದಸ್ಯರ ಅವಧಿ ಪೂರ್ಣಗೊಂಡು ಆರು ತಿಂಗಳ ಮೇಲಾಯಿತು. ಹಳದೂರು ಗ್ರಾಮದ ಸಮಸ್ಯೆಗಳನ್ನು ಕೇಳುವರೇ ಇಲ್ಲ. ಜನರು ಗ್ರಾಮದ ಸಮಸ್ಯೆಗಳನ್ನು ತೆಗೆದುಕೊಂಡು ಗ್ರಾಪಂ ಅಭಿವೃದ್ಧಿ ಅಧಿಕಾರಿಯ ಬಳಿಗೆ ಹೋದರೆ ಸರಿಯಾಗಿ ಸ್ಪಂದನೆ ನೀಡುತ್ತಿಲ್ಲ ಎಂದು ಹಳದೂರು ಗ್ರಾಪಂನ ಮಾಜಿ ಸದಸ್ಯ ಶಿವು ಚೊಳಚಗುಡ್ಡ ದೂರಿದ್ದಾರೆ.

ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಗ್ರಾಮದಲ್ಲಿ ಪೂರ್ಣಗೊಳ್ಳದ ಕಸವಿಲೇವಾರಿ ಘಟಕ ಉದ್ಘಾಟಿಸಿ ಒಂದು ವರ್ಷವಾದರೂ ಅದೂ ಇನ್ನೂ ಪೂರ್ಣಗೊಂಡಿಲ್ಲ, ಗ್ರಾಮದ ಸ್ವಚ್ಛತೆಗೆ ಸಿಬ್ಬಂದಿಗಳನ್ನು ನೇಮಕ ಮಾಡಿಲ್ಲ, ಗ್ರಾಮ ಪಂಚಾಯಿತಿಯಿಂದ ಕಸದ ಬಕೇಟುಗಳು ಬಂದಿದ್ದರೂ ಅವುಗಳನ್ನು ಮನೆಗಳಿಗೆ ವಿಲೇವಾರಿ ಮಾಡಿಲ್ಲ, ಗ್ರಾಮದಲ್ಲಿ ಡಿಜಿಟಲ್ ಲೈಬ್ರರಿ ಪ್ರಾರಂಭಿಸಿದ್ದರೂ ಅದಕ್ಕೆ ಆನ್‌ಲೈನ್ ಕನೆಕ್ಷನ್ ಕೊಟ್ಟಿಲ್ಲ, ಬಸವ ವಸತಿ ಯೋಜನೆಯಲ್ಲಿ ಮನೆ ನಿರ್ಮಿಸಿಕೊಂಡ ಕೆಲವು ಫಲಾನುಭವಿಗಳಿಗೆ ನಾಲ್ಕನೇ ಕಂತು ಇನ್ನೂ ಜಮಾ ಮಾಡಿಲ್ಲ, ಕೇಳಿದರೆ ಫೈಲ್ ಕಳೆದಿದೆ ಎಂದು ಅವರನ್ನು ಅಲೆದಾಡಿಸುತ್ತಾರೆ. ಗ್ರಾಮದ ಸಮಸ್ಯೆಗಳಿ ಪಿಡಿಒ ಆಗಲಿ ತಾಲೂಕು ಪಂಚಾಯತಿ ಇ ಕೂಡಾ ಸ್ಪಂದಿಸುತ್ತಿಲ್ಲ, ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕಾರ್ಮಿಕರಿಗೆ ಕೆಲಸ ನೀಡುತ್ತಿಲ ಎಂದು ಆರೋಪಿಸಿದರು. ರಾಮಣ್ಣ ಚಲವಾದಿ, ಲಕ್ಕಪ್ಪ ಮಾದರ, ಹುಲಗಪ್ಪ ಚಲವಾದಿ, ಮೌಲಾಸಾಬ ಸಾಧನಿ ಇದ್ದರು.



ಶಿಕ್ಷಣ ಜೊತೆ ಆರೋಗ್ಯದ ಅರಿವು ನೀಡಿ



• **ಮುಧೋಳ:** ತಾಲೂಕಿನ ಸೋರಗಾಂವ ಗ್ರಾಮದ ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಶಾಲಾ ಮುಖ್ಯೋಪಾಧ್ಯಾಯರ ಹಾಗೂ ಎಸ್‌ಎಂಸಿ ಅಧ್ಯಕ್ಷರಿಗೆ ಮಕ್ಕಳ ಸುರಕ್ಷತೆ ಮತ್ತು ಆರೋಗ್ಯ ಜಾಗೃತಿ ಸಭೆ ನಡೆಯಿತು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಎಂ.ಮುಲ್ಲಾ ಅವರು, ಶಾಲಾ ಮಕ್ಕಳ ಸುರಕ್ಷತೆ ಹಾಗೂ ಆರೋಗ್ಯ ಕುರಿತಾದ ಜಾಗೃತಿ ಮೂಡಿಸುವುದು ನಮ್ಮೆಲ್ಲರ ಜವಾಬ್ದಾರಿ. ಉತ್ತಮ ಆರೋಗ್ಯದಿಂದ ಎಲ್ಲಾ ಕ್ಷೇತ್ರದ ಸಾಧನೆ ಮಾಡಲು ಸಾಧ್ಯ ಎಂದು ಹೇಳಿದರು.

ಕ್ಷೇತ್ರ ಸಮನ್ವಯ ಅಧಿಕಾರಿ ಎ.ಆರ್.ಛಬ್ಬಿ ಮಾತನಾಡಿ, ಶಾಲಾ ಆವರಣದಲ್ಲಿ ಮಕ್ಕಳ ಸುರಕ್ಷತೆ ಮತ್ತು ಆರೋಗ್ಯದ ಕಡೆಗೆ ಗಮನ ಹರಿಸುವುದು ಪ್ರತಿಯೊಬ್ಬರ ಕರ್ತವ್ಯ. ಮಕ್ಕಳ ದೈಹಿಕ ಹಾಗೂ ಮಾನಸಿಕ ಆರೋಗ್ಯದ ರಕ್ಷಣೆಗಾಗಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಜಾಗೃತಿ ಮೂಡಿಸಿದರು. ದೈಹಿಕ ಶಿಕ್ಷಣ ಪರಿವೀಕ್ಷಕ ಎಸ್.ಎಂ.ಕುರನಿ ಮತ್ತು ಕರ್ನಾಟಕ ಪಬ್ಲಿಕ ಶಾಲೆಯ ಮುಖ್ಯೋಪಾಧ್ಯಾಯ ಬಸವರಾಜ ಶಿರೂರ ಮಾತನಾಡಿದರು. ಶಿಕ್ಷಕರಾದ ರಮೇಶ ಡೊಂಬರ ನಿರೂಪಿಸಿದರು. ಮುಧೋಳ ವಲಯದ ವಿವಿಧ ಶಾಲೆಗಳ ಮುಖ್ಯೋಪಾಧ್ಯಾಯರು ಹಾಗೂ ಎಸ್ಡಿಎಮ್ಸಿ ಅಧ್ಯಕ್ಷರು, ಶಿಕ್ಷಕರು ಪಾಲ್ಗೊಂಡಿದ್ದರು.

ಮಧುಮೇಹಿಗಳು ಪಾದ ಸುರಕ್ಷಿತವಾಗಿಟ್ಟುಕೊಳ್ಳಿ

• **ಬೀಳಗಿ:** ಮಧುಮೇಹ(ಸಕ್ಕರೆ) ಕಾಯಿಲೆ ಹೊಂದಿದ ರೋಗಿಗಳು ತಮ್ಮ ಆರೋಗ್ಯದೊಂದಿಗೆ ತಮ್ಮ ಪಾದಗಳನ್ನು ಗಾಯವಾಗದಂತೆ ಸುರಕ್ಷಿತವಾಗಿ ಇಟ್ಟುಕೊಳ್ಳಬೇಕು. ಪ್ರತಿಹಂತದಲ್ಲಿ ವೈದ್ಯರ ಸಲಹೆ ಪಡೆದು ಆರೋಗ್ಯವಾಗಿ ಇರಬೇಕೆಂದು ವೈದ್ಯಕೀಯ ಅಧೀಕ್ಷಕ ಡಾ.ವಿಜಯಾನಂದ ಹಳ್ಳಿ ಹೇಳಿದರು.



ತಾಲೂಕಿನ ಬಾಡಗಂಡಿ ಎಸ್. ಆರ್.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ಹಾಗೂ ಬೆಂಗಳೂರು ಪ್ರೈಯಾಸ ಇವರ ಸಂಯುಕ್ತ ಆಶ್ರಯದಲ್ಲಿ ಮಧುಮೇಹ, ಪಾದ ತಪಾಸಣಾ ಮತ್ತು ಜಾಗೃತಿ ಶಿಬಿರದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಮಾಜಿ ಸಚಿವ ಎಸ್.ಆರ್.ಪಾಟೀಲರು ಪಟ್ಟಣದಲ್ಲಿ ದೊರೆಯುವ ವೈದ್ಯಕೀಯ ಸೌಲಭ್ಯವನ್ನು ಗ್ರಾಮೀಣ ಭಾಗದ ಬಾಡಗಂಡಿ ಗ್ರಾಮದಲ್ಲಿ ದೊರೆಯುವಂತೆ ಮಾಡಿದ್ದರಿಂದ ಈ ಭಾಗದ ಜನರಿಗೆ ಆರೋಗ್ಯ ಸಂಜೀವಿನಿಯಾಗಿದ್ದಾರೆ ಎಂದರು.

ಆಡಳಿತಾಧಿಕಾರಿ ರಾಘವೇಂದ್ರ ಪಾಟೀಲ ಮಾತನಾಡಿ, ನಮ್ಮ ಸಂಸ್ಥೆಯಿಂದ ಅನೇಕ ರೋಗಿಗಳಿಗೆ ಸಹಾಯವಾಗಿದೆ. ಹೆಚ್ಚು ಜನರು ಇದರ ಲಾಭ ಪಡೆದುಕೊಳ್ಳಬೇಕು. ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜನೆ ನಡೆಯುತ್ತಿದ್ದು, ಇದರ ಲಾಭವನ್ನು ಜನರು ಮತ್ತು ರೋಗಿಗಳು ಪಡದುಕೊಳ್ಳಬೇಕು ಎಂದರು. ಮಧುಮೇಹ ಟೆಕ್ನಿಷಿಯನ್ ಅರುಣಕುಮಾರ, ಟೆಕ್ನಿಷನ್ ಡಾ.ಮಂಜುನಾಥ ಗಾವಡೆ ಇದ್ದರು.

ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

ಸಿಂದಗಿ: 110/33/11ಕೆವಿ ಸಿಂದಗಿ ಉಪಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಕಾಮಗಾರಿ ಕೈಗೊಂಡಿರುವ ಕಾರಣ ವಿತರಣಾ ಕೇಂದ್ರದ ಮೇಲೆ ಬರುವ ಸಿಂದಗಿ ನಗರ-01, ಸಿಂದಗಿ ನಗರ-02, ಎಫ್-13 ಕಲ್ಯಾಣ ನಗರ, ಬಂದಾಳ ಎನ್‌ಜೆವಾಯ್-ರಾಂಪೂರ ಎನ್ ಜೆವೈ, ಬಂದಾಳ ಐಪಿ, ಯರಗಲ್ ಐಪಿ, ರಾಂಪೂರ ಐಪಿ, ಸೋಂಪೂರ ಐಪಿ, ಬೆನಕೊಟಗಿ-ಬ್ಯಾಕೋಡ ಐಪಿ, ಸುಂಗಠಾಣ ಯಪಿ, ಯಂಕಂಚಿ ಐಪಿ ಹಾಗೂ 33/11 ಕೆವಿ ಗೋಲಗೇರಿ ವಿದ್ಯುತ್ ವಿತರಣಾ ಕೇಂದ್ರದ ಬರುವ ಎಲ್ಲಾ 11ಕೆವಿ ಮಾರ್ಗಗಳ ಪ್ರದೇಶಗಳಲ್ಲಿ ಜೂ.27ರಂದು ಬೆಳಗ್ಗೆ 8 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗುವುದರಿಂದ ಮಾರ್ಗಗಳ ಮೇಲೆ ಬರುವ ಗ್ರಾಹಕರು ಹಾಗೂ ಸಾರ್ವಜನಿಕರು ಸಹಕರಿಸಬೇಕು ಎಂದು ಸಿಂದಗಿ ಹೆಸ್ಕಾಂ ಉಪವಿಭಾಗದ ಸಹಾಯಕ ನಿರ್ವಾಹಕ ಅಭಿಯಂತರ ಚಂದ್ರಕಾಂತ ನಾಯಕ ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಸಿದ್ದಾರೆ.

ಜೂ.30ರಿಂದ ಮತದಾರರ ಪಟ್ಟಿ ಪರಿಷ್ಕರಣೆ

ಇಂಡಿ: ರಾಜ್ಯಾದ್ಯಂತ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಯೋಜನೆ ಜೂ.30ರಿಂದ ಹಮ್ಮಿಕೊಳ್ಳಲಾಗಿದೆ. ಪ್ರತಿ ಮನೆ ಮನೆ ಗಳಿಗೆ ನಮ್ಮ ಬಿಎಲ್‌ಒಗಳು ಬಂದು ಏನುಮೋರೇಶನ ಫಾರ್ಮನೊಂದಿಗೆ ಸಂಪೂರ್ಣ ಮಾಹಿತಿ ಲಿಖಿತವಾಗಿ ಸಂಗ್ರಹಿಸಿ, ತಮ್ಮ ಮತ ಪಟ್ಟಿಯಲ್ಲಿ ಮಾಹಿತಿ ಸಂಗ್ರಹಿಸಲಿದ್ದಾರೆ. ಇದಕ್ಕೆ ಎಲ್ಲ ಗ್ರಾಮಸ್ಥರು ಸಹಕರಿಸಿ, ಸರಿಯಾದ ಮಾಹಿತಿ ನೀಡಬೇಕು ಮತ್ತು 2002ರ ಚುನಾವಣೆಯಲ್ಲಿ ನಡೆದ ಎಸ್‌ಐಆರ್ ಮತದಾನದ ಪ್ರಕಾರ ಎಲ್ಲ ಮಾಹಿತಿ ಕಲೆ ಹಾಕಲಾಗುವುದು ಎಂದು ಸಹಾಯಕ ಮತದಾರರ ನೋಂದಣಾಧಿಕಾರಿ ಇಂಡಿ ನಾಗೇಂದ್ರ ಕೋಳಶೆಟ್ಟಿ, ತಹಶೀಲ್ದಾರ್ ತಿಳಿಸಿದ್ದಾರೆ.

ಸಂಚಾರಿ ಪಶು ಚಿಕಿತ್ಸಾ ವಾಹನಕ್ಕೆ ಚಾಲನೆ



ಬಸವನಬಾಗೇವಾಡಿ: 2025-26ನೇ ಸಾಲಿನ ಪಶುಪಾಲನಾ ಇಲಾಖೆ ತಾಲೂಕು ಪಂಚಾಯತ ಅನುದಾನದಲ್ಲಿ ಖರೀದಿಸಾಲದ ತಾಲೂಕಿನ ಪಶು ವೈದ್ಯಕೀಯ ಆಸ್ಪತ್ರೆ ನೂತನ ಸಂಚಾರಿ ಪಶುಚಿಕಿತ್ಸಾ ವಾಹನಕ್ಕೆ ಶಾಸಕ ಶಿವಾನಂದ ಪಾಟೀಲ ಚಾಲನೆ ನೀಡಿದರು. ಬಸವನಬಾಗೇವಾಡಿ ಪಶು ಆಸ್ಪತ್ರೆ ಸಹಾಯಕ ನಿರ್ದೇಶಕ ಡಾ.ಪಂಚಾಕ್ಷರಿ ಸಂಕ, ಮುಖ್ಯ ಪಶು ವೈದ್ಯಾಧಿಕಾರಿ(ಸಂಚಾರಿ ಮತ್ತು ವಿಸ್ತೀರ್ಣ) ಡಾ.ಬಿ.ಎಸ್.ಕನಮಡಿ ಉಕ್ಕಲಿ ಪಶು ಚಿಕಿತ್ಸಾಲಯ ಮುಖ್ಯಪಶು ವೈದ್ಯಾಧಿಕಾರಿ ಡಾ.ಸುಭಾಸ ನಾಯಕ, ಇಂಗಳೇಶ್ವರ ಪಶು ಚಿಕಿತ್ಸಾಲಯದ ಮುಖ್ಯ ಪಶು ವೈದ್ಯಾಧಿಕಾರಿ ಡಾ.ಮಲ್ಲೇಶಿ ಕೆರೂಟಗಿ, ಮನಗೂಳಿ ಪಶು ಚಿಕಿತ್ಸಾಲಯ ಮುಖ್ಯ ಪಶು ವೈದ್ಯಾಧಿಕಾರಿ ಡಾ.ಹಣಮಂತ ನ್ಯಾಮಗೊಂಡ, ಮಸಬಿನಾಳ ಪಶು ಚಿಕಿತ್ಸಾಲಯದ ಮುಖ್ಯಪಶು ವೈದ್ಯಾಧಿಕಾರಿ ಡಾ.ಸುಧೀರ ನಾಯಕ ಇದ್ದರು.

ಮೊಹರಂ ಆಚರಣೆ



ವಿಜಯಪುರ: ತಾಲೂಕಿನ ನಾಗಠಾಣ ಗ್ರಾಮದಲ್ಲಿ ಬಹಳ ವರ್ಷಗಳಿಂದಲೂ ಹಿಂದೂ, ಮುಸ್ಲಿಮರು ಸೇರಿ ಭಾವೈಕ್ಯದಿಂದ ಮೊಹರಂ ಹಬ್ಬ ಆಚರಣೆ ಮಾಡುತ್ತಾರೆ. ಶ್ರೀಮಂತ-ಬಡವ, ಮೇಲು-ಕೀಳು ಎಂಬ ಭೇದವಿಲ್ಲದೆ ಸರ್ವ ಧರ್ಮದವರು ಇದರಲ್ಲಿ ಭಾಗಿಯಾಗಿ ಶ್ರದ್ಧೆಯಿಂದ ಮೊಹರಂ ಹಬ್ಬದಲ್ಲಿ ಭಾಗಿಯಾದರು. ಸಮಸ್ತ ಜನಾಂಗದವರು ಭಕ್ತಿಯಿಂದ ಮಸೀದಿಗಳಿಗೆ ತೆರಳಿ ಸಕ್ಕರೆ, ಊದುಬತ್ತಿ, ಲೋಬಾನ ಹಾಗೂ ನಾನಾ ತರಹದ ಸಿಹಿ ಪದಾರ್ಥಗಳನ್ನು ತಯಾರಿಸಿ ದೇವರಿಗೆ ನೈವೇದ್ಯ ಮಾಡಿಸಿ ಭಕ್ತಿಯ ಕಾಣಿಕೆಗಳನ್ನು ಸಮರ್ಪಿಸಿದರು. ಮಹಿಳಾ ಭಕ್ತಾದಿಗಳು ದೇವರನ್ನು ಪ್ರತಿಷ್ಠಾಪಿಸಿದ ಸ್ಥಳಗಳಿಗೆ ಹೋಗಿ ಎಡೆ ನೀಡಿದರು. ಹಿಂದೂಗಳು ಕೂಡ ಕಾಯಿ, ಕರ್ಪೂರ, ಊದು, ಎಣ್ಣೆದೀಪ ಹಾಗೂ ಸಕ್ಕರೆ ಎಡೆ ಅರ್ಪಿಸಿದರು. ಉತ್ಸವದ ನೇತೃತ್ವ ವಹಿಸಿದ್ದ ಮುಖಂಡರು ನವಿಲುಗರಿಯನ್ನು ತಲೆ ಮೇಲೆ ನೇವರಿಸುವ ಮೂಲಕ ಆಶೀರ್ವಾದ ಮಾಡಿದರು. ಸಾಹೇಬಲಾಲ ವಾಲೀಕಾರ, ಮಾಶಿಮ್ ಬಾಗವಾನ, ಬಬ್ಲು ಅಥರ್ಗಾ, ರಜಾಕಸಾಬ್ ತಿಡಗುಂದಿ, ಅಕ್ಬರ ಹೊನ್ನುಟಗಿ, ಬಂದೇನವಾಜ್ ಮುಜಾವರ, ಸುರೇಶ ಕತ್ನಳ್ಳಿ, ಮಲ್ಲಿಕಾರ್ಜುನ ಸಮಗೊಂಡ ಸೇರಿದಂತೆ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು.



ಸಿಂದಗಿ: ನಗರದ ಚಂಡರಯ್ಯನ ಮಠದ ಬಳಿ ವಿಜಯಪುರದ ಶ್ರೀಧರಸ್ವಾಮಿ ವಿದ್ಯಾವರ್ಧಕ ಸಂಘ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಿಂದಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ಹಾಗೂ ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರದ ಸಹಯೋಗದೊಂದಿಗೆ ಹಮ್ಮಿಕೊಂಡ ಮಹಿಳಾ ಜಾಗೃತಿ ಕಾರ್ಯಕ್ರಮ ನಡೆಯಿತು.ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರದ ಸಮಾಜ ಕಾರ್ಯಕರ್ತೆ ರಶ್ಮಿ ನೂಲಾನವರ ಇದ್ದರು.

ಅನಿಷ್ಠ ದೂರವಾಗಲು ಶಿಕ್ಷಣ ಅವಶ್ಯ

ಸಿಂದಗಿ: ಶಿಕ್ಷಣದೊಂದಿಗೆ ವರದಕ್ಷಿಣೆ, ಬಾಲ್ಯವಿವಾಹ, ಬಾಲ ಕಾರ್ಮಿಕತೆ ಮೊದಲಾದ ಅನಿಷ್ಠಗಳನ್ನು ದೂರಮಾಡಿ. ಸಾಂತ್ವನ ಸಹಾಯವಾಣಿ ಕೇಂದ್ರವನ್ನು ಉತ್ತಮ ಉದ್ದೇಶಗಳಿಗೆ ಬಳಸಿಕೊಳ್ಳಬೇಕು ಎಂದು ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರದ ಸಮಾಜ ಕಾರ್ಯಕರ್ತೆ ರಶ್ಮಿ ನೂಲಾನವರ ಸಲಹೆ ನೀಡಿದರು. ನಗರದ ಚಂಡರಯ್ಯನ ಮಠದ ಬಳಿ ವಿಜಯಪುರದ ಶ್ರೀಧರಸ್ವಾಮಿ ವಿದ್ಯಾವರ್ಧಕ ಸಂಘ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಿಂದಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ಹಾಗೂ ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರದ ಸಹಯೋಗದೊಂದಿಗೆ ಹಮ್ಮಿಕೊಂಡ ಮಹಿಳಾ ಜಾಗೃತಿ ಕಾರ್ಯಕ್ರಮದಲ್ಲಿ ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಮಾಜದ ಪರಿವರ್ತನೆ ಹಾಗೂ ಅಭ್ಯುದಯಕ್ಕಾಗಿ ಮಹಿಳಾ ಜಾಗೃತಿಯೊಂದೇ ಮಾರ್ಗವಾಗಿದೆ. ತಮ್ಮ ಸಮಸ್ಯೆಗಳಿಗೆ ಸಿಂದಗಿ ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ ಸದಾ ಸಿದ್ಧವಾಗಿದೆ ಎಂದರು. ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರದ ಸಿಬ್ಬಂದಿ ವಿದ್ಯಾ ದೇಸಾಯಿ, ವಾಣಿ ಹಿರೇಮಠ, ರೇಖಾ ಅರ್ಜುಣಗಿ, ವಿಶಾಲಾಕ್ಷಿ ಹುಲಗಬಾಳ, ಮೇಘಾ ಶುಂಠಿ, ಶಾಂತಾಬಾಯಿ ಹಿರೇಮಠ, ಮಲ್ಲಮ್ಮ ನಂದಿಕೋಲ, ಕಮಲಾ ಹಳ್ಳಿ, ಶೋಭಾ ಬಡಿಗೇರ, ಶರಣಮ್ಮ ಕುರನಳ್ಳಿ, ಜಯಶ್ರೀ ಬಡಿಗೇರ, ಗುರುಬಾಯಿ ಯರಗಲ್, ಅಂಬಿಕಾ ಕುಲಕರ್ಣಿ, ಬೋರಮ್ಮ ಕುರನಳ್ಳಿ ಭಾಗೀರಥಿ ಬಡಿಗೇರ, ಎ.ಎಚ್.ಆಶಾ ಸೇರಿದಂತೆ ಅನೇಕರು ಇದ್ದರು.



ಮುದ್ದೇಬಿಹಾಳ: ಶ್ರೀ ವೇದ ಸಂಸ್ಕೃತ ಸೇವಾ ಸಂಘದ ವತಿಯಿಂದ ನಡೆದ ವೇದ ಸಂಸ್ಕೃತ ಸೇವಾ ಸಂಘದ ವಾರ್ಷಿಕೋತ್ಸವ ಹಾಗೂ ಯೋಗೀಶ್ವರ ಯಾಜ್ಞವಲ್ಕ ಜಯಂತ್ಯುತ್ಸವದಲ್ಲಿ ಅಗಮಿಸಿದ ತಾಲೂಕು ಬ್ರಾಹ್ಮಣ ಅಭಿವೃದ್ಧಿ ಮಹಾಸಭಾ ಸಂಘ ಅಧ್ಯಕ್ಷ ಸತೀಶಚಂದ್ರ ಕುಲಕರ್ಣಿ, ಹೆಚ್ಚು ಅಂಕಪಡೆದ ವಿದ್ಯಾರ್ಥಿಗಳು ಹಾಗೂ ವೇದ ವಿಪ್ರೋತ್ತಮರಿಗೂ ಸನ್ಮಾನಿಸಲಾಯಿತು. ಮಾರುತೇಶ್ವರ ದೇವಸ್ಥಾನದ ಅರ್ಚಕರಾದ ಕೃಷ್ಣಜಿ ಹುನಗುಂದ, ವೇದ ಸಂಸ್ಕೃತ ಸೇವಾ ಸಂಘ ಅಧ್ಯಕ್ಷರು, ಸದಸ್ಯರು ಭಾಗವಹಿಸಿದ್ದರು.

ಕಾಮಗಾರಿಗೆ ಅಗತ್ಯ ಬಿದ್ದರೆ ಸಿಎಸ್ಸಾರ್ ಅನುದಾನ: ಸಚಿವ ಎಂ.ಬಿ.ಪಾಟೀಲ

ವಿಜಯಪುರ: ಕಳೆದ ವರ್ಷದ ಮಳೆಗಾಲದಲ್ಲಿ ನಗರದಲ್ಲಿ ಪ್ರವಾಹ ಉಂಟಾಗಿದ್ದರಿಂದ ಪ್ರವಾಹ ನಿಯಂತ್ರಣ ನಿಧಿಯಡಿ ಹಾಗೂ ಮಹಾನಗರ ಪಾಲಿಕೆ ವಿಜಯಪುರದಿಂದ ಕೈಗೊಂಡ ಹಲವು ಅಭಿವೃದ್ಧಿ ಕಾರ್ಯಗಳನ್ನು ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ಡಾ.ಎಂ.ಬಿ.ಪಾಟೀಲ ಶುಕ್ರವಾರ ಪರಿಶೀಲಿಸಿದರು.

ನಗರದ ಶಿವಾಜಿ ವೃತ್ತದಲ್ಲಿ ಕೈಗೊಂಡ ಕಾಮಗಾರಿಗಳನ್ನು ಖುದ್ದು ವೀಕ್ಷಿಸಿದ ಬಳಿಕ ಮಾತನಾಡಿದ ಅವರು, ಕಳೆದ ವರ್ಷ ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದರಿಂದ ನಗರದ ಕೆಲವು ಮನೆಗಳಲ್ಲಿ ನೀರು ನುಗ್ಗಿ ಹಾನಿಯಾಗಿತ್ತು. ಇದು ಮತ್ತೆ ಪುನರಾವರ್ತನೆಯಾಗಬಾರದೆಂದೇ ಕೋಟೆ ಗೋಡೆ ಕಂದಕ ಹಾಗೂ ಕಾಲುವೆಗಳ ಹೂಳು ತೆಗೆಯುವ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದರು.

ಕಂದಕಗಳಲ್ಲಿ ಮಣ್ಣು ಕುಸಿಯಬಾರೆಂದು ಪಿಚ್ಚಿಂಗ್ ಮಾಡಲಾಗುತ್ತಿದೆ. ಇಲ್ಲಿಯವರೆಗೆ ಇದಕ್ಕೆಂದೇ 6 ಕೋಟಿ ರೂ. ವೆಚ್ಚದ ಕಾಮಗಾರಿ ಕೈಗೊಳ್ಳಲಾಗಿದೆ. ಕೆಲವು ಕಾಮಗಾರಿಗಳ ಬದಲಾವಣೆ ಮಾಡಿ ಈ ಕಾಮಗಾರಿಗೆ ಅನುದಾನ ಹೊಂದಾಣಿಕೆ ಮಾಡಲಾಗಿದೆ. ಬಿಡಿಎ ಹಾಗೂ ಪಾಲಿಕೆಯಿಂದ ಕಾಮಗಾರಿ ಬದಲಾವಣೆ ಮಾಡಿ ಅನುದಾನ ಒದಗಿಸಲಾಗುತ್ತಿದೆ. ಆದಾಗ್ಯೂ ಅಗತ್ಯ ಬಿದ್ದರೆ ನನ್ನ ಮತಕ್ಷೇತ್ರದ ಕೆಲ ಕಾಮಗಾರಿ ಬದಲಾವಣೆ ಮಾಡಿ ಇದಕ್ಕೆ ಅನುದಾನ ಕೊಡಿಸುವುದಾಗಿ ಸಚಿವರು ಹೇಳಿದರು. ಇನ್ನೂ ಅನುದಾನದ ಅಗತ್ಯ ಬಿದ್ದರೆ, ಯಾವುದಾದರೂ ಕಂಪನಿಯನ್ನು ಸಂಪರ್ಕಿಸಿ, ಆ ಕಂಪನಿಯ ಸಿಎಸ್ ಆರ್ ಅನುದಾನವನ್ನೂ ಕಾಮಗಾರಿಗೆ ಕೊಡಿಸುವುದಾಗಿ ಸಚಿವರು ಹೇಳಿದರು.

ನಗರ ಭಾಗದ ರಸ್ತೆಗಳ ಕಾಮಗಾರಿಗೆ 150 ಕೋಟಿ ಹಣ ಮಂಜೂರು ಮಾಡಲಾಗಿದೆ. ಈ ಮೊತ್ತದಲ್ಲಿ ರಸ್ತೆಗಳ ಕೆಲಸ ಕಾಮಗಾರಿಗಳು ನಡೆಯುತ್ತವೆ ಎಂದ ಅವರು, ನಗರದಲ್ಲಿ ಪ್ರವಾಹ ತಡೆ ಕಾಮಗಾರಿ ಕೈಗೆತ್ತಿಕೊಂಡಿದ್ದಕ್ಕೆ ಪಾಲಿಕೆ ಸದಸ್ಯರು ಹಾಗೂ ಸಾರ್ವಜನಿಕರಿಂದ ವ್ಯಾಪಕ ಮೆಚ್ಚುಗೆ ವ್ಯಕ್ತವಾಗುತ್ತಿದೆ ಎಂದು ಸಚಿವರು ಇದೇ ವೇಳೆ ಹೇಳಿದರು.



ಕಾಮಗಾರಿ ಪ್ರಗತಿ

ನಗರದಲ್ಲಿ ಒಟ್ಟು 168 ಕೋಟಿ ರೂ. ವೆಚ್ಚದ ಕಾಮಗಾರಿಗಳನ್ನು ನಗರದಲ್ಲಿ ಪ್ರಗತಿಯಲ್ಲಿದ್ದು, ಇಷ್ಟು ಮೊತ್ತದ ಕಾಮಗಾರಿಗಳು ಪೂರ್ಣಗೊಂಡರೆ, ನಗರದಲ್ಲಿ ಕಿಂಚಿತ್ ಪ್ರವಾಹ ಬಂದರೂ ಸಮಸ್ಯೆಯಾಗದು ಎಂದರು.

> ನಗರದಲ್ಲಿ ಅದೆಷ್ಟೇ ಮಳೆಯಾದರೂ ನಗರ ಭಾಗದಲ್ಲಿ ಪ್ರವಾಹ ಉಂಟಾಗದಂತೆ ಕ್ರಮ ಕೈಗೊಳ್ಳಲಾಗುತ್ತಿದ್ದು ಕಂದಕ ಸೇರಿದಂತೆ ಇತರೆ ಸ್ಥಳಗಳಲ್ಲಿ ಶಾಶ್ವತವಾದ ಕಾಮಗಾರಿಗಳನ್ನು ಮಾಡಲಾಗುತ್ತಿದೆ.
>
> ■ ಡಾ.ಎಂ.ಬಿ.ಪಾಟೀಲ, ಸಚಿವರು

ಶಿವಾಜಿ ವೃತ್ತದಿಂದ ಬಿದರಿ ಆಸ್ಪತ್ರೆಯವರೆಗೆ 3 ಕಿ.ಮೀ ಕಾಮಗಾರಿ ತೆಗೆದುಕೊಳ್ಳಲು ಸೂಚಿಸಲಾಗಿದೆ. ನಗರದ ಹೊರ ಭಾಗದಿಂದ ನೀರು ಒಳಗಡೆ ಬರುವುದನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದರು. ಎಷ್ಟೇ ಮಳೆಯಾದರೆ ನಗರದ ಜನತೆಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ. ಜಿಲ್ಲಾಧಿಕಾರಿ, ಸಂಬಂಧಿಸಿದ ಜಿಲ್ಲಾಮಟ್ಟದ ಅಧಿಕಾರಿಗಳು ಈ ಕಾಮಗಾರಿ ಉಸ್ತುವಾರಿ ನೋಡುತ್ತಿದ್ದಾರೆ ಎಂದರು.

ಜೊತೆಗೆ ಬಿಡಿಎ ಮತ್ತು ಪಾಲಿಕೆ ಅನುದಾನದಲ್ಲಿ ಕಾಮಗಾರಿ ಭರದಿಂದ ನಡೆದಿದೆ. ಶಿವಾಜಿ ವೃತ್ತದಿಂದ ರಾಮನಗರವರೆಗೆ ಕೋಟೆ ಗೋಡೆ ಕಂದಕ ಸ್ವಚ್ಛತಾ ಕಾರ್ಯ ಭರದಿಂದ ನಡೆದಿದ್ದು, ಎಲ್ಲವೂ ಪ್ರಗತಿಯಲ್ಲಿವೆ ಎಂದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಮೇಯರ್ ಮಡಿವಾಳಪ್ಪ ಕರಡಿ, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಗಂಗಾಧರ ಸಂಬಣ್ಣಿ, ಜಿಲ್ಲಾಧಿಕಾರಿಗಳಾದ ಆನಂದ ಕೆ ಹಾಗೂ ಪಾಲಿಕೆಯ ಆಯುಕ್ತರಾದ ವಿಜಯ ಮೆಕ್ಕಳಕಿ ಇದ್ದರು.

ಒಪಿಎಸ್ ಯೋಜನೆ ಮರು ಜಾರಿಗೆ ಆಗ್ರಹ

ವಿಜಯಪುರ: ಹಳೆಯ ಮಾದರಿಯ ಪಿಂಚಣಿ ಯೋಜನೆ ಮರುಜಾರಿಗೆ ಆಗ್ರಹಿಸಿ ಸರ್ಕಾರದಗಮನಸೆಳೆಯುವಂತೆ ಒತ್ತಾಯಿಸಿ ವಿವಿಧ ಪದವಿ ಮಹಾವಿದ್ಯಾಲಯಗಳ ಪ್ರಾಧ್ಯಾಪಕರು ಸೇರಿದಂತೆ ವಿವಿಧ ವೃಂದದ ನೌಕರರ ನಿಯೋಗ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಡಾ.ಎಂ.ಬಿ.ಪಾಟೀಲ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

ಈ ವೇಳೆ ಮಾತನಾಡಿದ ಸಂಘಟನೆಯ ಪ್ರಮುಖರು, ಉದ್ಯೋಗ ಸೃಜನೆಯ ಸಂಕಲ್ಪದೊಂದಿಗೆ ಮನೀವು ಕಾರ್ಯನಿರ್ವಹಿಸುತ್ತಿದ್ದೀರಿ, ಪ್ರಾಧ್ಯಾಪಕರ ಸಮಸ್ಯೆಯ ಬಗ್ಗೆ ಸರ್ಕಾರದ ಗಮನ ಸೆಳೆದರೆ ಅತ್ಯಂತ ಅನುಕೂಲವಾಗುತ್ತದೆ ಎಂದು ಪ್ರಾಧ್ಯಾಪಕರು ಸಚಿವರಿಗೆ ಮನವಿ ಮಾಡಿಕೊಂಡರು.ನೌಕರರು ನಿವೃತ್ತಿ ನಂತರ ಆರ್ಥಿಕ ಅಭದ್ರತೆ ಮತ್ತು ಭವಿಷ್ಯದ ಆತಂತ್ರಕ್ಕೆ ಕಾರಣವಾಗಬಲ್ಲ ಎನ್.ಪಿ.ಎಸ್ (ಹೊಸ ಪಿಂಚಣಿ ಯೋಜನೆ) ಯೋಜನೆಯನ್ನು ರದ್ದುಗೊಳಿಸಬೇಕಾದ ಅನಿವಾರ್ಯತೆ ಇದೆ, ಈ ನೂತನ ಪಿಂಚಣಿ ಯೋಜನೆಗೆ ಸ್ಪಷ್ಟತೆ ಇಲ್ಲ, ಮಾರುಕಟ್ಟೆ ಆಧಾರಿತವಾಗಿ ಈ ಯೋಜನೆ ರೂಪಿಸಿರುವುದು ನೌಕರರ ಬಂಧುಗಳಲ್ಲಿ ಸಹಜ ಆತಂಕಕ್ಕೆ ಕಾರಣವಾಗಿದೆ, ಈ ಹಿನ್ನೆಲೆಯಲ್ಲಿ ಹಳೆಯ ಪಿಂಚಣಿ ಯೋಜನೆಯನ್ನು ಮರು ಜಾರಿಗೊಳಿಸಬೇಕೆಂಬ ಬೇಡಿಕೆಯ ಬಗ್ಗೆ ಸರ್ಕಾರದ ಗಮನ ಸೆಳೆಯಬೇಕು ಎಂದರು.

ಆಡಳಿತಯಂತ್ರದಲ್ಲಿಸೇವೆಸಲ್ಲಿಸಿಬದುಕಿನ ಸಂಧ್ಯಾಕಾಲದಲ್ಲಿ ಪಿಂಚಣಿ ನೆರವಾಗುತ್ತದೆ, ಆದರೆ ಅಭದ್ರತೆಯಿಂದ ಕೂಡಿದ ಹೊಸ ಪಿಂಚಣಿ ಯೋಜನೆಯಿಂದ ಪ್ರಯೋಜನ ದೊರಕುವುದು ಎಂಬ ಆಶಾಭಾವನೆಯೇ ಅನೇಕ ನೌಕರರಲ್ಲಿ ದೂರವಾಗಿ ಆತಂಕಕ್ಕೆ ಕಾರಣವಾಗಿದೆ, ಹೀಗಾಗಿ ಕೂಡಲೇ ಹಳೆಯ ಮಾದರಿಯಲ್ಲಿಯೇ ಪಿಂಚಣಿ ವ್ಯವಸ್ಥೆ ಮರು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಡಾ.ಬಿ.ಎಂ.ಕೋರಬು, ಡಾ. ಚಂದ್ರಕಾಂತ.ಬಿ, ಪ್ರೊ.ಎಂ.ಎಸ್. ಖೊದ್ನಾಪೂರ, ಡಾ.ಎಸ್.ಎಸ್. ಸಿದ್ದಾಪೂರ, ಪ್ರೊ. ಸಂಗಮೇಶ ಗುರವ, ಡಾ. ಬಿ.ಎನ್.ಶಾಡದಳ್ಳಿ, ಪ್ರೊ. ಸಿದ್ರಾಮ ಯರನಾಳ, ಪ್ರೊ.ವಿನೋದ ಹುಲ್ಲೂರ, ಪ್ರೊ.ಸುನೀಲ ಹತ್ತಿ, ಪ್ರೊ. ಎಸ್.ಬಿ.ಜಾಲವಾದಿ ಇನ್ನಿತರರು ಮನವಿ ಸಲ್ಲಿಕೆಯಲ್ಲಿ ಭಾಗವಹಿಸಿದ್ದರು.



ಪತ್ರಕರ್ತ ರಫೀ ಭಂಡಾರಿ ದತ್ತಿನಿಧಿ ಸ್ಥಾಪನೆ

ವಿಜಯಪುರ: ಪತ್ರಿಕೋದ್ಯಮವು ಕೇವಲ ಶೈಕ್ಷಣಿಕ ವಿಷಯವಲ್ಲ, ಜೀವನ ಮೌಲ್ಯಗಳನ್ನು ಕಲಿಸುವ ಕ್ಷೇತ್ರವೂ ಆಗಿದ್ದು, ವಿದ್ಯಾರ್ಥಿನಿಯರು ಈ ದತ್ತಿ ನಿಧಿಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹಿರಿಯ ಪತ್ರಕರ್ತ ರಫಿ ಭಂಡಾರಿ ಹೇಳಿದರು.


ನಗರದಕರ್ನಾಟಕರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ಗುರುವಾರ ಆಯೋಜಿಸಿದ್ದ ಅಂತಿಮ ವರ್ಷದ ವಿದ್ಯಾರ್ಥಿನಿಯರ ಬೀಳ್ಕೊಡುಗೆ ಸಮಾರಂಭ ಹಾಗೂ ಹಿರಿಯ ಪತ್ರಕರ್ತ ರಫಿ ಭಂಡಾರಿ ದತ್ತಿ ನಿಧಿ ಸ್ಥಾಪನೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದಲ್ಲಿರುವ ವಿವಿಧ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ನಿಭಾಯಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು ಪತ್ರಕರ್ತರ ಪ್ರಮುಖ ಜವಾಬ್ದಾರಿ ಎಂದರು. ಒಳ್ಳೆಯ ಪತ್ರಕರ್ತರಾಗಿ ಸೇವೆ ಮಾಡಲು ಬಯಸಿದ ನಿಮ್ಮ ಭವಿಷ್ಯ ಉಜ್ವಲವಾಗಲಿ ಎಂದರು.

ಪತ್ರಕರ್ತ ಬಸವರಾಜ ಸಂಪಳ್ಳಿ ಮಾತನಾಡಿ, ವ್ಯಕ್ತಿಯ ಕೆಲಸವೇ ಅವನಿಗೆ ಗೌರವಮತ್ತುಸ್ಥಾನಮಾನತಂದುಕೊಡುತ್ತದೆ. ಪತ್ರಿಕೋದ್ಯಮ ಕ್ಷೇತ್ರದಲ್ಲಿ ಪರೀಕ್ಷೆಯಲ್ಲಿ ಪಡೆದ ಅಂಕಗಳಿಗಿಂತ ಕೌಶಲ್ಯಗಳಿಗೆ ಹೆಚ್ಚಿನ ಮಹತ್ವವಿದ್ದು, ಬರವಣಿಗೆ, ಸಂವಹನ ಹಾಗೂ ವೃತ್ತಿಪರ ನೈಪುಣ್ಯವೇ ಯಶಸ್ಸಿನ ಮೆಟ್ಟಿಲಾಗುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಪ್ರೊ.ಓಂಕಾರ ಕಾಕಡೆ ಮಾತನಾಡಿ, ಪತ್ರಿಕೋದ್ಯಮದಲ್ಲಿ ಯಶಸ್ಸು ಸಾಧಿಸಲು ಪ್ರಾಮಾಣಿಕತೆ, ನೈತಿಕತೆ ಮತ್ತು ವೃತ್ತಿಪರ ಬದ್ಧತೆ ಅತ್ಯಗತ್ಯವಾಗಿದ್ದು, ಪ್ರತಿಯೊಬ್ಬ ಪತ್ರಕರ್ತನು ತನ್ನ ಆತ್ಮಸಾಕ್ಷಿಗೆ ತಾನೇ ಉತ್ತರದಾಯಿಯಾಗಿರಬೇಕು ಎಂದು ಅವರು ಸಲಹೆ ನೀಡಿದರು.

ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ತಹಮೀನಾ ಕೋಲಾರ ಹಾಗೂ ಡಾ.ಸಂದೀಪ ಮಾತನಾಡಿದರು. ಅತಿಥಿ ಉಪನ್ಯಾಸಕರು, ಸಂಶೋಧನಾ ವಿದ್ಯಾರ್ಥಿನಿಯರು, ಸಿಬ್ಬಂದಿ ಉಪಸ್ಥಿತರಿದ್ದರು.



ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ನಾಳೆ

ಬಸವನಬಾಗೇವಾಡಿ: ಪಟ್ಟಣದ ಮಸಬಿನಾಳ ರಸ್ತೆಯ ಗಣೇಶ ನಗರದಲ್ಲಿನ ಯಲ್ಲಾಲಿಂಗೇಶ್ವರಮಠದಲ್ಲಿ ಜೂ.28ರಂದು ಮಧ್ಯಾಹ್ನ 12ಗಂಟೆಗೆ ಡಾ.ಪಂಡಿತ ಪುಟ್ಟರಾಜ ಗವಾಯಿಗಳ ಪುಣ್ಯ ಸ್ಮರಣೋತ್ಸವ, ಸ್ಮರಣ ಸಂಚಿಕೆ ಬಿಡುಗಡೆ ಹಾಗೂ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಕರ್ನಾಟಕ ರಾಜ್ಯ ನಾಟಕ ಬರಹಗಾರ ಕವಿಗಳ ರಾಜ್ಯ ಸಂಘಟನಾ ಕಾರ್ಯದರ್ಶಿ ಡಾ.ರಾಘವೇಂದ್ರ ಉಮ್ಮರಿಗಿ ಹಾಗೂ ಜಿಲ್ಲಾಧ್ಯಕ್ಷ ವೈ.ಎಚ್. ಅಂಗಡಗೇರಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜಂಟಿಗೋಷ್ಠಿಯಲ್ಲಿ ಮಾತನಾಡಿದ ಅವರು ಸಮಾರಂಭದಲ್ಲಿ ಕ್ಷೇತ್ರ ಸಂಘಟನೆಗೆ ಸಿದ್ದೇಶ್ವರ ಪ್ರಶಸ್ತಿ, ಸಹಕಾರಿ ಕ್ಷೇತ್ರಕ್ಕೆ ಸಿದ್ದಸಿರಿ ಪ್ರಶಸ್ತಿ, ಉ.ಕ ಖ್ಯಾತ ರಂಗಭೂಮಿ ಕಲಾವಿದರಿಗೆ ಬಸವಶ್ರೀ ಪ್ರಶಸ್ತಿ, ರಂಗಭೂಮಿಗೆ ರಂಗನಟಿ ಪ್ರಶಸ್ತಿ, ಸಾಮಾಜಿಕ ಕ್ಷೇತ್ರ ಸಿದ್ದೇಶ್ವರ ಶ್ರೀ ಪ್ರಶಸ್ತಿ, ವೈದ್ಯಕೀಯ ಕ್ಷೇತ್ರಕ್ಕೆ ಸಿದ್ದೇಶ್ವರ ಪ್ರಶಸ್ತಿ, ಸಂಗೀತ ಕ್ಷೇತ್ರಕ್ಕೆ ಗಾನಸಿರಿ ಪ್ರಶಸ್ತಿ, ಮಾಧ್ಯಮ ಸಾಹಿತ್ಯ ಕ್ಷೇತ್ರಕ್ಕೆ ಬಸವಭೂಷಣ ಪ್ರಶಸ್ತಿ, ಶೈಕ್ಷಣಿಕ ಕ್ಷೇತ್ರಕ್ಕೆ ಸಿದ್ದೇಶ್ವರ ಶ್ರೀ ಪ್ರಶಸ್ತಿ, ಭಜನೆಗೆ ಬಸವ ಶ್ರೀ ಪ್ರಶಸ್ತಿ, ಡೊಳ್ಳಿನ ಗಾಯನಕ್ಕೆ ಬಸವ ಶ್ರೀ ಪ್ರಶಸ್ತಿ, ರಂಗಭೂಮಿಗೆ ಬಸವ ಶ್ರೀ ಪ್ರಶಸ್ತಿ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಹೇಳಿದರು.

ವಿವಿಧಮಠಾಧೀಶರು,ಸಚಿವರು,ಶಾಸಕರು,ರಂಗಭೂಮಿಯಕಲಾವಿದರು, ನಟ, ನಟಿಯರು, ಸಂಗೀತಗಾರರು, ಕವಿಗಳು ಭಾಗವಹಿಸಲಿದ್ದಾರೆ ಎಂದು ಹೇಳಿದರು. ಗೌರವಾಧ್ಯಕ್ಷ ಸಿದ್ದಪ್ಪ ಅಲಗೊಂಡ,ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುಂಡಪ್ಪ ಕುಂಬಾರ, ಕಲಾವಿದರಾದ ಕಾಂತು ಕಾಖಂಡಕಿ, ಸದಾಶಿವ ಕೋಲಕಾರ, ಭೀಮು ಹೊಸವಾಡ, ಶಿವಶರಣ ಡಂಗಿ, ಎಚ್.ಪಿ.ಕರಡಿ, ಅನಿಲ ಜಾಧವ, ಮಲ್ಲಿಕಾರ್ಜುನ ಅಗಸರ ಇದ್ದರು.



ಕೌಶಲ್ಯವನ್ನು ಅವಕಾಶವಾಗಿ ರೂಪಿಸಿಕೊಳ್ಳಿ

ಇಂಡಿ: ಇಂದಿನ ವಿದ್ಯಾರ್ಥಿಗಳು ಜ್ಞಾನವನ್ನು ಕೇವಲ ಪುಸ್ತಕಗಳಲ್ಲಿ ಸೀಮಿತಗೊಳಿಸದೇ ಅದನ್ನು ಕೌಶಲ್ಯವನ್ನಾಗಿ, ಕೌಶಲ್ಯವನ್ನು ಅವಕಾಶವನ್ನಾಗಿ ರೂಪಿಸಿದಾಗ ಮಾತ್ರ ಅವರ ನಿಜವಾದ ಬೆಳವಣಿಗೆ ಸಾಧ್ಯ ಎಂದು ಉದ್ಯಮಿ ಅನಂತ ಜೈನ ಹೇಳಿದರು.

ಪಟ್ಟಣದ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಹಮ್ಮಿಕೊಂಡ 'ಬದುಕು-ಬದುಕುವ ದಾರಿ' ಕುರಿತ ವಿಚಾರ ಸಂಕಿರಣ ಹಾಗೂ ಪಾಲಕರ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು. ವಿದ್ಯಾರ್ಥಿ ಜೀವನವು ವ್ಯಕ್ತಿಯ ಭವಿಷ್ಯದ ಅಡಿಪಾಯ. ಈ ಅವಧಿಯಲ್ಲಿ ಕಲಿಯುವ ಜ್ಞಾನ, ಶಿಸ್ತು, ಕೌಶಲ್ಯ ಅವರ ವೃತ್ತಿಜೀವನ ಮತ್ತು ದೇಶದ ಅಭಿವೃದ್ಧಿಗೆ ಕಾರಣವಾಗುತ್ತದೆ ಎಂದು ಹೇಳಿದರು.

ಶಿಕ್ಷಕ ಸಾಹಿತಿ ಸಂತೋಷ ಬಂಡೆ ಮಾತನಾಡಿ, ಐಟಿಐ ಕೇವಲ ಒಂದು ಶಿಕ್ಷಣವಲ್ಲ, ಅದು ಕೈಗಾರಿಕಾ ಜಗತ್ತಿಗೆ ಬೇಕಾದ ನುರಿತ ಕೌಶಲ್ಯ ಕಲಿಸುವ ಭದ್ರ ಬುನಾದಿ. ಪ್ರಾಯೋಗಿಕ ಜ್ಞಾನ, ಸೃಜನಶೀಲತೆ, ನಿರಂತರ ಕಲಿಕೆಯಿಂದ ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಬದುಕು ರೂಪಿಸಿಕೊಳ್ಳಬೇಕು ಎಂದು ಹೇಳಿದರು.

ನಮ್ಮ ಭವಿಷ್ಯದ ಶಿಲ್ಪಿಗಳು ನಾವೇ. ಜ್ಞಾನವೇ ಜೀವನದ ನಿಜವಾದ ಆಸ್ತಿ. ಪ್ರತಿಯೊಬ್ಬ ಐಟಿಐ ವಿದ್ಯಾರ್ಥಿ ತಮ್ಮ ಕೌಶಲ್ಯವನ್ನೇ ಬಂಡವಾಳವಾಗಿಸಿಕೊಂಡು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು. ತಮ್ಮ ಉಜ್ವಲ ಭವಿಷ್ಯಕ್ಕಾಗಿ ಕೌಶಲ್ಯಾಭಿವೃದ್ಧಿ, ಸ್ವೈಜ ಯೋಜನೆ ಪ್ರತಿ ಐಟಿಐ ವಿದ್ಯಾರ್ಥಿಗೂ ಅಗತ್ಯ ಎಂದು ಹೇಳಿದರು.

ಪ್ರಾಚಾರ್ಯ ಪರಶುರಾಮ ರಜನಿಕರ ಅಧ್ಯಕ್ಷತೆ ವಹಿಸಿ ಮಾತನಾಡಿ, ಸರಿಯಾದ ಗುರಿ ವಿದ್ಯಾರ್ಥಿಯನ್ನು ಉದ್ಯಮಶೀಲತೆ, ಉದ್ಯೋಗ, ಆರ್ಥಿಕ ಸ್ವಾವಲಂಬನೆಯತ್ತ ಸಾಗಿಸುತ್ತದೆ. ತಾಂತ್ರಿಕ ಶಿಕ್ಷಣ ಕೇವಲ ಉದ್ಯೋಗಕ್ಕೆ ಸೀಮಿತಗೊಳಿಸದೇ ಅದನ್ನು ಜೀವನದ ಗುರಿಯನ್ನಾಗಿ ಮಾಡಿಕೊಳ್ಳಬೇಕು ಎಂದು ಹೇಳಿದರು.

ಸ್ವಾತಿ ಜೈನ ಅನುಭವ ಹಂಚಿಕೊಂಡರು. ಉಪನ್ಯಾಸಕರಾದ ಗಂಗಾಧರ ಭಾಗೆಳ್ಳಿ, ರಮೇಶ ಮೇತ್ರಿ, ಸಂತೋಷ ಹಟ್ಟಿ, ಭೀಮಾಶಂಕರ ಶಿವೂರ, ಭಾಗ್ಯಜ್ಯೋತಿ, ಕವಿತಾ ರಾಠೋಡ, ರವಿ ಹಾದಿಮನಿ, ಪಾಲಕ ಪ್ರತಿನಿಧಿ ವಿಲಾಸ ಲಿಂಗಸೂರ ಸೇರಿದಂತೆ ಪಾಲಕರು, ತಾಯಂದಿರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಸಚಿವರಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ಆಲಮೇಲ/ವಿಜಯಪುರ: 145 ಕೋಟಿ ರೂ. ವೆಚ್ಚದಲ್ಲಿ ತೋಟಗಾರಿಕಾ ಕಾಲೇಜ್, 44 ಕೋಟಿ ರೂ. ವೆಚ್ಚದಲ್ಲಿ ಕಡಣಿ ಬ್ರಿಡ್ಜ್ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸಚಿವ ಸತೀಶ ಜಾರಕಿಹೊಳಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ.ಪಾಟೀಲ ಜಂಟಿಯಾಗಿ ಚಾಲನೆ ನೀಡಿದರು.

ಲೋಕೋಪಯೋಗಿ ಇಲಾಖೆ, ಯುವ ಸಬಲೀಕರಣ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ಆಲಮೇಲ ತಾಲೂಕು ಆಡಳಿತದ ಸಹಯೋಗದಲ್ಲಿ ಆಲಮೇಲ ಪಟ್ಟಣದಲ್ಲಿ ನಡೆದ ಸಮಾರಂಭದಲ್ಲಿ 3 ಕೋಟಿ ರೂ. ಕ್ರೀಡಾಂಗಣ, 25 ಕೋಟಿ ರೂ. ಆಲಮೇಲ ರಸ್ತೆ, 4 ಕೋಟಿ ರೂ. ವೆಚ್ಚದಲ್ಲಿ ಆಲಮೇಲದ ಪಟ್ಟಣದ ಒಳ ರಸ್ತೆಗಳ ಅಭಿವೃದ್ಧಿಗೂ ಸಹ ಚಾಲನೆ ದೊರಕಿತು.

ಸಚಿವ ಸತೀಶ ಜಾರಕಿಹೊಳಿ ಮಾತನಾಡಿ, ಕಡಣಿ ಬ್ರಿಡ್ಜ್ ನಿರ್ಮಾಣ ಬಹುದಿನಗಳ ಬೇಡಿಕೆಯಾಗಿದ್ದು, ಸಿಂದಗಿ ಶಾಸಕರ ಪ್ರಯತ್ನದಿಂದಾಗಿ ಈ ಬಹುದಿನದ ಬೇಡಿಕೆ ಈಡೇರಿದಂತಾಗಿದೆ, ಆಲಮೇಲ ತಾಲೂಕಿಗೆ ಇನ್ನೂ ಹಲವು ಅಭಿವೃದ್ಧಿ ಕೆಲಸಗಳು ಆಗಬೇಕಿದೆ. ಆ ಸೌಲಭ್ಯಗಳನ್ನು ಮಂಜೂರು ಮಾಡುವುದರ ಮೂಲಕ ಈ ತಾಲೂಕುನ್ನು ಮಾದರಿ ತಾಲೂಕುನ್ನಾಗಿ ಪರಿವರ್ತಿಸುವುದಾಗಿ ಸಚಿವರು ಭರವಸೆ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಮಾತನಾಡಿ, ಆಲಮೇಲ ತಾಲೂಕಿನಲ್ಲಿ ಇಂದು ದೊಡ್ಡ ಇತಿಹಾಸ ಸೃಷ್ಟಿಯಾಗಿದೆ. ಸಿಂದಗಿ ಶಾಸಕ ಅಶೋಕ ಮನಗೂಳಿ ಅವರು, ಸರ್ಕಾರದಿಂದ ಯತೇಚ್ಛ ಅನುದಾನ ಮಂಜೂರು ಮಾಡಿಸಿಕೊಳ್ಳುವುದರ ಮೂಲಕ ಈ ಊರನ್ನು ಅಭಿವೃದ್ಧಿಪಡಿಸಿದ್ದಾರೆ. ಈಗ ಈ ಊರು ಮುಂಬಯಿ ಮಾದರಿಯಲ್ಲಿ ಗೋಚರಿಸುತ್ತಿದೆ. ಇದಕ್ಕೆ ಶಾಸಕ ಅಶೋಕ ಮನಗೂಳಿ ಅವರೇ ಕಾರಣರಾಗಿದ್ದಾರೆ. ಶಾಸಕ ಅಶೋಕ ಮನಗೂಳಿ ಅವರು, ತಮ್ಮ ತಂದೆಯವರ ಕನಸು ನನಸು ಮಾಡಿದ್ದಾರೆ ಎಂದು ಬಣ್ಣಿಸಿದರು.

ಮಾಜಿ ಸಚಿವ ಶಿವಾನಂದ ಪಾಟೀಲ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಶಾಸಕ ಅಶೋಕ ಮನಗೂಳಿ ಮಾತನಾಡಿ, ಆಲಮೇಲ ತಾಲೂಕಿಗೆ ಸಂತಸದ ದಿನ. ತಾಲೂಕಿನಲ್ಲಿ 6 ಕಾಮಗಾರಿಗೆ ಚಾಲನೆ ನೀಡುತ್ತಿದ್ದೇವೆ ಎಂದರು.

ಮಾಜಿ ಶಾಸಕ ಶರಣಪ್ಪ ಸುಣಗಾರ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ ಅಧ್ಯಕ್ಷೆ ಕಾಂತಾ ನಾಯಕ, ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಬಿ.ಎಸ್.ಕೌಲಗಿ, ಬಾಗಲಕೋಟ ತೋಟಗಾರಿಕೆಗಳ ವಿಜ್ಞಾನಗಳ ಕುಲಪತಿ ಡಾ.ವಿಷ್ಣುವರ್ಧನ ಇದ್ದರು.



ಮತದಾರರ ಪರಿಷ್ಕರಣೆಯಲ್ಲಿ ಭಾಗವಹಿಸಿ

ಬಸವನಬಾಗೇವಾಡಿ: ದೇವರ ಹಿಪ್ಪರಗಿ ವಿಧಾನ ಸಭಾ ಕ್ಷೇತ್ರದ ಇಟಗಿ, ಕಣಕಾಲ, ನರಸಲಗಿ, ಶಕ್ತಿ ಕೇಂದ್ರದ ಸಂಘಟನಾತ್ಮಕ ಸಭೆ ಮಂಗಳವಾರ ನಡೆಯಿತು.

ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಮಾಜಿ ಶಾಸಕರಾದ ಸೋಮನಗೌಡ ಪಾಟೀಲ ಸಾಸನೂರ ಅವರು ಮಾತನಾಡಿ ಬರುವ ಜೂನ್ 30ರಿಂದ ಆರಂಭವಾಗುವ ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ವಿಧಾನಸಭಾ ಎಲ್ಲಾ 252ಬೂತ್ ನ ಬಿ ಎಲ್ ಎ 2 ಹಾಗೂ ಬೂತ್ ಅಧ್ಯಕ್ಷರು ಪಕ್ಷದ ಪ್ರಮುಖರು ಸಕ್ರೀಯವಾಗಿ ಭಾಗವಹಿಸಲು ಕರೆ ನೀಡಿದರು.

ಮಂಡಲ ಅಧ್ಯಕ್ಷ ಅವ್ವಣ್ಣ ಗ್ವಾತಗಿ ಮಾತನಾಡಿ ಎಸ್ ಯ್‌ಆರ್ ಪ್ರಕ್ರಿಯೆ ಬಗ್ಗೆ ಮಾಹಿತಿ ನೀಡಿದರು. ಮುಖಂಡರಾದ ನಿಂಗಯ್ಯ ಮಠಪತಿ, ರಾಮು ಹಿರೆಕುರಬರ, ಅರವಿಂದ ಹೂಗಾರ, ಮಲ್ಲು ಗೋನಾಳ, ಮೌಲಾಲಿ ಚಪ್ಪರಬಂದ, ಮಹಾಂತೇಶ ತಾಳಿಕೋಟಿ, ಸಂಗನಗೌಡ ನನ್ನೂರ, ಜಕ್ಕು ವಾಸೇದಾರ, ಶಿವಶಂಕರ ಹಿರೇಮಠ, ರಮೇಶ ಕನಮಡಿ, ಗುಂಡು ರಾಠೋಡ, ಶಂಕರಗೌಡ ಪಾಟೀಲ ಸೇರಿದಂತೆ ಅನೇಕ ಕಾರ್ಯಕರ್ತರು ಉಪಸ್ಥಿತರಿದ್ದರು.



ತಂಬಾಕು ಅಂಗಡಿಗಳ ಮೇಲೆ ದಾಳಿ



ಮುದ್ದೇಬಿಹಾಳ: ತಾಲೂಕಿನ ಕುಂಟೋಜಿ ಗ್ರಾಮದಲ್ಲಿ ತಂಬಾಕು ನಿಯಂತ್ರಣ ಕೋಶ ಹಾಗೂ ತಾಲೂಕು ತಂಬಾಕು ತನಿಖಾದಳ ಸದಸ್ಯರೊಂದಿಗೆ ಕೊಟ್ಪಾ 2003 ಕಾಯ್ದೆ ಅಡಿ ದಾಳಿ ನಡೆಸಲಾಯಿತು. ಗ್ರಾಮದ ಮುಖ್ಯ ರಸ್ತೆ ಬದಿಯಲ್ಲಿ ಪ್ರಾರಂಭಿಸಿ ಗ್ರಾಮದ ಬಸವೇಶ್ವರ ದೇವಸ್ಥಾನದ, ಮಾರ್ಗ ಮಧ್ಯದಲ್ಲಿ ಇರತಕ್ಕಂತ ಚಹಾದ ಅಂಗಡಿಗಳಿಗೆ ಎಚ್ಚರಿಕೆ ನೀಡಿ ದಾಳಿ ಮಾಡಿ ದಂಡ ವಿಧಿಸಲಾಯಿತು.

ದಾಳಿಯಲ್ಲಿ ಸಾರ್ವಜನಿಕರಿಗೆ ತಂಬಾಕು ಸೇವನೆಯ ದುಷ್ಪರಿಣಾಮಗಳ ಕುರಿತು ಮಾಹಿತಿ ನೀಡಿ ತಂಬಾಕು ಉತ್ಪನ್ನ ಮಾರಾಟ ಮಾಡುವ ಅಂಗಡಿ ಮಾಲಕರಿಗೆ 2003 ಕಾಯ್ದೆ ಅಡಿ ಪ್ರಕರಣ ದಾಖಲಿಸಿ ರೂ.2300 ದಂಡ ವಸೂಲು ಮಾಡಲಾಯಿತು ಸೆಕ್ಷನ್ 4 ಮತ್ತು 6(ಎ)ಗಳ ನಾಮ ಫಲಕ ಅಳವಡಿಸಲಾಯಿತು. ತಂಬಾಕು ಉತ್ಪನ್ನಗಳ ಜಾಹಿರಾತು ಫಲಕಗಳನ್ನು ತೆರವುಗೊಳಿಸಲಾಯಿತು ಹಾಗೂ ಆರೋಗ್ಯ ಇಲಾಖೆಯಿಂದ ಗ್ರಾಮದಲ್ಲಿ ಏಕಕಾಲಕ್ಕೆ ದಾಳಿ ಮಾಡಿ ವಿವಿಧ ಕಡೆ ಪ್ರಕರಣ ದಾಖಲಿಸಲಾಯಿತು.

ಗರಸಂಗಿ ಪ್ರಾಥಮಿಕ ಆರೋಗ್ಯ ಕೇಂದ್ರದ ಮೇಲ್ವಿಚಾರಕ ಎಂ.ಎಸ್.ಗೌಡರ ಆರೋಗ್ಯ ನಿರೀಕ್ಷಣಾಧಿಕಾರಿ ಎಸ್.ಬಿ.ಹೂಗಾರ ಕುಂಟೋಜಿ ಪಂಚಾಯತಿ ಕಾರ್ಯದರ್ಶಿ ಗಿರೀಶ ಬಿರಾದಾರ, ಆಶಾ ಕಾರ್ಯಕರ್ತೆಯರಾದ ಯಲ್ಲಮ್ಮ ಹೊಸಮನಿ. ರೇಣುಕಾ ತಾಂಬ್ರಳ್ಳಿ ಹಾಜರಿದ್ದರು.

ಕಿರುಸುದ್ದಿ

ರಾಯರೆಡ್ಡಿಗೆ ಸಚಿವ ಸ್ಥಾನ ನೀಡಿ: ಶಿವಣ್ಣ



ಕುಕನೂರು: ರಾಯರೆಡ್ಡಿಗೆ ಸಚಿವ ಸ್ಥಾನ ಕೊಟ್ಟರೆ ಕೊಪ್ಪಳ ಜಿಲ್ಲೆ ಉತ್ತಮ ಅಭಿವೃದ್ಧಿಯಾಗುತ್ತದೆ ಎಂದು ಸಮಾಜ ಸೇವಕ ಶಿವಣ್ಣ ರಾಯರಡ್ಡಿ ಹೇಳಿದರು.

ತಾಲೂಕಿನ ತಳಕಲ್ ಗ್ರಾಮದಲ್ಲಿ ಶುಕ್ರವಾರ ಪತ್ರಿಕೆಯೊಂದಿಗೆ ಮಾತನಾಡಿದ ಅವರು, ರಾಜ್ಯದ ಮುಂದಿನ ಸಚಿವ ಸಂಪುಟದಲ್ಲಿ ರಾಯರೆಡ್ಡಿಗೆ ಅವಕಾಶ ಕೊಟ್ಟರೆ ಸಾಕಷ್ಟು ಅಭಿವೃದ್ಧಿಯಾಗುವುದು, ಇಲ್ಲದಿಂದ್ದರೆ ಅಭಿವೃದ್ಧಿ ಕುಂಟಿತವಾಗುವುದು. ಇದರಿಂದಾಗಿ ಯಾವುದೇ ರೀತಿಯಾಗಿ ನಮ್ಮ ವೈಯಕ್ತಿಕ ಕುಟುಂಬಕ್ಕೆ ಯಾವುದೇ ರೀತಿಯಾದ ಲಾಸ್ ಆಗುವುದಿಲ್ಲ. ಯಾವುದೇ ಇಲಾಖೆ ಸಮತೋಲನದಿಂದಾ ನಿಭಾಯಿಸಿಕೊಂಡು ಕಾನೂನುನಾತ್ಮಕ ಅಭಿವೃದ್ಧಿ ಮಾಡುವ ವಿಚಾರ ಅವರು ಹೊಂದ್ದಿದಾರೆ. ಅದಕ್ಕೆ ಮುಂದಿನ ದಿನಗಳಲ್ಲಿ ಯಲಬುರ್ಗಾ ಶಾಸಕ ಬಸವರಾಜ ರಾಯರೆಡ್ಡಿಗೆ ರಾಜ್ಯ ಸರ್ಕಾರ ಸಚಿವ ಸ್ಥಾನ ನೀಡಿದರೆ ಅಭಿವೃದ್ಧಿ ಮಾಡುತ್ತಾರೆ. ಇಲ್ಲದಿಂದ್ದರೆ ಪಕ್ಷಕ್ಕೆ ಯಾವರೀತಿ ನಿಷ್ಠಾವಂತರಾಗಿ ದುಡಿಯಬೇಕು. ಅದೇ ರೀತಿಯಾಗಿ ದುಡಿಯುತ್ತಾರೆ ಯಲಬುರ್ಗಾ ತಾಲೂಕಿನ ಶಾಸಕರು ಎಂದು ಹೇಳಿದರು.

ಮತದಾರರ ಪಟ್ಟಿ ಪರಿಷ್ಕರಣೆ: ಜಾಗೃತರಾಗಿ ಸಹಕರಿಸಿ



ಸಿಂಧನೂರು: ಲೋಕ ತಾಂತ್ರಿಕ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಅರ್ಹ ಪ್ರಜೆಯೂ ಮತದಾನದ ಹಕ್ಕನ್ನು ಪಡೆಯುವುದು ಅತ್ಯಗತ್ಯ.ಇದಕ್ಕಾಗಿ ಚುನಾವಣಾ ಆಯೋಗವು ಕಾಲಕಾಲಕ್ಕೆ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವನ್ನು ಹಮ್ಮಿಕೊಳ್ಳುತ್ತದೆ. ಈ ಪ್ರಕ್ರಿಯೆ ಪಾರದರ್ಶಕವಾಗಿ, ದೋಷ ಮುಕ್ತವಾಗಿ ನಡೆಯಲು ಅಧಿಕಾರಿಗಳು, ವಿವಿಧ ಪಕ್ಷಗಳ ಕಾರ್ಯಕರ್ತರು ಸಹಕರಿಸಬೇಕು ಎಂದು ತಹಶೀಲ್ದಾರ್ ಅರುಣ್. ಎಚ್.ದೇಸಾಯಿ ಮನವಿ ಮಾಡಿದರು.

ನಗರದ ಟೌನ್‌ಹಾಲ್‌ನಲ್ಲಿ ರಾಜಕೀಯ ಪಕ್ಷಗಳ ಬೂತ್ ಮಟ್ಟದ ಏಜೆಂಟ್‌ರು ಹಾಗೂ ಬೂತ್ ಮಟ್ಟದ ಅಧಿಕಾರಿಗಳಿಗೆ ಏರ್ಪಡಿಸಿದ್ದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಮತದಾರರ ಪಟ್ಟಿಯನ್ನು ಶುದ್ಧ, ನಿಖರ ಹಾಗೂ ಪಾರದರ್ಶಕವಾಗಿಸಲು ವಿಶೇಷ ಮತದಾರರ ಪಟ್ಟಿಯ ಪರಿಷ್ಕರಣೆ ಕಾರ್ಯ ಕೈಗೊಳ್ಳಲಾಗಿದೆ. ಬೂತ್ ಮಟ್ಟದ ಅಧಿಕಾರಿಗಳು ಮನೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಾರ್ವಜನಿಕರು ಅಗತ್ಯ ಮಾಹಿತಿ ಒದಗಿಸಿ ಸಂಪೂರ್ಣ ಸಹಕಾರ ನೀಡಬೇಕು. ಮೃತ, ಶಾಶ್ವತವಾಗಿ ಸ್ಥಳಾಂತರಗೊಂಡ ಹಾಗೂ ಅನರ್ಹ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕುವ ಮೂಲಕ ನಿಖರ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.

ಈ ವೇಳೆ ತಾಲೂಕು ಮಟ್ಟದ ಅಧಿಕಾರಿಗಳು, ಏಜೆಂಟರು ಭಾಗವಹಿಸಿದ್ದರು.

ಮದ್ಯ ಅಂಗಡಿಗಳ ಮೇಲೆ ದಾಳಿ:107ಲೀ.ಮದ್ಯ ವಶ



ಕುರುಗೋಡು: ತಾಲೂಕಿನ ಮೊಹರಂ ಹಬ್ಬದ ಹಿನ್ನೆಲೆಯಲ್ಲಿ ತಾಲೂಕಿನಲ್ಲಿ ಮದ್ಯಮಾರಾಟ ಮಾಡದಂತೆ ಪೊಲೀಸ್ ಇಲಾಖೆ ವತಿಯಿಂದ ಕಟ್ಟೆಚ್ಚರ ವಹಿಸಲಾಗಿತ್ತು. ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಅಂಗಡಿಗಳ ಮೇಲೆ ದಾಳಿ ಮಾಡಿದ ಕುರುಗೋಡು ಪೊಲೀಸರು ಪಟ್ಟಣದಲ್ಲಿ ಸುಮಾರು 57,875 ರೂ. ಮೌಲ್ಯದ 107 ಲೀಟರ್ ಮದ್ಯ ವಶಪಡಿಸಿಕೊಂಡಿದ್ದಾರೆ.

ಪಟ್ಟಣದಲ್ಲಿ ದಾಳಿ ಮಾಡಿದ್ದು, ಪರವಾನಿಗೆ ಇಲ್ಲದೇ, ಸಾರ್ವಜನಿಕರಿಗೆ ಮಾರಾಟ ಮಾಡಲು ಶೇಖರಿಸಿದ್ದ ವಿವಿಧ ಕಂಪನಿ 107ಲೀಟರ್ ಮದ್ಯ ವಶಪಡಿಸಿಕೊಂಡಿದ್ದು, ಈ ಸಂಬಂಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪಿಎಸ್‌ಐ ಸುಪ್ರೀತ್ ವಿರೂಪಾಕ್ಷಪ್ಪ ತಿಳಿಸಿದ್ದಾರೆ.



ಕೊಪ್ಪಳ: 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ ಹಾಗೂ ಜಿಲ್ಲೆಯ ಸರ್ವಯೋಗ ಸಂಸ್ಥೆಗಳ ಸಹಯೋಗದಲ್ಲಿ ಶನಿವಾರ ಕೊಪ್ಪಳ ಜಿಲ್ಲಾ ಕೇಂದ್ರದಲ್ಲಿ ಹಮ್ಮಿಕೊಳ್ಳಲಾದ ಯೋಗ ಜಾಥಾ ಮೂಲಕ ವಿಶೇಷ ಅರಿವು ಮೂಡಿಸಲಾಯಿತು.

ಯುವಕರು ದುಶ್ಚಟಗಳಿಂದ ದೂರವಿರಲಿ

ಕಲಬುರಗಿ: ಮಾದಕ ದ್ರವ್ಯ ವ್ಯಸನವು ಯುವ ಸಮುದಾಯದ ಭವಿಷ್ಯವನ್ನು ಹಾಳು ಮಾಡುವ ಗಂಭೀರ ಸಾಮಾಜಿಕ ಪಿಡುಗಾಗಿದ್ದು, ಡ್ರಗ್ಸ್ ವಿರುದ್ಧ ಸಮಾಜದ ಪ್ರತಿಯೊಬ್ಬರೂ ಜಾಗೃತರಾಗಬೇಕು ಎಂದು ಪೊಲೀಸ್ ಕಮಿಷನರ್ ಡಾ.ಶರಣಪ್ಪ ಎಸ್.ಡಿ. ಹೇಳಿದರು.

ಅಂತಾರಾಷ್ಟ್ರೀಯ ಮಾದಕ ದ್ರವ್ಯ ದುರುಪಯೋಗ ಮತ್ತು ಅಕ್ರಮ ಮಾದಕ ವಸ್ತು ಕಳ್ಳಸಾಗಣೆ ವಿರೋಧಿ ದಿನದ ಅಂಗವಾಗಿ ಕಲಬುರಗಿ ನಗರ ಪೊಲೀಸ್ ವತಿಯಿಂದ ಶುಕ್ರವಾರ ಬೆಳಗ್ಗೆ ನಗರದಲ್ಲಿ ಜಾಗೃತಿ ವಾಕ್‌ಥಾನ್ ನಡೆಸಿ ಮಾತನಾಡಿ, ಯುವಕರು ದುಶ್ಚಟಗಳಿಂದ ದೂರವಿದ್ದು ಶಿಕ್ಷಣ, ಕ್ರೀಡೆ ಹಾಗೂ ಉತ್ತಮ ಚಟುವಟಿಕೆಗಳತ್ತ ಗಮನಹರಿಸುವ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಹೇಳಿದರು.

ನಗರದ ಜಗತ್ ವೃತ್ತದಿಂದ ಆರಂಭಗೊಂಡ ವಾಕ್‌ಥಾನ್ ಸರದಾರ ವಲ್ಲಭಭಾಯಿ ಪಟೇಲ್ ವೃತ್ತದವರೆಗೆ ನಡೆಯಿತು. ಕಾರ್ಯಕ್ರಮದಲ್ಲಿ ಪೊಲೀಸ್ ಅಧಿಕಾರಿಗಳು, ವೈದ್ಯರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉತ್ಸಾಹದಿಂದ ಪಾಲ್ಗೊಂಡು ಮಾದಕ ವ್ಯಸನದ ದುಷ್ಪರಿಣಾಮಗಳ ಕುರಿತು ಜನರಲ್ಲಿ ಅರಿವು ಮೂಡಿಸಿದರು.

ಕಾರ್ಯಕ್ರಮದಲ್ಲಿ ಎಸ್‌ಪಿ ಅದ್ದೂರು ಶ್ರೀನಿವಾಸಲು, ಡಿಸಿಪಿ ಶಾಲೂ ಸೇರಿದಂತೆ ನಗರ ಪೊಲೀಸ್ ಇಲಾಖೆಯ ಅಧಿಕಾರಿಗಳು, ವೈದ್ಯರು, ವಿದ್ಯಾರ್ಥಿಗಳು ಹಾಗೂ ವಿವಿಧ ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.ಜಾಗೃತಿ ವಾಕ್‌ಥಾನ್ ಮೂಲಕ ಡ್ರಗ್ಸ್ ವಿರುದ್ಧ ಹೋರಾಟಕ್ಕೆ ಸಾರ್ವಜನಿಕರ ಸಹಭಾಗಿತ್ವದ ಅಗತ್ಯವನ್ನು ಸಾರಲಾಯಿತು.



ಕಲಬುರಗಿ: ಅಂತಾರಾಷ್ಟ್ರೀಯ ಮಾದಕ ದ್ರವ್ಯ ದುರುಪಯೋಗ ಮತ್ತು ಅಕ್ರಮ ಮಾದಕ ವಸ್ತು ಕಳ್ಳಸಾಗಣೆ ವಿರೋಧಿ ದಿನದ ಅಂಗವಾಗಿ ಕಲಬುರಗಿ ನಗರ ಪೊಲೀಸ್ ವತಿಯಿಂದ ಶುಕ್ರವಾರ ಬೆಳಗ್ಗೆ ನಗರದಲ್ಲಿ ಜಾಗೃತಿ ವಾಕ್‌ಥಾನ್ ನಡೆಸಿದರು.

ಸಾಲ ಮಾಡಿ ಬಿತ್ತನೆ ಮಾಡಿದ ರೈತ | ಮಳೆ ಕೊರತೆಗೆ ಬೆಳೆಗಳು ಒಣಗುವ ಭೀತಿ

ಮುಂಗಾರು ನಿರಾಶೆ: ಸಂಕಷ್ಟದಲ್ಲಿ ರೈತರು

ಶಿವಮೂರ್ತಿ ಇಟಗಿ

ಯಲಬುರ್ಗಾ: ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಅಬ್ಬರಿಸಿದ ಮೇಘರಾಜನ ಆಗಮನದಿಂದ ಸಂತೋಷದಲ್ಲಿದ್ದ ಅನ್ನದಾತನಿಗೆ ಮುಂಗಾರು ಮಳೆ ಬರು ಬರುತ್ತಾ ಮೆಲ್ಲನೆ ಕೈಕೊಟ್ಟ ಪರಿಣಾಮ ಅನ್ನದಾತನ ಮುಖದಲ್ಲಿ ಸಂಕಷ್ಟ ಮನೆಮಾಡಿದೆ.

ತಾಲೂಕಿನಾದ್ಯಂತ ಮುಂಗಾರು ಆರಂಭದಲ್ಲಿಯೇ ಉತ್ತಮವಾಗಿ ಸುರಿದ ಮಳೆಯ ಆಗಮನದಿಂದ ಕ್ಷೇತ್ರದ ಅನ್ನದಾತ ಖುಷಿಯೊಂದಿಗೆ ಸಾಲ-ಶೂಲ ಮಾಡಿಕೊಂಡು ತಂತಮ್ಮ ಜಮೀನಿನಲ್ಲಿ ಕೃಷಿ ಚಟುವಟಿಕೆಗಳೊಂದಿಗೆ ಬಿತ್ತನೆಗಾಗಿ ಹೊಲವನ್ನು ಸಜ್ಜು ಮಾಡಿಕೊಂಡಿದರು.

ಮುಂಗಾರು ಹಂಗಾಮಿನಲ್ಲಿ ಬಿತ್ತನೆಗಾಗಿ ಇಡೀ ರೈತಾಪಿ ವರ್ಗ ವಿವಿಧ ತಳಿಗಳ ಬೀಜ, ರಸಗೊಬ್ಬರ ಖರೀದಿಗಾಗಿ ಆಯಾ ಕೃಷಿ ಕೇಂದ್ರ, ಖಾಸಗಿ ಅಂಗಡಿ ಗಳಲ್ಲಿ ಖರೀದಿಸಿದ್ದ ಅನ್ನದಾತ ಹೆಸರು, ಮೆಕ್ಕೆಜೋಳಸೇರಿದಂತೆಇನ್ನಿತರಬೆಳೆಗಳನ್ನು ಬಿತ್ತನೆಗೆ ತಯಾರಿ ಮಾಡಿಕೊಂಡಿದ್ದ. ಇನ್ನೇನು ಈ ಭಾರಿ ಚೆನ್ನಾಗಿ ಬೆಳೆಗಳು ಬರಬಹುದು ಎಂಬ ನಿರೀಕ್ಷೆಯೊಂದಿಗೆ ಆಸೆ ಭಾವನೆಯೊಂದಿಗಿದ್ದ ಅನ್ನದಾತನಿಗೆ ಮುಂಗಾರು ಮಳೆ ನಿರಾಸೆ ಮೂಡಿಸಿ ಆತಂಕ ಮನೆ ಮಾಡಿಸಿದೆ.

ಮಳೆ ನಿರೀಕ್ಷೆ: ಬಿತ್ತನೆ ಕಾರ್ಯ ಕೆಲ ಕಡೆ ಬಾಕಿ ಕೆಲ ಕಡೆ ಬಿತ್ತನೆ ಕಾರ್ಯ ಮಾಡಿದ್ದರೆ.ಇನ್ನೊಂದು ಕಡೆ ಅಲ್ಪಸ್ವಲ್ಪ ಮಳೆ ಆಗಿದ್ದರಿಂದ ಇನ್ನೊಂದು ಮಳೆ ನಿರೀಕ್ಷೆಯನ್ನು ಇಟ್ಟುಕೊಂಡಿದ್ದರಿಂದ ಬಿತ್ತನೆ ಕಾರ್ಯ ಕೆಲ ಕಡೆ ಇನ್ನೂ ಆಗಿಲ್ಲ.ಆದರೂ ಸಾಲ-ಶೂಲ ಮಾಡಿಕೊಂಡು ಅಲ್ಪ ಸ್ವಲ್ಪ ಬಿತ್ತನೆ ಕಾರ್ಯ ಮಾಡಿದ್ದರಿಂದ ಈ ಬಾರಿ ಮುಂಗಾರು ಮಳೆ ಬಾರದೆ ಇರುವುದರಿಂದ ಚಿಗುರುತ್ತಿರುವ ಬೆಳೆಗಳು ಬಿಸಿಲಿನ ತಾಪಕ್ಕೆ ಒಣಗುವ ಭೀತಿ ಎದುರಾಗಿದೆ.

ತಂತಮ್ಮ ಜಮೀನಿನಲ್ಲಿ ಬಿತ್ತನೆ ಕಾರ್ಯ ಮಾಡಿದ್ದು, ಕೆಲವು ಕಡೆಗಳ ಜಮೀನುಗಳಲ್ಲಿ ಮೊಳಕೆ ನಾಟಿದ್ದರೆ, ಇನ್ನು ಕೆಲವು ಹೊಲದಲ್ಲಿ ತೇವಾಂಶದ ಕೊರತೆಯಿಂದಾಗಿ ಬೀಜಗಳು ಮಣ್ಣಿನಡಿ ಹುದುಗಿಕೊಂಡಿದೆ.ಇನ್ನು ಕಡೆಗಳಲ್ಲಿ ಮಳೆಯ ಅಭಾವದಿಂದಾಗಿ ಬಿತ್ತನೆ ಕಾರ್ಯ ಕೂಡ ಆಗಿಲ್ಲ. ಇದರಿಂದಾಗಿ ಮುಂಗಾರು ಮಳೆ ಕೊರತೆಯಿಂದಾಗಿ ಕೃಷಿ ಚಟುವಟಿಕೆಗಳಿಗೆ ತೀವ್ರ ಹಿನ್ನಡೆಯಾಗಿದೆ.

ಮೇಘರಾಜ ಆಗಮಕ್ಕೆ ಅನ್ನದಾತ ಪ್ರಾರ್ಥನೆ: ಬಾರದ ಮುಂಗಾರು ಮಳೆಯ ಅಭಾವದಿಂದಾಗಿ ಅನ್ನದಾತ ಮೇಘರಾಜ ಆಗಮನಕ್ಕಾಗಿ ಆಕಾಶದತ್ತ ಮುಖ ಮಾಡಿ, ನಿತ್ಯ ನೋಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸಾಲ-ಶೂಲ ಮಾಡಿ ಬಿತ್ತನೆ ಕಾರ್ಯ ಮಾಡಿದ್ದ ಬೆಳೆಗಳು ಬಿಸಿಲಿನ ತಾಪಕ್ಕೆ ಬಾಡುವಂತ ಸ್ಥಿತಿ ಮನಕರಗುವಂತಿದ್ದು ನಾಡಿನ ಅನ್ನದಾತ ತೀವ್ರ ಸಂಕಷ್ಟವನ್ನು ಅನುಭವಿಸುವಂತಾಗಿದೆ.



> ಮುಂಗಾರು ಮಳೆ ಬಾರದೆ ಇರುವುದರಿಂದ ಬಿತ್ತಿದ ಹೆಸರು ಬೆಳೆ ಬಿಸಿಲಿನ ತಾಪಕ್ಕೆ ಬಾಡುವಂತ ಸ್ಥಿತಿ ನಿರ್ಮಾಣವಾಗಿದ್ದರಿಂದ ಸಂಕಷ್ಟ ಪರಿಸ್ಥಿತಿಯನ್ನು ಅನುಭವಿಸುವಂತಾಗಿದೆ. ಕೂಡಲೆ ಸರ್ಕಾರ ರೈತರ ನೆರವಿಗೆ ಬರಬೇಕು.
>
> ■ ವೀರನಗೌಡ ಬನ್ನಪ್ಪಗೌಡ್ರ,ಪ್ರಗತಿಪರ ರೈತ

> ಕೃಷಿ ಇಲಾಖೆ ಮಾಹಿತಿ ಪ್ರಕಾರ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಯಲಬುರ್ಗಾ ತಾಲೂಕಿನಲ್ಲಿ ಗುರಿ 70951 ಹೇಕ್ಟರ್, ಸಾಧನೆ 28790 ಹೇಕ್ಟರಷ್ಟು. ಕುಕನೂರು ತಾಲೂಕಿನಲ್ಲಿ ಗುರಿ-50346 ಹೇಕ್ಟರ್, ಸಾಧನೆ-25410 ಹೇಕ್ಟರಷ್ಟು. ಯಲಬುರ್ಗಾ ತಾಲೂಕಿನಲ್ಲಿ ಜೂನ್ ಮಾಹೇಯ ವಾಡಿಕೆ ಮಳೆ-53.4 ಮೀಮೀ ಒಟ್ಟು ಸುರಿದ ಮಳೆ-42 ಮೀಮೀ ನಷ್ಟು. ಅಲ್ಲದೇ ಕುಕನೂರು ತಾಲೂಕಿನಲ್ಲಿ ವಾಡಿಕೆ ಮಳೆ-65.9 ಮೀ. ಮೀ.ಸುರಿದ ಮಳೆ-70.1 ಮೀ.ಮೀ.ನಷ್ಟು. ಅಲ್ಲದೇ ಬಿತ್ತನೆ ಬೀಜ ಮೆಕ್ಕೆಜೋಳ ದಾಸ್ತಾನು-761 ಕ್ವಿಂಟಲ್, ತೊಗರಿ ದಾಸ್ತಾನು-128.6 ಕ್ವಿಂಟಲ್, ಸೂರ್ಯಕಾಂತಿ-20 ಕ್ವಿಂಟಲ್, ಸಜ್ಜೆ-73 ಕ್ವಿಂಟಲ್ ಆಗಿದೆ.
>
> ■ ಪ್ರಮೋದ ತುಂಬಳ, ಸಹಾಯಕ ಕೃಷಿ ಅಧಿಕಾರಿ ಯಲಬುರ್ಗಾ

ಕ್ಷೇತ್ರದ ಅಭಿವೃದ್ಧಿಗೆ ಮೊದಲ ಆದ್ಯತೆ: ಮತ್ತಿಮಡು

ಕಲಬುರಗಿ: ಜಿಲ್ಲೆಯ ಕಮಲಾಪೂರ ತಾಲೂಕಿನ ಮೂಲಸೌಕರ್ಯ ಸೇರಿದಂತೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಲಾಗಿದೆ ಎಂದು ಕಲಬುರಗಿ ಗ್ರಾಮೀಣ ಕ್ಷೇತ್ರದ ಶಾಸಕ ಬಸವರಾಜ ಮತ್ತಿಮಡು ಹೇಳಿದರು.

2025-25ನೇಸಾಲಿನಮುಖ್ಯಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಶುಕ್ರವಾರ ತಾಲೂಕಿನ ಕಲಕುಟಗಾ ಕ್ರಾಸ್‌ದಿಂದ ಬಾದ ಹಿಪ್ಪರಗಾ ಸೀಮಿವರೆಗೆ ರಸ್ತೆ ಮತ್ತು ಸೇತುವೆ ನಿರ್ಮಾಣ ಹಾಗೂಕಲಕುಟಗಾಕ್ರಾಸ್‌ದಿಂದಕಲಕುಟಗಾ ಗ್ರಾಮದವರೆಗೆ ರಸ್ತೆ ನಿರ್ಮಾಣ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ಶಾಸಕನಾಗಿ ಆಯ್ಕೆಯಾದ ಬಳಿಕ ವಿವಿಧ ಯೋಜನೆಗಳ ಒಳಗೊಂಡಂತೆ ಅನೇಕ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದ್ದು, ಗ್ರಾಮಾಂತರ ಪ್ರದೇಶಗಳಲ್ಲಿ ಭಾಗಶಃ ಕೆಲಸಗಳು ಪೂರ್ಣಗೊಂಡಿವೆ. ಕೆಳಭಾಗದಲ್ಲಿ ಪ್ರಗತಿಯಲಿದ್ದು ಶೀಘ್ರದಲ್ಲೇ ಮುಕ್ತಾಯಗೊಳ್ಳಲಿವೆ ಎಂದು ತಿಳಿಸಿದರು. ಕಲಕುಟಗಾ ಕ್ರಾಸ್ ನಿಂದ ಕಲಕುಟಗಾವರೆಗೆ ರಸ್ತೆ ಹಾಗೂ ಸೇತುವೆ ನಿರ್ಮಾಣ ಕಾಮಗಾರಿಗೆ ಅಧಿಕೃತವಾಗಿ ಚಾಲನೆ ನೀಡಲಾಗಿದೆ ಎಂದರು.

ಗ್ರಾಮಕ್ಕೆ 4 ಕೋಟಿ ಲಕ್ಷ ವೆಚ್ಚದ ರಸ್ತೆ ಸೇತುವೆ ನಿರ್ಮಾಣ ಕಾಮಗಾರಿಗೂ ಸಹ ಶಾಸಕ ಬಸವರಾಜ ಮತ್ತಿಮಡು ಅಧಿಕೃತವಾಗಿ ಚಾಲನೆ ನೀಡಿದ್ದು, ಸ್ಥಳೀಯರಲ್ಲಿ ಸಂತಸ ತಂದಿತು. ವರ್ಷಗಟ್ಟಲೇ ರಸ್ತೆ ವ್ಯವಸ್ಥೆಗಾಗಿ ಕಾಯುತ್ತಿದ್ದ ಗ್ರಾಮಸ್ಥರ ಬೇಡಿಕೆ ಈಡೇರಿಸಿದ ಆತ್ಮತೃಪ್ತಿ ಶಾಸಕರಿಗೆ ದಕ್ಕಿದರೆ ಒಂದೊಳ್ಳೆ ವಾತಾವರಣ ನಿರ್ಮಾಣ ಕೊನೆಗೂ ಕೈಗೂಡಿತ್ತಲ್ಲ ಎಂಬ ನಿರಾಳತೆ ಸ್ಥಳೀಯರಿಗೆ ಸಿಕ್ಕಿದೆ.

ಈ ಸಂದರ್ಭದಲ್ಲಿ ಮುಖಂಡ ಶಮಶೋದ್ದಿನ ಪಟೇಲ, ಗ್ರಾಪಂ ಮಾಜಿ ಅಧ್ಯಕ್ಷ ತಾಜೋದ್ದೀನ ಪಟೇಲ, ದಸ್ತಗೀರ ಮುಜಾವರ, ಮಲ್ಲಿಕಾರ್ಜುನ ಮರತೂರಕರ, ಗಂಗಪ್ಪಗೌಡ ಪಾಟೀಲ, ಚೆನ್ನು ಮುನ್ನಳಿ, ಉದಯ ಪಾಟೀಲ, ಸತೀಶ ಸೊರಡೆ, ಸತೀಶ ಪೂಜಾರಿ, ಶಿವಾನಂದ ಪಾಟೀಲ, ಚಂದ್ರಕಾಂತ ಬಿರಾದಾರ, ವಿಜಯಕುಮಾರ ಪಾಟೀಲ, ಲಿಂಗಶೆಟ್ಟಿ ಜಮಾದಾರ, ಶರಣಪ್ಪ ಬಿರಾದಾರ ಮತ್ತಿತರರು ಹಾಜರಿದ್ದರು.



ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಿ, ಶಿಕ್ಷಣ ಕೊಡಿಸಿ

ಯಲಬುರ್ಗಾ: ಪ್ರತಿಯೊಬ್ಬ ಪಾಲಕರು ತಮ್ಮ ಮಕ್ಕಳನ್ನು ಸರಕಾರಿ ಶಾಲೆಯಲ್ಲಿ ದಾಖಲಾತಿ ಮಾಡಿಸುವ ಮೂಲಕ ಗುಣಮಟ್ಟ ಸಿಕ್ಷಣ ಕೊಡಿಸುತ್ತ ಗಮನಹರಿಸಬೇಕು ಎಂದು ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಯ ಯಮನವ್ವ ಕಿನ್ನಾಳ ಹೇಳಿದರು.

ಪಟ್ಟಣದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಶಾಲೆಯ ಶಿಕ್ಷಕ ವರ್ಗದವರು ತಮ್ಮ ಸ್ವಂತ ಹಣದಿಂದ ಎಲ್ಲಾ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಬ್ಯಾಗ್, ನೋಟ್ ಬುಕ್ಸ್, ಪೆನ್ ಗಳನ್ನು ವಿತರಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳಿಗೆ ಉಚಿತವಾಗಿ ಕ್ಷೀರ ಭಾಗ್ಯ, ಬಿಸಿಯೂಟ,ಸಮವಸ್ತ್ರ,ಶೂ,ಸಾಕ್ಸ್, ಮೊಟ್ಟೆ ಸೇರಿದಂತೆ ಹತ್ತು ಹಲವಾರು ಯೋಜನೆಗಳನ್ನು ನೀಡುತ್ತಿದೆ ಎಂದರು.

ಖಾಸಗಿ ಶಾಲೆಗಳಲ್ಲಿ ದೊರೆಯುವ ಸೌಲಭ್ಯಗಳಿಗಿಂತಲೂ ಹೆಚ್ಚು ಸರಕಾರಿ ಶಾಲೆಗಳಲ್ಲಿ ದೊರೆಯುತ್ತಿವೆ.ಪಾಲಕರು ತಮ್ಮ ಮಕ್ಕಳನ್ನು ಯಾವುದೇ ಖಾಸಗಿ ಶಾಲೆಗಳಿಗೆ ಸೇರಿಸದೆ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟ ಶಿಕ್ಷಣ,ಕನ್ನಡ,ಇಂಗ್ಲಿಷ್ ಭೋದನಾ ಮಾಧ್ಯಮ ಶಿಕ್ಷಣವನ್ನು ಕೊಡಿಸುವ ಕಾರ್ಯಕ್ಕೆ ಅಣಿಯಾಗಬೇಕು ಜತೆಗೆ ನಮ್ಮ ಶಾಲೆಯ ವಿದ್ಯಾರ್ಥಿಗಳ ಪ್ರೋತ್ಸಾಹ, ಗುಣಮಟ್ಟದ ಶಿಕ್ಷಣಕ್ಕಾಗಿ ನಮ್ಮ ಶಾಲೆಯ ಎಲ್ಲಾ ಶಿಕ್ಷಕ ವರ್ಗದವರು ಸೇರಿ ನಮ್ಮ ಸ್ವಂತ ಹಣದಿಂದ ಬ್ಯಾಗ್, ನೋಟ್ ಬುಕ್ಸ್, ಪೆನ್ನುಗಳನ್ನು ಖರೀದಿಸಿ ಸುಮಾರು 38ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿತರಿಸುತ್ತಿರುವುದು ನಮಗೆ ಸಂತಸ ತಂದಿದ್ದು ಇದರ ಸದುಪಯೋಗವನ್ನು ಪಡೆದುಕೊಂಡು ವಿದ್ಯಾರ್ಥಿಗಳು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಹೇಳಿದರು.

ಶಾಲೆಯ ಶಿಕ್ಷಕಿ ಸಹನಾಜ ಬೇಗಂ ಹಾಗೂ ನಿವೃತ್ತ ಶಿಕ್ಷಕ ಅಸೋಕ ಮಾಲಿಪಾಟೀಲ ಮಾತನಾಡಿದರ. ಶಿಕ್ಷಕಿಯರಾದ ಫರಹೀನ ನಿಶಾತ, ಆರೀಫಾ ಬೇಗಂ ಮತ್ತಿತರರು ಇದ್ದರು.



ಪ್ರತಿಭೆಗಳಿಗೆ ಗೌರವ, ಸಾಧಕರಿಗೆ ಸನ್ಮಾನ



ಹನುಮಸಾಗರ: ಪಟ್ಟಣದಲ್ಲಿ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡುವ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಸನ್ಮಾನಿಸುವ ಉದ್ದೇಶದಿಂದ ದೇವಾಂಗ ಸಮಾಜದ ನೌಕರರ ಸಂಘ, ಜಿಲ್ಲಾ ಸಮಿತಿ, ತಾಲೂಕು ಸಮಿತಿ ಹಾಗೂ ಹನುಮಸಾಗರ ದೇವಾಂಗ ಸಮಾಜದ ವತಿಯಿಂದ ಆಯೋಜಿಸಲಾಗುತ್ತಿರುವ ಕಾರ್ಯಕ್ರಮದ ಪೂರ್ವಭಾವಿ ಸಭೆ ಪಟ್ಟಣದ ಬನಶಂಕರಿ ದೇವಸ್ಥಾನದಲ್ಲಿ ಜರುಗಿತು.

ದೇವಾಂಗ ಸಮಾಜದ ಅಧ್ಯಕ್ಷ ಶಂಕ್ರಪ್ಪ ಸಿನ್ನೂರ ಮಾತನಾಡಿ, ವಿದ್ಯಾರ್ಥಿಗಳ ಸಾಧನೆ ಗುರುತಿಸಿ ಗೌರವಿಸುವುದರಿಂದ ಅವರಲ್ಲಿ ಆತ್ಮವಿಶ್ವಾಸ ಹೆಚ್ಚುವುದರ ಜೊತೆಗೆ ಇತರರಿಗೂ ಪ್ರೇರಣೆಯಾಗುತ್ತದೆ ಎಂದರು.

ದೇವಾಂಗ ಸಮಾಜದ ಜಿಲ್ಲಾ ಅಧ್ಯಕ್ಷ ಶಿವಶಂಕರ ಚೆನ್ನಿ ಮಾತನಾಡಿ, ಸಮಾಜದ ಅಭಿವೃದ್ಧಿಗೆ ಎಲ್ಲ ಸದಸ್ಯರ ಸಹಭಾಗಿತ್ವ ಅಗತ್ಯವಾಗಿದೆ. ವೈಯಕ್ತಿಕ ಭಿನ್ನಾಭಿಪ್ರಾಯ ಬದಿಗೊತ್ತಿ ಸಮಾಜದ ಹಿತಕ್ಕಾಗಿ ಒಗ್ಗಟ್ಟಿನಿಂದ ಕೆಲಸ ಮಾಡಬೇಕಾಗಿದೆ. ಸಂಘದ ಬಲವೇ ಸಮಾಜದಶಕ್ತಿ ಎಂಬುದನ್ನು ಎಲ್ಲರೂ ಮನಗಾಣಬೇಕು ಎಂದರು.

ಸಭೆಯಲ್ಲಿ ರುದ್ರಮುನಿಸ್ವಾಮಿ ದೇವಾಂಗಮಠ, ನಾರಾಯಣಪ್ಪ ಕೊಳ್ಳಿ, ಉಮಾಪತಿ ಮಾಗಿ, ಹನುಮಂತ ಚಳಗೇರಿ, ಶಶಿಧರ ಸಕ್ರಿ, ಪ್ರಲ್ಹಾದಗೌಡ ಮೆದಿಕೇರಿ, ಮಂತ ಬಾದಾ, ಶಂಕರ ಸಕ್ರಿ, ರಾಮನಗೌಡ ಬಿಜ್ಜಲ, ಮಹೇಶ ಕಾಳಗಿ, ಶಿವಾನಂದ ತಿಮ್ಮಾಪೂರ, ಸುರೇಶ ಸಿನ್ನೂರ, ಶ್ರೀನಿವಾಸ ಕಂಟ್ಲಿ, ಶಂಕ್ರಪ್ಪ ಸಪ್ಪಂಡಿ, ಮಹೇಶ ಸಿನ್ನೂರ, ಮಂಜುನಾಥ ಸಿನ್ನೂರ, ಶಂಕರ ಹುಲಮನಿ, ವಸಂತ ಸಿನ್ನೂರ ಹಾಗೂ ಏಕನಾಥ ಮೆದಿಕೇರಿ ಸೇರಿದಂತೆ ಸಮಾಜದ ಮುಖಂಡರು, ಪದಾಧಿಕಾರಿಗಳು ಮತ್ತು ಸದಸ್ಯರು ಭಾಗವಹಿಸಿದ್ದರು.

ಕಸ ಪ್ರತ್ಯೇಕಿಸಿ ಪುರಸಭೆ ವಾಹನಕ್ಕೆ ನೀಡಿ

ಕುಷ್ಟಗಿ: ಜಿಲ್ಲಾ ಆಡಳಿತ, ಜಿಲ್ಲಾ ನಗರಾಭಿವೃದ್ಧಿ ಕೋಶ, ಪುರಸಭೆ ಕುಷ್ಟಗಿ ಇವರುಗಳ ಸಹಯೋಗದೊಂದಿಗೆ ಇಲ್ಲಿನ ಬುತ್ತಿಬಸವೇಶ್ವರ ಶಾಲೆಯಲ್ಲಿ ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ ಕುರಿತು ಮಾಹಿತಿ ನೀಡಲಾಯಿತು.

ಹಸಿ ಕಸ ಒಣ ಕಸ ಹೀಗೆ ಮನೆಯಲ್ಲಿ ಇರುವ ಕಸವನ್ನು ಪ್ರತ್ಯೇಕಿಸಿ ಪುರಸಭೆ ಕಸದ ವಾಹನಕ್ಕೆ ಹಾಕಬೇಕು. ಎಲ್ಲಂದರಲ್ಲಿ ಕಸವನ್ನು ಚೆಲ್ಲುವದರಿಂದ ನಮ್ಮ ಸುತ್ತಮುತ್ತಲಿನ ಪರಿಸರದ ಜೊತೆಗೆ ನಮ್ಮ ಆರೋಗ್ಯಕ್ಕೆ ಮಾರಕವಾಗುತ್ತದೆ ಎಂದು ತರಬೇತುದಾರ ಸಮುದಾಯದ ಸಂಚಾಲಕ ಶಂಕ್ರಮ್ಮ ಹಿರೇಮಠ ಮಾಹಿತಿ ನೀಡಿದರು.

ತ್ಯಾಜ್ಯ ನಿರ್ವಹಣೆ ಕುರಿತು ಪುರಸಭೆ ಮುಖ್ಯಾಧಿಕಾರಿ ವೆಂಕಪ್ಪ ಬೀಳಗಿ, ನೈರ್ಮಲ್ಯ ಅಧಿಕಾರಿ ಪ್ರಾಣೇಶ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಈ ವೇಳೆ ಸಂಪನ್ಮೂಲ ವ್ಯಕ್ತಿಗಳಿಂದ ಪ್ರಾತ್ಯಕ್ಷಿಕೆ ನೀಡಿದರು. ಶ್ರೀದೇವಿ ತಗ್ಗಿನ ಮನಿ, ಮಾಲಾ ಬಾನು, ಸಂಗೀತಾ ಹಿರೇಮನಿ ಭಾಗವಹಿಸಿದ್ದರು.

ಬುತ್ತಿಬಸವೇಶ್ವರ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ಉಮೇಶ ಹಿರೇಮಠ, ಸಂಗಮೇಶ ಇಲಚಿ, ಸುರೇಶ ಕೊರವರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಗೆ ಮನವರಿಕೆ ರೀತಿಯಲ್ಲಿ ಈ ಕಾರ್ಯಕ್ರಮ ಆಯೋಜಿಸುವ ಮೂಲಕ ಯಶಸ್ವಿಯಾಗಿ ನಡೆಸಿಕೊಟ್ಟರು.



ಎಂ.ಆರ್.ವೈದ್ಯಕೀಯ ಕಾಲೇಜ್ ಘಟಿಕೋತ್ಸವ ಇಂದು: ನಮೋಶಿ

ಕಲಬುರಗಿ: ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹದೇವಪ್ಪ ರಾಂಪುರೆ ವೈದ್ಯಕೀಯ ಮಹಾವಿದ್ಯಾಲಯ (ಎಂ.ಆರ್. ಮೆಡಿಕಲ್ ಕಾಲೇಜ್) 2020ನೇ ಸಾಲಿನ ಉತ್ಕರ್ಷ್ ಬ್ಯಾಚ್ ವತಿಯಿಂದ ಅಧ್ಯಾಯ ಘಟಿಕೋತ್ಸವ ಸಮಾರಂಭ ಜೂ.27ರಂದು ಸಂಜೆ 5ಕ್ಕೆ ನಗರದ ಸೇಡಂ ರಸ್ತೆಯಲ್ಲಿರುವ ಚಂದ್ರಶೇಖರ ಪಾಟೀಲ ಸ್ಮಾರಕ ಬಾಲಕರ ವಸತಿ ನಿಲಯದ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಎಚ್‌ಕೆಇ ಸಂಸ್ಥೆಯ ಅಧ್ಯಕ್ಷ ಹಾಗೂ ವಿಪ ಸದಸ್ಯ ಡಾ.ಶಶೀಲ್ ಜಿ.ನಮೋಶಿ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೈದ್ಯಕೀಯ ಶಿಕ್ಷಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳ ಜೀವನದಲ್ಲಿ ಘಟಿಕೋತ್ಸವವು ಮಹತ್ವದ ಘಟ್ಟವಾಗಿದ್ದು, ಈ ಕಾರ್ಯಕ್ರಮದಲ್ಲಿ ಪದವೀಧರರನ್ನು ಸನ್ಮಾನಿಸಿ ಶುಭ ಹಾರೈಸಲಾಗುವುದು ಎಂದರು.



12 ಜನರಿಗೆ ಚಿನ್ನದ ಪದಕ

ಘಟಿಕೋತ್ಸವದಲ್ಲಿ 140 ಜನ ಪದವಿಧರರಿಗೆ ಸರ್ಟಿಫಿಕೇಟ್ ನೀಡಲಾಗುತ್ತಿದೆ. 12 ಜನ ಚಿನ್ನದ ಪದಕ ಸ್ವೀಕರಿಸಲಿದ್ದಾರೆ. ಕಳೆದ ಎಪ್ರಿಲ್-2026ರಲ್ಲಿ ನಡೆದ ಪರೀಕ್ಷೆಯಲ್ಲಿ ಶೇಕಡಾ ಸಂಸ್ಥೆಯ ಶೇಕಡಾ 95.48 ಜನ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು,73 ವಿದ್ಯಾರ್ಥಿಗಳು ಫಸ್ಟ್ ಕ್ಲಾಸಲ್ಲಿ ಪಾಸಾಗಿದ್ದಾರೆ. ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಇಂದು ವಿಶ್ವದ ಅನೇಕ ಭಾಗಗಳಲ್ಲಿ ತಮ್ಮ ಯಶಸ್ವಿ ವೈದ್ಯಕೀಯ ಜೊತೆಗೆ ಇತರೆ ಸೇವೆ ನೀಡುತ್ತಿದ್ದಾರೆ ಎಂದರು.

ಮುಖ್ಯ ಅತಿಥಿಯಾಗಿ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವ ಡಾ.ಶರಣಪ್ರಕಾಶ ರುದ್ರಪ್ಪ ಪಾಟೀಲ ಭಾಗವಹಿಸಲಿದ್ದಾರೆ. ವಿಶೇಷ ಅತಿಥಿಯಾಗಿ ಕಲಬುರಗಿ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಉಪಸ್ಥಿತರಿರಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾವೇ ವಹಿಸಲಿದ್ದಾರೆ.

ಎಚ್‌ಕೆಇ ಸಂಸ್ಥೆ ಉಪಾಧ್ಯಕ್ಷ ರಾಜಾ ಬಿ.ಭೀಮಳ್ಳಿ, ಕಾರ್ಯದರ್ಶಿ ಉದಯಕುಮಾರ ಎಸ್.ಚಿಂಚೋಳಿ, ಜಂಟಿ ಕಾರ್ಯದರ್ಶಿ ಡಾ.ಕೈಲಾಶ ಬಿ.ಪಾಟೀಲ, ಎಂಆರ್‌ಎಂಸಿ ಮತ್ತು ಜಿಸಿಎಂ ಸಂಚಾಲಕ ಡಾ.ಶರಣಬಸಪ್ಪ ಆರ್.ಹರವಾಳ, ಬಿಟಿಜಿಎಚ್ ಮತ್ತು ಜಿಸಿಎಂ ಸಂಚಾಲಕ ಡಾ.ಕಿರಣ್ ಎ.ದೇಶಮುಖ್ ಸೇರಿದಂತೆ ಹಲವರು ಗೌರವ ಅತಿಥಿಗಳಾಗಿ ಭಾಗವಹಿಸಲಿದ್ದು, ಎಂ.ಆರ್. ಮೆಡಿಕಲ್ ಕಾಲೇಜಿನ ಡೀನ್, ಉಪಡೀನ್, ಅಧ್ಯಾಪಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದು, ಘಟಿಕೋತ್ಸವ ಸಮಾರಂಭವನ್ನು ಯಶಸ್ಸಿಗೊಳಿಸಲು ಅಗತ್ಯ ಸಿದ್ಧತೆ ಕೈಗೊಳ್ಳಲಾಗಿದೆ ಎಂದರು.

> ನಮ್ಮಲ್ಲಿ ಫಿಸಿಯೋಥೆರಪಿ 60 ಸೀಟ್ ಲಭ್ಯವಿದೆ. ಅಲೈಡ್ ಹೆಲ್ತ್ ಸೈನ್ಸ್‌ಗೆ 6 ಬ್ರ್ಯಾಂಚ್ ತೆಗೆದುಕೊಳ್ಳಲಾಗಿದೆ. 2025ರಲ್ಲಿ 26 ಪಿಜಿ ಸೇರಿಸಲಾಗಿದ್ದು, 50 ಸೀಟ್ ಎಂಬಿಬಿಎಸ್, 19ಪಿಜಿಗಾಗಿ ಪ್ರೋಸೆಸ್ ನಡೆಸಲಾಗಿದೆ. ಒಟ್ಟಿನಲ್ಲಿ ಮುಂಬರುವ ದಿನಗಳಲ್ಲಿ 250 ಸೀಟ್ ಹೆಚ್ಚಾಗುವ ನಿರೀಕ್ಷೆಗಳಿವೆ.
>
> ■ ಶಶೀಲ್ ನಮೋಶಿ, ಕಲಬುರಗಿ ಎಚ್‌ಕೆಇ ಅಧ್ಯಕ್ಷ

ಕರಾಳ ದಿನ ಆಚರಣೆ: ಸನ್ಮಾನ

ಕೊಪ್ಪಳ: ಕಾಂಗ್ರೆಸ್ ಹೇರಿದ ತುರ್ತು ಪರಿಸ್ಥಿತಿಯ ಕರಾಳ ಅಧ್ಯಾಯಕ್ಕೆ 51 ವರ್ಷ ಹಿನ್ನೆಲೆ ಕೊಪ್ಪಳ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಕಾರ್ಯಕ್ರಮ ಜರುಗಿತು.

ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಜೈಲು ವಾಸ ಅನುಭವಿಸಿದ ನರೇಶ ನಾಗಡ, ನೀಲಕಂಠಯ್ಯ ಹಿರೇಮಠ, ದತ್ತಣ್ಣ ಪದಕಿ, ಪಿರಹುಸೇನ್ ಹೊಸಳ್ಳಿ ಅವರಿಗೆ ಸನ್ಮಾನಿಸಲಾಯಿತು.

ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ನವೀನ್ ಗುಳಗಣ್ಣವರ್, ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ್ ಸನ್ಮಾನಿಸಿ ಮಾತನಾಡಿದರು.

ಈ ವೇಳೆ ವಕೀಲ ಕಣಿವಿ ಬೂಸನೂರ್ ಮಠ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ ಹೆಸರು ಶಿವಕುಮಾರ ಆರಿಕೇರಿ ರಾಜ್ಯ ಮಹಿಳಾ ಮೋರ್ಚಾ ಕಾರ್ಯಕಾರಣಿ ಸದಸ್ಯೆ ವಾಣಿಶ್ರೀ ಮಠದ, ಜಿಲ್ಲಾ ಉಪಾಧ್ಯಕ್ಷ ಗೀತಾ ಮುತ್ತಾಳ, ಲಲಿತ ನಾಗರಾಜ, ರೈತ ಮೋರ್ಚಾ ಅಧ್ಯಕ್ಷ ಅಶೋಕ ಗುಡದಹಳ್ಳಿ, ನಗರ ಮಹಿಳಾ ಮೋರ್ಚಾ ಅಧ್ಯಕ್ಷ ಜಯಶ್ರೀ ಗೊಂಡಬಾಳ, ವೀಣಾ ಬನ್ನಿಗೋಳ, ಮಹಾಲಕ್ಷ್ಮಿ ಕಂದಾರಿ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಮೌನೇಶ ದಡೇಸುಗೂರ, ಪಕ್ಷದ ಮುಖಂಡರು, ವಿವಿಧ ಮೋರ್ಚಗಳ ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.



ಎ.ವಸಂತಕುಮಾರಗೆ ಸಚಿವ ಸ್ಥಾನ ನೀಡಿ



ರಾಯಚೂರು: ಮಾದಿಗ ಸಮಾಜದ ಮುಖಂಡ ಹಾಗೂ ವಿಧಾನಪರಿಷತ್ ಸದಸ್ಯ ಆಗಿರುವ ಎ.ವಸಂತಕುಮಾರ ಅವರಿಗೆ ಸಚಿವ ಸ್ಥಾನವನ್ನು ನೀಡಬೇಕೆಂದು ಮಾದಿಗ ಚನ್ನಯ್ಯ ಸೇವಾ ಸಮಿತಿಯ ಜಿಲ್ಲಾಧ್ಯಕ್ಷ ಜೆ.ಎಂ.ಮೌನೇಶ ಕಾಂಗ್ರೆಸ್ ಹೈಕಮಾಂಡನ್ನು ಆಗ್ರಹಿಸಿದರು.

ಶುಕ್ರವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಎ.ವಸಂತಕುಮಾರ ಅವರ ತಂದೆಯವರ ಕಾಲದಿಂದಲೂ ಪಕ್ಷಕ್ಕಾಗಿ ದುಡಿದಿದ್ದಾರೆ. ಇವರ ತಂದೆ ದಶಕಗಳ ಕಾಲ ಜಿಲ್ಲಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ನಗರಸಭೆ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ. ಎ.ವಸಂತಕುಮಾರ ಅವರು ಸಹ ದಶಕಗಳ ಕಾಲ ಜಿಲ್ಲಾಧ್ಯಕ್ಷರಾಗಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ, ವಿಧಾನಪರಿಷತ್ ಸದಸ್ಯರಾಗಿ ಜನಪರ ಕೆಲಸವನ್ನು ಮಾಡಿದ್ದಾರೆ ಇವರಿಗೆ ಸಚಿವ ಸ್ಥಾನವನ್ನು ನೀಡುವುದರಿಂದ ಜಿಲ್ಲೆಯ ಪ್ರಗತಿಗೆ ಸಹಕಾರಿಯಾಗಲಿದೆ ಎಂದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಳೆದ ಮೂರು ದಶಕಗಳಿಂದ ಮಾದಿಗ ಸಮುದಾಯಕ್ಕೆ ಸಚಿವ ಸ್ಥಾನ ದೊರೆತಿಲ್ಲ. 1990ರಲ್ಲಿ ಕಲಬುರಗಿಯ ರಾಮಕೃಷ್ಣ ಅವರು ಈ ಸಮುದಾಯದಿಂದ ಸಚಿವರಾಗಿದ್ದರು ಅಂದಿನಿಂದ ಇಲ್ಲಿಯವರೆಗೆ ಈ ಭಾಗದಲ್ಲಿನ ಮಾದಿಗ ಸಮುದಾಯದವರು ಸಚಿವರಾಗಿಲ್ಲ ಹೀಗಾಗಿ ಎ.ವಸಂತಕುಮಾರ ಅವರಿಗೆ ಸಚಿವ ಸ್ಥಾನವನ್ನು ನೀಡಬೇಕೆಂದರು.

ಸುದ್ದಿಗೋಷ್ಠಿಯಲ್ಲಿ ಭೀಮಣ್ಣ ಮಂಚಲ, ರಮೇಶ.ಆರ್., ಶಿವು ಭಂಡಾರಿ, ಅನೀಲಕಾಂತ ಭಂಡಾರಿ, ಶಂಕರಬಾಬು ಸೇರಿದಂತೆ ಇತರರಿದ್ದರು.

ಕಿರುಸುದ್ದಿ

ಮೊಹರಂ ಸಂಪನ್ನ

ಸುರಪುರ: ತಾಲೂಕಿನ ಕುರುಬನ ತಳ್ಳಳ್ಳಿ ಗ್ರಾಮದ ಆರಾಧ್ಯ ದೈವ ಹಿಂದೂ ಮುಸ್ಲಿಂ ಭಾವೈಕ್ಯತೆಯ ಮೊಹರಂ ಹಬ್ಬದ ನಿಮಿತ್ತ ಶುಕ್ರವಾರ ಮೊಹರಂ ಕೊನೆ ದಿನದ ಅಂಗವಾಗಿ ಅಲಾಯಿ ದೇವರುಗಳ ದಫನ್ ಕಾರ್ಯ ಸಂಪನ್ನಗೊಂಡಿತು.

ಸಾವಿರಾರು ಭಕ್ತರು ಜಯಘೋಷದ ಮಧ್ಯೆ ಸಂಜೆ ಗ್ರಾಮದ ಹೊರವಲಯದ ಹಿರೇ ಹಳ್ಳದ ದಡದಲ್ಲಿ ಅಲಾಯಿ ದೇವರುಗಳ ದಫನ್ ಕಾರ್ಯ ಮಾಡಲಾಯಿತು. ಗುರುವಾರ ಕತಲ್ ರಾತ್ರಿ ನಿಮಿತ್ತ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಶುಕ್ರವಾರ ಬೆಳಗಿನ ಜಾವ ದೇವರ ಗಂಗಸ್ಥಳದ ನಂತರ ಸಕಲ ದೈವದ ಮಧ್ಯೆ ದೇವರ ಅಗ್ನಿ ತುಳಿಯುವ ಕಾರ್ಯಕ್ರಮ ಹಾಗೂ ಗ್ರಾಮದ ಪ್ರಮುಖ ಬೀದಿಗಳಲ್ಲಿ ಅಲಾಯಿ ದೇವರ ಸವಾರಿ ಮೆರವಣಿಗೆ ಜರುಗಿತು. ಈ ವೇಳೆ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ಹಾಗೂ ಕೆ. ತಳ್ಳಳ್ಳಿ ಗ್ರಾಮದ ಸರ್ವರೂ ಉಪಸ್ಥಿತರಿದ್ದರು.

ಮೊಹರಂ: ಇರಾನಿ ಮುಸ್ಲಿಂರಿಂದ ಶೋಕಾಚರಣೆ



ವಿಜಯನಗರ: ಕರ್ಬಲಾ ಕದನದಲ್ಲಿ ತಮ್ಮ ಪ್ರಾಣವನ್ನೇ ಬಲಿದಾನ ನೀಡಿದ ಹಸನ್-ಹುಸೈನ್‌ರ ತ್ಯಾಗ ಸ್ಮರಿಸಿ ಹೊಸಪೇಟೆಯ ಚಿತ್ತವಾಡಗಿಯಲ್ಲಿ ಇರಾನಿ ಮುಸ್ಲಿಮರು ಶೋಕಾಚರಣೆ ನಡೆಸಿದರು. ಇರಾನಿ ಮುಸ್ಲಿಮರು ನಡೆಸಿದ ಸಂತಾಪ ಮೆರವಣಿಗೆಯಲ್ಲಿ ಭಾರತದ ತ್ರಿವರ್ಣ ಹಿಡಿದು ಸಾಗಿದ್ದು ಗಮನ ಸೆಳೆಯಿತು.

ಮೊಹರಂ ಹಬ್ಬದ ಪ್ರಯುಕ್ತ ಎಲ್ಲೆಡೆ ಶ್ರದ್ಧೆ ಹಾಗೂ ಭಕ್ತಿಯಿಂದ ಪಂಜೆಗಳ ಮೆರವಣಿಗೆ ನಡೆದರೆ, ಇಲ್ಲಿನ ಇರಾನಿ ಮುಸ್ಲಿಂರು ಶೋಕಗೀತೆಗಳೊಂದಿಗೆ ದೇವರ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಖಾಜಾ ನಗರದಿಂದ ಚಿತ್ತವಾಡಗಿಯಲ್ಲಿ ದೇವಸ್ಥಾನ ಸಮೀಪದ ಎಲ್‌ಎಲ್‌ಸಿ ಕಾಲುವೆ ವರೆಗೆ ಸಾಗಿದ ಮೆರವಣಿಗೆಯಲ್ಲಿ ನೂರಾರು ಸಂಖ್ಯೆಯಲ್ಲಿ ಸೇರಿದ್ದ ಮುಸ್ಲಿಂ ಮಹಿಳೆಯರು ದಾರಿಯುದ್ದಕ್ಕೂ ಶೋಕ ಗೀತೆಗಳನ್ನು ಹಾಡುತ್ತಾ, ಕಣ್ಣೀರು ಸುರಿಸಿದರು. ಶೋಕ ಗೀತೆಗಳಿಗೆ ಭಕ್ತಿ ಪರವಶರಾದ ಯುವಕರು ಯಾ ಹುಸೇನ್, ಯಾ ಹುಸೇನ್ ಎಂಬ ಜಯಘೋಷದೊಂದಿಗೆ ಕೈಯಲ್ಲಿ ಹರಿತವಾದ ವಸ್ತುಗಳನ್ನು ಹಿಡಿದುಕೊಂಡು ತಮ್ಮ ಎದೆ ಹಾಗೂ ಬೆನ್ನಿನ ಭಾಗಕ್ಕೆ ಹೊಡೆದುಕೊಂಡು ದೇಹ ದಂಡಿಸಿದರು. ಮೆರವಣಿಗೆ ಸಾಗುವ ಮಾರ್ಗದುದ್ದಕ್ಕೂ ನೆರೆದಿದ್ದ ಜನರು ಇರಾನಿ ಯುವಕರ ಭಕ್ತಿಯನ್ನು ಪರಾಕಾಷ್ಠೆಯನ್ನು ಕಂಡು ಮೂಕವಿಸ್ಮಿತರಾದರು.

ಜಿಲ್ಲೆಯಾದ್ಯಂತ ಮೊಹರಂ ಆಚರಣೆ



ಬಳ್ಳಾರಿ: ನಗರ ಸೇರಿದಂತೆ ಜಿಲ್ಲೆಯಾದ್ಯಂತ ಶುಕ್ರವಾರ ಮೊಹರಂ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಸಮೀಪದಲ್ಲಿ ಪ್ರತಿಷ್ಠಾಪಿಸಿದ ಪೀರಲ ದೇವರ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿ, ಮನೆಯಲ್ಲಿ ಸಿದ್ಧಪಡಿಸಿದ ನೈವೇದ್ಯ ಸಮರ್ಪಿಸಿದರು. ನಗರಕ್ಕಿಂತ ಗ್ರಾಮೀಣ ಭಾಗದಲ್ಲಿ ಹಬ್ಬದ ಸಡಗರ ಸಂಭ್ರಮ ಮನೆ ಮಾಡಿರುವುದು ಕಂಡು ಬಂತು. ನಗರದ ಪಿಂಜಾರ ವಾಡಿ ಪ್ರದೇಶದಲ್ಲಿ ಹಿಂದೂ ಮುಸ್ಲಿಂ ಬಾಂಧವರು ಸೇರಿ ಮೊಹರಂ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿ, ಭಾವೈಕ್ಯತೆ ಮೆರೆದರು. ನಗರದ ಕಮಿಂಗ್ ರಸ್ತೆಯ ಪುರಾತನ ಕಾಲದ ಪಂಜೆ ಅಶ್ಯಾನಕ್ಕೆ ರಾಜ್ಯಸಭಾ ಸದಸ್ಯ ಡಾ.ಸೈಯದ್ ನಾಸಿರ್ ಹುಸೇನ್, ಎಸ್. ಬೋರ್ಡ್ ಅಧ್ಯಕ್ಷ, ಬುಡಾ ಮಾಜಿ ಅಧ್ಯಕ್ಷ ಹುಮಾಯೂನ್ ಖಾನ್ ಸೇರಿದಂತೆ ಅನೇಕ ಗಣ್ಯರು ತೆರಳಿ ಪೀರಲ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ದೇವರಲ್ಲಿ ಪ್ರಾರ್ಥಿಸಿದರು. ಸುಣ್ಣ ಬಣ್ಣ ಬಳಿದು, ವಿದ್ಯುತ್ ದೀಪಾಲಂಕಾರ, ಹೂವಿನ ಅಲಂಕಾರ ಮಾಡಲಾಗಿತ್ತು. ಚಾವಡಿಯ ಮುಂದೆ ಅಗ್ನಿಕುಂಡ ಮಾಡಲಾಗಿತ್ತು. ತಮಟೆಗಳ ಹೆಜ್ಜೆಗೆ ಭಕ್ತರು ಕುಣಿದು ಕುಪ್ಪಳಿಸಿ ಭಕ್ತಿ ಸಮರ್ಪಿಸಿದರು. ಯುವಕರು, ಭಕ್ತರು ಅಗ್ನಿಕುಂಡದ ಸುತ್ತಲೂ ಹೆಜ್ಜೆ ಹಾಕಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.



ಸುರಪುರ: ತಾಲೂಕಿನ ಕುರುಬನ ತಳ್ಳಳ್ಳಿ ಗ್ರಾಮದ ಆರಾಧ್ಯ ದೈವ ಹಿಂದೂ ಮುಸ್ಲಿಂ ಭಾವೈಕ್ಯತೆಯ ಮೊಹರಂ ಹಬ್ಬದ ನಿಮಿತ್ತ ಶುಕ್ರವಾರ ಮೊಹರಂ ಕೊನೆ ದಿನದ ಅಂಗವಾಗಿ ಅಲಾಯಿ ದೇವರುಗಳ ದಫನ್ ಕಾರ್ಯ ಸಂಪನ್ನಗೊಂಡಿತು.

ಭಾವೈಕ್ಯತೆಯೊಂದಿಗೆ ಮೊಹರಂ ಹಬ್ಬಕ್ಕೆ ತೆರೆ

ಹಗರಿಬೊಮ್ಮನಹಳ್ಳಿ: ಹಿಂದೂ-ಮುಸ್ಲಿಂ ಬಾಂಧವರ ಭಾವೈಕ್ಯತೆ ಸಾರುವ ಮೊಹರಂ ಹಬ್ಬಕ್ಕೆ ಪೀರಾಲ ದೇವರುಗಳ ಮೆರವಣಿಗೆ ಮೂಲಕ ತೆರೆ ಎಳೆಯಲಾಯಿತು.

ಮೊಹರಂ ಹಬ್ಬದ ಕೊನೆಯ ದಿನವಾದ ಶುಕ್ರವಾರದಂದು ಮೊಹರಂ ಹಬ್ಬದ ಕೊನೆಯ ದಿನ ನೆಡೆದ ಡೋಲಿ ಉತ್ಸವದ ಅಂಗವಾಗಿ ತಾಲೂಕಿನ ಮಾಲವಿ ಗ್ರಾಮದ ಯಮನೂರು ಸ್ವಾಮಿ ಮಸೀದಿಯಲ್ಲಿ ಗ್ರಾಮದ ಮುಸ್ಲಿಂ ಬಾಂಧವರರಿಂದ ಡೋಲಿಯಲ್ಲಿ ಪೀರಾಲ ದೇವರ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಡೋಲಿಯನ್ನು ಅಲಂಕರಿಸಲಾಗಿತ್ತು. ಸಂಜೆ ವಿವಿಧ ವಾದ್ಯ-ಮೇಳದೊಂದಿಗೆ ಹಿಂದೂ ಮುಸ್ಲಿಂರ ಅಪಾರ ಜನಸ್ತೋಮದ ಮಧ್ಯೆ ಅದ್ದೂರಿಯಾಗಿ ನಡೆಯಿತು. ಈ ವೇಳೆ ಮುಸ್ಲಿಂ ಸಮಾಜದ ಮುಖಂಡ ಅಜೀಜ್ ಸಾಬ್ ಮಾತನಾಡಿ, ಮಾಲವಿ ಗ್ರಾಮದಲ್ಲಿ ಮೊಹರಂ ಹಬ್ಬವನ್ನು ಹಿಂದೂ-ಮುಸ್ಲಿಂ ಬಾಂಧವರ ಎಲ್ಲರೂ ಸೇರಿ ಶಾಂತಿ ಸೌಹಾರ್ದತೆಯಿಂದ ಪ್ರತಿವರ್ಷ ಆಚರಿಸುತ್ತಾ ಬಂದಿದ್ದೇವೆ ಎಂದರು. ಪ್ರತಿ ವರ್ಷದಂತೆ ಮೋಹರಂ ಹಬ್ಬದ ಕೊನೆಯ ದಿನ ಗ್ರಾಮಸ್ಥರ ಸಹಕಾರದಿಂದ ಪೀರಾಲ ದೇವರ ಡೋಲಿ ಉತ್ಸವ ನಡೆದಿದೆ ಎಂದು ಚಿಲಕನಹಟ್ಟಿ ರೈಮಾನ್ ಸಾಬ್ ತಿಳಿಸಿದರು.

ಯುವ ಮುಖಂಡ ಟಿಪ್ಪು ಸುಲ್ತಾನ್ ಮಾತನಾಡಿದರು. ಇಮಾಮ್ ಸಾಬ್, ಜಾಫರ್ ಸಾಬ್, ಮುಜೀಬ್, ಸುಭಾನ್, ಹಸನ್, ದಾದಾ ಪೀರ್, ಕಲಂದರ್, ಯಮನೂರು, ಪಕ್ಕೀರ ಸಾಬ್, ನಜೀರ್, ಕಾಶಿಂ, ಸುಲ್ತಾನ್ ಸಾಬ್ ಅಲ್ಲಾವುದ್ದೀನ್, ಸೇರಿದಂತೆ ಹಿಂದೂ ಮುಸ್ಲಿಂ ಸಮಾಜದ ಸುತ್ತಮುತ್ತಲಿನ ಗ್ರಾಮಗಳ ನಾಗರಿಕರು, ಮಕ್ಕಳು ಪಾಲ್ಗೊಂಡಿದ್ದರು.



ಹಗರಿಬೊಮ್ಮನಹಳ್ಳಿ: ಹಿಂದೂ-ಮುಸ್ಲಿಂ ಬಾಂಧವರ ಭಾವೈಕ್ಯತೆ ಸಾರುವ ಮೊಹರಂ ಹಬ್ಬಕ್ಕೆ ಪೀರಾಲ ದೇವರುಗಳ ಮೆರವಣಿಗೆ ಮೂಲಕ ತೆರೆ ಎಳೆಯಲಾಯಿತು.

ಜಿಪಂ ಸಿಇಒ ಮಹಮ್ಮದ್ ಹಾರೀಸ್ ಸುಮೇರ್ ಸೂಚನೆ

ಪ್ರತಿ ಮಗುವಿಗೂ ಪೋಲಿಯೋ ಲಸಿಕೆ ಹಾಕಿ

ಬಳ್ಳಾರಿ: ಪೋಲಿಯೋ ನಿರ್ಮೂಲನೆಯಲ್ಲಿ ಯಾವುದೇ ರೀತಿಯ ನಿರ್ಲಕ್ಷ್ಯ ವಹಿಸುವಂತಿಲ್ಲ, ಗ್ರಾಮೀಣ ಮತ್ತು ನಗರ ಪ್ರದೇಶದ ಪ್ರತಿಯೊಂದು ಮಗುವಿಗೂ ಲಸಿಕೆ ತಲುಪಬೇಕು. ಈ ನಿಟ್ಟಿನಲ್ಲಿ ಎಲ್ಲ ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸ ಮಾಡಬೇಕು ಎಂದು ಜಿಪಂ ಸಿಇಒ ಮಹಮ್ಮದ್ ಹಾರೀಸ್ ಸುಮೇರ್ ಅವರು ಹೇಳಿದರು.

ನಗರದ ನೂತನ ಜಿಲ್ಲಾಡಳಿತ ಭವನದ ವಿಡಿಯೋ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಾದ್ಯಂತ ಇರುವ ಹುಟ್ಟಿನಿಂದ 5 ವರ್ಷದೊಳಗಿನ ಎಲ್ಲ ಮಕ್ಕಳಿಗೂ ತಪ್ಪದೇ ಪೋಲಿಯೋ ಲಸಿಕೆ ಹಾಕಬೇಕು. ವಲಸೆ ಕಾರ್ಮಿಕರ ಮಕ್ಕಳು, ಇಟ್ಟಿಗೆ ಭಟ್ಟಿ, ಕಟ್ಟಡ ನಿರ್ಮಾಣ ಪ್ರದೇಶಗಳು ಮತ್ತು ತೋರಣಗಲ್ಲು ಭಾಗದ ಹೈ-ರಿಸ್ಕ್ ಪ್ರದೇಶಗಳಲ್ಲಿನ ಮಕ್ಕಳು ಬಿಟ್ಟುಹೋಗದಂತೆ 100ಕ್ಕೆ 100ರಷ್ಟು ಪ್ರಗತಿ ಸಾಧಿಸಬೇಕು ಎಂದು ಸೂಚಿಸಿದರು.

ಜೂ.27 ರಂದು ಜಿಲ್ಲೆಯ ಎಲ್ಲ ಶಾಲಾ ಮಕ್ಕಳಿಂದ ಲಸಿಕಾ ಕಾರ್ಯಕ್ರಮದ ಕುರಿತಾಗಿ ಅರಿವು ಜಾಥಾ ಹಮ್ಮಿಕೊಳ್ಳಬೇಕು. ಜೂ. 28 ರಂದು ನಿಗದಿಪಡಿಸಿದ ಬೂತ್‌ಗಳಲ್ಲಿ ಲಸಿಕೆ ಹಾಕಲಾಗುವುದು ಹಾಗೂ ನಂತರದ ದಿನಗಳಲ್ಲಿ ತಂಡಗಳು ಮನೆ ಮನೆಗೆ ಭೇಟಿ ನೀಡಿ ಮಕ್ಕಳಿಗೆ ಪೋಲಿಯೋ ಹನಿ ಹಾಕಲಿವೆ. ಸಾರ್ವಜನಿಕರು ಹಾಗೂ ಪೋಷಕರು ತಮ್ಮ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಹನಿ ಹಾಕಿಸಿ ಅಭಿಯಾನವನ್ನು ಯಶಸ್ವಿಗೊಳಿಸಬೇಕಾಗಿ ತಿಳಿಸಿದರು.

ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ, ಹಾಗೂ ಪ್ರಮುಖ ವೃತ್ತಗಳಲ್ಲಿ ಸಂಚಾರಿ ಲಸಿಕಾ ಕೇಂದ್ರಗಳನ್ನು ನಿಯೋಜಿಸಬೇಕು. ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಮೈಕ್ ಪ್ರಚಾರ, ಬ್ಯಾನರ್‌ಗಳು ಮತ್ತು ಕರಪತ್ರಗಳ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಬೇಕು. ಆರೋಗ್ಯ ಇಲಾಖೆಯೊಂದಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ, ನಗರಸಭೆ/ಪುರಸಭೆ ಹಾಗೂ ಸಾರಿಗೆ ಇಲಾಖೆಗಳು ಜಂಟಿಯಾಗಿ ಕೆಲಸ ಮಾಡಲು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಕಾರ್ಯಪಡೆ ಮತ್ತು ಸಾರಿಗೆ ವ್ಯವಸ್ಥೆ: ಅಭಿಯಾನವನ್ನು ಯಶಸ್ವಿಗೊಳಿಸಲು ಜಿಲ್ಲಾದ್ಯಂತ ಬೃಹತ್ ಸಿಬ್ಬಂದಿ ವರ್ಗವನ್ನು ನಿಯೋಜಿಸಲಾಗಿದೆ. 615 ಮನೆ-ಮನೆ ತಂಡಗಳು, 50 ಟ್ರಾನ್ಸಿಟ್ ತಂಡಗಳು ಮತ್ತು 15 ಮೊಬೈಲ್ ತಂಡಗಳು ಸೇರಿದಂತೆ ಒಟ್ಟು 680 ತಂಡಗಳು ಕಾರ್ಯನಿರ್ವಹಿಸಲಿವೆ. ಲಸಿಕೆ ಹಾಕಲು 1,954 ಲಸಿಕೆದಾರರು ಹಾಗೂ ಅವರ ಮೇಲ್ವಿಚಾರಣೆಗಾಗಿ 188 ಸೂಪರ್‌ವೈಸರ್‌ಗಳನ್ನು ನಿಯೋಜಿಸಲಾಗಿದೆ. ಇಡೀ ಕಾರ್ಯಕ್ರಮದ ಉಸ್ತುವಾರಿಗೆ 4 ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಅಧಿಕಾರಿಗಳಿಂದ ಜಾಗೃತಿ ಭಿತ್ತಿ ಪತ್ರಗಳನ್ನು ಬಿಡುಗಡೆಗೊಳಿಸಲಾಯಿತು.

ಸಭೆಯಲ್ಲಿ ಡಿ ಎಚ್ ಒ ಡಾ.ಯಲ್ಲಾ ರಮೇಶ್ ಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್. ಬಸರೆಡ್ಡಿ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿ ಡಾ.ಆರ್.ಅಬ್ದುಲ್ಲಾ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ ವಿ.ಕೆ., ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ವೀರೇಂದ್ರ ಕುಮಾರ್ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.



1.99 ಲಕ್ಷ ಮಕ್ಕಳಿಗೆ ಲಸಿಕೆ ಹಾಕುವ ಗುರಿ

ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಹನುಮಂತಪ್ಪ ಅವರು ಮಾತನಾಡಿ, ರಾಷ್ಟ್ರೀಯ ಲಸಿಕಾ ದಿನದ ಅಂಗವಾಗಿ ಜೂ.28 ರಿಂದ ಜು. 1, 2026 ರವರೆಗೆ ಜಿಲ್ಲಾದ್ಯಂತ ವ್ಯಾಪಕ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಈ ಬಾರಿಯ ಅಭಿಯಾನದಲ್ಲಿ ಜಿಲ್ಲೆಯಾದ್ಯಂತ ಹುಟ್ಟಿನಿಂದ 5 ವರ್ಷದೊಳಗಿನ ಒಟ್ಟು 1,99,703 ಮಕ್ಕಳಿಗೆ ಪೋಲಿಯೋ ಹನಿಗಳನ್ನು ಹಾಕುವ ಬೃಹತ್ ಗುರಿಯನ್ನು ಹೊಂದಲಾಗಿದೆ ಎಂದು ತಿಳಿಸಿದರು.

ಎಸ್‌ಐಆರ್ ಬಗ್ಗೆ ಮಾಹಿತಿ ನೀಡಿ: ಸಚಿವ ಖಂಡ್ರೆ

ಬೀದರ್: ಮತದಾರರ ಹಕ್ಕು ರಕ್ಷಣೆಗಾಗಿ ಕಾಂಗ್ರೆಸ್ ಕಾರ್ಯಕರ್ತರು ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಜಾಗೃತಿಯಿಂದ ಕೆಲಸ ಮಾಡಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಈಶ್ವರ ಖಂಡ್ರೆ ಕಿವಿಮಾತು ಹೇಳಿದರು.

ಕಾಂಗ್ರೆಸ್ ಜಿಲ್ಲಾ ಘಟಕದ ವತಿಯಿಂದ ನಗರದ ಲಾವಣ್ಯ ಕನ್ವೆನ್ಷನ್ ಹಾಲ್‌ನಲ್ಲಿ ಗುರುವಾರ ಆಯೋಜಿಸಿದ್ದ ಬೀದರ್ ಹಾಗೂ ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಎಸ್‌ಐಆರ್ ಜಾಗೃತಿ ಹಾಗೂ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬೂತ್ ಮಟ್ಟದಲ್ಲಿ ಮನೆ ಮನೆಗೆ ತೆರಳಿ ಎಸ್‌ಐಆರ್ ಪ್ರಕ್ರಿಯೆ ಕುರಿತು ಜನರಿಗೆ ಅಗತ್ಯ ಮಾಹಿತಿ ನೀಡಬೇಕು. ಮತದಾರರೇ ಪ್ರಜಾಪ್ರಭುತ್ವದ ಶಕ್ತಿ ಆಗಿದ್ದು, ಅರ್ಹ ಮತದಾರರ ಹೆಸರು ಬಿಟ್ಟು ಹೋಗದಂತೆ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಿದರು.

ಬಿಎಲ್‌ಒಗಳು ಮನೆ ಮನೆಗೆ ಭೇಟಿ ನೀಡಿದಾಗ ಪಕ್ಷದ ಬಿಎಲ್‌ಎ-2 ಇರಬೇಕು. ಅರ್ಹರ ಹೆಸರು ಕೈಬಿಡದಂತೆ ನೋಡಿಕೊಳ್ಳಬೇಕು ಎಂದು ಸಂಸದ ಸಾಗರ್ ಖಂಡ್ರೆ ತಿಳಿಸಿದರು.

ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ದೋಷರಹಿತ ಮತದಾರರ ಪಟ್ಟಿ ತಯಾರಿಸಬೇಕು. ಕೇಂದ್ರ ಸರ್ಕಾರ ಹಾಗೂ ಚುನಾವಣಾ ಆಯೋಗ ಅರ್ಹ ಮತದಾರರ ಹಕ್ಕುಗಳಿಗೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕು ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ ಹೇಳಿದರು.

ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಬೀದರ್ ಶಾಸಕ ರಹೀಂಖಾನ್, ವಿಧಾನ ಪರಿಷತ್ ಸದಸ್ಯ ಭೀಮರಾವ್ ಪಾಟೀಲ, ಮಾಜಿ ಸಂಸದ ನರಸಿಂಗರಾವ್ ಸೂರ್ಯವಂಶಿ, ವಿಧಾನ ಪರಿಷತ್ ಮಾಜಿ ಸದಸ್ಯರಾದ ವಿಜಯಸಿಂಗ್, ಅರವಿಂದಕುಮಾರ ಅರಳಿ, ಕೆ.ಪುಂಡಲೀಕರಾವ್, ಮುಖಂಡರಾದ ಭೀಮಸೇನರಾವ್ ಸಿಂದೆ, ಜಾನ್ ವೆಸ್ಲಿ, ಅಬ್ದುಲ್ ಮನ್ನಾನ್ ಸೇಠ್, ಸಂಜಯ್ ಜಾಗಿರದಾರ್, ಮಾಲಾ ಬಿ.ನಾರಾಯಣರಾವ್, ಅಮೃತರಾವ್ ಚಿಮಕೋಡೆ, ರಾಜಶ್ರೀ ಸ್ವಾಮಿ, ಮೀನಾಕ್ಷಿ ಸಂಗ್ರಾಮ, ಪಂಡಿತರಾವ್ ಚಿದ್ರಿ, ಕಾಂಗ್ರೆಸ್ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಎಂ.ಎ.ಸಮಿ ಮತ್ತಿತರರು ಇದ್ದರು.

ಕಾಂಗ್ರೆಸ್ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಜಾರ್ಜ್ ಫರ್ನಾಂಡೀಸ್ ನಿರೂಪಿಸಿದರು.



ವೈಮನಸ್ಸು ಬಿಟ್ಟು ಒಗ್ಗಟ್ಟಾಗಿ: ಸವಿತಾ

ಕೊಟ್ಟೂರು: ರಾಜ್ಯದಲ್ಲಿ ಬಹು ಸಂಖ್ಯೆಯಲ್ಲಿರುವ ವೀರಶೈವ ಲಿಂಗಾಯತ ಪಂಚಮಸಾಲಿ ಸಮುದಾಯದಕ್ಕೆ ಇಡೀ ರಾಜ್ಯವನ್ನು ಆಳಬಹುದಾದಷ್ಟು ಶಕ್ತಿ ಹಾಗೂ ಬಲವನ್ನು ಹೊಂದಿದೆ ಎಂದು ಸಂಪನ್ಮೂಲ ವ್ಯಕ್ತಿ ಹಾಗೂ ಪಂಚಮಸಾಲಿ ಮುಖ್ಯಸ್ಥೆ ಹೊಸಪೇಟೆಯ ಸವಿತಾ ರಮೇಶ ಹೇಳಿದರು.

ಪಟ್ಟಣದ ಶ್ರೀ ಮರುಳಸಿದ್ದೇಶ್ವರ ಸಭಾ ಭವನದಲ್ಲಿ ತಾಲೂಕು ವೀರಶೈವ ಲಿಂಗಾಯತ ಪಂಚಮಸಾಲಿ ಸಂಘ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿ, ನಮ್ಮ ಸಮುದಾಯದ ಮುಖಂಡರುಗಳು ವೈಮನಸ್ಸು ಬಿಟ್ಟು ಒಗ್ಗಟ್ಟಾಗಿ ನಡೆಯುವುದು ಅವಶ್ಯವಿದೆ. ಬ್ರಿಟಿಷ್ ಆಡಳಿತ ವಿರುದ್ಧ ಸಮರ ಸಾರಿ ಅವರನ್ನು ನಿದ್ದೆಗೆಡ್ಡಿಸಿದ್ದ ಏಕೈಕ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮಾ ಪಂಚಮಸಾಲಿ ಸಮುದಾಯದವರು ನಾವು ಎಂಬ ಹೆಮ್ಮೆ ನಮಗಿದೆ. ಪ್ರತಿಭಾವಂತ ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಹಿಂದುಳಿದ ಸಹಪಾಠಿಗಳನ್ನು ಸೇರಿಸಿಕೊಂಡು ಓದುವುದಕ್ಕೆ ಮುಂದಾಗಬೇಕು ಎಂದು ಹೇಳಿದರು.

ವೀರಶೈವ ಪತ್ತಿನ ಸಹಕಾರ ಸಂಘದ ನಿರ್ದೇಶಕ ಬಿ.ಪಂಪಾಪತಿ ಮಾತನಾಡಿ, ಸಮುದಾಯದವರ ಸಹಕಾರದಿಂದ ಪತ್ತಿನ ಸಹಕಾರ ಸಂಘ ಇಂದು ಆರ್ಥಿಕವಾಗಿ ಸದೃಢವಾಗಿದೆ. ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು ನಮ್ಮ ಮುಖ್ಯ ಉದ್ದೇಶವಾಗಿದೆ ಎಂದರು.

ಸಹಕಾರ ಸಂಘದ ಅಧ್ಯಕ್ಷ ಕೆ.ವಿವೇಕಾನಂದ ಮಾತನಾಡಿ, ಜೀವ ನೀಡಿ ಸಲುಹಿದ ತಂದೆ ತಾಯಿಯನ್ನು ಯಾರು ಮರೆಯುತ್ತಾರೆಯೋ ಅಂತಹವರು ಜೀವನದಲ್ಲಿ ಮುಂದೆ ಬರಲು ಸಾಧ್ಯವಿಲ್ಲ. ಮಕ್ಕಳು ತಮ್ಮ ತಂದೆತಾಯಿಯವರನ್ನು ಎಂದಿಗೂ ಮರೆಯಬಾರದು ಎಂದರು.

ಪಂಚಮಸಾಲಿ ಸಂಘದ ತಾಲೂಕು ಅಧ್ಯಕ್ಷ ಚಾಪಿ ಚಂದ್ರಪ್ಪ, ಪಂಚಮಸಾಲಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಕಂದಗಲ್ಲು ಮರುಳಸಿದ್ದಪ್ಪ, ಮುಖಂಡ ಎಂ.ಶಿವಣ್ಣ ಮಾತನಾಡಿದರು. ಸಂಘದ ತಾಲೂಕು ಕಾರ್ಯದರ್ಶಿ ಎಚ್.ಅಶೋಕ, ಮುಖಂಡರಾದ ತುಪ್ಪದ ವೀರೇಶ, ಗಾಯತ್ರಿ ಅಶೋಕ, ಎಸ್.ರಾಜಶೇಖರ ಇದ್ದರು.

ಈ ವೇಳೆ ತಾಲೂಕಿನ ಪಂಚಮಸಾಲಿ ಸಮುದಾಯದ ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕ ಪಡೆದ 42, ಪಿಯುಸಿಯ 26 ವಿದ್ಯಾರ್ಥಿಗಳನ್ನು ಹಾಗೂ ಪಂಚಮಸಾಲಿ ನಿವೃತ್ತ ನೌಕರರನ್ನು ಸನ್ಮಾನಿಸಲಾಯಿತು. ಶಿಕ್ಷಕ ಕೋಡಿಹಳ್ಳಿ ಪ್ರಕಾಶ, ಎಂ.ಶಿವಕುಮಾರ ನಿರ್ವಹಿಸಿದರು.



ನಾಟಕ ಪ್ರದರ್ಶನ ಇಂದು



ಬಳ್ಳಾರಿ: ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಜೂ.27ರಂದು ಸಂಜೆ 6.30ಕ್ಕೆ, ಸಂತಕವಿ ಕನಕದಾಸರ ಕುರಿತಮುತ್ತು ಬಂದಿದೆ ಕೇರಿಗೆ ಸಂಗೀತ ನೃತ್ಯ ರೂಪಕ ನಾಟಕ ಪ್ರದರ್ಶನ ನಡೆಯಲಿದೆ. ಪ್ರತಿಯೊಬ್ಬರೂ ಆಗಮಿಸಿ ವೀಕ್ಷಿಸಿ ಯಶಸ್ವಿಗೊಳಿಸಬೇಕು ಎಂದು ಬಳ್ಳಾರಿ ಜಿಲ್ಲಾ ಕುರುಬರ ಸಂಘದ ಜಿಲ್ಲಾಧ್ಯಾಕ್ಷ ಡಾ.ಪಿ.ಎಲ್. ಗಾದಿಲಿಂಗನಗೌಡ ಮನವಿ ಮಾಡಿದರು.

ನಗರದ ಬಳ್ಳಾರಿ ಜಿಲ್ಲಾ ಕುರುಬರ ಸಂಘದ ಜಿಲ್ಲಾ ಕಚೇರಿಯಲ್ಲಿ ಇತ್ತೀಚಿಗೆ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂತಕವಿ ಕನಕದಾಸ ಮತ್ತು ತತ್ವಪದಕಾರರಅಧ್ಯಯನಕೇಂದ್ರದ ಸಹಯೋಗ ಹಾಗೂ ರಂಗಜಂಗಮ ಸಂಸ್ಥೆ ಸಹಕಾರದೊಂದಿಗೆ ಅರ್ಥಪೂರ್ಣವಾದ ಸಂತಕವಿ ಕನಕದಾಸರ ಕುರಿತು ಮತ್ತು ಬಂದಿದೆ ಕೇರಿಗೆ ಸಂಗೀತ ನೃತ್ಯ ರೂಪಕ ನಾಟಕ ಪ್ರದರ್ಶನಕ್ಕೆ

ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಚಾಲನೆ ನೀಡಲಿದ್ದಾರೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯ ಅಧ್ಯಕ್ಷ ಎಚ್.ಎಂ.ರೇವಣ್ಣ, ಸಂತಕವಿ ಕನಕದಾಸರ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷ ಕಾತ ಚಿಕ್ಕಣ್ಣ, ಹಿರಿಯ ರಂಗ ಸಂಘಟಕರು ಶ್ರೀನಿವಾಸ ಜಿ.ಕಪ್ಪಣ, ವಿಎಸ್‌ಕೆ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ಲೋಕೇಶ ವಿ., ಸೇರಿದಂತೆ ಅನೇಕ ಗಣ್ಯರು ಆಗಮಿಸಲಿದ್ದಾರೆ.

ಈವೇಳೆ ಬಳ್ಳಾರಿ ಜಿಲ್ಲಾ ಕುರುಬರ ಸಂಘದ ಜಿಲ್ಲಾ ಮಹಾ ಪ್ರಧಾನ ಕಾರ್ಯದರ್ಶಿ ಕೆ.ಮೋಹನ್, ಜಂಟಿ ಕಾರ್ಯದರ್ಶಿ ಆಂಜನೇಯ ಕೊಲಗಲ್, ಬಿ.ಎಂ.ಪಾಟೀಲ್ ಸೇರಿದಂತೆ ಇತರರಿದ್ದರು.

ಶ್ರದ್ಧಾಭಕ್ತಿಯಿಂದ ಮೊಹರಂ ಆಚರಣೆ

ವಿಜಯನಗರ: ಭಾವೈಕ್ಯತೆಯ ಪ್ರತೀಕವಾದ ಮೊಹರಂ ಹಬ್ಬವನ್ನು ಜಿಲ್ಲೆಯಾದ್ಯಂತ ಶುಕ್ರವಾರ ಹಿಂದೂ- ಮುಸ್ಲಿಮರು ಶ್ರದ್ಧಾ-ಭಕ್ತಿಯಿಂದ ಆಚರಿಸಿದರು.

ಪ್ರವಾದಿ ಮಹಮ್ಮದ್ ಪೈಗಂಬರ್ ಅವರ ಮೊಮ್ಮಕ್ಕಳಾದ ಹಜರತ್ ಹಸನ್- ಹುಸೈನ್ ಅವರ ತ್ಯಾಗ, ಬಲಿದಾನವನ್ನು ಸ್ಮರಿಸಿ, ಭಾವಪೂರ್ಣ ನಮನ ಸಲ್ಲಿಸಿದ್ದರು.

ಮೊಹರಂ ಅಂಗವಾಗಿ ಅನೇಕರು ಯ್ಯೋಮೆ ಅಶುರಾ(ಉಪವಾಸ) ಆಚರಿಸಿದರು. ಕಳೆದ ಐದು ದಿನಗಳಿಂದ ಹಸನ್-ಹುಸೈನ್‌ರ ತ್ಯಾಗ-ಬಲಿದಾನಗಳನ್ನು ಸ್ಮರಿಸುವ ಕಾರ್ಯಕ್ರಮ ನಡೆದವು. ಪಾಂಜಾ ಕೂರಿಸಿದ್ದ ಕಟ್ಟೆಗಳಲ್ಲಿ ಕವಡೆ -ಊದು ಹಾಕಿ, ಹೂವಿನಿಂದ ಅಲಂಕರಿಸಿ ಮಗ್ದುಮ್ ಸಕ್ಕರೆ ಫಾತೆಹಾ ಅರ್ಪಿಸಲಾಯಿತು. ಜ್ಯಾತಿ, ಧರ್ಮದ ಭೇದವಿಲ್ಲದೇ ಹಿರಿ-ಕಿಯರು ಕೈಗೆ ದಾರ ಕಟ್ಟಿಕೊಂಡು ಫಕೀರರಾಗಿ, ಅಚ್ಚೊಳ್ಳಿ ಬಾವಾ, ಹುಲಿ ವೇಷ ಧರಿಸಿ ಭಾವೈಕ್ಯತೆ ಸಾರಿದರು.

ಹೊಸಪೇಟೆ ನಗರದ ರಾಮಲಿ ಪೀರಲದೇವರು ಸೇರಿದಂತೆ, ಚಿತ್ತವಾಡ್ಗಿ, ಅಗಸರ ಓಣಿ, ಅನಂತಶಾಯನ ಗುಡಿ, ಮಲಪನಗುಡಿ, ಕಮಲಾಪುರ ಸೇರಿ ನಾನಾ ಕಡೆ ಮಂಗಳವಾರ ಸಂಜೆ ನಗರದ ಪ್ರಮುಖ ಮಾರ್ಗಗಳಲ್ಲಿ ಪಂಜೆಗಳ ಮೆರವಣಿಗೆ ನಡೆಸಿ, ಊರ ಹೊರ ವಲಯದಲ್ಲಿ ನದಿ, ಕೆರೆ, ಕಾಲುವೆ, ಬಾವಿಗಳಲ್ಲಿ ವಿಸರ್ಜನೆ ಸಂಪ್ರದಾಯ ನಡೆಯಿತು.



ಮೊಹರಂ ಹಬ್ಬ: ಸಂವಿಧಾನ ಓದು ಪುಸ್ತಕ ಬಿಡುಗಡೆ

ಕುರುಗೋಡು: ತಾಲೂಕಿನ ಬಾದನಹಟ್ಟಿ ಗ್ರಾಮದ ಮೊಹರಂ ಹಬ್ಬ ಸರಳ ಹಾಗೇ ವಿಷ್ಟತೆ ಆಚರಣೆ ಗ್ರಾಮದಲ್ಲಿ ಸ್ಪಂದಿಸುವ ವಿಷಯವಾಗಿ ಉಭಯ ಜಿಲ್ಲೆಗೆ ಗಮನದ ಏಕತೆ ಸಾರುವಂತಹ ಮೊಹರಂ ಹಬ್ಬವನ್ನು ಸರಳವಾಗಿ ಆಚರಿಸಲು ಮುಂದಾಗಿರುವ ಬಾದನಹಟ್ಟಿ ಜನತೆಗೆ ಪ್ರಶಂಸಿಸುವ ಹೆಮ್ಮೆಯ ಗಮನಾರ್ಹ ಎಂದು ಯು. ಬಸವರಾಜ ವಿಶ್ವಾಸ ವ್ಯಕ್ತ ಪಡಿಸಿದರು.

ಅವರು ಸಂವಿಧಾನ ಓದು ಪುಸ್ತಕ ಬಿಡುಗಡೆ ಉದ್ಘಾಟಿಸಿ ಮಾತನಾಡಿ, ಸಂವಿಧಾನವು ಎಲ್ಲರಿಗೂ ಸಮಾನತೆ ಜೀವನ ನೀಡಿದೆ. ಹೆಣ್ಣು ಗಂಡು ಬೇಧ ಭಾವ ಮಾಡಬಾರದು, ಜಾತಿ-ಭೇದ ಮಾಡಬಾರದು, ಧರ್ಮ ಬೇರೆ ಮಾಡಬಾರದು ಎಂದು ಸಂವಿಧಾನ ನಮಗೆ ಕಲ್ಪಿಸಿ ಕೊಟ್ಟಿದೆ ಹಾಗಾಗಿ ಎಲ್ಲರೂ ಸಂವಿಧಾನವನ್ನು ಓದಬೇಕು ಜಾಗೃತರಾಗಬೇಕು ಎಂದು ಸಂವಿಧಾನ ಓದು ಪುಸ್ತಕವನ್ನು ಬಿಡುಗಡೆ ಮಾಡಿದರು.

ಪಿಎಸ್ಐ ಸುಪ್ರೀತ್ ವಿರೂಪಾಕ್ಷಪ್ಪ ಮಾತನಾಡಿ, ತಾಲೂಕಿನಲ್ಲಿ 28 ಗ್ರಾಮೀಣದಲ್ಲಿನ ದೇವರು ಕೂರಿಸಿದಾರೆ ಯಾವ ಹೋದರೂ ಬಾದನಹಟ್ಟಿ ಗ್ರಾಮದಂತೆ ನಮ್ಮ ಗ್ರಾಮದಲ್ಲೂ ಸರಳವಾಗಿ ಆಚರಣೆ ಮಾಡುವಂತೆ ಕ್ರಮ ಕೈಗೊಳ್ಳಿ ಎಂದು ಜನಸಾಮಾನ್ಯರು ಕೇಳ್ತಾ ಇದ್ದಾರೆ ಇದಕ್ಕೆಲ್ಲ ಕಾರಣ ಬಾದನಹಟ್ಟಿ ಗ್ರಾಮದ ಜನಸಾಮಾನ್ಯರೇ ಕಾರಣ ಎಂದರು.

ವಿ.ಎಸ್.ಶಿವಶಂಕರ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಬಾದನಹಟ್ಟಿ ಗ್ರಾಮದಲ್ಲಿ ಶಿಕ್ಷಣ ಉದ್ಯೋಗಕ್ಕೆ ಒತ್ತು ಕೊಡುತ್ತಿರುವುದು ಬಾದನಹಟ್ಟಿ ಗ್ರಾಮದಲ್ಲಿ ಎದ್ದು ಕಾಣುತ್ತದೆ ಅಂದರೆ ತಮಟೆ ಬಾರಿವುದು, ಅಲಾಯಿ ಕುಣಿಯುವುದು, ಅಲಾಯಿ ಕುಣಿಗೆ ಹಾಕಲು ಗಿಡಮರಗಳನ್ನು ಕಡಿಯುವುದನ್ನು ನಿಷೇಧಿಸಲು ಗ್ರಾಮಸ್ಥರಿಂದಲೇ ಒಪ್ಪಿಗೆ ನೀಡಿರುವುದು ವಿಶೇಷ ಮೊಹರಂ ಹಬ್ಬವನ್ನು ಶಾಂತಿ ಮತ್ತು ಸರಳತೆಯಿಂದ ಆಚರಣೆ ಮಾಡುತ್ತಿರುವುದು ಅತ್ಯಂತ ಸಂತೋಷದ ವಿಷಯ. ಅದೇ ರೀತಿಯಲ್ಲಿ ಎಲ್ಲರು ಸಂವಿಧಾನ ಓದು ಪುಸ್ತಕವನ್ನು ಕಡ್ಡಾಯವಾಗಿ ಓದಬೇಕು ಎಂದರು.

ಈ ವೇಳೆ ಗಾಳಿ ಬಸವರಾಜ ಎನ್., ಸೋಮಪ್ಪ ಎನ್., ಹುಲೆಪ್ಪ ಯು, ಶಂಕ್ರಪ್ಪ ಹಸೇನಿ ಅಮೃತಾಪುರ ಗಂಗಣ್ಣ ಹನುಮಂತ ಬೈಲೂರು ಕಲ್ಗುಡಿ ಎಚ್ ಬಸವರಾಜ ಎನ್ ಚೆಡೆಪ್ಪ ಚಾನಾಳ್ ವೀರಣ್ಣ ಎಂ ಕರಿಬಸಪ್ಪ ಮುಖಂಡರು ಗ್ರಾಮದ ಇದ್ದರು.



ಪುಸ್ತಕದಿಂದ ಭವಿಷ್ಯ ರೂಪಿಸಿಕೊಳ್ಳಿ: ನಾಗರಾಜ

ಹಗರಿಬೊಮ್ಮನಹಳ್ಳಿ: ವಿದ್ಯಾರ್ಥಿಗಳು ಕಲಿಕೆಯ ಸಮಯದಲ್ಲಿ ಕೆಟ್ಟ ಹವ್ಯಾಸಗಳಿಗೆ ಅಂಟಿಕೊಳ್ಳದೆ ಪುಸ್ತಕ ಓದುವ ಪ್ರವೃತ್ತಿ ಬೆಳೆಸಿಕೊಂಡಾಗ ಮಾತ್ರ ಬದುಕಿನ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ಗಂ.ಭೀ.ಪ.ಪೂ ಕಾಲೇಜ್ ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಬ್ಯಾಟಿ ನಾಗರಾಜ ತಿಳಿಸಿದರು.

ಪಟ್ಟಣದ ಗಂ.ಭೀ ಪಪೂ ಕಾಲೇಜ್‌ನ 2026-27ನೇ ಸಾಲಿನ ಪಿಯುಸಿ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕಗಳನ್ನು ವಿತರಣೆಗೆ ಚಾಲನೆ ನೀಡಿ ಮಾತನಾಡಿದ ಅವರು, ಹಿಂದಿನ ಕಾಲದಲ್ಲಿ ಬಡತನದ ಜೀವನದಲ್ಲಿ ಸರಿಯಾಗಿ ಸರ್ಕಾರಿ ಸೌಲಭ್ಯಗಳಿಲ್ಲದೆ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಪ್ರಸ್ತುತ ದಿನಮಾನಗಳಲ್ಲಿ ಉಚಿತ ಪುಸ್ತಕ, ಹಾಸ್ಟೆಲ್ ಸೌಲಭ್ಯ, ಸ್ಕಾಲರ್‌ಶಿಪ್ ಮುಂತಾದ ಸೌಲಭ್ಯಗಳಿವೆ. ವಿದ್ಯಾರ್ಥಿಗಳು ಕಲಿಕೆಯ ಸಮಯದಲ್ಲಿ ಕಾಲ ಹರಣ ಮಾಡದೆ ಮೊಬೈಲ್‌ಗಳಿಗೆ ಒಳಗಾಗದೆ ಓದಿ ಉತ್ತಮ ಅಂಕ ಗಳಿಸಿ ಉನ್ನತ ಸ್ಥಾನ ಅಲಂಕರಿಸುವ ಮೂಲಕ ತಂದೆ ತಾಯಿಗಳಿಗೆ ಒಳ್ಳೆಯ ಹೆಸರು ಕೀರ್ತಿ ತರುವ ಕೆಲಸ ನಿಮ್ಮಿಂದಾಗಲಿ ಎಂದರು.

ಈ ವೇಳೆ ಕಾಲೇಜ್ ಅಭಿವೃದ್ಧಿ ಸಮಿತಿ ಸದಸ್ಯರಾದ ನಾಣ್ಯಾಪುರದ ಕೃಷ್ಣಮೂರ್ತಿ ಶೆಟ್ರು, ಬಸವರಾಜ ಬಡಿಗೇರ, ಪ್ರಿನ್ಸಿಪಾಲ ಎಂ.ಕೆ.ದುರುಗಪ್ಪ, ಉಪನ್ಯಾಸಕ ಹುಲಿಮನಿ ಗೂಳಪ್ಪ ಸೇರಿದಂತೆ ಇತರ ಸದಸ್ಯರು, ಉಪನ್ಯಾಸಕರು, ಸಿಬ್ಬಂದಿಗಳು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಜು.14ರಂದು ಸಂಕಲ್ಪ ಸಮಾಗಮ: ಮಾಗನೂರ



ಯಾದಗಿರಿ: ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಒತ್ತಾಯಿಸಿ ಸಮಗ್ರ ನೀರಾವರಿ, ತಿಂಥಿಣಿ ಬ್ರಿಜ್ ಜಲಾಶಯ, ನವಲಿ ಜಲಾಶಯ ನಿರ್ಮಾಣ ಹಾಗೂ ಕಲ್ಯಾಣ ಕರ್ನಾಟಕಕ್ಕೆ ಏಮ್ಸ್ ಮಂಜೂರಾತಿಗೆ ಆಗ್ರಹಿಸಿ ಜು.14ರಂದು ರಾಯಚೂರು ಜಿಲ್ಲೆಯ ಕವಿತಾಳದಲ್ಲಿ ಬೃಹತ್ ಸಂಕಲ್ಪ ಸಮಾಗಮ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಮಾಜಿ ಜಿಲ್ಲಾ ಅಧ್ಯಕ್ಷ ಚಂದ್ರಶೇಖರಗೌಡ ಮಾಗನೂರ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉತ್ತರ ಕರ್ನಾಟಕದ ಸರ್ವಜನಾಂಗದ ನಾಯಕ ಹಾಗೂ ಮಾಜಿ ಸಚಿವ ಕೆ.ಶಿವನಗೌಡ ನಾಯಕ ಅವರ 49ನೇ ಜನ್ಮದಿನದ ಅಂಗವಾಗಿ ಕೆಎಸ್‌ಎನ್ ಸಾಮಾಜಿಕ ಸೇವಾ ಸಮಿತಿ ವತಿಯಿಂದ ಸಂಜೆ 4 ಗಂಟೆಗೆ ನಡೆಯುವ ಈ ಸಮಾಗಮವು ಕೇವಲ ಜನ್ಮದಿನದ ಆಚರಣೆಯಾಗದೆ, ಉತ್ತರ ಕರ್ನಾಟಕದ ಜನರ ದಶಕಗಳ ಅಭಿವೃದ್ಧಿ ಕನಸುಗಳಿಗೆ ಧ್ವನಿಯಾಗಲಿದೆ ಎಂದರು.

ಚಿಕ್ಕಮಗಳೂರಿನ ಗೌರಿಗದ್ದೆ ಆಶ್ರಮದ ಅವಧೂತ ವಿನಯ ಗುರೂಜಿ ಜ್ಯೋತಿ ಬೆಳಗಿಸಿ ಆಶೀರ್ವಚನ ನೀಡಲಿದ್ದು, ತುರುವಿಹಾಳದ ಅಮೋಘಸಿದ್ದೇಶ್ವರ ಮಠದ ಮಾದಯ್ಯ ಗುರೂಜಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ವಿವಿಧ ಮಠಾಧೀಶರು, ರೈತ ಮುಖಂಡರು, ಜನಪ್ರತಿನಿಧಿಗಳು, ಸಾಮಾಜಿಕ ಕಾರ್ಯಕರ್ತರು ಹಾಗೂ ವಿವಿಧ ಕ್ಷೇತ್ರಗಳ ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ಲಲಿತಾ ಅನಪುರ, ಅಂಬಯ್ಯ ಶಾಬಾದಿ, ಶಿವಶರಣಪ್ಪ ಸಾಹುಕಾರ ಹಯ್ಯಾಳ, ಬಿ.ಎನ್.ವಿಶ್ವನಾಥ ನಾಯಕ, ಡಾ.ಕೃಷ್ಣಮೂರ್ತಿ ಕುಲಕರ್ಣಿ, ಎಚ್.ಕೆ.ಕುರಕುಂದಾ ಪಟೇಲ್, ವಿಜಯಕುಮಾರ ಮಗದಂಪುರ, ಚನ್ನುಕುಮಾರ್ ವಾಲಿ, ಸೈದಪ್ಪ ಕುಯಿಲೂರು, ಮಲ್ಲುಗೌಡ ಐಕೂರ್, ಅಜಯ್ ಮಾಸನ್, ಮೋನಪ್ಪ ಮರಮಕಲ್, ಗೋವಿಂದ ಹಕ್, ಮಲ್ಲಿಕಾರ್ಜುನ ನಾಯಕ್, ಮನೋಹರ ರಾಥೋಡ್, ಶಂಕರಣ್ಣ ಸಾಹುಕಾರ ಕಾಜಗಾರ, ದೇವೇಂದ್ರ ನಾಯಕ, ಬಂಡೇಶ್ ಹಯ್ಯಾಳ, ಜಯಸಿಂಹ ಚಟ್ನಳ್ಳಿ, ಪರಶುರಾಮ ದೋರನಹಳ್ಳಿ, ಶರಣಗೌಡ ದೋರನಹಳ್ಳಿ ಸೇರಿದಂತೆ ಉಪಸ್ಥಿತರಿದ್ದರು.